ಶನಿವಾರ, ಫೆಬ್ರುವರಿ 11, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ
ಕಾಶ್ಮೀರದ ಗುಲ್‌ಮಾರ್ಗ್‌ನಲ್ಲಿ ನಡೆದ ಚಳಿಗಾಲದ ಕ್ರೀಡಾಕೂಟದ ಉದ್ಘಾಟನಾ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶಿಸಿದ ಕಲಾವಿದೆ

JEE (MAIN) 2023
ಅತ್ಯುತ್ತಮ ಫಲಿತಾಂಶಗಳು
Session-1

Aakash + BYJU'S

100
Percentile
Overall

Dhruv Sanjay Jain | 4 Year Classroom

43 100 Percentilers
(Physics or Chemistry or Maths)

625 99+ Percentilers

2606 95+ Percentilers

(Including Classroom + Distance & Digital) & Counting

Scan the code to check all the results & watch the stories of toppers

ತರಗತಿಯಲ್ಲಿ ತರಬೇತಿ ಪಡೆದು, ಸಬ್ಜೆಕ್ಟ್‌ಗಳಲ್ಲಿ 100 ಪರ್ಸೆಂಟೈಲ್ ಪಡೆದ ವಿದ್ಯಾರ್ಥಿಗಳು

Name	100 Percentile in	Percentile	Programme
Kamyak Channa	Maths	99.99	4 Year Classroom
Aakarsh D Reja	Chemistry	99.99	4 Year Classroom
Mozeel Vanwani	Physics	99.99	1 Year Classroom
Tanishq Mandhane	Maths	99.99	4 Year Classroom
Shivanshu Kumar	Physics	99.99	4 Year Classroom
Adit Jindal	Physics	99.99	4 Year Classroom
Anoop Singh	Physics	99.98	4 Year Classroom
Shreyansh Solanki	Physics	99.98	2 Year Classroom
Shiv Narang	Physics	99.98	4 Year Classroom
Md Sahil Akhtar	Maths	99.98	4 Year Classroom
Raktim Kundu	Physics	99.98	2 Year Classroom
Siddharth Miglani	Physics	99.95	2 Year Classroom
Hardik Goyal	Physics	99.95	2 Year Classroom
Utkarsh Gupta	Physics	99.95	2 Year Classroom
Gaurang Gupta	Physics	99.94	3 Year Classroom
Hardik Kumar	Physics	99.94	1 Year Classroom
Dweep Joshipura	Physics	99.91	2 Year Classroom
Akshat Jiwrajka	Physics	99.89	2 Year Classroom
Rishit Saini	Physics	99.86	2 Year Classroom
Parth Prajapati	Physics	99.83	4 Year Classroom
Manan	Physics	99.81	2 Year Classroom
Prince Kr. Dwivedi	Physics	99.81	2 Year Classroom
Ishaan Jajodia	Physics	99.74	2 Year Classroom
Kartik Verma	Physics	99.59	4 Year Classroom
Nitin Raj	Physics	99.58	2 Year Classroom
Dishang Jindal	Physics	99.55	2 Year Classroom
Kartik Gupta	Physics	99.36	1 Year Classroom
Gunn Goel	Physics	98.94	3 Year Classroom
Rishu Mishra	Physics	98.81	2 Year Classroom
M. Lokender	Physics	98.58	3 Year Classroom

Though every care has been taken to publish the result correctly, yet Aakash Educational Services Ltd. shall not be responsible for inadvertent error, if any.

and many more top performers across 300+ branches in India

ಪ್ರವೇಶಗಳು ಪ್ರಾರಂಭವಾಗಿವೆ

NEET | JEE | KCET | Foundation (Class 8-10)
ಪ್ರವೇಶ ಮತ್ತು ಸ್ಕಾಲರ್‌ಶಿಪ್ ಪರೀಕ್ಷೆಗೆ ಹಾಜರಾಗಿ ಹಾಗೂ 90% ವರೆಗಿನ ವಿದ್ಯಾರ್ಥಿವೇತನವನ್ನು ಪಡೆಯಿರಿ*
ಉಚಿತವಾಗಿ ನೋಂದಾಯಿಸಲು iacst.aakash.ac.in ಗೆ ಭೇಟಿ ನೀಡಿ ಅಥವಾ ಈ QR ಕೋಡ್ ಅನ್ನು ಸ್ಕ್ಯಾನ್ ಮಾಡಿ

*Terms & Conditions apply.

NEET/JEE/KCET 2023 ಗಾಗಿ ಕ್ರ್ಯಾಶ್ ಕೋರ್ಸ್‌ಗಳು
ಸಂಪೂರ್ಣ ಪಠ್ಯಕ್ರಮದ ಪುಸ್ತಕ, ಪರೀಕ್ಷೆಯ ತಯಾರಿ ಹಾಗೂ ಹೆಚ್ಚಿನ ಮಾಹಿತಿಗಾಗಿ QR ಕೋಡ್ ಅನ್ನು ಸ್ಕ್ಯಾನ್ ಮಾಡಿ

*Terms & Conditions apply.

25 Branches in **Karnataka**

BENGALURU
Banaswadi: 9311476789
Banerghatta Road: 8800013043
Hebbal: 8800013045
HSR Layout: 8800013044
Indiranagar: 8800013046
Jayanagar: 8800013047
Rajajinagar: 8800013048
Rajarajeshwari Nagar: 7836999994
Seegehalli: 8800902396
T. Dasarahalli: 8800878217
Whitefield: 8800013049
KOLAR: 8800876124
MYSORE
Kuvempunagar: 8800013052
Suburban Bus Stand: 7428899148
BALLARI: 8800898251
BELAGAVI: 8800012965
DAVANAGERE: 8800898210
DHARWAD: 8800909381
HASSAN: 8800897304
HUBBALLI: 8800013051
KALABURAGI: 8800901459
MANDYA: 8800901164
MANGALURU: 8800012964
SHIVAMOGGA: 8800898692
UDUPI: 8800898735

Scan code to locate the nearest centre

Download **Aakash App** — GET IT ON Google Play | Download on the App Store

CALL (TOLL-FREE) **1800-102-2727**

VISIT **aakash.ac.in**

Aakash + BYJU'S

ಪ್ರಧಾನಿ, ರಕ್ಷಣಾ ಸಚಿವರಿಗೆ ದೂರು ● ಭೂಮಾಲೀಕತ್ವದ ಪ್ರಮಾಣಪತ್ರ ಸಲ್ಲಿಸಿದ ರಕ್ಷಣಾ ಇಲಾಖೆ

ಖಾಸಗಿ ವ್ಯಕ್ತಿಗೆ ವಾಯುನೆಲೆಯ 10 ಎಕರೆ ಪರಭಾರೆ!

● ಮಂಜುನಾಥ ಹೆಬ್ಬಾರ್

ನವದೆಹಲಿ: ಮೂಲ ದಾಖಲೆಗಳನ್ನು ಪರಿಶೀಲಿಸದೆಯೇ ಬೆಂಗಳೂರಿನ ಯಲಹಂಕ ವಾಯುನೆಲೆಗೆ ಸೇರಿದ 10 ಎಕರೆ 23 ಗುಂಟೆ ಜಾಗವನ್ನು ಬೆಂಗಳೂರು ಉತ್ತರ ವಿಶೇಷ ಜಿಲ್ಲಾಧಿಕಾರಿಯವರು ಖಾಸಗಿ ವ್ಯಕ್ತಿಗಳ ಹೆಸರಿಗೆ ಖಾತೆ ಮಾಡಿಕೊಡಲು ಆದೇಶಿಸಿದ್ದಾರೆ. ಇದು ನಿಯಮಬಾಹಿರ ಆದೇಶವಾಗಿದೆ ಎಂದು ಪ್ರತಿಪಾದಿಸಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಹೈಕೋರ್ಟ್ ಮೊರೆ ಹೋಗಿದ್ದಾರೆ.

ಈ ಪ್ರಕರಣದಲ್ಲಿ ರಕ್ಷಣಾ ಇಲಾಖೆಯನ್ನು ಪ್ರತಿವಾದಿಯನ್ನಾಗಿ ಮಾಡದೆಯೇ ವಿಶೇಷ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದು, ಇದನ್ನು ಕೂಡಲೇ ರದ್ದುಪಡಿಸಬೇಕು ಎಂದು ರಕ್ಷಣಾ ಇಲಾಖೆಯ ಎಸ್ಟೇಟ್ ಅಧಿಕಾರಿ ಅವರು 2022ರ ನವೆಂಬರ್ 5ರಂದು ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ.

'ಈ ಅಕ್ರಮದ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು' ಎಂದು ಆಗ್ರಹಿಸಿ ಬಿಜೆಪಿ ಮುಖಂಡ ಕೆ.ಎನ್. ಚಕ್ರಪಾಣಿ ಅವರು ದಾಖಲೆಗಳ ಸಹಿತ

ಕೆ.ಎನ್. ಚಕ್ರಪಾಣಿ

ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರಿಗೆ ಜನವರಿಯಲ್ಲಿ ದೂರುಸಲ್ಲಿಸಿದ್ದಾರೆ.

ಏನಿದು ಅಕ್ರಮ: ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಯುದ್ಧ ವಿಮಾನಗಳನ್ನು ಇಳಿಸಲು 1945ರ ಜೂನ್‌ನಲ್ಲಿ ಗುತ್ತಿಗೆ ಆಧಾರದಲ್ಲಿ ಜಾಗವನ್ನು ಪಡೆಯಲಾಗಿತ್ತು. ಬೆಂಗಳೂರು ಉತ್ತರ (ಹೆಚ್ಚುವರಿ) ತಾಲ್ಲೂಕಿನ ಹುಣಸಮಾರನಹಳ್ಳಿ ಸೇರಿದಂತೆ 9 ಗ್ರಾಮಗಳ 868 ಎಕರೆ 31 ಗುಂಟೆಯನ್ನು ರಕ್ಷಣಾ ಇಲಾಖೆ 1973ರ ಮಾರ್ಚ್ 2ರಂದು ಸ್ವಾಧೀನಪಡಿಸಿಕೊಂಡಿತ್ತು. ಆಗ ಎಕರೆಗೆ ₹6 ಸಾವಿರದಂತೆ ₹52.73 ಲಕ್ಷವನ್ನು ಭೂಮಾಲೀಕರಿಗೆ ಪರಿಹಾರ ರೂಪದಲ್ಲಿ ನೀಡಿತ್ತು.

ಹುಣಸಮಾರನಹಳ್ಳಿಯ ಸರ್ವೆ ಸಂಖ್ಯೆ 175ರ 4 ಎಕರೆ 23 ಗುಂಟೆ, ಸರ್ವೆ ಸಂಖ್ಯೆ 176ರ 1 ಎಕರೆ ಹಾಗೂ ಸರ್ವೆ ಸಂಖ್ಯೆ 184ರ 5 ಎಕರೆ ಜಾಗಕ್ಕೆ ಕೆ.ಆರ್.ಪುರದ ನಿವಾಸಿ ಮಹೇಶ್ವರಿ ಎಂಬುವರು 2007ರಲ್ಲಿ ಹಕ್ಕು ಸ್ಥಾಪಿಸಿದ್ದರು. ಈ ಜಾಗವು ತನ್ನ ತಂದೆ ಕೆ.ನಾರಾಯಣಯ್ಯ ಅವರಿಗೆ ಸೇರಿದ್ದು ಎಂದೂ ಹೇಳಿಕೊಂಡಿದ್ದರು. 2007ರಲ್ಲಿ ಈ ಜಾಗವನ್ನು ₹1.2 ಕೋಟಿಗೆ ಮಾರಲು ವಸಂತನಗರದ ಅಶ್ವಿನ್ ಎಂ.ಠಕ್ಕರ್ ಎಂಬುವರ ಜತೆಗೆ ಒಪ್ಪಂದ ಮಾಡಿಕೊಂಡಿದ್ದರು.

ಕುತೂಹಲಕರ ವಿಷಯವೆಂದರೆ, 10 ಎಕರೆ 23 ಗುಂಟೆ ಜಾಗವು 1965ರಲ್ಲಿ ತನ್ನ ಪತಿ ಕೆ.ನಾರಾಯಣಯ್ಯ ಅವರಿಗೆ ಮಂಜೂರಾಗಿದೆ ಎಂದು ಪ್ರತಿಪಾದಿಸಿ ಪದ್ಮಾವತಿ ಎಂಬುವರು ಬೆಂಗಳೂರು ಉತ್ತರ (ಹೆಚ್ಚುವರಿ) ತಹಶೀಲ್ದಾರ್ ಕಚೇರಿಗೆ 2009ರಲ್ಲಿ ಅರ್ಜಿ ಸಲ್ಲಿಸಿದ್ದರು. 'ಈ ಸ್ವತ್ತುಗಳ ಖಾತೆಯನ್ನು 1965ರಲ್ಲೇ ಕೆ. ನಾರಾಯಣಯ್ಯ ಅವರ ಹೆಸರಿಗೆ ಮಾಡಿಕೊಡಲಾಗಿದೆ. 1995ರಲ್ಲಿ ನಾರಾಯಣಯ್ಯ ಮೃತಪಟ್ಟಿದ್ದಾರೆ. ಪತ್ನಿ ಹಾಗೂ ನಾಲ್ವರು ಮಕ್ಕಳು ಈ ಜಾಗಕ್ಕೆ ನೈಜ ವಾರಸುದಾರರು. ಆರ್‌ಟಿಸಿ ಕಾಲಂನಲ್ಲಿ ರಕ್ಷಣಾ ಇಲಾಖೆ ಎಂಬುದನ್ನು ರದ್ದುಪಡಿಸಿ ಪದ್ಮಾವತಿ ಕುಟುಂಬಕ್ಕೆ ಖಾತೆ ಮಾಡಿಕೊಡಬಹುದು' ಎಂದು ವಿಶೇಷ ತಹಶೀಲ್ದಾರ್ ಅವರು 2009ರಲ್ಲಿ ವಿಶೇಷ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದ್ದರು. ಆದರೆ, ಆಗಿನ ವಿಶೇಷ ಜಿಲ್ಲಾಧಿಕಾರಿ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಈ ನಡುವೆ, ಪದ್ಮಾವತಿ ಅವರು ಈ ಜಾಗವನ್ನು 2013ರ ಏಪ್ರಿಲ್ 19ರಂದು ಮೊಹಮ್ಮದ್ ಸನಾವುಲ್ಲಾ ಹಾಗೂ ಲತಾ ಎಸ್.ಎನ್. ಎಂಬುವರಿಗೆ ₹5 ಕೋಟಿಗೆ ಮಾರಿದ್ದರು.

ಈ ಜಾಗದ ದಾಖಲೆ ನೈಜತೆ ಬಗ್ಗೆ ಭೂ ಕಂದಾಯ ಕಾಯ್ದೆ 1964ರಡಿ ವಿಚಾರಣೆ ನಡೆಯುತ್ತಿದ್ದು, ಜಾಗದ ವಸ್ತುಸ್ಥಿತಿ ಬಗ್ಗೆ ವರದಿ ಸಲ್ಲಿಸುವಂತೆ ವಿಶೇಷ ಜಿಲ್ಲಾಧಿಕಾರಿ ಅವರು ವಿಶೇಷ ತಹಶೀಲ್ದಾರ್ ಅವರಿಗೆ 2015ರ ಜನವರಿ 2ರಂದು ನಿರ್ದೇಶನ ನೀಡಿದ್ದರು. ಜಮೀನಿನ ಮಾಲೀಕತ್ವದ ಕುರಿತು 2009ರಲ್ಲೇ ವರದಿ ನೀಡಿದ್ದು, ಬಳಿಕ ಯಾವುದೇ ಬದಲಾವಣೆ ಆಗಿಲ್ಲ ಎಂದು ವಿಶೇಷ ತಹಶೀಲ್ದಾರ್ 2015ರ ಫೆಬ್ರುವರಿ 10ರಂದು ವರದಿ ಸಲ್ಲಿಸಿದ್ದರು.

ಈ ಮಧ್ಯೆ, ಈ ಪ್ರಕರಣದಲ್ಲಿ ವಿಶೇಷ ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಮೊಹಮ್ಮದ್ ಸನಾವುಲ್ಲಾ ಹೆಸರನ್ನು ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಲಾಗಿತ್ತು. 10 ಎಕರೆ 23 ಗುಂಟೆ ಜಾಗಕ್ಕೆ ಪದ್ಮಾವತಿ ಹೆಸರಿಗೆ ಖಾತೆ ಮಾಡಿಕೊಡಬೇಕು ಎಂದು ಆಗಿನ ವಿಶೇಷ ಜಿಲ್ಲಾಧಿಕಾರಿ ಮೊಹಮ್ಮದ್ ಸಲಾವುದ್ದೀನ್ 2016ರ ಜನವರಿಯಲ್ಲಿ ಆದೇಶ ಹೊರಡಿಸಿದ್ದರು. ಈ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಜಿಲ್ಲಾಧಿಕಾರಿ ವರದಿಯಲ್ಲೇನಿದೆ?

'ಹುಣಸಮಾರನಹಳ್ಳಿ ಗ್ರಾಮವು ಜೋಡಿ ಇನಾಂ ಗ್ರಾಮ. ಈಗಿನ ಪಹಣಿ ಪ್ರಕಾರ, ಮೂರು ಸರ್ವೆ ಸಂಖ್ಯೆಯಲ್ಲಿರುವ 10 ಎಕರೆ 23 ಗುಂಟೆ ರಕ್ಷಣಾ ಇಲಾಖೆಯ ಹೆಸರಿನಲ್ಲಿದೆ. ಈ ಜಮೀನಿನ ಅಧಿಭೋಗದಾರಿಕೆಯ ಹಕ್ಕನ್ನು ಇನಾಂ ವಿಶೇಷ ಜಿಲ್ಲಾಧಿಕಾರಿ ಅವರು ಕೆ.ನಾರಾಯಣಯ್ಯ ಅವರಿಗೆ ಮಂಜೂರು ಮಾಡಿರುವ (ಪ್ರಕರಣ ಸಂಖ್ಯೆ 20 + 40/62-63) ಕಡತವು ಕಚೇರಿಯಲ್ಲಿ ಇಲ್ಲ. ಆದರೆ, ಅರ್ಜಿದಾರರ ಬಳಿ ಮಂಜೂರಾತಿ ಆದೇಶಗಳ ಪ್ರತಿಗಳು ಇವೆ. ಇದರ ಆಧಾರದಲ್ಲಿ ವಿಶೇಷ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಇದು ಸರಿಯಲ್ಲ' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಅವರು ಕಂದಾಯ ಇಲಾಖೆಗೆ ವರದಿ ಸಲ್ಲಿಸಿದ್ದಾರೆ.

ಎಸ್ಐಟಿ ರಚನೆಗೆ ಆಗ್ರಹ

'ವಿಶೇಷ ಜಿಲ್ಲಾಧಿಕಾರಿ ಅವರು ಭೂಗಳ್ಳರ ಜತೆಗೆ ಶಾಮೀಲಾಗಿ ರಕ್ಷಣಾ ಇಲಾಖೆಯ ಜಾಗವನ್ನು ಪರಭಾರೆ ಮಾಡಿದ್ದಾರೆ. ಈ ಜಾಗವು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿದ್ದು, ಮಾರುಕಟ್ಟೆ ಮೌಲ್ಯ ₹200 ಕೋಟಿಯಷ್ಟು ಆಗುತ್ತದೆ. ಈ ಹಗರಣದ ಬಗ್ಗೆ ಸಮಗ್ರ ತನಿಖೆ ನಡೆಸಲು ಕೂಡಲೇ ವಿಶೇಷ ತನಿಖಾ ತಂಡವನ್ನು ರಚಿಸಬೇಕು. ಈ ಹಗರಣದಲ್ಲಿ ಭಾಗಿಯಾದ ಎಲ್ಲರನ್ನೂ ಬಂಧಿಸಬೇಕು' ಎಂದು ಕೆ.ಎನ್.ಚಕ್ರಪಾಣಿ ಆಗ್ರಹಿಸಿದರು.

'ಟೀಚ್‌ಮೆಂಟ್' ಬಳಸದಂತೆ ಸೂಚನೆ

ಯುಕೆಜಿ ವಿದ್ಯಾರ್ಥಿನಿ ಫೇಲ್: ಶಾಲೆಗೆ ಬಿಇಒ ಭೇಟಿ

ಪ್ರಜಾವಾಣಿ ವಾರ್ತೆ

ಆನೇಕಲ್: ಯುಕೆಜಿ ವಿದ್ಯಾರ್ಥಿನಿಯನ್ನು ಅನುತ್ತೀರ್ಣಗೊಳಿಸಿದ ತಾಲ್ಲೂಕಿನ ಚಂದಾಪುರ ಸಮೀಪದ ದೀಪಹಳ್ಳಿಯ ಸಂತ ಜೋಸೆಫ್ ಚಾಮಿನೆಟ್ ಅಕಾಡೆಮಿಯ ಶಾಲೆಗೆ ಶುಕ್ರವಾರ ಕ್ಷೇತ್ರ ಶಿಕ್ಷಣಾಧಿಕಾರಿ ಜೆ.ಎಂ. ಜಯಲಕ್ಷ್ಮೀ ಭೇಟಿ ನೀಡಿ ಪರಿಶೀಲಿಸಿದರು.

'ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಟೀಚ್‌ಮೆಂಟ್ ಆ್ಯಪ್ ಬಳಸಬಾರದು. ಈ ಹಂತದಲ್ಲಿ ಮಕ್ಕಳು ಸಂತಸದಿಂದ ಕಲಿಯುವಂತಹ ಚಟುವಟಿಕೆ ರೂಪಿಸಬೇಕು. ಪುಟಾಣಿಗಳಲ್ಲಿನ ಸೃಜನಶೀಲತೆ ಮತ್ತು ಉತ್ಸಾಹಕ್ಕೆ ಪ್ರೋತ್ಸಾಹಿಸಬೇಕು' ಎಂದು ಶಾಲಾ ಆಡಳಿತ ಮಂಡಳಿಗೆ ಸೂಚಿಸಿದರು.

ಘಟನೆ ಸಂಬಂಧ ಮುಖ್ಯಶಿಕ್ಷಕರಿಗೆ ನೀಡಿದ್ದ ನೋಟಿಸ್‌ಗೆ ಸಂಬಂಧಿಸಿದಂತೆ ವಿವರ ಪಡೆಯಲಾಗಿದೆ. ಆ್ಯಪ್‌ನಲ್ಲಿ ವಿದ್ಯಾರ್ಥಿನಿಯ ಅಂಕಪಟ್ಟಿಯನ್ನು ಡಿಲೀಟ್ ಮಾಡಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಇಲಾಖೆಯ ಸೂಚನೆ ಪಾಲನೆ: ಘಟನೆ ಸಂಬಂಧ ಶಾಲೆಯ ಪ್ರಾಂಶುಪಾಲ ಸಾಜು ಚಿಟ್ಟದಿಯಿಲ್ ಪ್ರತಿಕ್ರಿಯಿಸಿ, 'ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸೂಚನೆಗಳನ್ನು ಪಾಲಿಸಲಾಗುವುದು. ವಿದ್ಯಾರ್ಥಿನಿಯ ವೈಯಕ್ತಿಕ ಅಂಕಪಟ್ಟಿಯಲ್ಲಿ ಅನುತ್ತೀರ್ಣ ಎಂದು ದಾಖಲಿಸಿಲ್ಲ' ಎಂದರು.

'ಡಿಫಾಲ್ಟ್ ಸಾಫ್ಟ್‌ವೇರ್‌ನಿಂದ ಈ ಸಮಸ್ಯೆ ಉಂಟಾಗಿದೆ. ಈ ಬಗ್ಗೆ ಪೋಷಕರಿಗೂ ಮಾಹಿತಿ ನೀಡಲಾಗಿದೆ. ಇಂತಹ ಸಮಸ್ಯೆ ತಲೆದೋರದಂತೆ ಮುನ್ನೆಚ್ಚರಿಕೆ ವಹಿಸಲಾಗುವುದು' ಎಂದು ತಿಳಿಸಿದರು.

ಈ ಶಾಲೆಯ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಅಳೆಯಲು 'ಟೀಚ್‌ಮೆಂಟ್' ಎಂಬ ಮೊಬೈಲ್ ಆ್ಯಪ್ ಬಳಕೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳು ಶೇ 35ಕ್ಕಿಂತ ಕಡಿಮೆ ಅಂಕಗಳನ್ನು ಪಡೆದರೆ ಫಲಿತಾಂಶವನ್ನು 'ಫೇಲ್' ಎಂದು ತೋರಿಸುವ ಡಿಫಾಲ್ಟ್ ಫೀಚರ್ ಈ ಆ್ಯಪ್‌ನಲ್ಲಿದೆ.

ಜೀವನಾಂಶ ಅರ್ಜಿ ವಿಲೇವಾರಿಗೆ ಕಾಲಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ವ್ಯಾಜ್ಯಗಳಲ್ಲಿ ಹಿಂದೂ ವಿವಾಹ ಕಾಯ್ದೆಯ ಕಲಂ 24ರ ಅನುಸಾರ ಜೀವನಾಂಶ ಕೋರಿ ಸಲ್ಲಿಸುವ ಅರ್ಜಿಗಳನ್ನು ವಿಲೇವಾರಿ ಮಾಡಲು ವಿಚಾರಣಾ ನ್ಯಾಯಾಲಯಗಳಿಗೆ ಹೈಕೋರ್ಟ್ ಕಾಲಮಿತಿ ನಿಗದಿಪಡಿಸಿದೆ.

ವಿಚ್ಛೇದನ ಪ್ರಕರಣವೊಂದರಲ್ಲಿ ಪತ್ನಿಗೆ ಪ್ರತಿ ತಿಂಗಳೂ ₹ 15 ಸಾವಿರ ಮಧ್ಯಂತರ ಜೀವನಾಂಶ ಹಾಗೂ ವ್ಯಾಜ್ಯದ ವೆಚ್ಚ ₹ 50 ಸಾವಿರ ಪಾವತಿಸುವಂತೆ ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯ ಪತಿಗೆ ಆದೇಶಿಸಿತ್ತು. ಈ ಮೊತ್ತವನ್ನು ಹೆಚ್ಚಿಸುವಂತೆ ಕೋರಿ ಪತ್ನಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ಜೀವನಾಂಶ ಕೋರಿ ಕೌಟುಂಬಿಕ ನ್ಯಾಯಾಲಯದಲ್ಲಿ ಮಹಿಳೆ ಸಲ್ಲಿಸಿದ್ದ ಅರ್ಜಿಗೆ ಪತಿ 19 ತಿಂಗಳ ಬಳಿಕ ಆಕ್ಷೇಪಣೆ ಸಲ್ಲಿಸಿರುವುದು ಹಾಗೂ ತದನಂತರದ 11 ತಿಂಗಳ ಬಳಿಕ ಕೌಟುಂಬಿಕ ನ್ಯಾಯಾಲಯ ಅರ್ಜಿ ಕುರಿತು ತೀರ್ಮಾನ ಮಾಡಿರುವುದನ್ನು ಗಂಭೀರವಾಗಿ ಪರಿಗಣಿಸಿದೆ. ಪ್ರತಿ ತಿಂಗಳ ₹ 15 ಸಾವಿರ ಜೀವನಾಂಶವನ್ನು ₹ 50 ಸಾವಿರಕ್ಕೆ ಹಾಗೂ ವ್ಯಾಜ್ಯದ ವೆಚ್ಚವನ್ನು ₹ 1 ಲಕ್ಷಕ್ಕೆ ಹೆಚ್ಚಳ ಮಾಡಿ ಆದೇಶಿಸಿದೆ.

'ಇಂತಹ ವಿಳಂಬದಿಂದ ಜೀವನಾಂಶ ಕೋರಿ ಸಲ್ಲಿಸುವ ಅರ್ಜಿಗಳ ಉದ್ದೇಶವೇ ನಿರರ್ಥಕವಾಗಲಿದೆ. ಜೀವನಾಂಶ ಕೋರಿದ ಅರ್ಜಿಗಳ ಕುರಿತು ನಿರ್ಧಾರ ಕೈಗೊಳ್ಳಲು ವಿಚಾರಣಾ ನ್ಯಾಯಾಲಯಗಳಿಗೆ ಕಾಲಮಿತಿ ನಿಗದಿಪಡಿಸಿದೆ. 'ವಿಚಾರಣಾ ನ್ಯಾಯಾಲಯಗಳು ಕಾಲಮಿತಿಯನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ಈ ಆದೇಶವನ್ನು ಜೀವನಾಂಶ ಅರ್ಜಿ ವಿಚಾರಣೆ ನಡೆಸುವ ಎಲ್ಲ ನ್ಯಾಯಾಂಗ ಅಧಿಕಾರಿಗಳಿಗೂ ರವಾನಿಸಬೇಕು' ಎಂದು ಹೈಕೋರ್ಟ್ ರಿಜಿಸ್ಟ್ರಿಗೆ ನಿರ್ದೇಶಿಸಿದೆ.

ಕಾಲಮಿತಿಯ ಮುಖ್ಯಾಂಶಗಳು

- ಅರ್ಜಿ ಸಲ್ಲಿಕೆಯಾದ ತಕ್ಷಣವೇ ನೋಟಿಸ್ ಜಾರಿಗೊಳಿಸಬೇಕು. ಇ-ಮೇಲ್, ವಾಟ್ಸ್ ಆ್ಯಪ್ ಮೂಲಕ ನೀಡುವ ನೋಟಿಸ್‌ಗಳೂ ಕಾನೂನಿನ ದೃಷ್ಟಿಯಲ್ಲಿ ಮಾನ್ಯತೆ ಹೊಂದಿವೆ.
- ಹಿಂದೂ ವಿವಾಹ ಕಾಯ್ದೆ–1955ರ ಕಲಂ 24ರ ಅನುಸಾರ ಮಧ್ಯಂತರ ಜೀವನಾಂಶ ಕೋರಿ ಪತ್ನಿ ಸಲ್ಲಿಸುವ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಸಂಬಂಧಿಸಿದ ನ್ಯಾಯಾಲಯವು ಪತಿಗೆ 2 ತಿಂಗಳ ಕಾಲಾವಕಾಶ ನೀಡಬೇಕು.
- ಅರ್ಜಿ ಸಲ್ಲಿಸುವ ಪತ್ನಿಗೂ ಆಸ್ತಿ ಮತ್ತು ಹೊಣೆಗಾರಿಕೆಗಳ ಕುರಿತು ಮಾಹಿತಿ ನೀಡಲು 2 ತಿಂಗಳ ಕಾಲಾವಕಾಶ ನೀಡಬೇಕು.
- ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಮಾಹಿತಿಯನ್ನು ಪತ್ನಿ ಸಲ್ಲಿಸಿದ ಬಳಿಕ ನ್ಯಾಯಾಲಯ ಎಲ್ಲ ಪಕ್ಷಗಾರರ ವಾದ ಆಲಿಸಿ, 4 ತಿಂಗಳ ಒಳಗೆ ಆದೇಶ ಹೊರಡಿಸಬೇಕು.
- ಮಧ್ಯಂತರ ಪರಿಹಾರ ಕೋರಿ ಅರ್ಜಿ ಸಲ್ಲಿಕೆಯಾದ ದಿನಾಂಕದಿಂದ ಒಟ್ಟಾರೆ 6 ತಿಂಗಳ ಕಾಲಮಿತಿಯೊಳಗೆ ಅರ್ಜಿ ಕುರಿತು ತೀರ್ಮಾನ ಕೈಗೊಳ್ಳಬೇಕು.
- ಈ ಕಾಲಮಿತಿಯನ್ನು ಪೂರೈಸಲು ಸಂಬಂಧಿಸಿದ ನ್ಯಾಯಾಲಯಗಳು ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಅನಗತ್ಯವಾಗಿ ವಿಚಾರಣೆ ಮುಂದೂಡುವುದನ್ನು ತಪ್ಪಿಸಬೇಕು.
- ವಿಚಾರಣಾ ಪ್ರಕ್ರಿಯೆ ಪೂರ್ಣಗೊಳಿಸಲು ಪತಿ ಅಥವಾ ಪತ್ನಿ ಸಹಕಾರ ನೀಡದೇ ಹೋದಲ್ಲಿ, ಕಾನೂನಿನ ಪ್ರಕಾರ ನಿರ್ಧರಿಸಿ ಸೂಕ್ತ ಆದೇಶ ಹೊರಡಿಸಲು ನ್ಯಾಯಾಲಯಗಳು ಮುಕ್ತ ಅವಕಾಶ ಹೊಂದಿವೆ.
- ಜೀವನಾಂಶ ಅರ್ಜಿಗಳನ್ನು ನಿರ್ಧರಿಸಲು ಆರು ತಿಂಗಳಿಗೂ ಮೀರಿ ವಿಳಂಬವಾದಲ್ಲಿ ಅದಕ್ಕೆ ಸೂಕ್ತ ಕಾರಣಗಳನ್ನು ಆದೇಶದಲ್ಲಿ ನಮೂದಿಸಬೇಕು.

"ಇಂಡೊ–ಟಿಬೇಟನ್ ಗಡಿ ಪೊಲೀಸ್ ಪಡೆ"
(ಗೃಹ ವ್ಯವಹಾರಗಳ ಸಚಿವಾಲಯ)
ಭಾರತ ಸರ್ಕಾರ

ಐಟಿಬಿಪಿ'ಯಲ್ಲಿ ಸ್ಪೋರ್ಟ್ಸ್ ಕೋಟಾ–2022ರ ಅಡಿಯಲ್ಲಿ ಕಾನ್‌ಸ್ಟೇಬಲ್/ಜನರಲ್ ಡ್ಯೂಟಿ ಹುದ್ದೆಗಳಿಗೆ ಪ್ರತಿಭಾವಂತ ಕ್ರೀಡಾಪಟುಗಳ ನೇಮಕಾತಿ

ಇಂಡೊ–ಟಿಬೇಟನ್ ಗಡಿ ಪೊಲೀಸ್ ಪಡೆ ಇವರು, 71 ಕಾನ್‌ಸ್ಟೇಬಲ್ (ಜನರಲ್ ಡ್ಯೂಟಿ) ಗ್ರೂಪ್–'ಸಿ' (ನಾನ್–ಗೆಜೆಟೆಡ್ ಮತ್ತು ನಾನ್–ಮಿನಿಸ್ಟೆರಿಯಲ್) ಖಾಲಿಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು, ಸ್ಪೋರ್ಟ್ಸ್ ಕೋಟಾ ಅಡಿಯಲ್ಲಿ ಕೆಳಕಂಡ ಕ್ರೀಡಾ ವಿಭಾಗದಲ್ಲಿನ ಅಭ್ಯರ್ಥಿಗಳಿಂದ, ವೇತನ ಶ್ರೇಣಿ ರೂಪಾಯಿ 21,700–69,100 (7ನೇ ಸಿಪಿಸಿ ಮೇರೆಗೆ) ಹಂತ–3 ರಲ್ಲಿನ ವೇತನ ಮತ್ತು ಪಡೆಯಲ್ಲಿ ಅನ್ವಯಿಸುವ ಇನ್ನಿತರೆ ಭತ್ಯೆಗಳ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಹ ಭಾರತೀಯ ನಾಗರಿಕರಿಂದ (ಪುರುಷ ಮತ್ತು ಮಹಿಳೆ) ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಅರ್ಜಿದಾರರು ತಮ್ಮ ಅರ್ಜಿ ಸಲ್ಲಿಸುವುದಕ್ಕೂ ಮುಂಚೆಯೇ, ತಮ್ಮ ಅರ್ಹತೆಯನ್ನು ಪರಿಶೀಲಿಸಿಕೊಳ್ಳಬೇಕು ಮತ್ತು ಮತ್ತು ಮುಂದಿನ ಹಂತದಲ್ಲಿ ಎದುರಾಗುಬಹುದಾದ ನಿರಾಶೆಗಳನ್ನು ತಡೆಗಟ್ಟಬೇಕೆಂದು ಸೂಚಿಸಲಾಗಿದೆ.

2 ಹುದ್ದೆ ಆಧಾರಿತ ರೋಸ್ಟರ್ ಮೇರೆಗಿನ ಖಾಲಿಹುದ್ದೆಗಳ ವಿವರ ಕೆಳಗಿನಂತಿರುತ್ತದೆ:–

ಕ್ರ ಸಂ.	ಶಿಸ್ತು	ಈವೆಂಟ್	ಲಿಂಗ		ಮೊತ್ತ
			ಪುರುಷರು	ಮಹಿಳೆಯರು	
1)	ಅಥ್ಲೆಟಿಕ್	100 ಮೀಟರ್ ರೇಸ್	1	1	2
		200 ಮೀಟರ್ ರೇಸ್	1	1	2
		400 ಮೀಟರ್ ರೇಸ್	1	1	2
		1500 ಮೀಟರ್ ರೇಸ್	1	0	1
		ಜೆವೆಲಿನ್ ತ್ರೋ	1	1	2
		ಲಾಂಗ್ ಜಂಪ್	1	1	2
		ಹೈ ಜಂಪ್	1	1	2
		ಮ್ಯಾರತಾನ್	0	1	1
2)	ಹಾಕಿ	ಡಿಫೆಂಡರ್	1	0	1
		ಮಿಡ್ ಫೀಲ್ಡರ್	2	0	2
		ಫಾರ್ವಡ್	4	0	4
3)	ಕಬಡ್ಡಿ	ರೈಡರ್	3	2	4
		ರೈಟ್ ಕಾರ್ನರ್	0	1	1
		ಲೆಫ್ಟ್ ಕಾರ್ನರ್	0	1	1
		ಆಲ್ ರೌಂಡರ್	0	1	1
		ಲೆಫ್ಟ್ ಕವರ್	0	1	1
4)	ಫುಟ್‌ಬಾಲ್	ಗೋಲ್‌ಕೀಪರ್	2	0	2
		ಡಿಫೆಂಡರ್	2	0	2
		ಮಿಡ್ ಫೀಲ್ಡರ್	2	0	2
		ಫಾರ್ವಡ್	2	0	2
5)	ವಾಲಿಬಾಲ್	ಸೆಟ್ಟರ್	1	2	3
		ಯೂನಿವರ್ಸಲ್	1	2	3
		ಅಟ್ಟಾಕರ್	1	2	3
		ಬ್ಲಾಕರ್	1	2	3
		ಲಿಬೆರೊ	0	2	2
6)	ಜಿಮ್ನಾಸ್ಟಿಕ್	–	5	0	5
7)	ಬಾಕ್ಸಿಂಗ್	51–54 ಕೆಜಿ	1	0	1
		57–60 ಕೆಜಿ	1	0	1
		60–63 ಕೆಜಿ	1	0	1
		67–70 ಕೆಜಿ	1	0	1
		70–75 ಕೆಜಿ	0	1	1
8)	ವ್ರೆಸ್ಲಿಂಗ್	57 ಕೆಜಿ (ಫ್ರೀಸ್ಟೈಲ್)	1	0	1
		61 ಕೆಜಿ (ಫ್ರೀಸ್ಟೈಲ್)	1	0	1
		70 ಕೆಜಿ (ಫ್ರೀಸ್ಟೈಲ್)	1	0	1
		74 ಕೆಜಿ (ಫ್ರೀಸ್ಟೈಲ್)	1	0	1
9)	ಜುಡೊ	60 ಕೆಜಿ	1	0	1
		66 ಕೆಜಿ	1	0	1
		52 ಕೆಜಿ	0	1	1
		48 ಕೆಜಿ	0	1	1
10)	ಈಕ್ವೆಸ್ಟ್ರಿಯನ್	–	2	0	2
		ಮೊತ್ತ	45	26	71

ಸೂಚನೆ:–

(1) ಸದರಿ ಖಾಲಿಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿರುತ್ತದೆ ಮತ್ತು ಯಾವುದೇ ಸೂಚನೆ ಇಲ್ಲದೆಯೆ ಸದರಿ ಸಂಖ್ಯೆಯಲ್ಲಿ ಹೆಚ್ಚು ಅಥವಾ ಕಡಿಮೆ ಕೂಡ ಆಗಬಹುದಾಗಿರುತ್ತದೆ. ಖಾಲಿಹುದ್ದೆಗಳ ಸಂಖ್ಯೆಗಳಲ್ಲಿ ಬದಲಾವಣೆ ಉಂಟಾದಲ್ಲಿ, ಐಟಿಬಿಪಿಎಫ್'ರವರ www.recruitment.itbpolice.nic.in ವೆಬ್‌ಸೈಟ್‌ನ ಮುಖಾಂತರ ತಿಳಿಸಲಾಗುತ್ತದೆ.

(2) ಅರ್ಜಿ ಶುಲ್ಕ:– ರೂ. 100/– (ರೂಪಾಯಿ ಒಂದು ನೂರು ಮಾತ್ರ). ಮಹಿಳೆ, ಮಾಜಿ ಯೋಧ ಮತ್ತು ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್‌ಟಿ) ಪ್ರವರ್ಗದ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಲಭ್ಯವಿರುತ್ತದೆ.

(3) ಐಟಿಬಿಪಿಎಫ್'ರವರು ಸದರಿ ಜಾಹೀರಾತು ಪ್ರಕಟಗೊಂಡ ಬಳಿಕ ನೇಮಕಾತಿ ಪ್ರಕ್ರಿಯೆಯಲ್ಲಿನ ಕ್ರಮಗಳನ್ನು ಬದಲಾಯಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಐಟಿಬಿಪಿಎಫ್'ರವರು ಆಡಳಿತಾತ್ಮಕ ಕಾರಣಗಳಿಂದಾಗಿ ಸದರಿ ನೇಮಕಾತಿಯನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಥವಾ ಮುಂದೂಡುವ ಹಕ್ಕನ್ನು ಕೂಡ ಕಾಯ್ದಿರಿಸಿಕೊಂಡಿರುತ್ತಾರೆ.

4. www.recruitment.itbpolice.nic.in ಮುಖಾಂತರ ಆನ್‌ಲೈನ್ ವಿಧಾನದಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ. ಆಫ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ವಯೋಮಿತಿ ಸಡಿಲಿಕೆ, ಅರ್ಹತಾ ಷರತ್ತುಗಳು, ಆನ್‌ಲೈನ್ ಅರ್ಜಿ ಫಾರಂ ಭರ್ತಿ ಮಾಡುವ ವಿಧಾನ, ನೇಮಕಾತಿ ಪ್ರಕ್ರಿಯೆ, ಪರೀಕ್ಷೆಗಳು ಮತ್ತು ವೇತನ ಹಾಗೂ ಭತ್ಯೆ ಇತ್ಯಾದಿಗಳ ಕುರಿತಾದ ವಿವರವಾದ ಮಾಹಿತಿಗಾಗಿ, ಅರ್ಜಿದಾರರು ಐಟಿಬಿಪಿ'ರವರ www.recruitment.itbpolice.nic.in ವೆಬ್‌ಸೈಟ್‌ನಲ್ಲಿರುವ ನೇಮಕಾತಿ ವಿಭಾಗದಲ್ಲಿ ಪ್ರಕಟಿಸಲಾದ ವಿವರವಾದ ಜಾಹೀರಾತನ್ನು ಪರಿಶೀಲಿಸಿಕೊಳ್ಳಬಹುದು. ಸದರಿ ನೇಮಕಾತಿಗೆ ಸಂಬಂಧಿಸಿದಂತೆ ಇನ್ಯಾವುದೇ ಮಾಹಿತಿ/ಅಧಿಸೂಚನೆ ಹೊರಡಿಸಲಾದಲ್ಲಿ, ಅದನ್ನು ಐಟಿಬಿಪಿಎಫ್ ನೇಮಕಾತಿ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. ಆದ್ದರಿಂದ, ಅರ್ಜಿದಾರರು ಆಗಾಗ್ಗೆ ಸದರಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಬೇಕೆಂದು ತಿಳಿಸಲಾಗಿದೆ ಮತ್ತು ಅರ್ಜಿ ಸಲ್ಲಿಸುವುದಕ್ಕೂ ಮುಂಚೆಯೇ, ಅರ್ಹತಾ ಮಾನದಂಡಗಳನ್ನು ಜಾಗ್ರತೆಯಿಂದ ಪರಿಶೀಲಿಸಿಕೊಂಡು ಮುಂದೆ ಆಗುವ ನಿರಾಶೆಗಳನ್ನು ತಡೆಗಟ್ಟಬೇಕೆಂದು ಕೂಡ ಸೂಚಿಸಲಾಗಿದೆ.

5. ಸೂಕ್ತ ಶಿಸ್ತುಬದ್ಧ ರೀತಿಯಲ್ಲಿ ಸಲ್ಲಿಕೆಯಾದ ಅರ್ಜಿಗಳಿಗೆ, ಪರೀಕ್ಷೆಗಳಿಗೆ ಹಾಜರಾಗುವಂತೆ ಪ್ರವೇಶ ಪತ್ರಗಳನ್ನು (ಆನ್‌ಲೈನ್) ನೀಡಲಾಗುತ್ತದೆ. ಅಭ್ಯರ್ಥಿಗಳು ಐಟಿಬಿಪಿಎಫ್'ರವರ www.recruitment.itbpolice.nic.in ನೇಮಕಾತಿ ವೆಬ್‌ಸೈಟ್‌ನಿಂದ ತಮ್ಮ ಆನ್‌ಲೈನ್ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಆದ್ದರಿಂದ, ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವಾಗ ಕಡ್ಡಾಯವಾಗಿ ತಮ್ಮ ಅಸಲಿ ಮತ್ತು ಚಾಲ್ತಿಯಲ್ಲಿರುವ ಇ–ಮೇಲ್ ಐಡಿ ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸತಕ್ಕದ್ದು. ಯಾವುದೇ ತಾಂತ್ರಿಕ ಅಥವಾ ಇನ್ನಿತರ ಕಾರಣಗಳಿಂದಾಗಿ ಪ್ರವೇಶ ಪತ್ರ ದೊರೆಕದಿದ್ದಲ್ಲಿ, ಅಂತಹುದಕ್ಕೆ ಐಟಿಬಿಪಿಎಫ್ ಹೊಣೆಯಾಗಿರುವುದಿಲ್ಲ.

6. ಆಯ್ಕೆ ಪ್ರಕ್ರಿಯೆಯಲ್ಲಿ ದಾಖಲಾತಿ ಪರಿಶೀಲನೆ, ದೈಹಿಕ ಸಾಮರ್ಥ್ಯ ಪರೀಕ್ಷೆ (ಪಿಎಸ್‌ಟಿ), ವಿವರವಾದ ವೈದ್ಯಕೀಯ ತಪಾಸಣೆ (ಡಿಎಂಎ)/ವೈದ್ಯಕೀಯ ತಪಾಸಣೆಯ ಪರಿಶೀಲನೆ (ಆರ್‌ಎಂಇ) ಒಳಗೊಂಡಿರುತ್ತವೆ.

7. ಅಭ್ಯರ್ಥಿಗಳ ಸದೃಢತೆಯ ಪರೀಕ್ಷೆಗಾಗಿ ಕೈಗೊಳ್ಳಲಾಗುವ ವೈದ್ಯಕೀಯ ತಪಾಸಣೆಯು, ಸಿಎಪಿಎಫ್'ಗಳಲ್ಲಿನ ಜಿಒ ಮತ್ತು ಎನ್‌ಜಿಒ'ಗಳ ನೇಮಕಾತಿಗಾಗಿ ನೇಮಕಾತಿ ವೈದ್ಯಕೀಯ ಪರೀಕ್ಷೆಗಳ ಸಮಾನ ಮಾರ್ಗಸೂಚಿಗಳ ಪ್ರಕಾರ ಮತ್ತು ಎಂಎಚ್‌ಎ ಯು.ಒ. ನಂ. ಎ.6–1/2014–ನೇಮಕಾತಿ(ಎಸ್‌ಎಸ್‌ಬಿ) ದಿನಾಂಕ 20.05.2015ರ ಮುಖಾಂತರ ಹೊರಡಿಸಲಾದ ಎಆರ್ ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ತಿದ್ದುಪಡಿಗಳ ಪ್ರಕಾರ ನೆರವೇರುತ್ತದೆ.

ಆನ್‌ಲೈನ್ ಅರ್ಜಿ ಸಲ್ಲಿಕೆಯು 20 ಫೆಬ್ರವರಿ, 2023 (20/02/2023) ರಂದು ಬೆಳಗ್ಗೆ 00:01 ಗಂಟೆಯಿಂದ ಪ್ರಾರಂಭವಾಗುತ್ತದೆ ಮತ್ತು 21 ಮಾರ್ಚ್, 2023 (21/03/2023) ರಂದು ರಾತ್ರಿ 11:59 ಗಂಟೆಗೆ ಕೊನೆಗೊಳ್ಳುತ್ತದೆ.

ಡಿಐಜಿ (ನೇಮಕಾತಿ)

CBC - 19143/11/0034/2223

ಸಾರ್ವಜನಿಕ ಸೂಚನೆ

ನಮ್ಮ ಕಕ್ಷಿದಾರರು ಬೆಂಗಳೂರು ಗ್ರಾಮೀಣ ಜಿಲ್ಲೆ, ದೇವನಹಳ್ಳಿ ತಾಲೂಕು, ಕುಂದನ ಹೋಬಳಿ, ಸಿಂಗ್ರಹಳ್ಳಿ ಗ್ರಾಮದ ಸರ್ವೇ ನಂಬರ್ 96, 97, 98, 99 ಮತ್ತು ಸರ್ವೇ ನಂಬರ್ 100 ಉಳಿದ ಭಾಗ ರಲ್ಲಿನ ಕೆಳಗಿನ ಶೆಡ್ಯೂಲ್‌ನಲ್ಲಿ (ಷೆಡ್ಯೂಲ್ ಸ್ವತ್ತು) ಐಟಂ ನಂ. 1 ರಿಂದ 6 ಎಂದು ವ್ಯಾಖ್ಯಾನಿಸಲಾದ, ವಸತಿ ಪ್ರದೇಶವಾಗಿ ಪರಿವರ್ತನೆಯಾಗಿರುವ ಎಲ್ಲಾ ತುಂಡು ಭೂಮಿಯನ್ನು ಅದರ ಪ್ರಸ್ತುತ ಮಾಲೀಕರಿಂದ ಖರೀದಿಸುವ ಅಪೇಕ್ಷೆ ಹೊಂದಿದ್ದಾರೆ. ಭೂ ಮಾಲೀಕರ ಹೆಸರನ್ನು ಅವರಿಗೆ ಸಂಬಂಧಿಸಿದ ಐಟಂಗಳ ಎದುರು ಉಲ್ಲೇಖಿಸಲಾಗಿದೆ. ("ಮಾಲೀಕರು").

ಶೆಡ್ಯೂಲ್ ಆಸ್ತಿ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಹಕ್ಕು, ಶೀರ್ಷಿಕೆ, ಆಸಕ್ತಿ ಅಥವಾ ಕ್ಲೈಮ್ ಅನ್ನು ಪ್ರತಿಪಾದಿಸುವ, ಯಾವುದೇ ರೀತಿಯಲ್ಲಿ ಅಥವಾ ಶೆಡ್ಯೂಲ್ ಆಸ್ತಿ ಅಥವಾ ಅದರ ದಾಖಲೆಗಳ ವಿರುದ್ಧ ಅಥವಾ ಮಾಲೀಕರ ವಿರುದ್ಧ ಅಥವಾ ನಮ್ಮ ಕಕ್ಷಿದಾರರೊಂದಿಗೆ ಅಂತಹ ವ್ಯವಹಾರವನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು, ಈ ಪ್ರಕಟಣೆ ನೀಡಿದ ದಿನಾಂಕದಿಂದ **ಹದಿನೈದು (15) ದಿನಗಳೊಳಗೆ** ಅವರು ಅನುಸೂಚಿತ ಆಸ್ತಿ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಅವರ ಹಕ್ಕುಗಳನ್ನು ಪ್ರತಿಪಾದಿಸಲು ಆಧರಿಸಿರುವ ಎಲ್ಲಾ ಸಾಕ್ಷಿ ಪುರಾವೆಗಳೊಂದಿಗೆ ಕೆಳಗೆ ಸಹಿ ಮಾಡಿದವರಿಗೆ ಬರೆಯಬೇಕು ಮತ್ತು ಅದರ ನಂತರದ ಅವಧಿಯಲ್ಲಿ ನಮ್ಮ ಕಕ್ಷಿದಾರರು ಅನುಸೂಚಿತ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕುಗಳಿಲ್ಲ ಅಥವಾ ಇತರ ಯಾವುದೇ ವಿಷಯದ ಆಧಾರದ ಮೇಲೆ ಮುಂದುವರಿಯುತ್ತಾರೆ.

ಶೆಡ್ಯೂಲ್

ಬೆಂಗಳೂರು ಗ್ರಾಮೀಣ ಜಿಲ್ಲೆ, ದೇವನಹಳ್ಳಿ ತಾಲೂಕು, ಕುಂದನ ಹೋಬಳಿ, ಸಿಂಗ್ರಹಳ್ಳಿ ಗ್ರಾಮದಲ್ಲಿನ ವಸತಿ ಪ್ರದೇಶವಾಗಿ ಪರಿವರ್ತನೆಯಾಗಿರುವ ಒಟ್ಟು 25 ಎಕರೆ 02.05 ಗುಂಟೆ ವಿಸ್ತೀರ್ಣದ ಎಲ್ಲಾ ತುಂಡು ಭೂಮಿಯ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ವಿಸ್ತೃತವಾಗಿ ನೀಡಲಾಗಿದೆ:

ಐಟಂ ನಂ.	ಸರ್ವೇ ನಂ.	ಮಾಲೀಕರ ಹೆಸರು	ನೈಜ ವಿಸ್ತೀರ್ಣ		ಗಡಿಗಳು			
			ಎ.	ಗುಂ.	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
01	96	ಮುನಿಯಪ್ಪ ರಾಜು ಎಸ್. ವಿ. ಮಂಜುನಾಥ ಎಸ್. ವಿ. ಮಾರಪ್ಪ ಎಸ್. ವಿ. ರಮೇಶ್ ಎಸ್. ವಿ. ಗಂಗಾಧರ್	5	12	ಸರ್ವೇ ನಂ. 97	ಸರ್ವೇ ನಂ. 86	ನರಗನಹಳ್ಳಿ ಗ್ರಾಮದ ಗಡಿ	ಸರ್ವೇ ನಂ. 93
02	97	ಲಕ್ಷ್ಮಮ್ಮ ಎಸ್. ಆರ್. ಗೋಪಾಲ ಎಸ್. ಆರ್. ಗಣೇಶ ಚೌಡಮ್ಮ ಕೆ. ವಿ. ವೆಂಕಟರಮಣ ಕೆ. ವಿ. ನಾರಾಯಣಪ್ಪ ಕೆ. ವಿ. ಶ್ರೀನಿವಾಸ ಕೆ. ವಿ. ಮುರಳಿ	5	00	ಸರ್ವೇ ನಂ. 105	ಸರ್ವೇ ನಂ. 96	ನರಗನಹಳ್ಳಿ ಗ್ರಾಮದ ಗಡಿ	ಸರ್ವೇ ನಂ. 98
03	98	ಲಕ್ಷ್ಮಮ್ಮ ಎಸ್. ಆರ್. ಗೋಪಾಲ್ ಎಸ್. ವಿ. ಶ್ರೀಧರ್ ಜಿ. ನಾರಾಯಣಪ್ಪ ಗಂಗಾರೆಡ್ಡಿ ಚೌಡಮ್ಮ ಕೆ. ವಿ. ವೆಂಕಟರಮಣ ಕೆ. ವಿ. ನಾರಾಯಣಪ್ಪ ಕೆ. ವಿ. ಶ್ರೀನಿವಾಸ್ ಕೆ. ವಿ. ಮುರಳಿ	5	00	ಸರ್ವೇ ನಂ. 60	ಸರ್ವೇ ನಂ. 93	ಸರ್ವೇ ನಂ. 97	ಸರ್ವೇ ನಂ. 99 & 60
04	99	ಲಕ್ಷ್ಮಮ್ಮ ವೆಂಕಟಮ್ಮ ಎಸ್. ಕೆ. ರಾಮಕೃಷ್ಣ ಎಸ್. ಕೆ. ರಾಮಾಂಜಿನಯ್ಯ ಎಸ್. ಕೆ. ಮುಕುಂದ ಚೌಡಮ್ಮ ಕೆ. ವಿ. ವೆಂಕಟರಮಣ ಕೆ. ವಿ. ನಾರಾಯಣಪ್ಪ ಕೆ. ವಿ. ಶ್ರೀನಿವಾಸ್ ಕೆ. ವಿ. ಮುರಳಿ	5	00	ಸರ್ವೇ ನಂ. 60, 83 & 82	ಸರ್ವೇ ನಂ. 94	ಸರ್ವೇ ನಂ. 98	ಸರ್ವೇ ನಂ. 100
05	ಸರ್ವೇ ನಂಬರ್ 100 ಉಳಿದ ಭಾಗ	ಲಕ್ಷ್ಮಮ್ಮ ಎಸ್. ಆರ್. ಗೋಪಾಲ್ ಎಸ್. ಆರ್. ಗಣೇಶ್ ಚೌಡಮ್ಮ ಕೆ. ವಿ. ವೆಂಕಟರಮಣ ಕೆ. ವಿ. ನಾರಾಯಣಪ್ಪ ಕೆ. ವಿ. ಶ್ರೀನಿವಾಸ್ ಕೆ. ವಿ. ಮುರಳಿ	4	08	ಸರ್ವೇ ನಂ. 81 & 101	ಸರ್ವೇ ನಂ. 95	ಸರ್ವೇ ನಂ. 99	ಐವಿಸಿ ರೋಡ್
06	ಸರ್ವೇ ನಂಬರ್ 100 ಉಳಿದ ಭಾಗ	ಲಕ್ಷ್ಮಮ್ಮ ಎಸ್. ಆರ್. ಗೋಪಾಲ್ ಎಸ್. ಆರ್. ಗಣೇಶ್ ಚೌಡಮ್ಮ ಕೆ. ವಿ. ವೆಂಕಟರಮಣ ಕೆ. ವಿ. ನಾರಾಯಣಪ್ಪ ಕೆ. ವಿ. ಶ್ರೀನಿವಾಸ್ ಕೆ. ವಿ. ಮುರಳಿ	0	22.05	ಸರ್ವೇ ನಂ. 101	ಸರ್ವೇ ನಂ. 95	ಐವಿಸಿ ರೋಡ್	ಸರ್ವೇ ನಂ. 101
ಒಟ್ಟು			25	02.05				

(ಸುನೀತಾ ಆರ್.) ವಕೀಲರು
ಇಂಡಸ್‌ಲಾ
101, 1ನೇ ಮಹಡಿ, "ಎಂಬಸಿ ಕ್ಲಾಸಿಕ್" # 11, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು – 560 001.

ಸ್ಥಳ : ಬೆಂಗಳೂರು
ದಿನಾಂಕ : 13–02–2023

ಸುದ್ದಿ 2 ನಿಮಿಷ

ಹೈಕೋರ್ಟ್ ನ್ಯಾಯಮೂರ್ತಿಯಿಂದ ತನಿಖೆ ನಡೆಸಿ: ಸಿದ್ದರಾಮಯ್ಯ

ಕಲಬುರಗಿ: 'ದಮ್, ತಾಕತ್ತು ಇದ್ದರೆ ನಮ್ಮ ಮತ್ತು ನಿಮ್ಮ ಮೇಲಿನ ಆರೋಪವನ್ನು ಹೈಕೋರ್ಟ್ ನ್ಯಾಯಮೂರ್ತಿಯಿಂದ ತನಿಖೆ ಮಾಡಿಸಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸವಾಲು ಹಾಕಿದರು.

ನಗರದ ಶರಣಬಸವೇಶ್ವರ ಜಾತ್ರಾ ಮೈದಾನದಲ್ಲಿ ಶುಕ್ರವಾರ ನಡೆದ ಪ್ರಜಾಧ್ವನಿ ಸಮಾವೇಶದಲ್ಲಿ ಮಾತನಾಡಿದರು.

'ಕಾಂಗ್ರೆಸ್ ನುಡಿದಂತೆ ನಡೆಯುವ ಪಕ್ಷವಾಗಿದೆ. ಐದು ವರ್ಷ ನಾನು ಮುಖ್ಯಮಂತ್ರಿ ಆಗಿದ್ದೆ. ದೇವರಾಜ ಅರಸು ಹೊರತುಪಡಿಸಿದರೆ ಪೂರ್ಣ ಅವಧಿಗೆ ಮುಖ್ಯಮಂತ್ರಿ ಆಗುವ ಅವಕಾಶ ನನಗೆ ಸಿಕ್ಕಿದ್ದು, ಹೆಮ್ಮೆಯ ವಿಷಯ' ಎಂದು ಹೇಳಿದರು.

'ನಮ್ಮ ಆಡಳಿತ ಅವಧಿಯ 2013ರ ಪ್ರಣಾಳಿಕೆಯಲ್ಲಿ ನೀಡಿದ 158 ಭರವಸೆ ಈಡೇರಿಸಿದ್ದೇವೆ. ಜೊತೆಗೆ 30 ಹೊಸ ಕಾರ್ಯಕ್ರಮ ನೀಡಿದ್ದೇವೆ. ನಾವು ಜನರಿಗೆ ಕೊಟ್ಟ ಮಾತು ಈಡೇರಿಸಿದ್ದೇವೆ. ಕೊಟ್ಟ ವಚನದಂತೆ ಕಾಂಗ್ರೆಸ್ ನಡೆಯುತ್ತದೆ. ಬಿಜೆಪಿ ಒಂದು ಹೇಳುತ್ತದೆ, ಇನ್ನೊಂದು ಮಾಡುತ್ತದೆ' ಎಂದರು.

ಯಲಹಂಕ ತಹಶೀಲ್ದಾರ್‌ಗೆ ₹25 ಸಾವಿರ ದಂಡ

ಬೆಂಗಳೂರು: ಪಿತ್ರಾರ್ಜಿತ ಆಸ್ತಿಯ ಜಮೀನಿಗೆ ಸಂಬಂಧಿಸಿದ ಮಾಹಿತಿ ಒದಗಿಸದ ಯಲಹಂಕ ತಹಶೀಲ್ದಾರ್ ಅನಿಲ್ ಕುಮಾರ್ ಅರೋಳಿಕರ್ ಅವರಿಗೆ ಕರ್ನಾಟಕ ಮಾಹಿತಿ ಆಯೋಗವು ₹25 ಸಾವಿರ ದಂಡ ವಿಧಿಸಿದೆ.

ಈ ಮೊತ್ತವನ್ನು ವೇತನದಿಂದ ಕಡಿತಗೊಳಿಸಿ, ವರದಿ ಸಲ್ಲಿಸಬೇಕು ಎಂದು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಅವರಿಗೆ ನಿರ್ದೇಶನ ನೀಡಿದೆ.

ಜಾಲಾ ಹೋಬಳಿಯ ಹುತ್ತನಹಳ್ಳಿ ಗ್ರಾಮದಲ್ಲಿನ ಸರ್ವೆ ನಂ.72ರಲ್ಲಿನ ಪಿತ್ರಾರ್ಜಿತ ಆಸ್ತಿಯ ಜಮೀನಿಗೆ ಸಂಬಂಧಿಸಿದಂತೆ ಯಲಹಂಕ ತಾಲ್ಲೂಕಿನ ವಿಶೇಷ ತಹಶೀಲ್ದಾರ್ ಅವರು 2009ರ ಜ.23ರಂದು ನೀಡಿದ್ದ ಆದೇಶದ ನಕಲು ಪ್ರತಿಯನ್ನು ಪಡೆಯಲು ಬೆಂಗಳೂರು ಜಲಮಂಡಳಿಯ ನಿವೃತ್ತ ಎಂಜಿನಿಯರ್ ಎಚ್.ಪಿ. ಗೋಪಾಲಗೌಡ ಅವರು ಅರ್ಜಿ ಸಲ್ಲಿಸಿದ್ದರು. ಆದರೆ, ನಾಲ್ಕು ವರ್ಷಗಳು ಕಳೆದರೂ ಮಾಹಿತಿ ನೀಡಿರಲಿಲ್ಲ. ಈ ಬಗ್ಗೆ ಕರ್ನಾಟಕ ಮಾಹಿತಿ ಆಯೋಗಕ್ಕೆ ಅವರು ದೂರು ಸಲ್ಲಿಸಿದ್ದರು.

'ಆಯೋಗವು ಹಲವು ಬಾರಿ ವಿಚಾರಣೆ ನಡೆಸಿ ಸೂಚನೆಗಳನ್ನು ನೀಡಿದ್ದರೂ ತಹಶೀಲ್ದಾರ್ ಅವರು ನಿರ್ಲಕ್ಷ್ಯ ತೋರಿದ್ದರು' ಎಂದು ಗೋಪಾಲಗೌಡ ತಿಳಿಸಿದ್ದಾರೆ.

ಚಿತ್ರಾವಳಿ

ಬೆಂಗಳೂರಿನ ಹಳೆ ಕೋಟೆ ಪ್ರೌಢಶಾಲೆಯ ಅರಮನೆಯ ಆವರಣದಲ್ಲಿ ಶ್ರೀರಾಮನವಮಿ ಅಂತರರಾಷ್ಟ್ರೀಯ ಸಂಗೀತೋತ್ಸವದ ಭೂಮಿ ಪೂಜೆಯನ್ನು ಮುಖ್ಯ ಅತಿಥಿ ಕೆಎಸ್ ಎಟಿ ಟ್ರಿಬ್ಯೂನಲ್ ಸದಸ್ಯ ಎಸ್. ಶಿವಶೈಲಂ ಮತ್ತು ರಾಮಸೇವಾ ಮಂಡಳಿ ಮುಖ್ಯ ಮಾರ್ಗದರ್ಶಕ ಸಿ. ಎಸ್. ಕೇದಾರ್ ನೆರವೇರಿಸಿದರು. ವೇಣು ಆಚಾರ್ ಮತ್ತು ಅಭಿಜಿತ್ ಇದ್ದಾರೆ. ಪ್ರಜಾವಾಣಿ ಚಿತ್ರ

ಯಲಹಂಕದ ರಾಜಾನುಕುಂಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ₹17 ಕೋಟಿ ವೆಚ್ಚದಲ್ಲಿ ಜಲಜೀವನ್ ಮಿಷನ್(ಮನೆಮನೆಗೆ ಗಂಗೆ)ಯೋಜನೆ ಹಾಗೂ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್‌ಆರ್‌ವಿಶ್ವನಾಥ್ ಚಾಲನೆ ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್‌ಜಿ.ನರಸಿಂಹಮೂರ್ತಿ, ಮಾಜಿ ಅಧ್ಯಕ್ಷರಾದ ಕೆ.ವೀರಣ್ಣ, ಟಿ.ಮುನಿರೆಡ್ಡಿ ಅವರೂ ಇದ್ದರು.

ನಿಧನ ವಾರ್ತೆ

ಪತ್ರಕರ್ತ ಎಚ್.ಮೂರ್ತಿ



ಬೆಂಗಳೂರು: ಪತ್ರಕರ್ತ ಎಚ್. ಮೂರ್ತಿ (68) ಅವರು ನಗರದಲ್ಲಿ ಶುಕ್ರವಾರ ನಿಧನರಾದರು.

ಅವರು ಚಿಕ್ಕಬಾಣಾವರದ ಎಂಇಎಲ್ ಬಡಾವಣೆಯಲ್ಲಿ ವಾಸವಿದ್ದರು. ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರು, ತಮ್ಮ ನಿವಾಸದಲ್ಲಿಯೇ ಮಧ್ಯಾಹ್ನ 1.30ಕ್ಕೆ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಅವರ ಅಂತ್ಯಸಂಸ್ಕಾರವು ಹುಟ್ಟೂರಾದ ಚಿಕ್ಕಮಗಳೂರಿನ ಕಡೂರು ತಾಲ್ಲೂಕಿನ ಗುಮ್ಮನಹಳ್ಳಿಯಲ್ಲಿ ಶನಿವಾರ ಬೆಳಿಗ್ಗೆ ನಡೆಯಲಿದೆ.

ದೂರದರ್ಶನ, ಆಕಾಶವಾಣಿ ಸೇರಿ ವಿವಿಧ ಮಾಧ್ಯಮಗಳಲ್ಲಿ ಕಾರ್ಯನಿರ್ವಹಿಸಿದ್ದ ಅವರು, ಉದಯವಾಣಿ ಪತ್ರಿಕೆಯಲ್ಲಿ ಮುಖ್ಯ ಉಪಸಂಪಾದಕರಾಗಿ ನಿವೃತ್ತರಾಗಿದ್ದರು.

ಎಸ್. ಪ್ರಭುಸ್ವಾಮಿ

ತುಮಕೂರು: ನಗರದ ಹೊರವಲಯದ ಪ್ರುಡೆನ್ಸ್ ಸಮೂಹ ಸಂಸ್ಥೆಗಳ ಕಾರ್ಯನಿರ್ವಾಹಕ ಅಧ್ಯಕ್ಷ ಎಸ್. ಪ್ರಭುಸ್ವಾಮಿ (83) ಬೆಂಗಳೂರಿನಲ್ಲಿ ಶುಕ್ರವಾರ ಸಂಜೆ ನಿಧನರಾದರು.

ಮೃತರಿಗೆ ಪುತ್ರ, ಮೂವರು ಪುತ್ರಿಯರು ಇದ್ದಾರೆ. ಶನಿವಾರ ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಚಾಮರಾಜಪೇಟೆ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಶನಿವಾರ, ಫೆಬ್ರುವರಿ 11, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ ಮುಂಬೈನಲ್ಲಿ ನಡೆದ ಪಾಡ್‌ಕಾಸ್ಟ್ ಸರಣಿಯೊಂದರ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟಿ ಕರೀನಾ ಕಪೂರ್

ಭಾರತ ಸರ್ಕಾರ | G20 | ಸ್ವಾತಂತ್ರ್ಯದ ಅಮೃತಮಹೋತ್ಸವ | ನವ ಭಾರತಕ್ಕಾಗಿ ನವ ಕರ್ನಾಟಕ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ದೇಶದ ಸಹಕಾರ ಕ್ಷೇತ್ರದಲ್ಲಿ ಮಹತ್ತರ ಮೈಲಿಗಲ್ಲು

ಸನ್ಮಾನ್ಯ ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ
ಶ್ರೀ ಅಮಿತ್ ಶಾ ಅವರಿಂದ
ಕ್ಯಾಂಪ್ಕೊ ಸುವರ್ಣ ಮಹೋತ್ಸವದ ಉದ್ಘಾಟನೆ

ಹಾಗೂ

ಪುತ್ತೂರಿನಲ್ಲಿ ಒಂದು ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಲಾಗುತ್ತಿರುವ
‘ಅಗ್ರಿ ಮಾಲ್’ಗೆ ಶಿಲಾನ್ಯಾಸ

ಡಿಜಿಟಲ್ ತಂತ್ರಜ್ಞಾನದ ಮೂಲಕ ಪುತ್ತೂರಿನ ಚಾಕಲೇಟ್ ಕಾರ್ಖಾನೆ ಆವರಣದಲ್ಲಿ
ತೆಂಗಿನ ಕಾಯಿ ಘಟಕ ಮತ್ತು ಭದ್ರಾವತಿಯಲ್ಲಿ ಸುಸಜ್ಜಿತವಾಗಿ ನಿರ್ಮಿಸಲ್ಪಟ್ಟ
ಬಹು ಉದ್ದೇಶಿತ ಗೋದಾಮಿನ ಉದ್ಘಾಟನೆ

ಫೆಬ್ರವರಿ 11, 2023 । ಶನಿವಾರ । ಮಧ್ಯಾಹ್ನ 3.00 ಗಂಟೆ



ಕ್ಯಾಂಪ್ಕೊ (ಕೇಂದ್ರ ಅಡಿಕೆ ಮತ್ತು ಕೊಕ್ಕೊ ಮಾರಾಟ ಮತ್ತು ಸಂಸ್ಕರಣಾ ಸಹಕಾರ ನಿಯಮಿತ)

- ಕರ್ನಾಟಕ ಮತ್ತು ಕೇರಳ ಅಡಿಕೆ ಬೆಳೆಗಾರರ ಸಮಸ್ಯೆಗಳನ್ನು ಉದ್ದೇಶಿಸಲು ಬಹುರಾಜ್ಯ ಸಹಕಾರಿ ಸಂಸ್ಥೆಯಾಗಿ 1973ರಲ್ಲಿ ಆರಂಭ
- ಸಹಕಾರಿ ರತ್ನ ಸನ್ಮಾನ್ಯ ದಿವಂಗತ ಸುಬ್ರಾಯ ಭಟ್ಟರು ನೆಟ್ಟ ಕ್ಯಾಂಪ್ಕೊ ಸಸಿ ಇಂದು ಹೆಮ್ಮರವಾಗಿ ಬೆಳೆದಿದೆ
- ಕೊಕ್ಕೊ ಖರೀದಿಯನ್ನು ಬಹುರಾಷ್ಟ್ರೀಯ ಕಂಪೆನಿಗಳು ಸ್ಥಗಿತಗೊಳಿಸಿದಾಗ ಕ್ಯಾಂಪ್ಕೊ ಕೊಕ್ಕೊ ಬೆಳೆಗಾರರನ್ನು ಸಂಕಷ್ಟದಿಂದ ಪಾರು ಮಾಡಲು ಮತ್ತು ಮಿಶ್ರ ಬೆಳೆ ಕೃಷಿಯನ್ನು ಪ್ರೋತ್ಸಾಹಿಸಲು 1979ರಲ್ಲಿ ಕೊಕ್ಕೊ ಖರೀದಿ ಪ್ರಾರಂಭ
- 1986ರಲ್ಲಿ ಅಂದಿನ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀ ಗ್ಯಾನಿ ಜೇಲ್ ಸಿಂಗ್ ಅವರಿಂದ ಪುತ್ತೂರಿನಲ್ಲಿ ಚಾಕಲೇಟ್ ಕಾರ್ಖಾನೆ ಉದ್ಘಾಟನೆ
- ಇಂದು ಕಾರ್ಖಾನೆ ಸ್ವಯಂಚಾಲಿತ ಮತ್ತು ಸುಸಜ್ಜಿತ ಯಂತ್ರಗಳನ್ನು ಹೊಂದಿ ವಾರ್ಷಿಕ 23,000 ಮೆ.ಟನ್ ಉತ್ಪಾದನಾ ಸಾಮರ್ಥ್ಯ ಹೊಂದಿದೆ.
- **ಸ್ಥಳೀಯ ಯುವಕರಿಗೆ ಉದ್ಯೋಗ ನೀಡಿ ಆತ್ಮ ನಿರ್ಭರ ಭಾರತ ನಿರ್ಮಾಣಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿದೆ.**
- **ಮುಂದಿನ 5 ವರ್ಷಗಳಲ್ಲಿ ಸುಮಾರು ರೂ.100 ಕೋಟಿಗಳಷ್ಟು ಹಣ ಹೂಡಿಕೆ ಮಾಡಿ ಹಳೆಯ ಯಂತ್ರಗಳನ್ನು ಬದಲಿಸಿ ಹೊಸ ಯಂತ್ರಗಳನ್ನು ನಿಯೋಜಿಸುವ ಯೋಜನೆಗೆ ಆಡಳಿತ ಮಂಡಳಿಯಿಂದ ಈಗಾಗಲೇ ಕ್ರಮ**
- ಕರ್ನಾಟಕ ಮತ್ತು ಕೇರಳದಲ್ಲಿ 100ಕ್ಕೂ ಹೆಚ್ಚು ಶಾಖೆಗಳು
- 1.32 ಲಕ್ಷ ಸದಸ್ಯರ ಹಿತ ಕಾಯುತ್ತಿರುವ ಸಂಸ್ಥೆ

ಕರಾವಳಿ ಕರ್ನಾಟಕದ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಮಹತ್ವದ ಕ್ರಮಗಳು

ಪಿಎಂ ಮತ್ಸ್ಯ ಸಂಪದ ಯೋಜನೆಯಡಿ (ಪಿಎಂಎಂಎಸ್‌ವೈ) **ರೂ.120 ಕೋಟಿ** ವೆಚ್ಚದಲ್ಲಿ ಮೀನು ಉತ್ಪಾದನೆ, ರಫ್ತು ಸಾಮರ್ಥ್ಯ ವೃದ್ಧಿ ಹಾಗೂ ಉದ್ಯೋಗಗಳ ಸೃಷ್ಟಿಗಾಗಿ **100 ಆಳ ಸಮುದ್ರ ದೋಣಿಗಳಿಗೆ** ಅನುಮೋದನೆ ನೀಡಲಾಗಿದೆ.

ಸಾರ್ವಜನಿಕ-ಖಾಸಗಿ ಪಾಲುದಾರಿಕೆಯಲ್ಲಿ (ಪಿಪಿಪಿ) ಅಂದಾಜು **ರೂ.5,000 ಕೋಟಿ ವೆಚ್ಚದಲ್ಲಿ ಕೇಣಿಯಲ್ಲಿ 30 ಎಂಟಿಪಿಎ ಆಳ ನೀರು ಸರ್ವಋತು ಗ್ರೀನ್‌ಫೀಲ್ಡ್ ಬಂದರು** ಅಭಿವೃದ್ಧಿ.

ಸಾರ್ವಜನಿಕ-ಖಾಸಗಿ ಪಾಲುದಾರಿಕೆಯಡಿ (ಪಿಪಿಪಿ), ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಬಂದರಿನಲ್ಲಿ **ರೂ.600 ಕೋಟಿ** ಹೂಡಿಕೆಯ **5 ದಶಲಕ್ಷ ಎಂಟಿಪಿಎ ಬಂದರು** ಅಭಿವೃದ್ಧಿಪಡಿಸಲಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಮಜಲಿಯಲ್ಲಿ ಭಾರತ ಸರ್ಕಾರ (ಸಾಗರಮಾಲ ಹಾಗೂ ಪಿಎಂಎಂಎಸ್‌ವೈ ಯೋಜನೆಗಳಡಿ) ಹಾಗೂ ಕರ್ನಾಟಕ ಸರ್ಕಾರದ ವತಿಯಿಂದ ಒಟ್ಟು ಅಂದಾಜು **ರೂ.250 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಮೀನುಗಾರಿಕೆ ಬಂದರು ಅಭಿವೃದ್ಧಿ.**

ಮೀನುಗಾರಿಕೆ ದೋಣಿಗಳ ಸುಗಮ ಹಾಗೂ ವೇಗದ ಓಡಾಟಕ್ಕಾಗಿ **ರೂ.20 ಕೋಟಿ** ವೆಚ್ಚದಲ್ಲಿ **8 ಮೀನುಗಾರಿಕಾ ಬಂದರುಗಳಲ್ಲಿ ಜಲಸಂಚಾರ ಮಾರ್ಗಗಳಲ್ಲಿ ಹೂಳೆತ್ತುವ** ಕಾಮಗಾರಿ ಪ್ರಗತಿಯಲ್ಲಿದೆ.

ಹೊನ್ನಾವರ ತಾಲ್ಲೂಕಿನ ಪವಿನಕುರ್ವೆಯಲ್ಲಿ ಸಾರ್ವಜನಿಕ-ಖಾಸಗಿ ಪಾಲುದಾರಿಕೆಯಲ್ಲಿ (ಪಿಪಿಪಿ) ಅಂದಾಜು **ರೂ.2,000 ಕೋಟಿ** ವೆಚ್ಚದಲ್ಲಿ **12 ಎಂಟಿಪಿಎ ಆಳ ನೀರು ಸರ್ವಋತು ಗ್ರೀನ್‌ಫೀಲ್ಡ್ ಬಂದರು** ಅಭಿವೃದ್ಧಿ.

ಕಾರವಾರ ಬಂದರಿನಲ್ಲಿ, ಕೇಂದ್ರದ ಸಾಗರಮಾಲಾ ಕರಾವಳಿ ಬರ್ತ್ ಯೋಜನೆಯಡಿ **ರೂ.276 ಕೋಟಿ** ಮೊತ್ತದಲ್ಲಿ ಅಭಿವೃದ್ಧಿ ಯೋಜನೆಗಳು ಅನುಷ್ಠಾನದಲ್ಲಿವೆ.

ಹಳೆ ಮಂಗಳೂರು ಬಂದರಿನಲ್ಲಿ ಅಂದಾಜು **ರೂ.65 ಕೋಟಿ** ವೆಚ್ಚದಲ್ಲಿ **350 ಮೀ.ಕರಾವಳಿ ಬರ್ತ್** ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

2021–22ನೇ ಸಾಲಿನಲ್ಲಿ, ಸಮುದ್ರ ಕೊರೆತವನ್ನು ತಡೆಗಟ್ಟುವ ಯೋಜನೆಗಳಿಗೆ **ರೂ.35 ಕೋಟಿ** ಹಾಗೂ ಸಾಧಾರಣ ಬಂದರುಗಳು, ಒಳನಾಡು ಜಲಸಾರಿಗೆ ಹಾಗೂ ಸಾಗರಮಾಲಾ ಯೋಜನೆಗಳಿಗೆ **ರೂ.37.90 ಕೋಟಿ** ವೆಚ್ಚ ಮಾಡಲಾಗಿದೆ.

ಮಂಗಳೂರು ಹಳೆ ಬಂದರಿನಲ್ಲಿ ಕ್ಯಾಪಿಟಲ್ ಡ್ರೆಡ್ಜಿಂಗ್ ಹೂಳೆತ್ತುವ ಕಾಮಗಾರಿಗಳಿಗೆ **ರೂ.29 ಕೋಟಿ** ಮಂಜೂರಾಗಿದ್ದು, ಟೆಂಡರ್ ಹಂತದಲ್ಲಿದೆ.

ಹಳೆ ಮಂಗಳೂರಿನಲ್ಲಿ ಅಂದಾಜು **ರೂ.65 ಕೋಟಿ** ವೆಚ್ಚದಲ್ಲಿ, ಲಕ್ಷದ್ವೀಪ ದ್ವೀಪಗಳೊಂದಿಗೆ ಐತಿಹಾಸಿಕ ವ್ಯಾಪಾರ ಒಪ್ಪಂದಗಳನ್ನು ಪುನರುಜ್ಜೀವನಗೊಳಿಸಲು ಪೂರಕ ಮೂಲಭೂತಸೌಕರ್ಯಗಳು ಹಾಗೂ ಹಡಗು ಟರ್ಮಿನಲ್ ಸಹಿತ ಸಮರ್ಪಿತ ಜೆಟ್ಟಿ ಅಭಿವೃದ್ಧಿ ಕಾಮಗಾರಿ ಟೆಂಡರ್ ಹಂತದಲ್ಲಿದೆ.

ಸಾಗರಮಾಲಾ ಯೋಜನೆಯಡಿ ಬೆಂಗ್ರೆ ಅನ್ನಲರಿ ಅಂಡ್ ಬೀಚ್ ಫ್ರಂಟ್ ಡೆವಲಪ್ಮೆಂಟ್, ಗುರುಪುರ ನದಿ ದ್ವೀಪಗಳ ಅಭಿವೃದ್ಧಿ ಯೋಜನೆ, ರೋ ರೋ ರೋ ಪ್ಯಾಕ್ಸ್ ಜೆಟ್ಟಿ ಯೋಜನೆಗಳಿಗೆ ಈಗಾಗಲೇ ಒಟ್ಟು **ರೂ.48.12 ಕೋಟಿಗಳಿಗೆ** ಮಂಜೂರಾತಿ ನೀಡಲಾಗಿದ್ದು, ಯೋಜನೆ ಟೆಂಡರ್ ಹಂತದಲ್ಲಿದೆ.

ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ, ಕರ್ನಾಟಕದ ಕರಾವಳಿ ಭಾಗಗಳಲ್ಲಿ ವಾಸಿಸುತ್ತಿರುವ ಯುವಜನರಿಗಾಗಿ ಉದ್ಯೋಗ ಸೃಷ್ಟಿಸಲು ಮತ್ತು ಕೈಗಾರಿಕೆಗೆ ಬೇಕಾದಂತಹ ಕೌಶಲ್ಯಗಳನ್ನು ಒದಗಿಸಲು ಅಂದಾಜು **ರೂ.30.35 ಕೋಟಿ** ವೆಚ್ಚದಲ್ಲಿ ಕಡಲು ಸಂಬಂಧಿತ ತರಬೇತಿ ಸಂಸ್ಥೆ ಸ್ಥಾಪನೆ.

ಚಂಡಮಾರುತದಿಂದಾಗಿ ಉಂಟಾಗುವ ಹಾನಿಯನ್ನು ತಡೆಗಟ್ಟುವ ಸಲುವಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ)ವು ಒಳಾಡಳಿತ ವ್ಯವಹಾರಗಳ ಮಂತ್ರಾಲಯ (ಎಂಹೆಚ್‌ಎ), ಕೇಂದ್ರ ಸರ್ಕಾರ, ನವದೆಹಲಿ, ಹಾಗೂ ವಿಶ್ವ ಬ್ಯಾಂಕ್ ನೆರವಿನೊಂದಿಗೆ **ರಾಷ್ಟ್ರೀಯ ಚಂಡಮಾರುತ ಅಪಾಯ ಉಪಶಮನ ಯೋಜನೆ**ಯನ್ನು ರಾಷ್ಟ್ರೀಯ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಕರ್ನಾಟಕದಲ್ಲಿ ಈ ಯೋಜನೆಯನ್ನು ಚಂಡಮಾರುತಕ್ಕೆ ತುತ್ತಾಗಿರುವಂತಹ ರಾಜ್ಯದ 3 ಕರಾವಳಿ ಜಿಲ್ಲೆಗಳಾದ **ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ** ಅನುಷ್ಠಾನಗೊಳಿಸಲಾಗುತ್ತಿದೆ.

ಮಂಗಳೂರಿನ ಗಂಜಿಮಠದಲ್ಲಿ **ರೂ. 62.77 ಕೋಟಿ** ಮೊತ್ತದಲ್ಲಿ **‘ಪ್ಲಾಸ್ಟಿಕ್ ಪಾರ್ಕ್’** ನಿರ್ಮಿಸಲು ಕೇಂದ್ರ ಸರ್ಕಾರದಿಂದ ಅನುಮೋದನೆ

“ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು.” - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಟಿ ಅಭಿನಯಾಗೆ ಜಾಮೀನು

ನವದೆಹಲಿ: ವರದಕ್ಷಿಣೆ ಕಿರುಕುಳ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ನಟಿ ಅಭಿನಯಾ, ತಾಯಿ ಹಾಗೂ ಸಹೋದರನಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಜಾಮೀನು ನೀಡಿದೆ.

ಅತ್ತಿಗೆ ಲಕ್ಷ್ಮೀದೇವಿ ಅವರಿಗೆ ವರದಕ್ಷಿಣೆ ಕಿರುಕುಳ ನೀಡಿ ಜೀವ ಬೆದರಿಕೆಯೊಡ್ಡಿದ್ದ ಪ್ರಕರಣದಲ್ಲಿ ಅಭಿನಯಾ, ಅವರ ತಾಯಿ ಜಯಮ್ಮ ಹಾಗೂ ಅಣ್ಣ ಚೆಲುವರಾಜು ವಿರುದ್ಧ 2002ರಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡಿದ್ದ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ್ದ 8ನೇ ಎಸಿಎಂಎಂ ನ್ಯಾಯಾಲಯ, ಜೈಲು ಶಿಕ್ಷೆ ವಿಧಿಸಿ 2010ರ ಜನವರಿ 5ರಂದು ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿದ್ದ ಆರೋಪಿಗಳು, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಚ್.ಬಿ. ಪ್ರಭಾಕರ ಶಾಸ್ತ್ರಿ ಅವರಿದ್ದ ಏಕಸದಸ್ಯ ನ್ಯಾಯಪೀಠ, 8ನೇ ಎಸಿಎಂಎಂ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಅದಾನಿ ಹಗರಣದ ಬಗ್ಗೆ ಸಂಸತ್ತಿನ ಒಳಗೆ, ಹೊರಗೆ ನಿರಂತರ ಧ್ವನಿ ಎತ್ತಲಿರುವ ಕಾಂಗ್ರೆಸ್

ತನಿಖೆಗೆ ಹಿಂಜರಿಕೆ ಏಕೆ: ಖರ್ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅದಾನಿ ಹಗರಣದ ಬಗ್ಗೆ ಕಾಂಗ್ರೆಸ್ ಪಕ್ಷವು ಸಂಸತ್ತಿನ ಒಳಗೆ ಹಾಗೂ ಹೊರಗೆ ನಿರಂತರ ಧ್ವನಿ ಎತ್ತಲಿದೆ ಎಂದು ಹೇಳಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸರ್ಕಾರವು ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡದಿದ್ದರೆ ಜನರೇ ಅದಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅದಾನಿ ಹಗರಣ, ಸಂಸತ್ತಿನಲ್ಲಿ ತಾವು ಹಾಗೂ ರಾಹುಲ್ ಗಾಂಧಿ ಮಾಡಿರುವ ಭಾಷಣದ ಕೆಲವು ಭಾಗಗಳನ್ನು ಕಡತದಿಂದ ತೆಗೆದುಹಾಕಿರುವುದು ಸೇರಿದಂತೆ ವಿವಿಧ ವಿಷಯಗಳ ಕುರಿತು ಸರ್ಕಾರಕ್ಕೆ 10 ಪ್ರಶ್ನೆಗಳನ್ನು ಮುಂದಿಟ್ಟರು.

ಅದಾನಿ ಹಗರಣ ಬಹು ದೊಡ್ಡ ಪ್ರಮಾಣದ್ದು. ಇದರ ಬಗ್ಗೆ ಸಮಗ್ರ ತನಿಖೆ ನಡೆಯಬೇಕು. ಆದರೆ, ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಮೂಲಕ ತನಿಖೆ ನಡೆಸಲು ಸರ್ಕಾರ ಏಕೆ ಹಿಂಜರಿಯುತ್ತಿದೆ ಎಂದು ಅವರು ಪ್ರಶ್ನಿಸಿದರು.

ಎಐಸಿಸಿ ಕೇಂದ್ರ ಕಚೇರಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪತ್ರಿಕಾಗೋಷ್ಠಿ ನಡೆಸಿದರು. ಪಕ್ಷದ ಹಿರಿಯ ನಾಯಕರಾದ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಕೆ.ಸಿ.ವೇಣುಗೋಪಾಲ್ ಇದ್ದರು —ಪಿಟಿಐ ಚಿತ್ರ

'ರಾಜ್ಯಸಭೆಯಲ್ಲಿ ನಾನು ಯಾವುದೇ ಅಸಂಸದೀಯ ಪದ ಬಳಕೆ ಮಾಡಿಲ್ಲ. ಅದಾನಿ ವಿಚಾರದ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿದ್ದೆ' ಎಂದು ಹೇಳಿದರು.

ಅದಾನಿ ವಿಚಾರದಲ್ಲಿ ಆರ್‌ಬಿಐ, ಸೆಬಿ, ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ ಹಾಗೂ ಸಿಬಿಐ ಮೌನವಾಗಿರುವುದು ಏಕೆ ಎಂದೂ ಅವರು ಪ್ರಶ್ನಿಸಿದರು.

ಸರ್ಕಾರಕ್ಕೆ ಪ್ರಶ್ನೆಗಳನ್ನು ಕೇಳುವುದು ವಿರೋಧ ಪಕ್ಷಗಳ ಕೆಲಸ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಾವು ಪ್ರಶ್ನೆಗಳನ್ನು ಕೇಳುತ್ತೇವೆ. ಅದಕ್ಕೆ ಸರ್ಕಾರ ಉತ್ತರಿಸಬೇಕು. ಆದರೆ, ಸರ್ಕಾರವು ಸಂಸತ್ತಿನಲ್ಲಿ ಪ್ರಜಾಸತ್ತಾತ್ಮಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಅವರು ಟೀಕಿಸಿದರು.

ಅದಾನಿ ಹಗರಣದ ಬಗ್ಗೆ ಜೆಪಿಸಿ ಮೂಲಕ ತನಿಖೆ ನಡೆಸಬೇಕು ಎಂಬುದು ಪ್ರತಿಪಕ್ಷಗಳ ಬೇಡಿಕೆ. ಈ ವಿಷಯದಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದೇವೆ. ಬಡ ಜನರ ಆಸ್ತಿಯನ್ನು ಹಾಗೂ ದೇಶವನ್ನು ರಕ್ಷಿಸಲು ಎಲ್ಲರೂ ಬಯಸುತ್ತಾರೆ ಎಂದು ಅವರು ಹೇಳಿದರು.

ಸಂಸದೆ ರಜನಿ ಅಮಾನತು

ನವದೆಹಲಿ (ಪಿಟಿಐ): ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ಕಾಂಗ್ರೆಸ್ ಸಂಸದೆ ರಜನಿ ಅಶೋಕ್ ರಾವ್ ಪಾಟೀಲ್ ಅವರನ್ನು ಪ್ರಸಕ್ತ ಬಜೆಟ್ ಅಧಿವೇಶನದ ಉಳಿದ ಅವಧಿಗೆ ಅಮಾನತುಗೊಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಭಾಷಣದ ವೇಳೆ ಗದ್ದಲ ಚಿತ್ರೀಕರಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದ ಧನಕರ್, ಈ ವಿಷಯದ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಂತೆ ರಾಜಕೀಯ ಪಕ್ಷಗಳ ನಾಯಕರನ್ನು ಕೇಳಿದರು.

ಬಳಿಕ ಬಜೆಟ್ ಅಧಿವೇಶನದ ಉಳಿದ ಅವಧಿಗೆ ಪಾಟೀಲ್ ಅವರನ್ನು ಅಮಾನತುಗೊಳಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಸುದ್ದಿ 2 ನಿಮಿಷ

'ಗೋವು ಅಪ್ಪಿಕೊ ದಿನ': ಕರೆ ಹಿಂಪಡೆದ ಮಂಡಳಿ

ನವದೆಹಲಿ: ಫೆ.14ರಂದು ಪ್ರೇಮಿಗಳ ದಿನದ ಬದಲು 'ಗೋವು ಅಪ್ಪಿಕೊ ದಿನ'ವನ್ನು ಆಚರಿಸಿ ಎಂದು ಬುಧವಾರ ನೀಡಿದ್ದ ಕರೆಯನ್ನು ಭಾರತೀಯ ಪ್ರಾಣಿ ಅಭಿವೃದ್ಧಿ ಮಂಡಳಿ ಶುಕ್ರವಾರ ಹಿಂಪಡೆದಿದೆ. ಈ ಕರೆಯನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರವು ಮಂಡಳಿಗೆ ಸೂಚಿಸಿತ್ತು.

'ಮಂಡಳಿಯ ಕ್ರಮಕ್ಕೆ ತೀವ್ರ ಟೀಕೆಗಳು ವ್ಯಕ್ತವಾಗಿದೆ. ಸಾರ್ವಜನಿಕರು ಅದರಲ್ಲೂ ಯುವಕರಿಗೆ ಸರ್ಕಾರದ ಬಗ್ಗೆ ತಪ್ಪು ಅನಿಸಿಕೆ ಮೂಡಬಾರದು ಎನ್ನುವ ಕಾರಣಕ್ಕೆ 'ಗೋವು ಅಪ್ಪಿಕೊ ದಿನ' ಆಚರಿಸಲು ನೀಡಿರುವ ಕರೆಯನ್ನು ಹಿಂಪಡೆಯಲು ಸೂಚಿಸಲಾಗಿದೆ' ಎಂದು ಪಶು ಸಂಗೋಪನೆ ಸಚಿವಾಲಯ ಹೇಳಿದೆ.

ಮಂಡಳಿಯ ಕ್ರಮಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗಿತ್ತು.

'ಗೋವು ಅಪ್ಪಿಕೊ ದಿನಕ್ಕೆ ನೀಡಿದ್ದ ಕರೆಯನ್ನು ವಾಪಸು ಪಡೆಯಬೇಕು ಎಂದು ಮೀನುಗಾರಿಕೆ, ಪಶು ಸಂಗೋಪನೆ ಹಾಗೂ ಹೈನುಗಾರಿಕೆ ಸಚಿವಾಲಯವು ನಿರ್ದೇಶಿಸಿದೆ. ಇದರ ಅನ್ವಯ ಕರೆಯನ್ನು ಹಿಂಪಡೆಯಲಾಗಿದೆ' ಎಂದು ಮಂಡಳಿಯ ಕಾರ್ಯದರ್ಶಿ ಎಸ್. ಕೆ. ದತ್ತಾ ಹೇಳಿರುವ ಪತ್ರವನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.



'ಪಾಶ್ಚಿಮಾತ್ಯ ಸಂಸ್ಕೃತಿ ಯು ವ್ಯಾಪಕವಾಗಿ ಹಬ್ಬುತ್ತಿರುವುದರಿಂದಾಗಿ ವೇದ ಸಂಸ್ಕೃತಿಯು 'ಅಳಿವಿನ ಅಂಚಿಗೆ' ಸರಿದಿದೆ' ಎಂದು ಮಂಡಳಿ ಈ ಹಿಂದೆ ಹೇಳಿತ್ತು.

ಫೆ. 13ರಿಂದ ಕೋವಿಡ್ ವರದಿ ಬೇಡ

ನವದೆಹಲಿ: ಚೀನಾ, ಹಾಂಗ್‌ಕಾಂಗ್, ಜಪಾನ್, ದಕ್ಷಿಣ ಕೊರಿಯಾ, ಸಿಂಗಪುರ, ಥಾಯ್ಲೆಂಡ್‌ಗಳಿಂದ ಭಾರತಕ್ಕೆ ಬರುವ ಪ್ರವಾಸಿಗರು ಇನ್ನು ಮುಂದೆ ಕೋವಿಡ್ ತಪಾಸಣೆಯ ವರದಿಯನ್ನು ಸಲ್ಲಿಸುವ ಅಗತ್ಯವಿಲ್ಲ. ಬದಲಿಗೆ ಫೆ. 13ರಿಂದ ಸ್ವಯಂಘೋಷಿತ ಆರೋಗ್ಯ ಪ್ರಮಾಣಪತ್ರವನ್ನು 'ಏರ್ ಸುವಿಧಾ' ಪೋರ್ಟಲ್‌ನಲ್ಲಿ ಸಲ್ಲಿಸಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯವು ತಿಳಿಸಿದೆ. 'ನಾಲ್ಕು ವಾರಗಳ ಅವಧಿಯಲ್ಲಿ ಈ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ಕೇಂದ್ರ ಸರ್ಕಾರವು ಈ ನಿರ್ಧಾರವನ್ನು ತೆಗೆದುಕೊಂಡಿದೆ' ಎಂದು ಕೇಂದ್ರ ಆರೋಗ್ಯ ಇಲಾಖೆಯ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿದ್ದಾರೆ.

ವಿಜಯಪುರ ತಾಲ್ಲೂಕಿನ ಹೆಗಡಿಹಾಳ ಲಂಬಾಣಿ ತಾಂಡಾದ ಬಳಿಯ ಬಸವ ನಗರದಲ್ಲಿ ಗ್ರಾಮಸ್ಥರ ಸಮ್ಮುಖದಲ್ಲಿ ಶುಕ್ರವಾರ ಸಹೋದರರ ತಲೆ ಬೋಳಿಸಲಾಯಿತು

ಸೋದರರ ತಲೆ ಬೋಳಿಸಿ, ಚಪ್ಪಲಿ ಹಾರ ಹಾಕಿದ ಪಂಚರು

ಪ್ರಜಾವಾಣಿ ವಾರ್ತೆ

ವಿಜಯಪುರ: ಮಹಾರಾಷ್ಟ್ರಕ್ಕೆ ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಹುಡುಗಿ ಜೊತೆ ಅಸಭ್ಯವಾಗಿ ವರ್ತಿಸಿದ ಆರೋಪದ ಮೇರೆಗೆ ಅವಳಿ ಸಹೋದರರ ತಲೆ ಬೋಳಿಸಿ, ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡಿರುವ ಘಟನೆ ತಾಲ್ಲೂಕಿನ ಹೆಗಡಿಹಾಳ ಲಂಬಾಣಿ ತಾಂಡಾದ ಬಸವ ನಗರದಲ್ಲಿ ಶುಕ್ರವಾರ ನಡೆದಿದೆ.

ಹೆಗಡಿಹಾಳ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮಸಿಂಗ್ ಹಾಗೂ ತಾಂಡಾದ ಪಂಚರ ಸಮ್ಮುಖದಲ್ಲಿ ತೇಜು ಚವ್ಹಾಣ, ರಾಜು ಚವ್ಹಾಣ ಎಂಬುವರ ತಲೆ ಬೋಳಿಸಿ, ಸುಣ್ಣ ಬಳಿದು, ಚಪ್ಪಲಿ ಹಾರ ಹಾಕಿ ಮೆರವಣಿಗೆ ನಡೆಸಲಾಗಿದೆ.

ಮಹಾರಾಷ್ಟ್ರದಲ್ಲಿ ಕೆಲಸಕ್ಕೆ ತಾಂಡಾದಿಂದ ಒಟ್ಟಿಗೆ ಹೋಗಿದ್ದ ಸಂದರ್ಭದಲ್ಲಿ ಒಂದು ತಿಂಗಳ ಹಿಂದೆ ತಮ್ಮದೇ ತಾಂಡಾದ ಹುಡುಗಿಯೊಂದಿಗೆ ಈ ಸಹೋದರರು ಅಸಭ್ಯವಾಗಿ ವರ್ತಿಸಿ, ಗಲಾಟೆ ಮಾಡಿದ್ದರು. ತಾಂಡಾಕ್ಕೆ ಮರಳಿದಾಗ ಪಂಚರು ವಿಚಾರಣೆ ನಡೆಸಿ, ಗ್ರಾಮಸ್ಥರ ಸಮ್ಮುಖದಲ್ಲಿ ಶಿಕ್ಷೆ ವಿಧಿಸಿದ್ದಾರೆ.

'ವಿಷಯ ತಿಳಿದ ತಕ್ಷಣ ತಾಂಡಾಕ್ಕೆ ಭೇಟಿ ನೀಡಿ ಪರಿಶೀಲಿಸಿ, ಗ್ರಾಮದ ಪಂಚರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಘಟನೆ ಬಗ್ಗೆ ಸಂಪೂರ್ಣ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ವಿಜಯಪುರ ಗ್ರಾಮೀಣ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಎರಡನೇ ಪ್ರಯತ್ನದಲ್ಲಿ ಗುರಿ ಸಾಧಿಸಿದ ಇಸ್ರೊ ವಿಜ್ಞಾನಿಗಳು

ಕಕ್ಷೆಗೆ 3 ಉಪಗ್ರಹ ಸೇರಿಸಿದ ರಾಕೆಟ್

ಶ್ರೀಹರಿಕೋಟಾ (ಆಂಧ್ರಪ್ರದೇಶ): ಸಣ್ಣ ಮೂರು ಉಪಗ್ರಹಗಳನ್ನು ಹೊತ್ತ ಎಸ್‌ಎಸ್‌ಎಲ್‌ವಿ-ಡಿ2 ರಾಕೆಟ್ (ಸ್ಮಾಲ್ ಸ್ಯಾಟ್‌ಲೈಟ್ ಲಾಂಚ್ ವೆಹಿಕಲ್-ಸಣ್ಣ ಉಪಗ್ರಹ ಉಡಾವಣಾ ನೌಕೆ) ಅನ್ನು ಇಸ್ರೊ ಶುಕ್ರವಾರ ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆ ಮಾಡಿದೆ.

ಚೊಚ್ಚಲ ಪರೀಕ್ಷೆಯಲ್ಲಿ ನಿರೀಕ್ಷಿತ ಫಲಿತಾಂಶ ಸಿಗದೆ ನಿರಾಸೆ ಅನುಭವಿಸಿದ್ದ ಇಸ್ರೊ, ಕೆಲವೇ ತಿಂಗಳ ನಂತರ ನಡೆಸಿದ ಮತ್ತೊಂದು ಪರೀಕ್ಷೆಯಲ್ಲಿ ಯಶಸ್ಸು ಕಂಡಿದೆ.

ಬೆಳಿಗ್ಗೆ 9.18ಕ್ಕೆ ನಭಕ್ಕೆ ಚಿಮ್ಮಿದ 34 ಮೀಟರ್ ಎತ್ತರದ ಎಸ್‌ಎಸ್‌ಎಲ್‌ವಿ ರಾಕೆಟ್, 450 ಕಿ.ಮೀ ಅಂತರದ ಕಕ್ಷೆಗೆ 15 ನಿಮಿಷಗಳಲ್ಲಿ ತಲುಪಿತು. ಮೂರು ಸಣ್ಣ ಉಪಗ್ರಹಗಳನ್ನು ಉದ್ದೇಶಿತ ಕಕ್ಷೆಗೆ ಯಶಸ್ವಿಯಾಗಿ ಸೇರಿಸಿತು.

'ಎಸ್‌ಎಸ್‌ಎಲ್‌ವಿ'ಯ ಎರಡನೇ ಅವತರಣಿಕೆಯಾದ 'ಎಸ್‌ಎಸ್‌ಎಲ್‌ವಿ-ಡಿ2' ಉಡಾವಣಾ ವಾಹಕದ ಮೂಲ ಇಸ್ರೊ ತನ್ನ ಭೂ ವೀಕ್ಷಣಾ ಉಪಗ್ರಹ ಇಒಎಸ್-07 ಅನ್ನು ಕಕ್ಷೆಗೆ ಸೇರಿಸಿದೆ. ಇದರ ಜತೆಗೆ ಅಮೆರಿಕದ ಅಂಟಾರಿಸ್ ತಂತ್ರಜ್ಞಾನ ಸಂಸ್ಥೆಯ ಜಾನುಸ್-1 ಮತ್ತು ಚೆನ್ನೈನ ಸ್ಪೇಸ್ ಕಿಡ್ಜ್ ಇಂಡಿಯಾದ 'ಆಜಾದಿ ಸ್ಯಾಟ್-2' ಉಪಗ್ರಹಗಳನ್ನೂ ಕಕ್ಷೆಗೆ ಯಶಸ್ವಿಯಾಗಿ ಸೇರಿಸಿದೆ.

2022ರ ಆಗಸ್ಟ್ 7ರಂದು ಬೆಳಿಗ್ಗೆ 9.18ಕ್ಕೆ ಮೊದಲ ಪರೀಕ್ಷೆಯಲ್ಲಿ ರಾಕೆಟ್, 'ಆಜಾದಿಸ್ಯಾಟ್' ಸೇರಿ ಸಣ್ಣ ಉಪಗ್ರಹಗಳನ್ನು ಹೊತ್ತು ನಭಕ್ಕೆ ಚಿಮ್ಮಿದಾಗ, ಹಾದಿ ಮಧ್ಯೆ ಪಥ ಬದಲಿಸಿ, ಕಕ್ಷೆ ಸೇರಲು ವಿಫಲವಾಗಿತ್ತು. ಕೊನೆ ಹಂತದ ದತ್ತಾಂಶವೂ ನಷ್ಟವಾಗಿತ್ತು. ಕಾಕತಾಳೀಯ ಎನ್ನುವಂತೆ ಅದೇ ಕಾಲಮಾನಕ್ಕೆ ನಿಗದಿಪಡಿಸಿದ್ದ ಎರಡನೇ ಪ್ರಯತ್ನದಲ್ಲಿ ಈ ರಾಕೆಟ್ ಗುರಿಸಾಧಿಸಲು ಸಫಲವಾಗಿದೆ.

'ನಮ್ಮ ಬಾಹ್ಯಾಕಾಶ ಯೋಜನೆ ಯಶಸ್ವಿಯಾಗಿದೆ. ದೇಶದ ಬಾಹ್ಯಾಕಾಶ ಸಮುದಾಯಕ್ಕೆ ಅಭಿನಂದನೆಗಳು. ಈಗ ನಮ್ಮಲ್ಲೂ ಎಸ್‌ಎಸ್‌ಎಲ್‌ವಿ ಡಿ2 ಹೊಸ ಉಡಾವಣಾ ವಾಹನವಿದೆ' ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

'ಮೊದಲ ಪ್ರಯತ್ನದಲ್ಲಿ ಆಗಿದ್ದ ದೋಷಗಳನ್ನು ಸರಿಪಡಿಸಿದ ಇಸ್ರೊ ತಂಡವು, ಅತ್ಯಂತ ಕಡಿಮೆ ಅವಧಿಯಲ್ಲಿ ಯಶಸ್ಸಿನ ಹಳಿಗೆ ಮರಳಿದೆ. ಇಸ್ರೊ ಬಳಿ ಈಗ ಕಡಿಮೆ ವೆಚ್ಚದ ಉಡಾವಣಾ ವಾಹಕವಿದೆ ' ಎಂದು ಯೋಜನೆಯ ನಿರ್ದೇಶಕ ಎಸ್.ವಿನೋದ್ ಹೇಳಿದ್ದಾರೆ.

ಸತೀಶ್ ಧವನ್ ಬಾಹ್ಯಾಕಾಶ ನಿಲ್ದಾಣದ ಉಡಾವಣಾ ಕೇಂದ್ರದಿಂದ ಮೂರು ಸಣ್ಣ ಉಪಗ್ರಹಗಳನ್ನು ಹೊತ್ತ ಇಸ್ರೊದ ಎಸ್‌ಎಸ್‌ಎಲ್‌ವಿಡಿ2 ರಾಕೆಟ್ ಉಡಾವಣಾ ಪರೀಕ್ಷೆ ಶುಕ್ರವಾರ ಯಶಸ್ವಿಯಾಯಿತು– ಪಿಟಿಐ ಚಿತ್ರ

ಎಸ್‌ಎಸ್‌ಎಲ್‌ವಿ ಡಿ2 ವಿಶೇಷತೆ

10ರಿಂದ 500 ಕೆ.ಜಿಯ ವರೆಗಿನ ಉಪಗ್ರಹಗಳನ್ನು ಕೆಳ ಹಂತದ ಭೂಕಕ್ಷೆಗೆ ಸೇರಿಸಲು 'ಎಸ್‌ಎಸ್‌ಎಲ್‌ವಿ' ಉಪಯುಕ್ತವಾಗಿದೆ. ಇದು ಕಡಿಮೆ ವೆಚ್ಚ, ಕಡಿಮೆ ಸಮಯ ಮತ್ತು ಹೆಚ್ಚು ಉಪಗ್ರಹಗಳನ್ನು ಸಾಗಿಸಲು ನೆರವಾಗಲಿದೆ. ಕನಿಷ್ಠ ಉಡಾವಣಾ ಮೂಲಸೌಕರ್ಯ 'ಎಸ್‌ಎಸ್‌ಎಲ್‌ವಿ'ಗೆ ಸಾಕಾಗುತ್ತದೆ.

ಸಣ್ಣ ಉಪಗ್ರಹ ಉಡಾವಣಾ ವಾಹಕ ಮಾರುಕಟ್ಟೆಯಲ್ಲಿ ಯಶಸ್ಸು ಸಾಧಿಸಲು ಇಸ್ರೊ, ತನ್ನ ಈ ಹೊಸ ರಾಕೆಟ್ ಮೇಲೆ ಅಪಾರ ನಿರೀಕ್ಷೆ ಹೊಂದಿದೆ.

ಕಕ್ಷೆ ಸೇರಿದ ಉಪಗ್ರಹಗಳ ಹಿನ್ನೆಲೆ

- ಇಒಎಸ್-07 ಭೂ ವೀಕ್ಷಣಾ ಉಪಗ್ರಹ 156.3 ಕೆ.ಜಿ. ತೂಕವಿದೆ. ಇದರ ಅಭಿವೃದ್ಧಿ ಮತ್ತು ವಿನ್ಯಾಸವು ಇಸ್ರೊ ವಿಜ್ಞಾನಿಗಳ ಹೊಸ ಪ್ರಯೋಗ.
- ಜಾನಸ್-1 ಉಪಗ್ರಹವು 10.2 ಕೆ.ಜಿ. ತೂಕವಿದೆ. ಅಮೆರಿಕದ 'ಅಂಟಾರಿಸ್' ಸಂಸ್ಥೆ ಅಭಿವೃದ್ಧಿಪಡಿಸಿದೆ.
- ಆಜಾದಿಸ್ಯಾಟ್-2 ಉಪಗ್ರಹವು 8.2 ಕೆ.ಜಿ. ತೂಕವಿದೆ. ಚೆನ್ನೈನ 'ಸ್ಪೇಸ್ ಕಿಡ್ಜ್ ಇಂಡಿಯಾ' ಅಭಿವೃದ್ಧಿಪಡಿಸಿದೆ. ಇದರಲ್ಲಿ ದೇಶದ ಸುಮಾರು 750 ವಿದ್ಯಾರ್ಥಿನಿಯರ ಸಂಯೋಜಿತ ಪರಿಶ್ರಮವಿದೆ.

ಬಹು ಮಾಧ್ಯಮ ಪ್ರಜಾವಾಣಿ@75
www.prajavani.net

ಇಂದು

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ

ಸೆಲೆಬ್ರಿಟಿ PREMIERE

ಮಾಲಾ ರಂಗಸ್ವಾಮಿ
ವಿಡಿಯೊ ವಿಶ್ಲೇಷಕಿ, ಬಿಸಿಸಿಐ

ವಿಶ್ವಕಪ್ ಜಯದ ಹಿಂದಿನ ಕಥೆ

ಬೆಳಿಗ್ಗೆ 10 ಕ್ಕೆ

Prajavani.net Prajavani Prajavani

ಅಧ್ಯಕ್ಷ ಎಸ್. ಸೋಮನಾಥ್ ಹೇಳಿಕೆ

ಮರುಬಳಕೆ ರಾಕೆಟ್ ಲ್ಯಾಂಡಿಂಗ್: ಚಿತ್ರದುರ್ಗದಲ್ಲಿ ಇಸ್ರೊ ಸಿದ್ಧತೆ

ಶ್ರೀಹರಿಕೋಟಾ (ಆಂಧ್ರಪ್ರದೇಶ) (ಎಪಿ): 'ಮರುಬಳಕೆ ಮಾಡಬಹುದಾದ ಉಡಾವಣಾ ವಾಹಕವನ್ನು ಸುರಕ್ಷಿತವಾಗಿ ಲ್ಯಾಂಡಿಂಗ್ ಮಾಡಿಸುವ ಪ್ರಾತ್ಯಕ್ಷಿಕೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಕರ್ನಾಟಕದ ಚಿತ್ರದುರ್ಗ ಜಿಲ್ಲೆಯಲ್ಲಿರುವ ಮರುಬಳಕೆ ರಾಕೆಟ್‌ಗಳ ಇಳಿದಾಣದಲ್ಲಿ ಯೋಜನೆ ಸಂಬಂಧಿತ ಕೆಲಸಗಳಲ್ಲಿ ನಮ್ಮ ತಂಡಗಳು ತೊಡಗಿವೆ' ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಶುಕ್ರವಾರ ತಿಳಿಸಿದರು.

'ಆರಂಭಿಕ ಸಿದ್ಧತೆಗಳು ಕೆಲವೇ ದಿನಗಳಲ್ಲಿ ಪೂರ್ಣವಾಗಲಿವೆ. ನಂತರ ಲ್ಯಾಂಡಿಂಗ್ ಪ್ರಾತ್ಯಕ್ಷಿಕೆ ನಡೆಸಲು ಸಾಧ್ಯವಾಗಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಎಸ್‌ಎಸ್‌ಎಲ್‌ವಿ ಡಿ2 ಯಶಸ್ವಿ ಉಡಾವಣೆಯ ನಂತರ ಇಲ್ಲಿ ವರದಿಗಾರರೊಂದಿಗೆ ಮಾತನಾಡಿದ ಅವರು, 'ಸದ್ಯ ನಾವು, ಮುಂದಿನ ಉಡಾವಣೆಗಾಗಿ ಜಿಎಸ್‌ಎಲ್‌ವಿ ಎಂಕೆ3 ಉಡಾವಣಾ ವಾಹಕ ಸಜ್ಜುಗೊಳಿಸುತ್ತಿದ್ದೇವೆ. ಇದು ಒನ್‌ವೆಬ್ ಇಂಡಿಯಾ-2 ಜತೆಗೆ 36 ಉಪಗ್ರಹಗಳನ್ನು ಒಟ್ಟಿಗೆ ಉಡಾವಣೆ ಮಾಡುವ ಎಲ್‌ವಿಎಂ 3ಎಂ3 ಕಾರ್ಯಕ್ರಮದ ಭಾಗವಾಗಿದೆ. ಈ ಉಡಾವಣೆ ಮಾರ್ಚ್ ಮಧ್ಯೆ ನಡೆಯಲಿದೆ' ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ವಿ ಉಡಾವಣೆ ಮಾಡಿದ ಬೆನ್ನಲ್ಲೇ ಇಸ್ರೊ, ಪಿಎಸ್‌ಎಲ್‌ವಿ ಸಿ 55 ಮಿಷನ್ ಉಡಾವಣಾ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ವಾಣಿಜ್ಯ ಉದ್ದೇಶದ ಈ ಉಡಾವಣೆಯನ್ನು ನ್ಯೂ ಸ್ಪೇಸ್ ಇಂಡಿಯಾ ಲಿಮಿಟೆಡ್‌ಗಾಗಿ (ಎನ್‌ಎಸ್‌ಐಎಲ್) ನಡೆಸಲಾಗುತ್ತಿದೆ. ಇದು ಬಹುಶಃ ಮಾರ್ಚ್ ಅಂತ್ಯದ ವೇಳೆಗೆ ನೆರವೇರಲಿದೆ. ಉಡಾವಣಾ ಕೇಂದ್ರದ ಹೊಸ ಸೌಲಭ್ಯದ ನೆಲೆಯಲ್ಲಿ ರಾಕೆಟ್ ಇರಿಸುವ ಮೂಲಕ ಉಡಾವಣಾ ಕಾರ್ಯಕ್ರಮ ಶುಕ್ರವಾರವೇ ಪ್ರಾರಂಭಿಸಲಾಗಿದೆ ಎಂದರು.

ನಿಸಾರ್ (ನಾಸಾ-ಇಸ್ರೊ ಎಸ್‌ಎಆರ್ ಮಿಷನ್) ಉಡಾವಣೆ ವರ್ಷದ ಅಂತ್ಯದ ವೇಳೆಗೆ ನಿಗದಿಪಡಿಸಲಾಗಿದೆ ಎಂದು ಅವರು ಹೇಳಿದರು.

ಇಸ್ರೊ ಈ ವರ್ಷದಲ್ಲಿ ಹಲವು ಮಹತ್ವಪೂರ್ಣ ಕಾರ್ಯಕ್ರಮಗಳನ್ನು ಕೈಗೊಳ್ಳಲಿದೆ. ಜತೆಗೆ ಮಾನವ ಸಹಿತ 'ಗಗನಯಾನ' ಕಾರ್ಯಕ್ರಮಕ್ಕೂ ಅಗತ್ಯ ಸಿದ್ಧತೆ ಮಾಡಿಕೊಳ್ಳಲಿದೆ ಎಂದರು.

ಇಸ್ರೊ ಪ್ರಕಾರ, ಮೂವರು ಗಗನಯಾತ್ರಿಗಳನ್ನು ನೌಕೆಯಲ್ಲಿ 400 ಕಿ.ಮೀ ಅಂತರದ ಕಕ್ಷೆಗೆ ಕೊಂಡೊಯ್ದು ಮತ್ತೆ ಭೂಮಿಗೆ ಸುರಕ್ಷಿತವಾಗಿ ವಾಪಸ್ ಕರೆತಂದು ಭಾರತದ ಸಮುದ್ರದಲ್ಲಿ ಇಳಿಸುವ ಉದ್ದೇಶವನ್ನು 3 ದಿನಗಳ 'ಗಗನಯಾನ' ಯೋಜನೆ ಹೊಂದಿದೆ.

'ಈ ವರ್ಷವಿಡಿ ಇಸ್ರೊದಲ್ಲಿ ಗಗನಯಾನಕ್ಕೆ ಸಂಬಂಧಿಸಿದ ಚಟುವಟಿಕೆಗಳು ನಡೆಯಲಿವೆ. ನೌಕೆಯ ಪರೀಕ್ಷಾ ಹಾರಾಟ, ಪರೀಕ್ಷಾ ವಾಹಕದ ಕಾರ್ಯಾಚರಣೆ ಜತೆಗೆ, ಪುನಶ್ಚೇತನ ಸಾಮರ್ಥ್ಯದ ಮಾಡ್ಯುಲ್ ಪ್ರಾತ್ಯಕ್ಷಿಕೆ ನಡೆಯಬೇಕು. ಇವೆಲ್ಲವೂ ಯಶಸ್ವಿಯಾದ ನಂತರ ಇನ್ನೊಂದು ಗಗನನೌಕೆ ಉಡಾವಣೆ ನಡೆಯಲಿದೆ. ಈ ಎರಡೂ ಕಾರ್ಯಕ್ರಮಗಳು ಯಶಸ್ವಿಯಾದ ನಂತರ ಮಾನವ ರಹಿತ ಬಾಹ್ಯಾಕಾಶ ಕಾರ್ಯಕ್ರಮ ಕೈಗೊಳ್ಳುತ್ತೇವೆ' ಎಂದು ಸೋಮನಾಥ್ ತಿಳಿಸಿದರು.

ರಾಜಸ್ಥಾನ: ಹಳೆಯ ಬಜೆಟ್ ಓದಿ ಮುಜುಗರಕ್ಕೀಡಾದ ಮುಖ್ಯಮಂತ್ರಿ

ಜೈಪುರ (ಪಿಟಿಐ): ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಶುಕ್ರವಾರ ವಿಧಾನಸಭೆಯಲ್ಲಿ ಹಳೆಯ ಬಜೆಟ್‌ನ ಅಂಶಗಳನ್ನೇ ಕೆಲವು ನಿಮಿಷ ಓದಿದ್ದರಿಂದ ಸದನದಲ್ಲಿ ತೀವ್ರ ಮುಜುಗರಕ್ಕೆ ಒಳಗಾದರು.

ಈ ಬೆಳವಣಿಗೆಯಿಂದ ಸದನದಲ್ಲಿ ಗೊಂದಲದ ಸ್ಥಿತಿ ಮೂಡಿತು. ಎರಡು ಬಾರಿ ಸದನ ಮುಂದೂಡಲಾಯಿತು. ವಿರೋಧ ಪಕ್ಷಗಳ ಸದಸ್ಯರು ಈ ಲೋಪವನ್ನೇ ಉಲ್ಲೇಖಿಸಿ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಪ್ರಮಾದಕ್ಕಾಗಿ ಕ್ಷಮೆಯಾಚಿಸಿದ ಮುಖ್ಯಮಂತ್ರಿ ಅವರು, 'ಇದು ಮನುಷ್ಯಸಹಜ ಲೋಪ. ಹೀಗೇ ಆಗಿದ್ದು ದುರದೃಷ್ಟಕರ. ಕಣ್ತಪ್ಪಿನಿಂದ ಹೆಚ್ಚುವರಿ ಪುಟ ಸೇರಿತ್ತು. ವಸುಂಧರಾರಾಜೆ ಅವರು ಸಿ.ಎಂ ಆಗಿದ್ದ ಅವಧಿಯ ಅಂಶಗಳೇ ಇದ್ದವು. ಈಗ ಲೋಪವನ್ನು ಸರಿಪಡಿಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಗೊಂದಲ ಸ್ಥಿತಿಯಿಂದಾಗಿ ಕಲಾಪವನ್ನು ಮುಂದೂಡಲಾಯಿತು. ಸ್ವಲ್ಪ ಸಮಯದ ನಂತರ ಮತ್ತೆ ಸದನ ಸೇರಿದಾಗ ಸಭಾಧ್ಯಕ್ಷ ಸಿ.ಪಿ. ಜೋಶಿ ಅವರು, 'ಕಲಾಪದ ಸಂಬಂಧಿತ ಅಂಶಗಳನ್ನು ಕಡತದಿಂದ ತೆಗೆಯಲಾಗಿದೆ' ಎಂದು ಪ್ರಕಟಿಸಿದರು.

ಸದನದಲ್ಲಿಯೇ ಇದ್ದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಅವರು, 'ಯಾವುದೇ ಮುಖ್ಯಮಂತ್ರಿಯೂ ಹೀಗೆ ಮಾಡಬಾರದು. ಮುಖ್ಯಮಂತ್ರಿಗಳೇ ಹೀಗೇ ಮಾಡಿದರೆ ರಾಜಸ್ಥಾನದ ಸ್ಥಿತಿ ಏನಾಗಬೇಕು' ಎಂದು ಪ್ರಶ್ನಿಸಿದರು. ಗದ್ದಲ ಮುಂದುವರಿದ ಕಾರಣ ಸದನವನ್ನು ಎರಡನೇ ಬಾರಿಗೆ 15 ನಿಮಿಷ ಮುಂದೂಡಲಾಯಿತು.

ಮತ್ತೆ ಸದನ ಆರಂಭವಾದಾಗ ಮಾತನಾಡಿದ ವಿರೋಧ ಪಕ್ಷದ ನಾಯಕ ಗುಲಾಬ್ ಚಂದ್ ಕಟಾರಿಯಾ, ಬಜೆಟ್ ಪ್ರತಿಗಳು ಹಣಕಾಸು ಸಚಿವರ ಬಳಿಯೇ ಉಳಿದಿವೆ. ಸದನದ ಘನತೆಯನ್ನು ರಕ್ಷಿಸಲು ಬಜೆಟ್ ಮಂಡನೆಯನ್ನು ಮುಂದೂಡಬೇಕು ಎಂದು ಒತ್ತಾಯಿಸಿದರು. ವಿರೋಧ ಪಕ್ಷಗಳ ಪ್ರತಿಭಟನೆಯ ನಡುವೆಯೇ ಮುಖ್ಯಮಂತ್ರಿ ಬಜೆಟ್ ಮಂಡಿಸಿದರು.

ಮೋದಿ ನಮನ

ಮುಂಬೈನ ಮರೋಳ್‌ನಲ್ಲಿ ಪ್ರಧಾನಿ ಮೋದಿ ಅವರು ಶುಕ್ರವಾರ ಅಲ್ ಜಾಮೀಯಾ-ತುಸ್-ಸೈಫಿಯಾಹದ ಹೊಸ ಕ್ಯಾಂಪಸ್ ಉದ್ಘಾಟನೆ ಸಂದರ್ಭ ಅಧ್ಯಾತ್ಮ ನಾಯಕ ಸೈದ್ನಾ ಮುಫದ್ದಾಲ್ ಸೈಫುದ್ದೀನ್ ಅವರಿಗೆ ನಮಿಸಿದರು. – ಪಿಟಿಐ ಚಿತ್ರ

ತಮಿಳುನಾಡಿನಲ್ಲಿ ಆರ್‌ಎಸ್‌ಎಸ್ ಯಾತ್ರೆಗೆ ಮದ್ರಾಸ್ ಹೈಕೋರ್ಟ್ ಒಪ್ಪಿಗೆ

ಚೆನ್ನೈ(ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ತಮಿಳುನಾಡಿನಲ್ಲಿ ಆಯೋಜಿಸಿರುವ ಯಾತ್ರೆಗೆ ಮದ್ರಾಸ್ ಹೈಕೋರ್ಟ್ ಶುಕ್ರವಾರ ಅನುಮತಿ ನೀಡಿದೆ. ಇದೇ ಸಂದರ್ಭದಲ್ಲಿ, ಆರೋಗ್ಯಕರ ಪ್ರಜಾಪ್ರಭುತ್ವಕ್ಕೆ ಪ್ರತಿಭಟನೆಗಳು ಅವಶ್ಯಕ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

'ಶಾಂತಿಯುತ ಯಾತ್ರೆ ನಡೆಸಲು ಮೂರು ದಿನಾಂಕಗಳನ್ನು ಗುರುತಿಸಿ ರಾಜ್ಯದ ಅಧಿಕಾರಿಗಳಿಗೆ ನೀಡಬೇಕು. ಈ ಪೈಕಿ ಒಂದು ದಿನಾಂಕದಂದು ಯಾತ್ರೆ ನಡೆಸಲು ಅಧಿಕಾರಿಗಳು ಅವಕಾಶ ನೀಡಿ, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ನ್ಯಾಯಾಲಯ ಸೂಚಿಸಿದೆ.

ಹಾಗೆಯೇ, ಯಾತ್ರೆ ವೇಳೆ ಶಿಸ್ತು ಕಾಪಾಡಬೇಕು, ಪ್ರಚೋದನೆ ಇರಕೂಡದು ಎಂದೂ ಆರ್‌ಎಸ್‌ಎಸ್‌ಗೆ ಸೂಚಿಸಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಆರ್.ಮಹದೇವನ್ ಮತ್ತು ಮಹಮ್ಮದ್ ಸಫೀಕ್ ಅವರನ್ನು ಒಳಗೊಂಡ ನ್ಯಾಯಪೀಠವು, 'ರಾಜ್ಯದ ಅಧಿಕಾರಿಗಳು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಹಕ್ಕನ್ನು ಎತ್ತಿಹಿಡಿಯುವಂತೆ ಕೆಲಸ ಮಾಡಬೇಕು' ಎಂದು ಹೇಳಿತು.

ಅ.2ರಂದು ತಮಿಳುನಾಡಿನ ವಿವಿಧ ಕಡೆಗಳಲ್ಲಿ ಯಾತ್ರೆ ನಡೆಸಲು ಆರ್‌ಎಸ್‌ಎಸ್ ತೀರ್ಮಾನಿಸಿತ್ತು. ನ.4ರಂದು ಈ ಕುರಿತು ವಿಚಾರಣೆ ನಡೆಸಿದ ಹೈಕೋರ್ಟ್‌ನ ಏಕಸದಸ್ಯ ಪೀಠವು ಹಲವು ಷರತ್ತುಗಳನ್ನು ವಿಧಿಸಿತ್ತು. ಬಳಿಕ ಆರ್‌ಎಸ್‌ಎಸ್ ಯಾತ್ರೆಯನ್ನು ರದ್ದುಪಡಿಸಿತ್ತು.

ಸುಪ್ರೀಂಕೋರ್ಟ್‌ಗೆ ಇಬ್ಬರು ನ್ಯಾಯಮೂರ್ತಿಗಳ ನೇಮಕ

ನವದೆಹಲಿ (ಪಿಟಿಐ): ಗುಜರಾತ್ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಅರವಿಂದ ಕುಮಾರ್ ಮತ್ತು ಅಲಹಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ರಾಜೇಶ್ ಬಿಂದಾಲ್ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿದೆ.

ಈ ಇಬ್ಬರೂ ನ್ಯಾಯಮೂರ್ತಿಗಳ ನೇಮಕ ವಿಷಯವನ್ನು ಕೇಂದ್ರದ ಕಾನೂನು ಸಚಿವ ಕಿರಣ್ ರಿಜಿಜು ಅವರು ಟ್ವೀಟ್ ಮೂಲಕ ಹಂಚಿಕೊಂಡಿದ್ದಾರೆ. ಇವರು ಪ್ರಮಾಣವಚನ ಸ್ವೀಕರಿಸಿದ ಬಳಿಕ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಸಂಖ್ಯೆ 34 ಆಗಿದೆ. ಇದರೊಂದಿಗೆ ಮಂಜೂರಾಗಿರುವ ಎಲ್ಲ ಹುದ್ದೆಗಳು ಭರ್ತಿಯಾದಂತಾಗಲಿದೆ.

ಅರವಿಂದ ಕುಮಾರ್ ಅವರು ಕರ್ನಾಟಕದವರಾಗಿದ್ದು, 2009ರ ಜೂನ್‌ನಲ್ಲಿ ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. ಎರಡು ವರ್ಷದ ಬಳಿಕ ಕಾಯಂ ನ್ಯಾಯಮೂರ್ತಿಯಾದರು. 2021ರ ಅಕ್ಟೋಬರ್ 13ರಂದು ಗುಜರಾತ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು.

ಕಳೆದ ವಾರವಷ್ಟೇ ಸುಪ್ರೀಂ ಕೋರ್ಟ್‌ಗೆ ಐವರು ನ್ಯಾಯಮೂರ್ತಿಗಳನ್ನು ನೇಮಕ ಮಾಡಲಾಗಿತ್ತು.



ಅರವಿಂದ ಕುಮಾರ್



ರಾಜೇಶ್ ಬಿಂದಾಲ್

'ವರಾಹರೂಪಂ' ಹಾಡಿಗೆ ತಡೆ ನೀಡಿದ್ದ ಕೋರ್ಟ್

ಹೈಕೋರ್ಟ್ ಷರತ್ತು ರದ್ದುಪಡಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಹಕ್ಕುಸ್ವಾಮ್ಯ ಉಲ್ಲಂಘನೆ ಪ್ರಕರಣದ ಅಂತಿಮ ತೀರ್ಪು ಬರುವವರೆಗೂ 'ವರಾಹ ರೂಪಂ' ಹಾಡಿನೊಂದಿಗೆ ಸಿನಿಮಾ ಪ್ರದರ್ಶಿಸಬಾರದು ಎಂದು 'ಕಾಂತಾರ' ಸಿನಿಮಾದ ನಿರ್ಮಾಪಕ ವಿಜಯ್ ಕಿರಗಂದೂರು ಹಾಗೂ ನಿರ್ದೇಶಕ ರಿಷಬ್ ಶೆಟ್ಟಿ ಅವರಿಗೆ ಕೇರಳ ಹೈಕೋರ್ಟ್ ವಿಧಿಸಿದ್ದ ಷರತ್ತಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠವು ಪ್ರಕರಣ ಸಂಬಂಧ ಕೇರಳ ಸರ್ಕಾರಕ್ಕೆ ನೋಟಿಸ್ ನೀಡಿ, ಎರಡು ವಾರಗಳಲ್ಲಿ ಉತ್ತರಿಸುವಂತೆ ಸೂಚಿಸಿದೆ.

'ಕಾಂತಾರ' ಸಿನಿಮಾದಲ್ಲಿ 'ನವರಸಂ' ಹಾಡನ್ನು ಅನುಮತಿಯಿಲ್ಲದೆಯೇ ಬಳಸಿಕೊಳ್ಳಲಾಗಿದೆ ಎಂದು ಹಾಡಿನ ಹಕ್ಕುಸ್ವಾಮ್ಯ ಹೊಂದಿರುವ ಮಾತೃಭೂಮಿ ಪ್ರಕಾಶನ ಹಾಗೂ 'ತೈಕುಡಂ ಬ್ರಿಡ್ಜ್' ತಂಡವು ಪ್ರತ್ಯೇಕ ದೂರು ನೀಡಿದ್ದವು. ಕೋಯಿಕ್ಕೋಡ್ ಹಾಗೂ ಪಾಲಕ್ಕಾಡ್ ಜಿಲ್ಲಾ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆದಾಗ, 'ಈ ಪ್ರಕರಣವು ಈ ಕೋರ್ಟ್‌ನಲ್ಲಿ ವಿಚಾರಣೆಗೆ ಸೂಕ್ತ ವಾಗಿಲ್ಲ. ಆದ್ದರಿಂದ ವಾಣಿಜ್ಯ ವ್ಯಾಜ್ಯ ಗಳನ್ನು ವಿಚಾರಣೆ ಮಾಡುವಂಥ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ' ಎಂದಿದ್ದವು. ಬಳಿಕ ಮಾತೃಭೂಮಿ ಪ್ರಕಾಶನ ಹಾಗೂ ತೈಕುಡಂ ಬ್ರಿಡ್ಜ್ ತಂಡವು ಕೇರಳ ಹೈಕೋರ್ಟ್ ಮೆಟ್ಟಿಲೇರಿದ್ದವು.

ಫೆ.8ಕ್ಕೆ ಪ್ರಕರಣದ ವಿಚಾರಣೆ ನಡೆಸಿದ ಕೇರಳ ಹೈಕೋರ್ಟ್, ಐದು ಷರತ್ತುಗಳೊಂದಿಗೆ ವಿಜಯ್ ಹಾಗೂ ರಿಷಬ್ ಶೆಟ್ಟಿ ಅವರಿಗೆ ನಿರೀಕ್ಷಣಾ ಜಾಮೀನು ನೀಡಿತ್ತು. ಇದರಲ್ಲಿ ಐದನೇ ಷರತ್ತನ್ನು ಪ್ರಶ್ನಿಸಿ ವಿಜಯ್ ಹಾಗೂ ರಿಷಬ್ ಶೆಟ್ಟಿ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಹೈಕೋರ್ಟ್ ವಿಧಿಸಿದ್ದ ಷರತ್ತುಗಳು

- ಫೆ.12 ಮತ್ತು 13ರ ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರ ಒಳಗೆ ತನಿಖಾಧಿಕಾರಿಯ ಮುಂದೆ ವಿಯಜ್ ಹಾಗೂ ರಿಷಬ್ ಹಾಜರಿರಬೇಕು
- ಈ ಅವಧಿಯೊಳಗೆ ತನಿಖೆ ಪೂರ್ಣಗೊಂಡ ಬಳಿಕ, ಇಬ್ಬರನ್ನೂ ಬಂಧಿಸಬಹುದು. ನಂತರ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕು. ಈ ನ್ಯಾಯಾಲಯವು ಇಬ್ಬರನ್ನೂ ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು. ಇಬ್ಬರಿಂದಲೂ ₹50 ಸಾವಿರ ಬಾಂಡ್ ಹಾಗೂ ಭದ್ರತೆ ಪಡೆಯಬೇಕು
- ಜಾಮೀನು ಪಡೆದ ಬಳಿಕ, ಆರೋಪಿಗಳು ಸಾಕ್ಷ್ಯಗಳನ್ನು ನಾಶ ಪಡಿಸುವಂತಿಲ್ಲ ಹಾಗೂ ಸಾಕ್ಷಿಗಳನ್ನು ಬೆದರಿಸುವಂತಿಲ್ಲ.
- ಈ ಅವಧಿಯಲ್ಲಿ ಆರೋಪಿಗಳು ಭಾರತ ಬಿಟ್ಟು ಹೋಗುವಂತಿಲ್ಲ. ವಿದೇಶಗಳಿಗೆ ತೆರಳಲು ನ್ಯಾಯಾಲಯದ ಅನುಮತಿ ಪಡೆದುಕೊಳ್ಳಬೇಕು

ಸಾಂವಿಧಾನಿಕ ಮೌಲ್ಯಗಳಿಗೆ ಬದ್ಧರಾಗಿರಬೇಕು: 'ಸುಪ್ರೀಂ'

ನವದೆಹಲಿ: 'ಧರ್ಮ, ಭಾಷೆ, ಪ್ರದೇಶ ಅಥವಾ ಇತರ ಯಾವುದೇ ಮಿತಿಯನ್ನು ಮೀರಿ ದೇಶದ ಸಹೋದರತೆಯನ್ನು ಕಾಪಾಡುವ, ಸೌಹಾರ್ದವನ್ನು ಉತ್ತೇಜಿಸುವ ಕೆಲಸ ಮಾಡುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯ. ಅದರಲ್ಲೂ ನ್ಯಾಯಮೂರ್ತಿಗಳಿಗೆ ಈ ಸಂಬಂಧ ಹೆಚ್ಚಿನ ಜವಾಬ್ದಾರಿ ಇರುತ್ತದೆ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಅಭಿಪ್ರಾಯಪಟ್ಟಿದೆ.

ಲಕ್ಷ್ಮಣ ಚಂದ್ರ ವಿಕ್ಟೋರಿಯಾ ಗೌರಿ ಮದ್ರಾಸ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಲು ತಡೆ ನೀಡಬೇಕು ಎಂದು ಕೋರಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಫೆ.7ರಂದು ವಜಾ ಮಾಡಿತ್ತು. ಈ ಅರ್ಜಿಯನ್ನು ವಜಾ ಮಾಡಿರುವುದಕ್ಕೆ ಇನ್ನಷ್ಟು ಕಾರಣಗಳನ್ನು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಬಿ.ಆರ್. ಗವಾಯಿ ಅವರಿದ್ದ ಪೀಠವು ನೀಡಿದೆ.

ನ್ಯಾಯಮೂರ್ತಿಯೊಬ್ಬರನ್ನು ಕಾಯಂಗೊಳಿಸುವ ವೇಳೆ, ಅವರ ನಡತೆ ಹಾಗೂ ಅವರು ನೀಡಿದ ತೀರ್ಪುಗಳನ್ನು ಮಾತ್ರ ಗಣನೆಗೆ ತೆಗೆದು ಕೊಳ್ಳುವುದಿಲ್ಲ. ನ್ಯಾಯಾಲಯವು ಎಲ್ಲರ ಸಮ್ಮುಖದಲ್ಲಿ ನಡೆಯುತ್ತದೆ. ನ್ಯಾಯಮೂರ್ತಿಗಳು ನೀಡುವ ತೀರ್ಪಿಗೆ ಕಾರಣವಾದ ಅಂಶಗಳನ್ನು ಎಲ್ಲರ ಮುಂದೆಯೇ ಹೇಳುತ್ತಾರೆ. ವಕೀಲರು, ಸಾರ್ವಜನಿಕರು ಹಾಗೂ ಕಕ್ಷಿದಾರರು ನ್ಯಾಯಮೂರ್ತಿಗಳನ್ನು ಪ್ರತಿ ದಿನವೂ ಮೌಲ್ಯಮಾಪನ ಮಾಡುತ್ತಿರುತ್ತಾರೆ' ಎಂದರು.

'ನ್ಯಾಯಮೂರ್ತಿಗಳ ನಡತೆ ಮತ್ತು ಅವರು ನೀಡುವ ತೀರ್ಪುಗಳು ಪ್ರಜಾಸತ್ತಾತ್ಮಕ ಹಾಗೂ ಸಾಂವಿಧಾನಿಕ ಮೌಲ್ಯಗಳಿಗೆ ಅನುಗುಣವಾಗಿರಬೇಕು' ಎಂದರು.

ಏಮ್ಸ್: ಐದು ಸರ್ವರ್‌ಗಳ ಮೇಲೆ ಸೈಬರ್ ದಾಳಿ

ನವದೆಹಲಿ: ತಾಂತ್ರಿಕ ವಿಶ್ಲೇಷಣೆಯ ಪ್ರಕಾರ, ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಏಮ್ಸ್) ಒಟ್ಟು ಐದು ಸರ್ವರ್‌ಗಳು ಸೈಬರ್ ದಾಳಿಯಿಂದ ಬಾಧಿತವಾಗಿವೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಶುಕ್ರವಾರ ಹೇಳಿದ್ದಾರೆ.

ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ (ಸಿಇಆರ್‌ಟಿ -ಇನ್) ಏಮ್ಸ್ ಮೇಲಿನ ಸೈಬರ್ ದಾಳಿಯನ್ನು ಮೌಲ್ಯಮಾಪನ ಮಾಡಿದೆ.

ಸಿಇಆರ್‌ಟಿ -ಇನ್ ಮತ್ತು ಇತರ ಪಾಲುದಾರ ಘಟಕಗಳು ಅಗತ್ಯ ಪರಿಹಾರ ಕ್ರಮಗಳನ್ನು ಸೂಚಿಸಿವೆ ಎಂದು ಸಚಿವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ದೆಹಲಿಯ ಏಮ್ಸ್ ನ.23ರಂದು ಸೈಬರ್ ದಾಳಿಗೆ ಒಳಗಾಗಿತ್ತು.

ಶನಿವಾರ, ಫೆಬ್ರುವರಿ 11, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 42 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಜಾ ಮತ ಜನತಂತ್ರದ ಹಬ್ಬ
ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ನಾಯಕರಿಗೆ ಅಧಿಕಾರ ಹಿಡಿಯುವ ಹಂಬಲ

ಡಿಕೆಶಿ ವಿರುದ್ಧದ ಸಿಬಿಐ ತನಿಖೆಗೆ ತಡೆ 6
ರಾಜಸ್ವ ಸಂಗ್ರಹದಲ್ಲಿ ಶೇ 91ರಷ್ಟು ಸಾಧನೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,683	17,856	₹58,750 (ಬೆಂಗಳೂರು)	₹68,200 (ಬೆಂಗಳೂರು)	82.58

ವ್ಯಾಪಕ ಅವ್ಯವಹಾರದ ಆರೋಪ • ಬಿಡಿಎ ಕಚೇರಿಗಳಲ್ಲಿ 'ಲೋಕಾ' ಶೋಧ

ಮೂವರು ದಲ್ಲಾಳಿಗಳು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಾಪಕ ಅವ್ಯವಹಾರ ನಡೆಯುತ್ತಿರುವ ದೂರುಗಳನ್ನು ಆಧರಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕೇಂದ್ರ ಕಚೇರಿ ಮೇಲೆ ಶುಕ್ರವಾರ ಲೋಕಾಯುಕ್ತ ಪೊಲೀಸರು ದಾಳಿ ಮಾಡಿ ಶೋಧ ನಡೆಸುತ್ತಿದ್ದಾರೆ. ಕಚೇರಿಯ ಒಳಗಿದ್ದ ಮೂವರು ದಲ್ಲಾಳಿಗಳನ್ನು ವಶಕ್ಕೆ ಪಡೆದಿದ್ದಾರೆ.

ಆದಿನಾರಾಯಣ, ಮಂಜಪ್ಪ ಮತ್ತು ಅನಿಲ್‌ಕುಮಾರ್ ಎಂಬ ದಲ್ಲಾಳಿಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ. ಬಿಡಿಎ ಕಡತ ವಿಲೇವಾರಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಜತೆ ಮಾತುಕತೆ ನಡೆಸಿರುವುದು ಹಾಗೂ ಕೋಟ್ಯಂತರ ರೂಪಾಯಿ ಕೈ ಬದಲಾವಣೆ ಆಗಿರುವುದಕ್ಕೆ ಸಂಬಂಧಿಸಿದಂತೆ ಅವರ ಮೊಬೈಲ್‌ಗಳಲ್ಲಿ ಮಾಹಿತಿಗಳು ಲಭ್ಯವಾಗಿವೆ. ಬಿಡಿಎ ಅಧಿಕಾರಿಗಳು, ಮಧ್ಯವರ್ತಿಗಳು ಮತ್ತು ಇತರ ಕೆಲವು ವ್ಯಕ್ತಿಗಳ ಜಾಲವೊಂದರ ಮಾಹಿತಿಯೂ ಅವರ ಮೊಬೈಲ್‌ಗಳಲ್ಲಿ ಪತ್ತೆಯಾಗಿದೆ ಎಂದು ತನಿಖಾ ಸಂಸ್ಥೆಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಮೂವರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಹೆಚ್ಚಿನ ತನಿಖೆಗಾಗಿ ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿ ಪುನಃ ತಮ್ಮ ವಶಕ್ಕೆ ಪಡೆಯಲು ತನಿಖಾಧಿಕಾರಿಗಳು ಮುಂದಾಗಿದ್ದಾರೆ ಎಂದು ಗೊತ್ತಾಗಿದೆ.

ನಿವೇಶನ ಹಂಚಿಕೆ, ಬದಲಿ ನಿವೇಶನ ಮಂಜೂರಾತಿ, ವಿವಿಧ ಉದ್ದೇಶಗಳಿಗೆ ಸ್ವಾಧೀನಪಡಿಸಿಕೊಂಡ ಜಮೀನುಗಳ ಮಾಲೀಕರಿಗೆ ಪರಿಹಾರ ವಿತರಣೆಯಲ್ಲಿ ಬಿಡಿಎ ಕಚೇರಿಗಳಲ್ಲಿ ಬೃಹತ್ ಪ್ರಮಾಣದ ಅಕ್ರಮ, ಭ್ರಷ್ಟಾಚಾರ ನಡೆಯುತ್ತಿರುವ ಕುರಿತು ಸಾರ್ವಜನಿಕರು ಲೋಕಾಯುಕ್ತರಿಗೆ ಹಲವು ದೂರುಗಳನ್ನು ನೀಡಿದ್ದರು. ಅವುಗಳನ್ನು ಆಧರಿಸಿ ವಿಚಾರಣೆ ಆರಂಭಿಸಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಶೋಧ ನಡೆಸುವಂತೆ ಸಂಸ್ಥೆಯ ಪೊಲೀಸ್ ವಿಭಾಗಕ್ಕೆ ಆದೇಶಿಸಿದ್ದರು.

7A ಪುಟ ನೋಡಿ

'ಆಳಕ್ಕಿಳಿದು ತನಿಖೆ ನಡೆಸುತ್ತೇವೆ'

'ಬಿಡಿಎ ಕಚೇರಿಗಳಲ್ಲಿ ದೊಡ್ಡ ಪ್ರಮಾಣದ ಅವ್ಯವಹಾರ, ಭ್ರಷ್ಟಾಚಾರ ನಡೆಯುತ್ತಿರುವ ದೂರುಗಳನ್ನು ಆಧರಿಸಿ ಕಾರ್ಯಾಚರಣೆ ನಡೆಸಲಾಗಿದೆ. ಸಂಶಯಾಸ್ಪದ ಕಡತಗಳನ್ನು ವಶಕ್ಕೆ ಪಡೆಯಲಾಗುತ್ತಿದೆ. ಈ ಪ್ರಕ್ರಿಯೆ ಮುಗಿಯಲು ಕೆಲವು ದಿನಗಳು ಬೇಕಾಗಬಹುದು. ಬಿಡಿಎನಲ್ಲಿ ನಡೆಯುತ್ತಿರುವ ಅಕ್ರಮಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಆಳಕ್ಕಿಳಿದು ತನಿಖೆ ನಡೆಸಲಾಗುವುದು' ಎಂದು ಲೋಕಾಯುಕ್ತ ಬಿ.ಎಸ್. ಪಾಟೀಲ ತಿಳಿಸಿದರು.

ಡಿಸಿಎಫ್ ವೆಂಕಟೇಶ್ ಬಳಿ ₹ 4 ಕೋಟಿ ಅಕ್ರಮ ಆಸ್ತಿ ಪತ್ತೆ

ಜಿ. ವೆಂಕಟೇಶ್

ಬೆಂಗಳೂರು: ಕೋಲಾರ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಜಿ.ವೆಂಕಟೇಶ್ ಅವರಿಗೆ ಸಂಬಂಧಿಸಿದ ಎಂಟು ಸ್ಥಳಗಳ ಮೇಲೆ ಶುಕ್ರವಾರ ದಾಳಿ ಮಾಡಿ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ₹ 4 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆಮಾಡಿದ್ದಾರೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ವೆಂಕಟೇಶ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿರುವ ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಪೊಲೀಸರು, ಬೆಂಗಳೂರು, ಕೋಲಾರ ಮತ್ತು ರಾಮನಗರ ಜಿಲ್ಲೆಗಳ ವಿವಿಧೆಡೆ ಶೋಧ ನಡೆಸಿದ್ದಾರೆ.

7A ಪುಟ ನೋಡಿ

ಜಿಂಕೆ ಕೊಂಬು, ತಲೆಬುರುಡೆ ವಶ

ಗುಡ್ಡಹಳ್ಳಿಯಲ್ಲಿ ವೆಂಕಟೇಶ್ ಅವರ ಸಂಬಂಧಿ ಗಂಗಮುನಿಯಪ್ಪ ಹೆಸರಿನಲ್ಲಿರುವ ತೋಟದ ಮನೆಯಲ್ಲಿ ಜಿಂಕೆ ಕೊಂಬು ಮತ್ತು ಅದರ ತಲೆಬುರುಡೆ ಪತ್ತೆಯಾಗಿವೆ. ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಕ್ರಮಕ್ಕಾಗಿ ಅವುಗಳನ್ನು ಮಾಗಡಿ ವಲಯ ಅರಣ್ಯಾಧಿಕಾರಿಗೆ ಹಸ್ತಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹೂಡಿಕೆದಾರರ ಜೊತೆ 'ಅದಾನಿ' ನಂಟು: ಸೆಬಿ ತನಿಖೆ

ಮುಂಬೈ/ ನವದೆಹಲಿ (ರಾಯಿಟರ್ಸ್): ಅದಾನಿ ಎಂಟರ್‌ಪ್ರೈಸಸ್‌ನ ₹ 20 ಸಾವಿರ ಕೋಟಿ ಮೌಲ್ಯದ ಷೇರು ಮಾರಾಟ ಪ್ರಕ್ರಿಯೆಯಲ್ಲಿ (ಎಫ್‌ಪಿಒ) ಹೂಡಿಕೆ ಮಾಡಿದ್ದ ಕೆಲವು ಹೂಡಿಕೆದಾರರ ಜೊತೆ ಅದಾನಿ ಸಮೂಹದ ಸಂಬಂಧ ಏನಿತ್ತು ಎಂಬ ಬಗ್ಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ತನಿಖೆ ನಡೆಸುತ್ತಿದೆ.

ಎಫ್‌ಪಿಒ ಪ್ರಕ್ರಿಯೆಯನ್ನು ಕಂಪನಿಯು ಈಗಾಗಲೇ ರದ್ದುಮಾಡಿದೆ.

ಎಫ್‌ಪಿಒ ಸಂದರ್ಭದಲ್ಲಿ ಯಾವುದಾದರೂ ನಿಯಮಗಳ ಉಲ್ಲಂಘನೆ ಆಗಿದೆಯೇ, ಅಲ್ಲಿ ಹಿತಾಸಕ್ತಿ ಸಂಘರ್ಷ ಉಂಟಾಗಿತ್ತೇ ಎಂಬ ಬಗ್ಗೆ ಸೆಬಿ ಪರಿಶೀಲನೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ. ಅದಾನಿ ಸಮೂಹ ಹಾಗೂ ಮಾರಿಷಸ್ ಮೂಲದ ಗ್ರೇಟ್ ಇಂಟರ್‌ನ್ಯಾಷನಲ್ ಟಸ್ಕರ್ ಫಂಡ್ ಮತ್ತು ಆಯುಷ್ಮತ್ ಲಿಮಿಟೆಡ್ ನಡುವಿನ ಸಂಬಂಧ ಏನು ಎಂಬ ಬಗ್ಗೆ ಸೆಬಿ ತನಿಖೆ ನಡೆಸುತ್ತಿದೆ. ಮಾರಿಷಸ್ ಮೂಲದ ಈ ಎರಡು ಕಂಪನಿಗಳು ಎಫ್‌ಪಿಒ ವೇಳೆ ಆರಂಭಿಕ ಹೂಡಿಕೆದಾರರಾಗಿ ಪಾಲ್ಗೊಂಡಿದ್ದವು ಎಂದು ಗೊತ್ತಾಗಿದೆ.

11ನೇ ಪುಟ ನೋಡಿ

ಹೂಡಿಕೆದಾರರ ಹಿತರಕ್ಷಣೆ: ಕೇಂದ್ರ, ಸೆಬಿ ಅಭಿಪ್ರಾಯ ಕೇಳಿದ 'ಸುಪ್ರೀಂ'

ನವದೆಹಲಿ(ಪಿಟಿಐ): ಭಾರತದ ಹೂಡಿಕೆದಾರರ ಹಿತಾಸಕ್ತಿಯನ್ನು ರಕ್ಷಿಸುವ ಕುರಿತು ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಇದಕ್ಕಾಗಿ ಷೇರುಪೇಟೆ ನಿಯಂತ್ರಣಕ್ಕೆ ಸದೃಢವಾದ ವ್ಯವಸ್ಥೆ ಬೇಕು ಎಂದು ಶುಕ್ರವಾರ ಅಭಿಪ್ರಾಯಪಟ್ಟಿದೆ. ಕೇಂದ್ರ ಸರ್ಕಾರ ಮತ್ತು ಸೆಬಿ ಈ ಕುರಿತು ನಿಲುವು ವ್ಯಕ್ತಪಡಿಸಬೇಕು ಎಂದು ಕೋರ್ಟ್ ಹೇಳಿದೆ.

ಅದಾನಿ ಸಮೂಹದ ಷೇರುಗಳ ಮೌಲ್ಯವು ಕೃತಕವಾಗಿ ಕುಸಿಯುವಂತೆ ಮಾಡಿ ಮುಗ್ಧ ಹೂಡಿಕೆದಾರರನ್ನು ಶೋಷಿಸಲಾಗಿದೆ ಎಂದು ಆರೋಪಿಸಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿಯ ಎರಡು ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠವು ವಿಚಾರಣೆಗೆ ಒಳಪಡಿಸಿತು.

11ನೇ ಪುಟ ನೋಡಿ

'ಮಾರ್ಚ್ 5ರಂದೇ ನೀಟ್–ಪಿಜಿ'

ನವದೆಹಲಿ (ಪಿಟಿಐ): ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್–ಪಿಜಿ) ನಿಗದಿಯಂತೆ ಮಾರ್ಚ್ 5ರಂದು ನಡೆಯಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಲೋಕಸಭೆಯಲ್ಲಿ ಶುಕ್ರವಾರ ತಿಳಿಸಿದ್ದಾರೆ.

ಕಾಂಗ್ರೆಸ್ ಸದಸ್ಯ ಗೌರವ್ ಗೊಗೋಯಿ ಅವರು ಕೇಳಿದ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ವಾದದಲ್ಲಿ ಹುರುಳಿಲ್ಲ ಎಂದ ಸುಪ್ರೀಂ ಕೋರ್ಟ್

ಬಿಬಿಸಿ ನಿಷೇಧ ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): 2002ರ ಗುಜರಾತ್ ಗಲಭೆ ಕುರಿತು 'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಎಂಬ ಸಾಕ್ಷ್ಯಚಿತ್ರ ನಿರ್ಮಿಸಿದ್ದಕ್ಕಾಗಿ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ಗೆ (ಬಿಬಿಸಿ) ಭಾರತದಲ್ಲಿ ನಿಷೇಧ ಹೇರಬೇಕು ಎಂದು ಹಿಂದೂ ಸೇನಾದ ಅಧ್ಯಕ್ಷ ವಿಷ್ಣು ಗುಪ್ತಾ ಅವರು ಕೋರಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾ ಮಾಡಿದೆ.

ಅರ್ಜಿಯು 'ಸಂಪೂರ್ಣ ತಪ್ಪುಗ್ರಹಿಕೆಯಿಂದ ಕೂಡಿದೆ' ಹಾಗೂ 'ಹುರುಳಿಲ್ಲದ್ದು' ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

ಸಾಕ್ಷ್ಯಚಿತ್ರದ ವಿರುದ್ಧ ಮುಜಫ್ಫರ್‌ಪುರದ ನಿವಾಸಿ, ರೈತ ಬೀರೇಂದ್ರ ಕುಮಾರ್ ಸಿಂಗ್ ಅವರು ಮತ್ತೊಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದ್ದರು. 'ಈ ಸಾಕ್ಷ್ಯಚಿತ್ರವು ಮೋದಿ ವಿರುದ್ಧ ಪ್ರಚಾರ ಮಾತ್ರವಲ್ಲ, ಅವರ ಚಾರಿತ್ರ್ಯಕ್ಕೆ ಕಳಂಕ ತರುವುದಾಗಿದೆ. ಜೊತೆಗೆ ಹಿಂದೂ ವಿರೋಧಿ ಧೋರಣೆಯ ಸಾಕ್ಷ್ಯಚಿತ್ರವನ್ನು ನಿರ್ಮಿಸಿ ಭಾರತದ ಸೌಹಾರ್ದವನ್ನು ಹದಗೆಡಿಸುವ ಪ್ರಯತ್ನವಾಗಿದೆ' ಎಂದು ವಾದಿಸಿದ್ದರು.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಂ.ಎಂ. ಸುಂದರೇಶ್ ಅವರಿದ್ದ ಪೀಠವು ಈ ಅರ್ಜಿಗಳ ವಿಚಾರಣೆಯನ್ನು ನಡೆಸಿತು.

'ಒಂದು ಸಾಕ್ಷ್ಯಚಿತ್ರವು ಭಾರತವನ್ನು ಹೇಗೆ ಬಾಧಿಸುತ್ತದೆ. ಅರ್ಜಿಯು ಸಂಪೂರ್ಣವಾಗಿ ತಪ್ಪುಗ್ರಹಿಕೆಯಿಂದ ಕೂಡಿದೆ. ಜೊತೆಗೆ, ಇದೊಂದು ಹುರುಳಿಲ್ಲದ ಅರ್ಜಿಯಾಗಿದೆ. ಅರ್ಜಿಯ ಮೂಲಕ ನೀವು ಈ ರೀತಿ ವಾದಿಸುತ್ತಿರುವುದಾದರೂ ಹೇಗೆ? ಎಂದು ಪ್ರಶ್ನಿಸಿದ ಪೀಠ ಈ ಅರ್ಜಿಯನ್ನು ವಜಾ ಮಾಡಿತು.

ಹಿರಿಯ ವಕೀಲೆ ಪಿಂಕಿ ಆನಂದ್ ಅವರು ಅರ್ಜಿದಾರರ ಪರ ವಾದಿಸಿದರು. 'ಭಾರತವು ಜಗತ್ತಿನಲ್ಲಿ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ಭಾರತೀಯನೊಬ್ಬ ಬ್ರಿಟನ್‌ನ ಪ್ರಧಾನಿಯಾಗಿರುವ ಈ ಹೊತ್ತಿನಲ್ಲಿ ಈ ಸಾಕ್ಷ್ಯಚಿತ್ರ ಹೊರಬಂದಿದೆ. ಆದ್ದರಿಂದ ಈ ಸಾಕ್ಷ್ಯಚಿತ್ರವನ್ನು ಈ ಸಂದರ್ಭದಲ್ಲೇ ಬಿಡುಗಡೆ ಮಾಡಿರುವುದರ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬೇಕು' ಎಂದು ವಾದಿಸಿದರು.

ನೇಮಕಾತಿ ಅಕ್ರಮ: ಮತ್ತೆ 8 ಸಹಶಿಕ್ಷಕರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2012-13 ಹಾಗೂ 2014–15ನೇ ಸಾಲಿನ ಸರ್ಕಾರಿ ಪ್ರೌಢ ಶಾಲೆ ಸಹಶಿಕ್ಷಕರ ನೇಮಕಾತಿ ಅಕ್ರಮ ಸಂಬಂಧ ಮತ್ತೆ 8 ಸಹಶಿಕ್ಷಕರನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ.

ವಿಧಾನಸೌಧ ಠಾಣೆಯಲ್ಲಿ ದಾಖಲಾಗಿದ್ದ ಪ್ರತ್ಯೇಕ ಪ್ರಕರಣಗಳ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಇಬ್ಬರು ನಿರ್ದೇಶಕರು, ಮೂವರು ನಿವೃತ್ತ ಸಹ ನಿರ್ದೇಶಕರು, ಪ್ರಥಮ ದರ್ಜೆ ಸಹಾಯಕ, ಎಂಜಿನಿಯರ್ ಹಾಗೂ 61 ಸಹಶಿಕ್ಷಕರನ್ನು ಈಗಾಗಲೇ ಬಂಧಿಸಿದ್ದಾರೆ. ಅವರೆಲ್ಲರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನೂ ಸಲ್ಲಿಸಿದ್ದಾರೆ.

ಪ್ರಕರಣದಲ್ಲಿ ಮತ್ತಷ್ಟು ಆರೋಪಿಗಳು ಭಾಗಿಯಾಗಿರುವ ಮಾಹಿತಿ ಆಧರಿಸಿ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಮತ್ತೆ 8 ಸಹಶಿಕ್ಷಕರನ್ನು ಗುರುವಾರ ಸೆರೆ ಹಿಡಿದಿದ್ದಾರೆ.

6ನೇ ಪುಟ ನೋಡಿ

ಬಂಧಿತ ಸಹಶಿಕ್ಷಕರು

2012-13ನೇ ಸಾಲಿನ ಅಕ್ರಮ ಪ್ರಕರಣ: ಬಾಗಲಕೋಟೆ ಜಿಲ್ಲೆಯ ಮದಬಾವಿಯ ಶ್ರೀಕಾಂತ್ ನಾಯಕ್, ವಿಜಯಪುರ ಜಿಲ್ಲೆಯ ಕೊಲ್ಹಾರದ ನಾಯಕ್ ಪ್ರಕಾಶ್ ರತ್ನು, ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಕಮರೂರಿನ ಬಿ.ಆರ್. ಮಹಬೂಬ್ ಬಾಷಾ, ಉತ್ತರ ಕನ್ನಡ ಜಿಲ್ಲೆ ಮುಂಡಗೋಡ ತಾಲ್ಲೂಕಿನ ಮಳಗಿಯ ಸುಜಾತಾ ಭಂಡಾರಿ.

2014–15ನೇ ಸಾಲಿನ ಅಕ್ರಮ ಪ್ರಕರಣ: ಕೊರಟಗೆರೆ ತಾಲ್ಲೂಕಿನ ಬುಕ್ಕಾಪಟ್ಟಣದ ಜಿ.ಎನ್. ದೀಪಾರಾಣಿ, ಪಾವಗಡ ತಾಲ್ಲೂಕು ನಾಗಲಮಡಿಕೆಯ ಜಿ.ಕೆ. ಮೋಹನ್‌ಕುಮಾರ್, ವಲ್ಲೂರಿನ ಎಸ್. ಮಂಜುನಾಥ್ ಹಾಗೂ ಹಿರಿಯೂರಿನ ಶಾಂತಿಲಾಲ್ ಚೌಹಾಣ್.

ASWINI

ಕೂದಲು ಉದುರುವಿಕೆ ಮತ್ತು ತಲೆಹೊಟ್ಟು ಸಮಸ್ಯೆಗಳ ನಿವಾರಣೆಗಾಗಿ ನೀವು ಇನ್ನೂವರೆಗೆ ಅಶ್ವಿನಿ ತೈಲ ಬಳಸಿಲ್ಲವೆಂದಾದರೆ, ನೀವಿನ್ನೂ ಉತ್ತಮ ಕೇಶತೈಲ ಆಯ್ಕೆ ಮಾಡಿಕೊಂಡಿಲ್ಲ ಎಂದೇ ಅರ್ಥ

ಪರಿಶುದ್ಧ ತೆಂಗಿನೆಣ್ಣೆ ಆಧಾರಿತ ತೈಲ
ಖನಿಜಗಳನ್ನು ಬೆರಸಲಾಗಿಲ್ಲ
ಪ್ರಿಸರ್ವೇಟಿವ್ ಸೇರಿಸಲಾಗಿಲ್ಲ

ಡಬಲ್ ಮನಿ ಬ್ಯಾಕ್ ಚಾಲೆಂಜ್*

ಅಶ್ವಿನಿ®
ಹೋಮಿಯೊ ಅರ್ನಿಕಾ ಹೇರ್ ಆಯಿಲ್

ಅಶ್ವಿನಿ ಕೇಶತೈಲವನ್ನು 60 ಬಾರಿ ಬಳಸುವಷ್ಟರಲ್ಲಿ ಕೂದಲು ಉದುರುವಿಕೆ ನಿಯಂತ್ರಣಗೊಳ್ಳುತ್ತದೆ. ನೀವು 60 ಬಾರಿ ಅಶ್ವಿನಿ ಕೇಶತೈಲ ಬಳಸಿದ ನಂತರವೂ ನಿಮಗೆ ತೃಪ್ತಿ ಎನಿಸದಿದ್ದಲ್ಲಿ, ದಯವಿಟ್ಟು ಕೆಳಗಿನ ಪ್ರಕ್ರಿಯೆ ಅನುಸರಿಸಿ ಮತ್ತು ಅಶ್ವಿನಿ ಕೇಶತೈಲ ಖರೀದಿಗೆ ಮಾಡಿದ ವೆಚ್ಚಕ್ಕೆ ದುಪ್ಪಟ್ಟು ಹಣ ಪಡೆಯಿರಿ*.
ಒಂದು ವೇಳೆ ನಿಮಗೆ ತೃಪ್ತಿ ಎನಿಸಿದ್ದಲ್ಲಿ... ನಿಮ್ಮ ಅಭಿಪ್ರಾಯ ಹಂಚಿಕೊಳ್ಳಿ...

"ಟಿವಿಯಲ್ಲಿ ಅಶ್ವಿನಿ ಕುರಿತಾದ ನೋಡಿದಾಗ, ಆರಂಭದಲ್ಲಿ ನನಗೆ ವಿಶ್ವಾಸ ಎನಿಸಿರಲಿಲ್ಲ. ಆದರೆ ನನ್ನ ಅಕ್ಕ ಅದನ್ನು ಬಳಸುತ್ತಿದ್ದಳು. ಒಂದು ಅವಳು ನನ್ನ ಕೂದಲು ಉದುರುವುದನ್ನು ಕಂಡು, ಅಶ್ವಿನಿ ಬಳಸುವಂತೆ ಸೂಚಿಸಿದಳು. ಬಳಿಕ ನಾನು ಅಶ್ವಿನಿ ಉಪಯೋಗಿಸಿದಾಗ, ಅದರ ಫಲಿತಾಂಶಗಳನ್ನು ನೋಡಿ ಅಚ್ಚರಿಗೊಂಡೆ. ಆಗಿನಿಂದ ನನಗೆ ಅಶ್ವಿನಿ ಬಗ್ಗೆ ಸಂಪೂರ್ಣ ಭರವಸೆ ಮೂಡಿತು. ಟಿವಿಯಲ್ಲಿ ಅಶ್ವಿನಿ ಬಗ್ಗೆ ಜನರು ಏನನ್ನು ಹೇಳುತ್ತಾರೊ, ಅದೆಲ್ಲ ಸಂಪೂರ್ಣ ನಿಜವೆನಿಸಿತು.***"
ರಮ್ಯಾ, ಪಟ್ಟುಕೊಟ್ಟಾಯ್, ತಮಿಳುನಾಡು.

"ನನ್ನ ಬಳಿ ಆಗಾಗ್ಗೆ ಚಿಕಿತ್ಸೆ ಪಡೆಯುವ ರೋಗಿಯಬ್ಬರ ಕೂದಲು ತುಂಬಾ ತೆಳುವಾಗಿತ್ತು. ಕೆಲವು ದಿನಗಳ ನಂತರ, ಅವರ ಕೂದಲು ದಟ್ಟವಾಗಿ ಉದ್ದವಾಗಿ ಬೆಳೆದಿರುವುದನ್ನು ಗಮನಿಸಿದೆ. ನಾನು ತಕ್ಷಣ ಯಾವುದೇ ಹಿಂಜರಿಕೆ ಇಲ್ಲದೆಯೇ, ನಿಮ್ಮ ಕೇಶರಾಶಿಯ ರಹಸ್ಯ ಏನೆಂದು ಕೇಳಿದೆ. ಅಶ್ವಿನಿ ಕೇಶತೈಲದಿಂದಾಗಿ ಸೊಂಪಾಗಿ ಕೂದಲು ಬೆಳೆಯಿತು ಎಂದು ಅವರು ತಿಳಿಸಿದರು ಮತ್ತು ನಾನು ಕೂಡ ಅಶ್ವಿನಿ ಉಪಯೋಗಿಸಲು ಪ್ರಾರಂಭಿಸಿದೆ.***"
ಡಾ.ವಿರಿಷ್ಕಾ ರಾವ್, ಬೆಂಗಳೂರು, ಕರ್ನಾಟಕ.

*ದುಪ್ಪಟ್ಟು ಹಣ ಮರಳಿ ಪಡೆಯುವ ಕ್ಲೇಮ್ ವಿಧಾನ

- ಅಶ್ವಿನಿ ಕೇಶತೈಲ 90 ಎಂಎಲ್/180 ಎಂಎಲ್ ಬಾಟಲ್‌ಗಳ ನಿಯಮಿತ ಬಳಕೆಗೆ ಮಾತ್ರ ಈ ಕೊಡುಗೆ ಅನ್ವಯಿಸುತ್ತದೆ.
- ಮಾರಾಟಗಾರರು ನೀಡಿದ ರಸೀದಿ ಅತ್ಯಗತ್ಯ.
- ಈ ಮನಿ ಬ್ಯಾಕ್ ಸ್ಕೀಮ್ 28/02/2023 ರವರೆಗೆ ಮಾತ್ರ ಲಭ್ಯ ಮತ್ತು ಮಾರಾಟಗಾರು ನೀಡಿದ ರಸೀದಿ ದಿನಾಂಕದಿಂದಲೇ 60 ಬಳಕೆಗಳ ಗ್ಯಾರಂಟಿ ಅವಧಿ ಪ್ರಾರಂಭವಾಗುತ್ತದೆ.
- ಸಂಪೂರ್ಣ ಭರ್ತಿ ಮಾಡಿದ ಮನಿ ಬ್ಯಾಕ್ ಕ್ಲೇಮ್ ಅರ್ಜಿಯೊಂದಿಗೆ ಖಾಲಿ ಬಾಟಲಿಗಳನ್ನು ಕೂಡ ನಮಗೆ ಕಳುಹಿಸಬೇಕು.

*ಮನಿ ಬ್ಯಾಕ್ ಕ್ಲೇಮ್ ಫಾರಂ ಹಾಗೂ ಕ್ಲೇಮ್ ವಿಧಾನಗಳನ್ನು ನೀವು, ನಮ್ಮ www.aswini.com ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು ಅಥವಾ ನಮ್ಮ ಗ್ರಾಹಕ ಸಹಾಯವಾಣಿ ಟೋಲ್ ಫ್ರೀ ಸಂಖ್ಯೆಗೆ ಕರೆ ಮಾಡಬಹುದು: 18008435599.

***Consumers' personal opinion.

ವಿಚಾರಣೆಗಳಿಗೆ ಸಂಪರ್ಕಿಸಿ ಟೋಲ್ ಫ್ರೀ ಗ್ರಾಹಕ ಸಹಾಯವಾಣಿ ಸಂಖ್ಯೆ: 18008435599.

ಸುಧಾ, ಮಯೂರ ಓದಿರಿ

WEEKEND CORNER



ಅಮೆರಿಕದ ಅತಿ ದೊಡ್ಡ ನಿಯೋಗ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ಸೇನಾ ಪಡೆಯ ವಿವಿಧ ವಿಭಾಗಗಳ ಸಿಬ್ಬಂದಿ ಹಾಗೂ ಅತ್ಯಾಧುನಿಕ ವಿಮಾನಗಳು 'ಏರೋ ಇಂಡಿಯಾ- 2023' ರಲ್ಲಿ ಭಾಗಿಯಾಗಲಿವೆ.

ಅಮೆರಿಕದ ಪ್ರಮುಖ ಸೇನಾ ಕಂಪನಿಗಳಾದ 'ಏರೋ ಮೆಟಲ್ಸ್ ಅಲಯನ್ಸ್', 'ಆಸ್ಟ್ರೋನಾಟಿಕ್ಸ್ ಕಾರ್ಪೊರೇಷನ್ ಆಫ್ ಅಮೆರಿಕ', ಬೋಯಿಂಗ್, ಜಿಇ ಏರೋಸ್ಪೇಸ್, ಜನರಲ್ ಅಟಾಮಿಕ್ಸ್ ಏರೋನಾಟಿಕಲ್ ಸಿಸ್ಟಮ್ಸ್, ಹೈಟೆಕ್ ಇಂಪೋರ್ಟ್ ಎಕ್ಸ್‌ಪೋರ್ಟ್ ಕಾರ್ಪೊರೇಷನ್, ಜೋನಲ್ ಲ್ಯಾಬೊರೇಟರೀಸ್, ಲಾಕ್ ಹೀಡ್ ಮಾರ್ಟಿನ್ ಪಾಲ್ಗೊಳ್ಳಲಿವೆ.

ಭಾರತದ ಅತಿದೊಡ್ಡ ವೈಮಾನಿಕ ಪ್ರದರ್ಶನಕ್ಕೆ ದ್ವಿಪಕ್ಷೀಯ ಬೆಂಬಲ ನೀಡುವ ದಿಸೆಯಲ್ಲಿ ಅಮೆರಿಕದ ವಾಯುಪಡೆಯ ಏಳು ಸದಸ್ಯರ ಬ್ಯಾಂಡ್ 'ಫೈನಲ್ ಅಪ್ರೋಚ್' ಫೆಬ್ರುವರಿ 16ರಂದು ಏರೋ ಇಂಡಿಯಾದಲ್ಲಿ ಸಾರ್ವಜನಿಕರಿಗಾಗಿ ಹಾಗೂ ಇಡೀ ವಾರ ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಲಿದೆ.

ಡಿಆರ್‌ಡಿಒ- ತಂತ್ರಜ್ಞಾನಗಳ ಪ್ರದರ್ಶನ: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ದೇಶೀಯವಾಗಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ಈ ಬಾರಿಯ ಏರೋ ಇಂಡಿಯಾದಲ್ಲಿ ಪ್ರದರ್ಶಿಸಲಿದೆ.

ಸುಮಾರು 330 ಉತ್ಪನ್ನಗಳನ್ನು ಡಿಆರ್‌ಡಿಒ ಪ್ರದರ್ಶಿಸಲಿದೆ. 'ಆತ್ಮನಿರ್ಭರ್ ಭಾರತ' ಆಶಯದೊಂದಿಗೆ ತಯಾರಿಸಲಾದ ಕ್ಷಿಪಣಿಗಳು, ಮೈಕ್ರೊ ಎಲೆಕ್ಟ್ರಾನಿಕ್ ಉಪಕರಣಗಳು, ಯೋಧರಿಗೆ ನೆರವಾಗುವ ಉಪಕರಣಗಳು, ಯುದ್ಧ ವಿಮಾನಗಳು, ಮಾನವ ರಹಿತ ವಿಮಾನ, ಕೃತಕ ಬುದ್ಧಿಮತ್ತೆ, ಸೈಬರ್ ವ್ಯವಸ್ಥೆ ಸೇರಿದಂತೆ ವಿವಿಧ ತಂತ್ರಜ್ಞಾನಗಳನ್ನು ಪ್ರದರ್ಶಿಸಲು ಉದ್ದೇಶಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಗರದ ಯಲಹಂಕ ವಾಯುನೆಲೆಯಲ್ಲಿ ಶುಕ್ರವಾರ ನಡೆದ ತಾಲೀಮು ಸಂದರ್ಭದಲ್ಲಿ ಸೂರ್ಯಕಿರಣ್ ವಿಮಾನಗಳ ಜತೆಯಲ್ಲಿ 'ಬೋಯಿಂಗ್ ಸಿ–17' ವಿಮಾನದ ಹಾರಾಟ ಪ್ರದರ್ಶನ ನಡೆಯಿತು – ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ಧನ್

ಏರೋ ಇಂಡಿಯಾ: ಸಂಚಾರ ನಿರ್ಬಂಧ

ಬೆಂಗಳೂರು: ಏರೋ ಇಂಡಿಯಾ ವೈಮಾನಿಕ ಪ್ರದರ್ಶನ ಕಾರ್ಯಕ್ರಮಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಫೆ. 13ರಿಂದ 17ರವರೆಗೆ ಹಲವು ರಸ್ತೆಗಳಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ.

'ನಿತ್ಯವೂ ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಕೆಲ ರಸ್ತೆಗಳಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ. ವಾಹನ ನಿಲುಗಡೆಯನ್ನೂ ನಿಷೇಧಿಸಲಾಗಿದೆ. ನಿರ್ಬಂಧಿತ ರಸ್ತೆಗಳಲ್ಲಿ ಲಾರಿ, ಟ್ರಕ್, ಖಾಸಗಿ ಬಸ್‌ಗಳು, ಸರಕು ಸಾಗಣೆ ವಾಹನಗಳು ಹಾಗೂ ಟ್ರ್ಯಾಕ್ಟರ್‌ಗಳು ಸಂಚರಿಸುವಂತಿಲ್ಲ. ನಿಯಮ ಮೀರಿದರೆ, ಪ್ರಕರಣ ದಾಖಲಿಸಲಾಗುವುದು' ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ವಿಮಾನ ಸಂಚಾರದಲ್ಲಿ ವ್ಯತ್ಯಯ: ಆಕ್ರೋಶ (ದೇವನಹಳ್ಳಿ ವರದಿ): ಸಮೀಪದ ಯಲಹಂಕ ವಾಯುನೆಲೆಯಲ್ಲಿ ಏರೋ ಇಂಡಿಯಾ ಪ್ರದರ್ಶನದ ಪ್ರಯುಕ್ತ ಸುರಕ್ಷತೆಯ ದೃಷ್ಟಿಯಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ವಾಣಿಜ್ಯ ವಿಮಾನಗಳ ಸೇವೆಯನ್ನು ಕೆಲಕಾಲ ಸ್ಥಗಿತಗೊಳಿಸಲಾಗಿತ್ತು. ಇದರಿಂದ ಗೊಂದಲ ಉಂಟಾಗಿ, ಪ್ರಯಾಣಿಕರು ಪರದಾಡುವಂತಾಯಿತು.

ಸಂಚಾರ ವ್ಯತ್ಯಯದಿಂದಾಗಿ ನಿಲ್ದಾಣದಲ್ಲಿ ಜನದಟ್ಟಣೆಯೂ ಹೆಚ್ಚಾಗಿತ್ತು. ಈ ಕುರಿತು ಪ್ರಯಾಣಿಕರೊಬ್ಬರು ಟ್ವಿಟರ್‌ನಲ್ಲಿ ವಿಡಿಯೊ, ಫೋಟೊಗಳನ್ನು ಹಂಚಿಕೊಂಡಿದ್ದು, ವಿಮಾನ ಯಾನ ಸಚಿವಾಲಯ ತ್ವರಿತವಾಗಿ ಸಮಸ್ಯೆ ಬಗೆಹರಿಸಿ, ಸೂಕ್ತವಾದ ಮುನ್ನೆಚ್ಚರಿಕಾ ಯೋಜನೆಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಗಣೇಶ ಸೈಕಲ್ ಮಾರ್ಟ್ ಹತ್ತಿರ, ಗೌರಿಬಿದನೂರು.
ದೂರವಾಣಿ ಸಂ: 08155–284158, Email: cdpogbd@gmail.com
ಸಂ: ಶಿಅಯೋ:ಗೌರಿಬಿ:ತೂ.ಯಂ.ದುರಸ್ತಿ:ಟೆಂ.ಪ್ರ:2022–23 ದಿನಾಂಕ: 06.02.2023

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಗೌರಿಬಿದನೂರು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ 351 ಅಂಗನವಾಡಿ ಕೇಂದ್ರಗಳ 25ಕೆ.ಜಿ. ಸಾಮರ್ಥ್ಯದ ಸ್ಪ್ರಿಂಗ್ ಬ್ಯಾಲೆನ್ಸ್ ಸ್ಕೇಲ್, ವಯಸ್ಕರ ತೂಕ ಮಾಡುವ 150ಕೆ.ಜಿ ಸಾಮರ್ಥ್ಯದ ಡಿಜಿಟಲ್ ತೂಕದ ಸಾಧನ ಹಾಗೂ ಆಹಾರ ಪಥಾರ್ದಗಳ ತೂಕದ ತಕ್ಕಡಿ ಮತ್ತು ಬಟ್ಟುಗಳು ದುರಸ್ತಿ ಮಾಡಲು ಚಿಕ್ಕಬಳ್ಳಾಪುರ ಜಿಲ್ಲೆಯ ಕಾನೂನು ಮಾಪನ ಶಾಸ್ತ್ರ ಇಲಾಖೆಯಲ್ಲಿ ನೊಂದಣಿಯಾಗಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಅರ್ಹ ದುರಸ್ತಿದಾರರು ಟೆಂಡರ್‌ನಲ್ಲಿ ಭಾಗವಹಿಸಲು ಇ–ಪೋರ್ಟಲ್ ಮುಖಾಂತರ **www.eproc.karnataka.gov** ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು **www.eproc.karnataka.gov** ನಲ್ಲಿ ಅರ್ಜಿ ಫಾರಂ ಹಾಗೂ ನಿಬಂಧನೆಗಳನ್ನು ಪಡೆದು ಸಂಬಂಧಿಸಿದ ದಾಖಲಾತಿಗಳೊಂದಿಗೆ ಆರ್ಥಿಕ ಲಕೋಟೆ ಮತ್ತು ತಾಂತ್ರಿಕ ಲಕೋಟೆಗಳನ್ನು ನಿಗಧಿತ ದಿನಾಂಕದೊಳಗೆ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವುದು. (1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **06.02.2023 ರಿಂದ 24.02.2023 ರ ಸಾಯಂಕಾಲ 5.00 ಘಂಟೆವರೆಗೆ.** (2)**EMD** ಮೊತ್ತ: **ರೂ20,000/– ಈ ಪೋರ್ಟ್‌ನಲ್ಲಿ ಸಲ್ಲಿಸುವುದು.** (3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **27.02.2023 ರಂದು ಬೆಳಿಗ್ಗೆ 11.00 ಘಂಟೆ.** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **28.02.2023.** (5) ಟೆಂಡರ್‌ನ ಅಂದಾಜು ಮೌಲ್ಯ: **ರೂ. 8,00,000/–.** **ತೂಕದ ಸಾಧನಗಳ ವಿವರ:** (1) 25ಕೆ.ಜಿ. ಸಾಮರ್ಥ್ಯದ ಸಾಲ್ಟರ್ ಸ್ಕೇಲ್ (ಮಕ್ಕಳ ತೂಕ ಮಾಡುವ ಸಾಧನ)–351 (2) 150ಕೆ.ಜಿ. ಸಾಮರ್ಥ್ಯದ ಡಿಜಿಟಲ್ ತೂಕದ ಸಾಧನ (ವಯಸ್ಕರ ತೂಕ ಮಾಡುವ ಸಾಧನ)–351. (3) 120ಕೆ.ಜಿ. ಸಾಮರ್ಥ್ಯದ ವಯಸ್ಕರ ತೂಕದ ಸಾದನಗಳು–351. (4) ಆಹಾರ ಪಥಾರ್ದಗಳ ತೂಕದ ತಕ್ಕಡಿ ಮತ್ತು ಬಟ್ಟುಗಳ–351. ಹೆಚ್ಚಿನ ವಿವರಗಳಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಗೌರಿಬಿದನೂರು ತಾಲ್ಲೂಕು ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ತಾಲ್ಲೂಕು ಪಂಚಾಯತ್.

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ511/ಎಂ.ಸಿ.ಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್
ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, 1ನೇ ಹಂತ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, ಮಹದೇವಪುರ ಅಂಚೆ, ಬೆಂಗಳೂರು – 560 048. CIN : L23209KA1977PLC043357
E-mail : info@gpl.in, secretarial@gujaratpetrosynthese.com Website: www.gpl.in

ಡಿಸೆಂಬರ್ 31, 2022ರ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸ್ಟೇಟ್‌ಮೆಂಟ್

(ರೂ. ಸಾವಿರಗಳಲ್ಲಿ)

ಕ್ರ. ಸಂ.	ವಿವರಗಳು	ಡಿಸೆಂಬರ್ 2022ರ ತ್ರೈಮಾಸಿಕಕ್ಕೆ ಅಂತ್ಯಗೊಂಡ	ಡಿಸೆಂಬರ್ 2022ರ ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ	ಡಿಸೆಂಬರ್ 2021ರ ತ್ರೈಮಾಸಿಕಕ್ಕೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	63,169	166,566	83,488
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	7,682	16,063	7,453
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	6,441	14,821	7,453
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	2,479	10,636	6,241
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	2,479	10,636	6,241
6	ಈಕ್ವಿಟಿ ಷೇರುಬಂಡವಾಳ (ಮುಖಬೆಲೆ ರೂ.10 ಪ್ರತಿಷೇರಿಗೆ)	5969	5969	5969
7	ಮೀಸಲು(ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ			394,476
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವುದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	0.42	1.78	1.05

ಸೂಚನೆಗಳು:

ಎ)ಈ ಮೇಲಿನವು ಡಿಸೆಂಬರ್ 31, 2022ರ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಅವಧಿಗೆ ಕೊನೆಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತ್ತದೆ ಹಾಗೂ ಫೆಬ್ರುವರಿ 10, 2023ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗಳು ಪುನಾರಾವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ (ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್ಚೇಂಜ್‌ನಲ್ಲಿ ಸಲ್ಲಿಸಲಾಗಿದೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ. ಬಿ) ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತದೆ. ಸಿ) ಮುಂದೂಡಲ್ಪಟ್ಟ ತೆರಿಗೆ ಸೇರಿದಂತೆ ತೆರಿಗೆಯನ್ನು ತ್ರೈಮಾಸಿಕ ಫಲಿತಾಂಶಗಳ ಆಧಾರದ ಮೇಲೆ ಲೆಕ್ಕಹಾಕಲಾಗುತದೆ ಮತ್ತು ವ್ಯತ್ಯಾಸವಿದ್ದರೆ, ವಾರ್ಷಿಕ ತೆರಿಗೆ/ಮುಂದೂಡಲ್ಪಟ್ಟ ತೆರಿಗೆಗೆ ಕೊನೆಯ ತ್ರೈಮಾಸಿಕದಲ್ಲಿ ಸರಿಹೊಂದಿಸಲಾಗುತ್ತದೆ. ಡಿ) ಅಗತ್ಯವಿದ್ದಲ್ಲಿ ಹೋಲಿಕೆ ಮಾಡಲು, ಹಿಂದಿನ ತ್ರೈಮಾಸಿಕ / ಅವಧಿಯ ಅಂಕಿಅಂಶಗಳನ್ನು ಮರುಸಂಗ್ರಹಿಸಲಾಗಿದೆ/ಮರುಜೋಡಿಸಲಾಗಿದೆ.

ಗುಜರಾತ್ ಪೆಟ್ರೋಸಿಥಿಂಸ್ ಲಿಮಿಟೆಡ್‌ನ ಪರವಾಗಿ
ಉರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕ. ಡಿ.ಐ.ಎನ್ : 00319482

ಸ್ಥಳ : ಬೆಂಗಳೂರು
ದಿನಾಂಕ : 10/02/2023

ಇಂದು ಬೆಂಗಳೂರು ಶ್ರೀ ಗುರುರಾಜ ಕಲ್ಯಾಣ ಮಟಪದಲ್ಲಿ ಹಿಂದೆಂದೂ ಕಾಣದ ಮಾರಾಟಕ್ಕೆ ಸಾಕ್ಷಿಯಾಗಲಿದೆ.

ಭಾರತದ ಅತಿ ದೊಡ್ಡ ಉಡುಪುಗಳ ರಿಯಾಯಿತಿ ಮಾರಾಟ

ಸವಾಲಿನ ಬೆಲೆಗಳು ! ಆನ್‌ಲೈನ್ ಬೆಲೆಗಳಿಗೆ ಹೋಲಿಸಿದರೆ ತುಂಬಾ ಕಡಿಮೆ !!

ವಿಶೇಷ ಮಕ್ಕಳು, ಮಹಿಳೆಯರು ಮತ್ತು ಪುರುಷರ ಉಡುಪುಗಳ ಮಾರಾಟ

4 ದಿನಗಳ ಭಾರಿ ರಿಯಾಯಿತಿ ಮಾರಾಟ

Exclusive Sale up to 80% off

ಶ್ರೀ ಗುರುರಾಜ ಕಲ್ಯಾಣ ಮಂಟಪ

ನಂ.21, ಕ್ರೆಸೆಂಟ್ ರಸ್ತೆ, ಶಿವಾನಂದ ಸರ್ಕಲ್, ಕರ್ನಾಟಕ ಫಿಲ್ಮ್ ಛೇಂಬರ್ಸ್ ಹತ್ತಿರ.

50,000 ವಿವಿಧ ಪ್ರಕಾರದ ಮಕ್ಕಳು ಉಡುಪುಗಳು ಪ್ಯಾಂಟ್, ಟೀ–ಶರ್ಟ್, ಲೋವರ್, ಟಾಪ್, ಬರ್ಮುಡಾ, ವುಲೆನ್ ಸ್ವೆಟರ್ಸ್, ಎಕ್ಸ್‌ಪೋರ್ಟ್ ಸರ್ಪಸ್ ಐಟಂ ಹಾಗೂ ಇತರೆ ಕೇವಲ ರೂ. 149/– ರಿಂದ 249/– ರ ವರೆಗೆ

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್
ಶರ್ಟ್, ಪ್ಯಾಂಟ್, ಟೀ–ಶರ್ಟ್, ಡೇನಿಮ್ ಪ್ಯಾಂಟ್, ಲೋವರ್, ಬರ್ಮುಡಾ, ವುಲೆನ್ ಸ್ವೆಟರ್ಸ್.
MRP : 1499/- to 4999/- ಕೇವಲ ರೂ. 450/- ರಿಂದ 850/- ಮಾತ್ರ

JOHN MILLER | Arvind | NUMERO UNO THE REAL DENIM | FLYING MACHINE | NETPLAY | INDIGO NATION | ROCKSTAR JEANS | THE BEAR HOUSE | PRETTYSECRETS | NOTHING FITS LIKE JEALOUS 21 | UNLIMITED

NOTHING FITS LIKE JEALOUS 21
ಬ್ರಾಂಡೆಡ್ ಲೇಡಿಸ್ ರೆಡಿಮೇಡ್ ಗಾರ್ಮೆಂಟ್ಸ್
ಟಾಪ್ಸ್, ಜೀನ್ಸ್, ಪ್ಯಾಂಟ್, ವಿವಿಧ ಬಣ್ಣಗಳ ಕುರ್ತೀಸ್, ವೆಸ್ಟೆರ್ನ್ ಟಾಪ್ಸ್, ಲೆಗ್ಗಿನ್ಸ್, ಪ್ಲಾಜೊ, ಪೂರ್ಸ್ ವುಲೆನ್ ಸ್ವಟರ್ಸ್ ಇತ್ಯಾದಿ.
MRP upto Rs. 2990/- ಕೇವಲ ರೂ.199/-ರಿಂದ 599/-ಮಾತ್ರ

ಇಂಪೋರ್ಟೆಡ್ ಪ್ಯೂರ್ ಲೇದರ್ ಬೆಲ್ಟ್ ಕೇವಲ ರೂ. 249/-

Note : 1 This sale is only for Retail customers Just for 4 days 2 Wholesale Dealers will not be entertained 3 We are selling on Such low prices just to clear stack

ಆಫ್ಹರ್ 4 ದಿನಗಳ ಮಾತ್ರ, 11 12 13 ಮತ್ತು 14 ಫೆಬ್ರವರಿ, 2023 ಸಮಯ: 10 am to 9 pm NO LUNCH BREAK

All are 100% Original Brands

ಶ್ರೀ ಗುರುರಾಜ ಕಲ್ಯಾಣ ಮಂಟಪ

(ಕರ್ನಾಟಕ ಫಿಲ್ಮ್ ಛೇಂಬರ್ಸ್ ಹತ್ತಿರ)

ನಂ.21, ಕ್ರೆಸೆಂಟ್ ರಸ್ತೆ, ಶಿವಾನಂದ ಸರ್ಕಲ್ , ಬೆಂಗಳೂರು– 560 001

ನಗರದಲ್ಲಿ ಇಂದು

ಸಂಸ್ಥಾಪನಾ ದಿನಾಚರಣೆ: ಅತಿಥಿಗಳು: ಚನ್ನಕೇಶವ ರೆಡ್ಡಿ ಎಂ.ವಿ., ಡಿ. ದೇವರಾಜ, ಆಯೋಜನೆ: ಪ್ರಾಕ್ಟಿಸ್ ವ್ಯಾಲ್ಯೂವರ್ಸ್ ಅಸೋಸಿಯೇಷನ್, ಸ್ಥಳ: ಹಾಲಿಡೇ ಇನ್ ಬೆಂಗಳೂರು ರೇಸ್‌ಕೋರ್ಸ್, ಬೆಳಿಗ್ಗೆ 9

‘ಪರಿದೃಶ್ಯ’ ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರಗಳ ಅಂತರರಾಷ್ಟ್ರೀಯ ಉತ್ಸವ: ಅತಿಥಿಗಳು: ಟಿ.ಎಸ್. ನಾಗಾಭರಣ, ಆಯೋಜನೆ: ಮೈಸೂರು ಸಿನಿಮಾ ಸೊಸೈಟಿ, ಸ್ಥಳ: ಸುಚಿತ್ರಾ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿ, ಬನಶಂಕರಿ, ಬೆಳಿಗ್ಗೆ 9.45

ಎನ್.ಸಂತೋಷ್ ಹೆಗ್ಡೆ

ಐಡಿಎಫ್ ಬಾಲ್ ಗುರುಕುಲ್ ಶಿಕ್ಷಕರ ಭೇಟಿ: ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ಜಾರ್ಜ್ ಕಣ್ಣಾಂತನಂ, ಆಯೋಜನೆ: ಇಂಡಿಯನ್ ಡೆವಲಪ್‌ಮೆಂಟ್ ಫೌಂಡೇಷನ್, ಸ್ಥಳ: ಆರ್.ವಿ. ಟೀಚರ್ಸ್ ಕಾಲೇಜು ಸಭಾಂಗಣ, ಜಯನಗರ, 2ನೇ ಹಂತ, ಬೆಳಿಗ್ಗೆ 9.30

‘ಅತ್ಯಾಚಾರದ ರಾಜಕೀಯ, ನ್ಯಾಯ, ಹೊಣೆಗಾರಿಕೆ ಮತ್ತು ಪುನಶ್ಚೇತನ’ ಸಂವಾದ ಕಾರ್ಯಕ್ರಮ: ಅತಿಥಿಗಳು: ಮೀನಾಕ್ಷಿ ಬಾಳಿ, ಸ್ವಾನ್ಲಿ, ಗೀತಾ ಮೆನನ್, ಜ್ಯೋತಿ ಹಿಟ್ನಾಳ್, ಇಶ್ರತ್ ನಿಸ್ಸಾರ್, ಹಸೀನಾ ಖಾನ್, ರೂತ್ ಮನೋರಮಾ, ಅಕ್ಕೈ ಪದ್ಮಶಾಲಿ, ಅನಿತಾ ಚೆರಿಯೋ, ವೃಂದಾ ಗ್ರೋವರ್, ಆಯೋಜನೆ: ಲೈಂಗಿಕ ದೌರ್ಜನ್ಯದ ವಿರುದ್ಧ ಕರ್ನಾಟಕ, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಸಭಾಂಗಣ, ಲಾಂಗ್‌ಫೋರ್ಡ್ ರಸ್ತೆ, ಶಾಂತಿನಗರ, ಬೆಳಿಗ್ಗೆ 9.30ರಿಂದ

ಬ್ಯಾಟರಾಯನಪುರ ಕ್ಷೇತ್ರದ ಕನ್ನಡ ಸಾಹಿತ್ಯ ಸಮ್ಮೇಳನ: ಸಮ್ಮೇಳನಾಧ್ಯಕ್ಷ: ಸಿ.ಆರ್. ಚಂದ್ರಶೇಖರ್, ಉದ್ಘಾಟನೆ: ಕೃಷ್ಣ ಬೈರೇಗೌಡ, ವಿ. ಸುನಿಲ್ ಕುಮಾರ್, ಜಿ.ಸಿ. ಚಂದ್ರಶೇಖರ್, ಮಹೇಶ ಜೋಷಿ, ರವಿವರ್ಮ ಕುಮಾರ್, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಆಶಯ ನುಡಿ: ರೇಣುಕ ಹೆಗ್ಗಡೆ, ಆಯೋಜನೆ: ಬ್ಯಾಟರಾಯನಪುರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಕನ್ನಡ ಭವನ, ಕಾಫಿಬೋರ್ಡ್ ಬಡಾವಣೆ, ಹೆಬ್ಬಾಳ ಕೆಂಪಾಪುರ, ಬೆಳಿಗ್ಗೆ 10ರಿಂದ

ವೇದಿಕ್ ಇ-ಶಾಲೆ ಉದ್ಘಾಟನೆ: ಬಿ.ಸಿ. ನಾಗೇಶ್, ಪ್ರಾಸ್ತಾವಿಕ ನುಡಿ: ಜೇಮ್ಸ್ ಮಟ್ಟಮ್, ಬಾಬು ಸೆಬಾಸ್ಟಿನ್, ಅಧ್ಯಕ್ಷತೆ: ಶಂಕರ್ ಬಿದರಿ, ಆಯೋಜನೆ: ವೇದಿಕ್ ಇ-ಸ್ಕೂಲ್ಸ್, ಸ್ಥಳ: ದಿ ಲೀಲಾ ಪ್ಯಾಲೆಸ್, ಅರಮನೆ ಮೈದಾನ, ಬೆಳಿಗ್ಗೆ 11

ಮೌಖಿಕ ತರಬೇತಿ ಉದ್ಘಾಟನಾ ಸಮಾರಂಭ: ಅಧ್ಯಕ್ಷತೆ: ಎಲ್. ಎ. ರವಿಸುಬ್ರಮಣ್ಯ, ಅತಿಥಿಗಳು: ಸ್ವರೂಪಾ ಟಿ.ಕೆ., ದೀಪಕ್ ಆರ್. ಎಲ್., ಆಯೋಜನೆ: ಭಾರತೀಯ ವೆಚ್ಚ ಲೆಕ್ಕಿಗರ ಸಂಸ್ಥೆ, ಸ್ಥಳ: ಸಿ.ಎಂ.ಎ ಭವನ, ಮಲ್ಲಿಕಾರ್ಜುನ ದೇವಸ್ಥಾನದ ರಸ್ತೆ, ಬಸವನಗುಡಿ, ಬೆಳಿಗ್ಗೆ 11

ಕುಂ. ವೀರಭದ್ರಪ್ಪ ಅವರ ‘ಸುಪಾರಿ’ ಕಾದಂಬರಿ ಬಿಡುಗಡೆ: ಸಿ.ಎನ್. ರಾಮಚಂದ್ರನ್, ಅಧ್ಯಕ್ಷತೆ: ಕೆ. ಮರುಳ ಸಿದ್ಧಪ್ಪ, ಅತಿಥಿಗಳು: ಅಗ್ರಹಾರ ಕೃಷ್ಣಮೂರ್ತಿ, ರಕ್ಷಿತಾ ಪ್ರೇಮ್, ಉಪಸ್ಥಿತಿ: ಕುಂ. ವೀರಭದ್ರಪ್ಪ, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್, ಬೆಳಿಗ್ಗೆ 10.30

ಕುಂ. ವೀರಭದ್ರಪ್ಪ

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಅಧ್ಯಕ್ಷತೆ: ಎನ್.ಎ. ಹ್ಯಾರಿಸ್, ನಾಡಧ್ವಜಾರೋಹಣ: ಎಂ. ಮರಿಯಪ್ಪಸ್ವಾಮಿ, ಅನ್ನದಾನ, ಭುವನೇಶ್ವರಿ ದೇವಿಯ ಮೆರವಣಿಗೆ, ಆಯೋಜನೆ: ಕನ್ನಡ ರಣಧೀರರ ಪಡೆ, ಸ್ಥಳ: ಮುತ್ಯಾಲಮ್ಮದೇವಿ ದೇವಸ್ಥಾನದ ಮುಂಭಾಗ, ದೂಪನಹಳ್ಳಿ, ಇಂದಿರಾನಗರ, ಬೆಳಿಗ್ಗೆ 10ರಿಂದ

ಶೈಕ್ಷಣಿಕ ಸಮಾವೇಶ, ಉತ್ತಮ ಶಿಕ್ಷಕರು, ಉತ್ತಮ ಆಡಳಿತ ಮಂಡಳಿ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಪ್ರಶಸ್ತಿ ಪ್ರದಾನ: ಎಂ. ಕೃಷ್ಣಪ್ಪ, ಪ್ರಿಯಾಕೃಷ್ಣ, ಅ. ದೇವೇಗೌಡ, ರಾಮೋಜಿಗೌಡ, ತೇಜಸ್ವಿನಿ ಅನಂತಕುಮಾರ್, ಎ.ಪಿ. ರಂಗನಾಥ, ಅಧ್ಯಕ್ಷತೆ: ಕೆ. ಹನುಮಂತಪ್ಪ, ಆಯೋಜನೆ: ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಸ್ಥಳ: ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 11.30

ರಾಜೇಶ್ ಇ. ಬೆಳ್ಳೇರ್ ಅವರ ನಾಲ್ಕು ಪುಸ್ತಕಗಳ ಬಿಡುಗಡೆ: ಕೃಷ್ಣ ಬೈರೇಗೌಡ, ಅಧ್ಯಕ್ಷತೆ: ಬಿ.ಎಂ. ದೇವರಾಜಪ್ಪ, ಜಗದೀಶ್, ಪ್ರಾಸ್ತಾವಿಕ ನುಡಿ: ಎಂ.ಎಸ್. ತಳವಾರ್, ಉಪಸ್ಥಿತಿ: ರಾಜೇಶ್ ಇ. ಬೆಳ್ಳೇರ್, ಆಯೋಜನೆ ಮತ್ತು ಸ್ಥಳ: ಕಾವೇರಿ ಬಿ.ಇಡಿ ಕಾಲೇಜು, ಸಹಕಾರನಗರ, ಮಧ್ಯಾಹ್ನ 3.30

ಸಾರ್ವಜನಿಕ ಉಪನ್ಯಾಸ ಸರಣಿ: ವಿಷಯ: ‘ಆಧುನೀಕರಣ ಮತ್ತು ಅದರ ಅಸಮಾಧಾನಗಳು, ಭಾರತ ಎಂಬ ಪ್ರಯೋಗಾಲಯದಿಂದ ಪಾಠಗಳು’, ಉಪನ್ಯಾಸಕರು: ದೀಪಂಕರ್ ಗುಪ್ತಾ, ಆಯೋಜನೆ ಮತ್ತು ಸ್ಥಳ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಮದರ್ ಟೆಕ್ಲಾ ಸಭಾಂಗಣ, ಸರ್ಜಾಪುರ, ಸಂಜೆ 4.30

‘ಸ್ನಾನ-ನಾಟಕ ಕೇಳೋಣ’ ನಾಟಕ ಪ್ರದರ್ಶನ: ಮೂಲ ಕಥೆ: ಎಂ. ವ್ಯಾಸ, ರೂಪಾಂತರ: ರಂಗಸ್ವಾಮಿ ಎಸ್., ಅತಿಥಿಗಳು: ಸಿ.ಕೆ. ಗುಂಡಣ್ಣ, ಶಿವಲಿಂಗಪ್ರಸಾದ್, ಆಯೋಜನೆ: ರಂಗಮಂಡಲ, ಸಿವಗಂಗ ಟ್ರಸ್ಟ್, ಸ್ಥಳ: ಸಿವಗಂಗ ರಂಗಮಂದಿರ, ಕೆಂಗೇರಿ ಉಪನಗರ, ಸಂಜೆ 4.30

ಶಾಲಾ ವಾರ್ಷಿಕೋತ್ಸವ ‘ಎನ್‌ಎಚ್‌ಐಎಸ್ ಕಲರವ’: ಅತಿಥಿಗಳು: ಎಸ್.ಟಿ. ಸೋಮಶೇಖರ್, ಟಿ. ತಿಮ್ಮೇಗೌಡ, ಎಲ್.ಎನ್. ಮುಕುಂದರಾಜ್, ಎಸ್. ಸಿದ್ಧರಾಜು, ರಾಜಪ್ಪ ದಳವಾಯಿ, ರಾಜಣ್ಣ, ಎನ್. ನಂಜುಂಡೇಶ್, ಅಧ್ಯಕ್ಷತೆ: ಬಿ.ಎಚ್. ಸುರೇಶ್, ಆಯೋಜನೆ ಮತ್ತು ಸ್ಥಳ: ನ್ಯೂ ಹಾರ್ಡ್ ವಿಕ್ ಇಂಡಿಯನ್ ಸ್ಕೂಲ್, ಕೊಡಿಗೇಹಳ್ಳಿ, ಸಂಜೆ 5

ಬೇಲೂರು ರಾಮಮೂರ್ತಿ ಅವರ ‘ದಾರಿ ದೀಪದ ಕಥೆಗಳು’ ಪುಸ್ತಕ ಬಿಡುಗಡೆ: ಬಾಬು ಕೃಷ್ಣಮೂರ್ತಿ, ಕೃತಿ ಪರಿಚಯ: ಆರ್.ಕೆ. ಪದ್ಮನಾಭ, ಅತಿಥಿಗಳು: ಜಿ.ಎಸ್.ಟಿ ಪ್ರಭು, ಪ್ರಭಾಕರ ಬೆಳವಾಡಿ, ಸಿ.ಎ. ಕಿಶೋರ್, ಉಪಸ್ಥಿತಿ: ಬೇಲೂರು ರಾಮಮೂರ್ತಿ, ರಘುವೀರ ಸಮರ್ಥ, ಆಯೋಜನೆ: ನಗರ ಕೇಂದ್ರ ಗ್ರಂಥಾಲಯ ಕುಮಾರಸ್ವಾಮಿ ಬಡಾವಣೆ, ಬೆಂಗಳೂರು ಮತ್ತು ಸಾಹಿತ್ಯ ಲೋಕ ಪಬ್ಲಿಕೇಷನ್ಸ್, ಸ್ಥಳ: ಕುಮಾರಸ್ವಾಮಿ ಬಡಾವಣೆ ಗ್ರಂಥಾಲಯದ ಆವರಣ, ಸಂಜೆ 5

ಪ್ರಕಾಶ್ ಮಂಟೇದ ಅವರ ‘ಕಾಮಕಸ್ತೂರಿ ಬನ’ ಕವನ ಸಂಕಲನ ಬಿಡುಗಡೆ: ಚಾಂದಿನಿ ಪಯಣ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಅತಿಥಿ: ನಟರಾಜ್ ಹುಳಿಯಾರ್, ಕೃತಿ ಕುರಿತು: ವೆಂಕಟೇಶಯ್ಯ ನೆಲ್ಲುಕುಂಟೆ, ಉಪಸ್ಥಿತಿ: ಪ್ರಕಾಶ್ ಮಂಟೇದ, ಮಮತಾ ಕೆ.ಎನ್., ಆಯೋಜನೆ: ಕೌದಿ ಪ್ರಕಾಶನ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5

ಬಂಜಗೆರೆ ಜಯಪ್ರಕಾಶ್

ನೇಹಾ ಪ್ರಸಾದ್

ಭರತನಾಟ್ಯ ರಂಗಪ್ರವೇಶ: ನೇಹಾ ಪ್ರಸಾದ್, ಅತಿಥಿಗಳು: ರಾಧಾ ಶ್ರೀಧರ್, ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಎಂ.ಆರ್. ಕಮಲ, ಆಯೋಜನೆ: ನಾಗಲಕ್ಷ್ಮಿ ಅರಗಂ, ವಂದನಾ, ನರಸಿಂಹ ಪ್ರಸಾದ್, ಸ್ಥಳ: ಎ.ಡಿ.ಎ ರಂಗ ಮಂದಿರ, ರವೀಂದ್ರ ಕಲಾಕ್ಷೇತ್ರದ ಎದುರು, ಜೆ.ಸಿ. ರಸ್ತೆ, ಸಂಜೆ 5

38ನೇ ರಾತ್ರಿಪೂರ್ತಿ ಸಂಗೀತ ಕಾರ್ಯಕ್ರಮ: ಅತಿಥಿಗಳು: ತೇಜಸ್ವಿಸೂರ್ಯ, ವಿದ್ಯಾಭೂಷಣ, ಮಹೇಶ್ ಶೆಟ್ಟಿ, ಗಾಯನ: ಅಶ್ವಿನಿ ಭಿಡೆ ದೇಶಪಾಂಡೆ, ವಿನಾಯಕ ತೊರ್ವಿ, ಮನಾಲಿ ಬೋಸ್, ಸಿದ್ಧಾರ್ಥ ಬೆಲ್ಮಣ್ಣು, ತಬಲಾ: ಯಶವಂತ್ ವೈಷ್ಣವ್, ರವೀಂದ್ರ ಯಾವಗಲ್, ಯೋಗೇಶ್ ಭಟ್, ರೂಪಕ್ ಕಲ್ಲೂರಕರ್, ಬಾನ್ಸುರಿ: ಷಡಜ್ ಗೋಡ್ಖಿಂಡಿ, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ವ್ಯಾಸಮೂರ್ತಿ ಕಟ್ಟಿ, ಆದಿತ್ಯ ಖಾವನೇಕರ್, ಆಯೋಜನೆ: ಗುರು ದೇಶಪಾಂಡೆ ಸಂಗೀತ ಸಭಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 9

ಬಿಬಿಎಂಪಿ ಆಡಳಿತ ವಿಕೇಂದ್ರೀಕರಣಕ್ಕೆ ಸುಧಾರಣಾ ಆಯೋಗ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಆಡಳಿತ ಸುಧಾರಿಸಲು ವಿಭಾಗೀಯ ಮಟ್ಟದಲ್ಲಿ 30 ಡೆಪ್ಯುಟಿ ಕಮಿಷನರ್ ಹುದ್ದೆ ಸೃಷ್ಟಿ ಸೇರಿ 700ಕ್ಕೂ ಹೆಚ್ಚು ಹುದ್ದೆಗಳನ್ನು ಸೃಜಿಸಿಕೊಳ್ಳಬಹುದು ಎಂದು ಆಡಳಿತ ಸುಧಾರಣಾ ಆಯೋಗ ಅಭಿಪ್ರಾಯಪಟ್ಟಿದೆ.

ಟಿ.ಎಂ.ವಿಜಯಭಾಸ್ಕರ್ ಅಧ್ಯಕ್ಷತೆಯ ಆಯೋಗವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಿಬಿಎಂಪಿ ಆಡಳಿತ ಸುಧಾರಣೆ ಕುರಿತ ವರದಿಯನ್ನು ಶುಕ್ರವಾರ ಸಲ್ಲಿಸಿತು. ಅಧಿಕಾರ ವಿಕೇಂದ್ರೀಕರಣ ಸಂಬಂಧ ಹಲವು ಶಿಫಾರಸುಗಳನ್ನು ಆಯೋಗ ಮಾಡಿದೆ.

ನೇರ ನೇಮಕಾತಿಯಾಗುವ ಸಾಮಾನ್ಯ ವರ್ಗದ ಕೆಎಎಸ್ ಎ-ಗುಂಪಿನ ಕಿರಿಯ ವೇತನ ಶ್ರೇಣಿಯ ಅಧಿಕಾರಿಗಳ ಮಾದರಿಯಲ್ಲಿ ಬಿಬಿಎಂಪಿಯಲ್ಲಿ ಸಹಾಯಕ ಆಯುಕ್ತರ ಹುದ್ದೆಗಳನ್ನು ಸೃಜಿಸಬಹುದು. ಪಾಲಿಕೆಯ ಕಂದಾಯ ಇಲಾಖೆಯನ್ನು ಸ್ಥಳೀಯವಾಗಿ ಬಲಪಡಿಸುವ ಅಗತ್ಯವಿದೆ. 70 ಹೆಚ್ಚುವರಿ ಕಂದಾಯ ನಿರೀಕ್ಷಕರ ಮತ್ತು 94 ಹೆಚ್ಚುವರಿ ತೆರಿಗೆ ನಿರೀಕ್ಷಕರ ಹುದ್ದೆಗಳನ್ನು ಬಿಬಿಎಂಪಿ ಸೃಜಿಸಬಹುದು ಮತ್ತು ನೇಮಕಾತಿ ಮಾಡಿಕೊಳ್ಳಬಹುದು ಎಂದು ಶಿಫಾರಸು ಮಾಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಿಜಯಭಾಸ್ಕರ್ ವರದಿ ಸಲ್ಲಿಸಿದರು

ಪ್ರತಿ ಮೂರು ವಾರ್ಡ್‌ಗಳಿಗೆ ಒಂದು ಸಹಾಯಕ ಕಂದಾಯ ಅಧಿಕಾರಿ ಹುದ್ದೆ ಇರಬಹುದು. ಹೊಸದಾಗಿ 17 ಸಹಾಯಕ ಕಂದಾಯ ಅಧಿಕಾರಿ ಹುದ್ದೆಗಳನ್ನು ಸೃಜಿಸಬಹುದು ಮತ್ತು ಕೆಲಸದ ಹೊರೆಯ ಆಧಾರದ ಮೇಲೆ ಮರು ಹಂಚಿಕೆ ಮಾಡಬಹುದು. ಎಲ್ಲ ಕಂದಾಯ ನಿರೀಕ್ಷಕರು ಮತ್ತು ತೆರಿಗೆ ನಿರೀಕ್ಷಕರನ್ನು ಕಡ್ಡಾಯವಾಗಿ ಪ್ರತಿ 5 ವರ್ಷಗಳಿಗೊಮ್ಮೆ, ಅದೇ ವಲಯದೊಳಗಿನ ಮತ್ತೊಂದು ವಾರ್ಡ್‌ಗೆ, ಪ್ರತಿ 10 ವರ್ಷಗಳಿಗೊಮ್ಮೆ ಬೇರೆ ವಲಯಗಳ ಮತ್ತೊಂದು ವಾರ್ಡ್‌ಗೆ ವರ್ಗಾಯಿಸಬಹುದು. ತೆರಿಗೆ ಪ್ರಮಾಣ ಹೆಚ್ಚಿಸಲು ಜಾರಿ ಕೋಶ ಒಂದನ್ನು ರಚಿಸಬಹುದು ಎಂದು ವರದಿಯಲ್ಲಿ ತಿಳಿಸಿದೆ.

ಎಲ್ಲಾ 243 ವಾರ್ಡ್‌ಗಳಿಗೆ ಪ್ರತಿ ವಾರ್ಡ್‌ಗೆ 1-ಕಿರಿಯ(ಸಹಾಯಕ) ಎಂಜಿನಿಯರ್ ಹುದ್ದೆ ಮತ್ತು ವರ್ಕ್ ಇನ್‌ಸ್ಪೆಕ್ಟರ್ ಹುದ್ದೆ ಇರಬಹುದು. ಹೆಚ್ಚುವರಿಯಾಗಿ 214 ವರ್ಕ್ ಇನ್‌ಸ್ಪೆಕ್ಟರ್ ಮತ್ತು 89 ಕಿರಿಯ ಎಂಜಿನಿಯರ್‌ಗಳನ್ನು ನೇಮಕ ಮಾಡಿಕೊಳ್ಳಬಹುದು. ತುರ್ತು ಕಾಮಗಾರಿಗಳಿಗೆ ಬಳಸಿಕೊಳ್ಳಲು ಪ್ರತಿ ವಾರ್ಡ್ ಎಂಜಿನಿಯರ್‌ಗೆ, ಹೊಸ ವಾರ್ಡ್‌ಗಳಿಗೆ ವಾರ್ಷಿಕ ಗರಿಷ್ಠ ₹10 ಲಕ್ಷದವರೆಗೆ ಮತ್ತು ಕೋರ್ ವಾರ್ಡ್‌ಗಳಿಗೆ ವಾರ್ಷಿಕ ₹5 ಲಕ್ಷದವರೆಗೆ ಆವರ್ತ ನಿಧಿ ಒದಗಿಸಬೇಕು ಎಂದು ಶಿಫಾರಸು ಮಾಡಿದೆ.

192 ಹೆಚ್ಚುವರಿ ಕಿರಿಯ ಆರೋಗ್ಯ ನಿರೀಕ್ಷಕರ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಿಕೊಳ್ಳಬಹುದು. ಹಿರಿಯ ಆರೋಗ್ಯ ನಿರೀಕ್ಷಕ ಹುದ್ದೆಗಳನ್ನು ಬೇರೆ ವಲಯಗಳಿಗೆ ಮರು ನಿಯೋಜನೆ ಮಾಡಿಕೊಳ್ಳಲು ಅವಕಾಶ ಇದೆ ಎಂದು ವಿವರಿಸಿದೆ.

ಕಾನೂನು ಕೋಶ ಬಲಪಡಿಸಲು ಸಲಹೆ

‘ವಲಯವಾರು ಕಾನೂನು ಕೋಶಗಳ ರಚನೆ, ಸಹಾಯಕ ಕಾನೂನು ಅಧಿಕಾರಿಗಳು, ಉಪ ಕಾನೂನು ಅಧಿಕಾರಿಗಳು ಮತ್ತು ಕಾನೂನು ಅಧಿಕಾರಿಗಳಿಗೆ ಸಹಾಯ ಮಾಡಲು ಹೆಚ್ಚುವರಿ 10 ಕಿರಿಯ ಕಾನೂನು ಅಧಿಕಾರಿಗಳ ಹುದ್ದೆಗಳನ್ನು ಸೃಜಿಸುವ ಮೂಲಕ ಬಿಬಿಎಂಪಿ ಕಾನೂನು ಕೋಶವನ್ನು ಬಲಪಡಿಸಬೇಕು’ ಎಂದು ಆಯೋಗ ವರದಿಯಲ್ಲಿ ತಿಳಿಸಿದೆ.

ಕೆ.ಆರ್.ಪುರ ಬಳಿಯ ಹೋಪ್ ಫಾರಂ ಜಂಕ್ಷನ್ ಸುತ್ತಮುತ್ತಲಿನ ಪ್ರಮುಖ ರಸ್ತೆಗಳಲ್ಲಿ ವಾಹನ ಸವಾರರಿಗೆ ಮೃತ್ಯುಕೂಪವಾಗಿರುವ ರಸ್ತೆಗುಂಡಿಗಳನ್ನು ಮುಚ್ಚುವಂತೆ ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಮುಖಂಡ ಪಿ.ಮುನೇಂದ್ರ ರಸ್ತೆ ಮಧ್ಯೆ ಗುಂಡಿಯಲ್ಲಿ ಮಲಗಿ ಪ್ರತಿಭಟಿಸಿದರು

‘ಕಾವೇರಿ ವಿವಾದ’ ಪುಸ್ತಕ ಬಿಡುಗಡೆ ನಾಳೆ

ಬೆಂಗಳೂರು: ನಿವೃತ್ತ ಐಪಿಎಸ್ ಅಧಿಕಾರಿ ಸಿ. ಚಂದ್ರಶೇಖರ್ ಅವರು ಬರೆದಿರುವ ‘ಕಾವೇರಿ ವಿವಾದ ಒಂದು ಚಾರಿತ್ರಿಕ ಹಿನ್ನೋಟ’ ಪುಸ್ತಕ ಇದೇ 12ರಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಡಿ. ದೇವರಾಜ ಅರಸು ಸಭಾಂಗಣದಲ್ಲಿ ಬಿಡುಗಡೆಯಾಗಲಿದೆ.

‘ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪು ಹೊರ ಬರುವವರೆಗಿನ ಎಲ್ಲಾ ಮಾಹಿತಿಯನ್ನು ಈ ಕೃತಿ ಒಳಗೊಂಡಿದೆ. ಅಂತಿಮ ತೀರ್ಪಿನಲ್ಲೂ ರಾಜ್ಯಕ್ಕೆ ಅನ್ಯಾಯವಾಗಿದ್ದು, ವಾಸ್ತವವಾಗಿ ಕರ್ನಾಟಕಕ್ಕೆ ಶೇ 55 ರಷ್ಟು ನೀರು ದೊರೆಯಬೇಕಿತ್ತು. ಆದರೆ, ಶೇ 22 ರಷ್ಟು ಮಾತ್ರ ದೊರೆತಿದೆ. ಇಂತಹ ಹತ್ತು ಹಲವು ಸಂಗತಿಗಳನ್ನು ಕೃತಿ ಒಳಗೊಂಡಿದೆ’ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಮತ್ತು ಲೇಖಕ ಸಿ. ಚಂದ್ರಶೇಖರ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪುಸ್ತಕವನ್ನು ಅಭಿರುಚಿ ಪ್ರಕಾಶನ ಮತ್ತು ಕಾಡುಮಲ್ಲೇಶ್ವರ ಗೆಳೆಯರ ಬಳಗದ ಸಹಯೋಗದಲ್ಲಿ ಪ್ರಕಟಿಸಲಾಗಿದೆ. ಬಿಜೆಪಿ ಮುಖಂಡ ಎಸ್.ಎಂ. ಕೃಷ್ಣ ಅವರು ಪುಸ್ತಕವನ್ನು ಬಿಡುಗಡೆಗೊಳಿಸಲಿದ್ದು, ಮಾಜಿ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಪತ್ರಕರ್ತ ಶೇಷಚಂದ್ರಿಕಾ, ಜಯಪ್ರಕಾಶ್, ಅಭಿರುಚಿ ಗಣೇಶ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ’ ಎಂದರು.

ದೆಹಲಿ: ಮೆಟ್ರೊ ರೈಲಿಗೆ ಹಾರಿ ವ್ಯಕ್ತಿ ಆತ್ಮಹತ್ಯೆ

ನವದೆಹಲಿ: ದೆಹಲಿ ಪೂರ್ವಭಾಗದ ನಿರ್ಮಾಣ್ ವಿಹಾರ್ ಮೆಟ್ರೊ ರೈಲು ನಿಲ್ದಾಣದಲ್ಲಿ ಶನಿವಾರ ಬೆಳಿಗ್ಗೆ ಸೇಲ್ಸ್‌ಮ್ಯಾನ್ ಒಬ್ಬರು ಮೆಟ್ರೊ ರೈಲಿನ ಮುಂಭಾಗದಲ್ಲಿ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರನ್ನು ಅತುಲ್ ಅಗರ್‌ವಾಲ್ ಎಂದು ಗುರುತಿಸಲಾಗಿದೆ. ರೈಲಿನ ಮುಂಭಾಗ ಬಿದ್ದಿದ್ದ ಅತುಲ್ ಅವರನ್ನು ಪೊಲೀಸರು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಅವರು ಮಧ್ಯಾಹ್ನ 1 ಗಂಟೆಯ ವೇಳೆಗೆ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ಸಿಟ್ಟ್ಯಾಕೋ.. ಸಿಡುಕ್ಯಾಕೋ...

ತಪ್ಪು ಮಾಡಿದ ಮಕ್ಕಳ ಮೇಲೆ ಕೋಪ ಮಾಡಿಕೊಂಡ ಕೂಡಲೇ ಎಲ್ಲವೂ ಸರಿ ಹೋಗಲ್ಲ. ಕೋಪ ಬಿಟ್ಟು, ಸಮಾಧಾನದಿಂದ ಯೋಚಿಸಿದಾಗ ಮುಂದೆ ತಪ್ಪು ಮಾಡದಂತೆ ಮಕ್ಕಳನ್ನು ತಿದ್ದಲು ಅಗತ್ಯವಾದ ಪರ್ಯಾಯ ದಾರಿಗಳು ತೆರೆದುಕೊಳ್ಳುತ್ತವೆ...

ಶ್ರೀಕಲಾ ಡಿ.ಎಸ್.

ಮಕ್ಕಳ ಮೇಲೆ ಕೋಪಗೊಳ್ಳಬಾರದು... ಹೀಗೆಂದು ಹೇಳುವುದು ಸುಲಭ, ಮಾಡುವುದು ಕಷ್ಟ. ಇದು ಬಹುತೇಕ ಹೆತ್ತವರ ಭಾವನೆ. ಆದರೆ ಯಾಕೆ ಕಷ್ಟ? ನಾವು ಕೋಪವನ್ನು ನಿಗ್ರಹಿಸಿಕೊಳ್ಳಲು ಏನಾದರೂ ಪರಿಶ್ರಮ ಪಟ್ಟಿದ್ದೇವೆಯೇ? ದೇಹದಲ್ಲಿ ಬೊಜ್ಜು ಹೆಚ್ಚಾದಾಗ ವ್ಯಾಯಾಮ ಮತ್ತು ಸರಿಯಾದ ಆಹಾರ ಕ್ರಮವನ್ನು ನಿತ್ಯ ಅಭ್ಯಾಸ ಮಾಡಿದರಷ್ಟೇ ತೂಕ ಇಳಿಯುತ್ತದೆ. ಅದೇ ಥರ ಈ ಕೋಪ. ಮನದ ಸಮಾಧಾನಕ್ಕೆ ಅಂಟಿಕೊಂಡ ಬೊಜ್ಜು! ಸೂಕ್ತ ವ್ಯಾಯಾಮದ ಮೂಲಕ ಖಂಡಿತ ಕರಗಿಸಬಹುದು.

ಹೆತ್ತವರೆಂದ ಮೇಲೆ ಕೋಪ ಬಂದೇ ಬರುತ್ತದೆ. ನಿಜ. ಆದರೆ ಆ ಕೋಪವನ್ನು ಬೈದು-ಹೊಡೆದೇ ತೋರಿಸುವ ಅವಶ್ಯಕತೆ ಇದೆಯೇ? ಕಾಲಕಾಲಗಳಿಂದ ಇದನ್ನೇ ನೋಡುತ್ತಾ ಅಭ್ಯಾಸವಾಗಿರುವುದಕ್ಕೆ ನಾವೆಲ್ಲಾ ಹೀಗಾಗಿದ್ದೇವಾ? ಸಿಟ್ಟು ಬಂತೆಂದರೆ ಕೂಗಾಟ, ಬೈದಾಟ, ಹೊಡೆದಾಟ. ಹಾಗಿದ್ದಲ್ಲಿ ತಾಳ್ಮೆ ಬೆಳೆಸಿಕೊಂಡು ಮಕ್ಕಳ ಮೇಲೆ ಬರುವ ಕೋಪವನ್ನು ಸರಿಯಾದ ರೀತಿಯಲ್ಲಿ ವ್ಯಕ್ತಪಡಿಸುವುದು ಹೇಗೆ? ಇಲ್ಲಿವೆ ಒಂದಷ್ಟು ಸಾಧ್ಯತೆಗಳು.

ನಮ್ಮ ಅಸಹನೆಗಳನ್ನು ಮಕ್ಕಳ ಮೇಲೆ ಹಾಕಬಾರದು. ನಮಗೆ ವಿಪರೀತ ಕೆಲಸದೊತ್ತಡವಿದೆ. ಆದರೆ ಮಗುವಿಗದು ಗೊತ್ತಾಗದು. ಎಂದಿನಂತೆ ತನ್ನ ಹತ್ತಾರು ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತದೆ. ಉತ್ತರಿಸುವ ತಾಳ್ಮೆ ಇಲ್ಲದೆ ಮಗುವಿನ ಮೇಲೆ ರೇಗಾಡಿ ಬಿಡುತ್ತೇವೆ. ಅಂದರೆ ನಮ್ಮ ಅಸಹನೆಗಳನ್ನು ಅನವಶ್ಯಕವಾಗಿ ಮಗುವಿಗೆ ದಾಟಿಸಿರುತ್ತೇವೆ. ಮನಸ್ಸೊಳಗೆ ನಮಗೇ ಶಾಂತಿ ಇಲ್ಲದ್ದಕ್ಕಾಗಿ ಸುತ್ತಲಿರುವ ವ್ಯಕ್ತಿ, ವಾತಾವರಣದ ಮೇಲೂ ಆ ಅಶಾಂತಿ ಹರಡುತೇವೆ. ನಮ್ಮೊಳಗೆ ಎದ್ದಿರುವ ಅಸಹನೆಗಳೇ ಬಹುತೇಕ ಬಾರಿ ಹುಚ್ಚು ಕೋಪದಿಂದ ವರ್ತಿಸುವಂತೆ ಮಾಡಿರುತ್ತದೆ. ಹೀಗಾಗುತ್ತಿದೆ ಎಂದರೆ ನಮ್ಮನ್ನು ನಾವು ತಿದ್ದಿಕೊಳ್ಳಬೇಕಾಗಿದೆ ಎಂದೇ ಅರ್ಥ.

ಒಂದು ನಿಮಿಷ ತಡೆದುಕೊಳ್ಳುವುದು

ವಿಪರೀತ ಕೋಪ ಬಂದು ಹೊಡೆಯಲು ಕೈ ಎತ್ತುವಾಗ, ಬೈಯುವಾಗ ಮೊತ್ತ ಮೊದಲ ಪ್ರತಿಕ್ರಿಯೆ ಕೊಡುವುದಕ್ಕೂ ಮೊದಲು ಒಂದು ನಿಮಿಷ ತಡೆದುಕೊಳ್ಳೋಣ. ಅದರಿಂದ ಮಕ್ಕಳಿಗೆ ಬಹಳವೇ ಒಳ್ಳೆಯದಾಗುತ್ತದೆ. ಜೊತೆಗೆ ನಮಗೂ..!

ಮಗು ಮಾಡಿದ ಯಾವುದೋ ತಪ್ಪಿಗೆ (ಮಹಾಪರಾಧವೇ ಆಗಿರಲಿ ಬೇಕೆಂದರೆ) ನಾನು ಈಗ ಕೊಡುತ್ತಿರುವ ಈ ಶಿಕ್ಷೆ ಸರಿಯಾದದ್ದೇ? ಇದನ್ನೇ ಸಾವಧಾನವಾಗಿ ಹೇಗೆ ಹೇಳಬಹುದು ಎಂಬುದನ್ನು ಯೋಚಿಸೋಣ. ನಾನು ಈ ವಯಸ್ಸಲ್ಲಿ ಹೇಗಿದ್ದೆ? ನಾವೇನು ಸದಾ ಕಾಲ ಹೆತ್ತವರ ಮಾತು ಕೇಳುತ್ತಿದ್ದೆವೇ? ಮೂರು ಹೊತ್ತೂ ಕೂತು ಓದುತ್ತಿದ್ದೆವೇ? ನಾವು ಬಹಳ ಒಳ್ಳೆಯ ಮಕ್ಕಳಾಗಿದ್ದೆವು ಎಂದು ಹೇಳಿಕೊಳ್ಳಬಹುದು. ಆದರೆ ಎಲ್ಲೆಲ್ಲಾ ಎಡವುತ್ತಾ ಬೆಳೆದೆವು ಎಂಬ ಸತ್ಯ ನಮಗೆ ಮಾತ್ರ ಗೊತ್ತಿರುತ್ತದೆ. ಹಾಗಾಗಿ ಒಂದು ಕ್ಷಣ ನಮ್ಮನ್ನು ನಾವು ತಡೆದುಕೊಳ್ಳೋಣ.

ಪರಿಸ್ಥಿತಿ ನಿಭಾಯಿಸಲು ಸಿದ್ಧರಿರುವುದು, ಮನೆಯಲ್ಲಿ ಮಕ್ಕಳಿರುವಾಗ ಒಂದಲ್ಲಾ ಒಂದು ಕೋಪ ಹುಟ್ಟುವಂತಹ ಸನ್ನಿವೇಶ ಹೇಗೋ ಸೃಷ್ಟಿಯಾಗಿಯೇ ಆಗುತ್ತದೆ ಎನ್ನುವ ಅರಿವು ಸದಾ ಇರಲೇಬೇಕು. ಹೊಸದಾಗಿ ಸಮಸ್ಯೆ ಹುಟ್ಟಿಕೊಂಡಾಗ ಅದನ್ನು ನಿಭಾಯಿಸಲು ಮಾನಸಿಕವಾಗಿ ತಯಾರಿಲ್ಲದೆ ಇದ್ದಾಗ ಸಿಟ್ಟು ಹೆಚ್ಚು. ಆದರೆ ಹೀಗಾದಾಗ ನಾನು ಶಾಂತವಾಗಿ ಪರಿಸ್ಥಿತಿ ನಿಭಾಯಿಸುತ್ತೇನೆ ಎಂಬ ರೆಕಾರ್ಡರ್ ನಮ್ಮ ತಲೆಯೊಳಗೆ ಮೊದಲೇ ಪ್ಲೇ ಆದರೆ ಅರ್ಧ ಸಮಸ್ಯೆ ಪರಿಹಾರವಾದಂತೆ.

ನಮ್ಮನ್ನೇ ನಾವು ಅವಲೋಕಿಸಿಕೊಳ್ಳುವುದು

ಮಕ್ಕಳಿಗೆ ಬೈದಾಗೆಲ್ಲಾ ನಮ್ಮನ್ನೇ ನಾವು ಮೂರನೇ ವ್ಯಕ್ತಿಯಂತೆ ಗಮನಿಸಿಕೊಳ್ಳಬೇಕು. 'ಈಗ ನನ್ನ ವರ್ತನೆ ಹೇಗಿತ್ತು? ಕೋಪಕ್ಕೆ ಕಾರಣವಾದ ಮಕ್ಕಳ ನಡತೆಯನ್ನು ತಿದ್ದಲು ಹೀಗಲ್ಲದೆ ಬೇರೇನು ಉಪಾಯ ಮಾಡಬಹುದಿತ್ತು? ನಾನು ಸಿಟ್ಟುಗೊಂಡು ಹೇಳಿದ್ದರಿಂದ ಅವರು ತಿದ್ದಿಕೊಂಡರಾ?' ಹೀಗೆ ಅವಲೋಕಿಸುವುದನ್ನು ತೀವ್ರವಾಗಿ ಅಭ್ಯಾಸ ಮಾಡಿಕೊಳ್ಳಬೇಕು. ಈ ಕ್ರಮ ನಮ್ಮೊಳಗೆ ಗಟ್ಟಿಯಾಗುತ್ತಾ ಹೋದಂತೆ ಮಕ್ಕಳು ಮಾಡುವ ಅದೆಷ್ಟೋ ತಪ್ಪನ್ನು ತಿದ್ದಲು ಕೋಪವಷ್ಟೇ ಅಸ್ತ್ರವಲ್ಲ ಎನ್ನುವುದೂ ಅರಿವಾಗುತ್ತದೆ.

ಕೋಪ ವ್ಯಕ್ತಪಡಿಸುವ ಸೂಕ್ತ ಮಾರ್ಗ

ಮಕ್ಕಳನ್ನು ನಿಭಾಯಿಸುವಾಗ ಕೋಪ ಬರುತ್ತದೆ ಎಂಬ ಸತ್ಯ ಒಪ್ಪಿಕೊಳ್ಳೋಣ. ಆದರೆ ಕೋಪಗೊಳ್ಳಲು ಅರ್ಹರು ಮತ್ತು ಸಕಾರಣವಿದೆ ಎಂದ ಮಾತ್ರಕ್ಕೆ ಮಕ್ಕಳ ವ್ಯಕ್ತಿತ್ವ ಹಾಗೂ ಗುಣ-ನಡತೆಗಳನ್ನು ಹೀಯಾಳಿಸುವಂತಹ ಮಾತುಗಳನ್ನು ಆಡಲು ಅಧಿಕಾರವಿಲ್ಲ. ಇಂತಹ ಸಿಟ್ಟು ಬಂದ ಸಂದರ್ಭದಲ್ಲಿ ನಮ್ಮ ಅಭಿಪ್ರಾಯವನ್ನು ಹೇಳಬೇಕೆಂದಿದ್ದರೆ 'ಹಾಗೆ ಮಾಡಬಾರದು, ಇದು ಸರಿಯಲ್ಲ' ಎಂದು ಶಿಸ್ತಿನ ಧಾಟಿಯಲ್ಲೇ ಹೇಳಬೇಕು. ಯಾವಾಗಲೂ ಇದೇ ಮೊದಲ ಪ್ರಯತ್ನ ಆಗಿರಬೇಕು. ಈ ಅಭ್ಯಾಸವನ್ನು ಮಾಡದ ಕಾರಣ ಪೆಟ್ಟೇ ಪರಮೌಷಧವಾಗಿರುತ್ತದೆ. ಕಟ್ಟುನಿಟ್ಟಿನ ದನಿಯಲ್ಲಿ ಮಾತನಾಡುವುದು ನಿರಂತರ ಅಭ್ಯಾಸದಿಂದ ಬರುವಂಥದ್ದು. ಪ್ರಾಯೋಗಿಕವಾಗಿ ಇದನ್ನು ಮಾಡಲು ಸಾಧ್ಯವೇ ಎನ್ನಿಸುತ್ತದೆ. ಆದರೆ ಹತ್ತು ದಿನದಲ್ಲೇ ಈ ಕ್ರಮದ ಫಲಿತಾಂಶ ಸಿಗಲಾರಂಭಿಸುತ್ತದೆ.

ಮೌನ ಒಳ್ಳೆಯದು

ವಿಪರೀತ ಕೋಪ ಬಂದಾಗ ಬೈಯುವುದು, ಹೊಡೆಯುವುದಕ್ಕಿಂತ ಮೌನವಾಗಿ ಬಿಡುವುದು ಹೆಚ್ಚು ಉಪಯೋಗಕಾರಿ. ಮಾತಿಲ್ಲದೆ ಸುಮ್ಮನಾದಾಗ ಮಕ್ಕಳಿಗೂ ಮಾಡಿದ ತಪ್ಪಿನ ಅರಿವು ಬೇಗನೆ ಆಗುತ್ತದೆ.

ಇವತ್ತು ಹೊಡೆಯುವುದಿಲ್ಲ

ನಿತ್ಯ ವ್ರತದಂತೆ ಹೀಗೊಂದು ಮಂತ್ರ ಹೇಳಬೇಕು- 'ಇವತ್ತು ಮಕ್ಕಳಿಗೆ ಹೊಡೆಯುವುದಿಲ್ಲ'. ಇವತ್ತು ಒಂದೇ ದಿನ ಹೊಡೆಯದೆ ಇರುವುದು ಕಷ್ಟದ ಕೆಲಸವೇನಲ್ಲ ತಾನೇ? ಈ ಒಂದು ದಿನ ಇಷ್ಟು ಸಾಧಿಸಿದ್ದೇವೆ ಎಂದರೆ ನಾಳೆಯೂ ಅದು ಸಾಧ್ಯ ಎಂದರ್ಥ. ನಾಳೆ ಬೆಳಿಗ್ಗೆ ಮತ್ತೆ ಇದೇ ಮಂತ್ರ ಪುನರುಚ್ಚರಿಸಿದರೆ ಮುಗಿಯಿತು!

ತಾಳ್ಮೆ ಬೆಳೆಸಿಕೊಳ್ಳುವುದು

ಕೋಪ ಬರಬಾರದು ಎಂದರೆ ತಾಳ್ಮೆ ಬೇಕೇ ಬೇಕು. ಇದನ್ನು ಬೆಳೆಸಿಕೊಳ್ಳಲು ಇರುವ ಅತಿ ಮುಖ್ಯ ಮಾರ್ಗ ಎಂದರೆ ಯೋಗ, ಧ್ಯಾನಗಳ ನಿರಂತರ ಅಭ್ಯಾಸ. ಜೊತೆಗೊಂದಷ್ಟು ವ್ಯಾಯಾಮವೂ ಬೇಕು. ಕೋಪ ಬಂದ ಆ ಕ್ಷಣದಲ್ಲಿ ದೀರ್ಘ ಉಸಿರು ಒಳಗೆಳೆದುಕೊಂಡು ಹೊರಗೆ ಬಿಡುವುದನ್ನು ಮನಸ್ಸು ಶಾಂತವಾಗುವ ತನಕ ಮಾಡಬಹುದು. ಅಂಕೆಗಳನ್ನು ನಿಧಾನವಾಗಿ ಕೋಪ ತಣಿಯುವ ತನಕ ಲೆಕ್ಕ ಹಾಕುವುದು. ಶ್ಲೋಕಗಳನ್ನು ಮನದಲ್ಲೇ ಪಠಿಸುವುದನ್ನೂ ಅಭ್ಯಾಸ ಮಾಡಬಹುದು.

ಮಕ್ಕಳಿಂದ ಸ್ವಲ್ಪ ಹೊತ್ತು ದೂರ

ಮಕ್ಕಳನ್ನು ಕೆಲ ಹೊತ್ತು ಬಿಟ್ಟಿರಲು ಸಾಧ್ಯವಿರುವವರು ಕೋಪ ಬಂದ ಹೊತ್ತಲ್ಲಿ ಸ್ವಲ್ಪ ಹೊತ್ತು ಒಂಟಿಯಾಗಿ ಕಾಲ ಕಳೆಯಬಹುದು. ಇಲ್ಲವೆಂದರೆ ಮನೆಕೆಲಸದ ಕಡೆ, ಗಾರ್ಡನಿಂಗ್‌ನತ್ತ ಗಮನ ಕೊಡಬಹುದು. ಮನಸ್ಸನ್ನು ಅರಳಿಸುವ ಸಂಗೀತ ಕೇಳುವುದು, ಪುಸ್ತಕಗಳನ್ನು ಓದುವುದು, ಪೇಂಟಿಂಗ್ ಮಾಡುವುದು.. ಹೀಗೆ ನಮ್ಮನ್ನು ನಾವು ಕ್ರಿಯಾಶೀಲ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಕೋಪ ಶಮನ ಮಾಡಿಕೊಳ್ಳಲೇಬೇಕು.

ಕೋಪವನ್ನು ನಿಯಂತ್ರಿಸಿಕೊಂಡು ನಿರ್ಧಾರಗಳನ್ನು ತೆಗೆದುಕೊಂಡಾಗ ನಮ್ಮೊಳಗಿನ ಆತ್ಮವಿಶ್ವಾಸ ಹೆಚ್ಚಿ ಎಂಥದ್ದೇ ವಿಷಮ ಪರಿಸ್ಥಿತಿಯೂ ನಿಯಂತ್ರಣಕ್ಕೆ ಸಿಗಲಾರಂಭಿಸುತ್ತದೆ.

ಮಗುವಿಗೆ ಶಿಸ್ತು ಕಲಿಸುವುದೆಂದರೆ ಹೊಡೆಯುವುದಲ್ಲ. ಅದು ಅವರ ಜೀವನವನ್ನೇ ಕುಗ್ಗಿಸಿಬಿಡುತ್ತದೆ. ಶಿಸ್ತಿನ ಮಾತು ಹೇಗೂ ದೂರಾಯಿತು. ಹೆತ್ತವರಾಗಿ ನಮ್ಮ ಉದ್ದೇಶವೇ ಮಕ್ಕಳ ಮನಸ್ಸನ್ನು ಅರಳಿಸುವ ಕಡೆಗೆ ಇರಲಿ.

ಡಿಂಭನಾಳಗಳ ಮರುಜೋಡಣೆ ಫಲಪ್ರದವೇ?

1. ನನಗೆ 37 ವರ್ಷ. ಪತಿಗೆ 38 ವರ್ಷ. ನಮಗೆ 7 ಮತ್ತು4 ವರ್ಷದ ಹೆಣ್ಣು ಮಕ್ಕಳಿದ್ದಾರೆ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದೇನೆ. ಆದರೆ ಈಗ ಇನ್ನೊಂದು ಮಗು ಬೇಕು ಅಂತ ಎನಿಸುತ್ತಿದೆ. ಐ.ವಿ.ಎಫ್ ಮೂಲಕ ಮಗು ಪಡೆಯಲು ಇಷ್ಟವಿಲ್ಲ. ಸಹಜವಾಗಿಯೇ ಗರ್ಭಧರಿಸುವ ಆಸೆ. ಮೊದಲನೆಯದು ಸಿಸೇರಿಯನ್ ಹೆರಿಗೆ. ಈಗ ನನಗೆ ಬಿಪಿ ಇದೆ. ಈ ನನ್ನ ನಿರ್ಧಾರ ಸರಿ ಇದೆಯೇ? ಇದರಿಂದ ಮುಂದೆ ಏನಾದರೂ ಸಮಸ್ಯೆಗಳು ಎದುರಾಗುತ್ತವೆಯೇ ? ತುಂಬಾ ಗೊಂದಲದಲ್ಲಿ ಇದ್ದೇನೆ. ಪರಿಹಾರ ತಿಳಿಸಿ ?

ಹೆಸರು, ಊರು ತಿಳಿಸಿಲ್ಲ

ಸ್ಪಂದನ

ಡಾ. ವೀಣಾ ಎಸ್. ಭಟ್

ಉತ್ತರ: ನಿಮಗೆ ಈಗಾಗಲೇ ಎರಡು ಮಕ್ಕಳಿದ್ದಾರೆ ಎಂದು ಹೇಳಿದ್ದೀರಿ. ಏರು ರಕ್ತದೊತ್ತಡ (ಬಿಪಿ) ಇದೆ ಎಂದೂ ತಿಳಿಸಿದ್ದೀರಿ. ನಿಮಗೆ ಸಿಸೇರಿಯನ್ ಜೊತೆಗೆ, ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಆಗಿರುವುದರಿಂದ ನಿಮ್ಮ ಡಿಂಭನಾಳವನ್ನು (ಗರ್ಭನಾಳವನ್ನು)ಕತ್ತರಿಸಿ ತೆಗೆದುಹಾಕಿರುತ್ತಾರೆ. ಈಗಾಗಲೇ ಸಹಜ ಸಂತಾನೋತ್ಪತ್ತಿ ಕ್ರಿಯೆಯ ಬಗ್ಗೆ ತಿಳಿದಿರಬೇಕಲ್ಲವೇ? ಪ್ರತಿತಿಂಗಳು ಅಂಡಾಶಯದಿಂದ ಬಿಡುಗಡೆಯಾಗುವ ಅಂಡವು ಡಿಂಭನಾಳದಿಂದ ಸೆಳೆಯಲ್ಪಟ್ಟು ಲೈಂಗಿಕ ಕ್ರಿಯೆಯಿಂದ ಗರ್ಭಕೋಶಕ್ಕೆ ಬರುವ ವೀರ್ಯಾಣುಗಳ ಜೊತೆ ಡಿಂಭನಾಳದಲ್ಲಿಯೇ ಫಲಿತವಾಗಿ ನಿಧಾನವಾಗಿ ಗರ್ಭಕೋಶದತ್ತ ಚಲಿಸಿ ನವಮಾಸದಲ್ಲಿ ಮಗುವಾಗಿ ಬೆಳೆಯುತ್ತದೆ. ಸಂತಾನ ಶಕ್ತಿ ಹರಣ ಚಿಕಿತ್ಸೆಯಲ್ಲಿ (ಟ್ಯೂಬೆಕ್ಟಮಿ) ಡಿಂಭನಾಳವನ್ನು ಎರಡೂಕಡೆ ಕತ್ತರಿಸಿ (ಒಂದು ಸೆಂ.ಮೀನಷ್ಟು) ತೆಗೆಯಲಾಗುತ್ತದೆ. ಹಾಗಾಗಿ, ನೀವು ನಿಮಗೆ ಸಹಜವಾಗಿ ನಿಮ್ಮಲ್ಲಿಯೇ ಸಂತಾನೋತ್ಪತ್ತಿ ಸಾಮರ್ಥ್ಯ ಮರುಕಳಿಸಬೇಕೆಂದರೆ (ಐ.ವಿ.ಎಫ್ ವಿಧಾನ ನೀವು ಬೇಡವೆಂದಿದ್ದೀರ) ಈ ಡಿಂಭನಾಳಗಳ ಮರುಜೋಡಣೆಯ ಶಸ್ತ್ರಚಿಕಿತ್ಸೆಗೇ (ಟ್ಯೂಬಲ್ ರೀ ಕ್ಯಾನಲೈಜೇಶನ್) ಮೊರೆ ಹೋಗಬೇಕು.

ಈ ಶಸ್ತ್ರಚಿಕಿತ್ಸೆಗೂ ಸಾಕಷ್ಟು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಋತುಚಕ್ರ ಆರಂಭವಾಗಿ 7 ರಿಂದ10 ದಿನಗಳ ಒಳಗೆ ನಡೆಸುವಂತಹ ಶಸ್ತ್ರಚಿಕಿತ್ಸೆ ಇದು. ಇದನ್ನು ತಜ್ಞವೈದ್ಯರು ಉದರದರ್ಶಕದ ಮೂಲಕ ಅಥವಾ ತೆರೆದ ಸೂಕ್ಷ್ಮದರ್ಶಕದ ಮೂಲಕ ಶಸ್ತ್ರಚಿಕಿತ್ಸಾ ವಿಧಾನದಲ್ಲೂ ಮಾಡುತ್ತಾರೆ. ಸಾಕಷ್ಟು ಮುಂಜಾಗ್ರತೆವಹಿಸಿ ಸೂಕ್ಷ್ಮವಾದ ದಾರಗಳನ್ನ ಉಪಯೋಗಿಸಿ ಡಿಂಭನಾಳಗಳನ್ನು ಮರುಜೋಡಿಸುತ್ತಾರೆ. ಆದರೆ ಹೀಗೆ ಮಾಡುವ ಶಸ್ತ್ರಚಿಕಿತ್ಸೆಯು ಎಷ್ಟರಮಟ್ಟಿಗೆ ಫಲಪ್ರದವಾಗುತ್ತದೆ ಎಂಬುದು ಹಲವಾರು ಅಂಶಗಳನ್ನು ಅವಲಂಬಿಸಿರುತ್ತವೆ.

ಮರುಜೋಡಿಸಲ್ಪಟ್ಟ ಡಿಂಭನಾಳವೂ 8 ಸೆಂ.ಮೀ ಗಿಂತ ಹೆಚ್ಚು ಉದ್ದವಾಗಿದ್ದರೆ, ಮಕ್ಕಳಾಗುವ ಸಂಭವ ಹೆಚ್ಚು. ಲ್ಯಾಪ್ರೋಸ್ಕೋಪಿಕ್ ಉಂಗುರ ಅಳವಡಿಕೆ ವಿಧಾನದಲ್ಲಿ ಟ್ಯುಬೆಕ್ಟಮಿ ಮಾಡಿಸಿಕೊಂಡು ನಂತರ 5 ವರ್ಷದ ಒಳಗೆ ಮರುಜೋಡಣಾ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಾಗ ಮಕ್ಕಳಾಗುವ ಪ್ರಮಾಣ ಶೇಕಡ 60ಕ್ಕೂ ಹೆಚ್ಚು ಫಲಪ್ರದವಾಗುತ್ತದೆ.

ನೀವು ಸಿಸೇರಿಯನ್ ಜೊತೆಗೆ ಸಂತಾನ ಶಕ್ತಿ ಹರಣ ಚಿಕಿತ್ಸೆ ಮಾಡಿಸಿಕೊಂಡಿ ರುವುದರಿಂದ ಶಸ್ತ್ರಚಿಕಿತ್ಸೆಯ ಯಶಸ್ಸು ಶೇಕಡ 40ರಷ್ಟು ಇರಬಹುದು.

ಒಟ್ಟಾರೆ ಟ್ಯುಬೆಕ್ಟಮಿ ಮಾಡಿಸಿಕೊಂಡು 5 ರಿಂದ10 ವರ್ಷಗಳ ನಂತರ ಮರುಜೋಡಣಾ ಚಿಕಿತ್ಸೆ ಮಾಡಿಸಿಕೊಂಡರೆ ಶಸ್ತ್ರಚಿಕಿತ್ಸೆ ಯಶಸ್ಸು ಶೇಕಡ 16ಕ್ಕೂ ಕಡಿಮೆ ಇರುತ್ತದೆ. ಒಟ್ಟಾರೆ ಫಲಿತಾಂಶ ನಿಮ್ಮ ಸಮಗ್ರ ಆರೋಗ್ಯ ಹಾಗೂ ಸಂತಾನೋತ್ಪತ್ತಿ ಆರೋಗ್ಯದ ಮೇಲೆ ಅವಲಂಬಿತವಾಗಿರುತ್ತದೆ.

ನಿಮಗೀಗಾಲೇ 37ವರ್ಷಗಳಾಗಿರುವುರಿಂದ ಒಮ್ಮೆ ಗರ್ಭಧಾರಣೆಯಾದರೂ ಡೌನ್‌ಸಿಂಡ್ರೋಮ್ ಮಗುವಾಗುವ ಸಂಭವ ಹೆಚ್ಚಿರುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಗರ್ಭಧಾರಣೆಯಾದಾಗ ಟ್ಯೂಬಲ್‌ಪ್ರೆಗ್ನೆನ್ಸಿ (ನಳಿಕಾಗರ್ಭ)ಆಗುವ ಸಂಭವ ಹೆಚ್ಚಿರುತ್ತದೆ. ಅದು ಅಪಾಯಕರ ಸನ್ನಿವೇಶ ಉಂಟುಮಾಡುತ್ತದೆ. ಹಾಗಾಗಿ ನೀವು ನಿಮ್ಮ ನಿರ್ಧಾರವನ್ನು ಮರುಪರಿಶೀಲಿಸಿ.

ಮತ್ತಷ್ಟು ಪ್ರಶ್ನೋತ್ತರಗಳಿಗಾಗಿ www. prajavani.net/women ಜಾಲತಾಣಕ್ಕೆ ಭೇಟಿ ನೀಡಿ.

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಸ್ವಾಸ್ಥ್ಯವೋ ಸೌಂದರ್ಯವೋ ಎಂಬ ಪ್ರಶ್ನೆ ಬಂದಾಗ ಸಹಜವಾಗಿಯೇ ಇವೆರಡೂ ಒಟ್ಟೊಟ್ಟಿಗೆ ಇದ್ದರೆ ಪರಿಪೂರ್ಣ ಚಂದ ಎನ್ನುವುದು ಸತ್ಯ. ಆದರೆ ಬಹುತೇಕ ಜನರು ಸೋಲುವುದು ಎಲ್ಲಿ ಎಂದು ಪೋಷಕಾಂಶ ತಜ್ಞೆ **ಡಾ.ಸೋನಾಲಿ ಸರ್ನೋಬತ್** ಇಲ್ಲಿ ಚರ್ಚಿಸಿದ್ದಾರೆ

ನಲ್ವತ್ತರ ನಂತರದ ನಾಕ

ಫಿಟ್ನೆಸ್

ನಲ್ವತ್ತಾದರೆ ಸಾಕು, ಎಳೆ ಮುದುಕಿಯರಾದೆವೆಂದು ಆತಂಕ ಪಟ್ಟುಕೊಳ್ಳುತ್ತೇವೆ. ಇದ್ದಕ್ಕಿದ್ದಂತೆ ವಾಕಿಂಗು, ಅನ್ನ ಬೇಡ ಎಂಬ ನಿರ್ಧಾರ, ಸಿಹಿ ಬೇಡ, ಸಕ್ಕರೆ ಬೇಡ ಎಂದೆಲ್ಲ ತೀರ್ಮಾನಕ್ಕೆ ಬರುತ್ತೇವೆ. ಹೊಸ ನಿಯಮಗಳೆಲ್ಲ ಒಂದು ವಾರದವರೆಗೆ, ಒಂದು ಹಬ್ಬದೂಟದವರೆಗೂ ಸಾಗಿ ಬರುತ್ತವೆ.

ದಿನಗಳೆದಂತೆ, ಚೂರೆ ಚೂರು, ಒಂದಿನ ಉಂಡರೆ ಏನಾಗದು, ಒಂದಿನ ವಾಕಿಂಗ್ ಹೋಗದಿರೆ ಏನಾಗದು ಎಂಬ ಸಮಾಧಾನದಲ್ಲಿ ನಾವು ನಮ್ಮ ದಿನಚರಿಯನ್ನು ಬದಲಿಸಿಕೊಳ್ಳುತ್ತೇವೆ.

ಮತ್ತದೇ ಧಾವಂತದ ಬದುಕು, ನಿದ್ದೆಯಿಲ್ಲದ ಇರುಳು, ನೆಮ್ಮದಿಯಿಲ್ಲದ ಬೆಳಗು, ಬಿಡುವಿಲ್ಲದ ದಿನ, ನಿರಾಳವೆನಿಸದ ಸಂಜೆ... ದಿನಗಳು ಓಡುತ್ತವೆ. ಕೈ ಮೇಲೆ, ಮೈಮೇಲೆ ನೆರಿಗೆಗಳು ಮೂಡುತ್ತವೆ. ತಲೆಯಂಚಿನಲ್ಲಿ ಬೆಳ್ಳಿಗೆರೆಗಳು, ಕಣ್ಣಕೆಳಗೆ ಕಪ್ಪು ವರ್ತುಲಗಳು, ಅಲ್ಲಲ್ಲಿ ಚರ್ಮ ಇಳಿಬೀಳುತ್ತದೆ. ಅಯ್ಯೋ ಮುಗಿದೇ ಹೋಯ್ತಲ್ಲ ನಮ್ಮ ಕಾಲ ಎಂಬ ಖಿನ್ನತೆಯೂ ಮೂಡುತ್ತದೆ. ಇವನ್ನೆಲ್ಲ ಒಮ್ಮೆ ಕೊಡವಿಕೊಂಡು, ಟ್ರ್ಯಾಕ್‌ಪ್ಯಾಂಟ್ ಕೊಂಡು ತಂದು, ಶೂ ಹಾಕಿಕೊಂಡು, ಡಯೆಟ್ ಚಾರ್ಟ್ ಅಡುಗೆ ಮನೆಯಲ್ಲಿ ಅಂಟಿಸಿಕೊಂಡು ವಾಕ್ ಹೋಗುವ ಸಂಭ್ರಮವೇ ಬೇರೆ. ಬಹುತೇಕ ಜನರು ಈ ದಿನಚರಿಯನ್ನು ಮುಂದುವರಿಸಲು ಆಗದು. ತೂಕ ಏರಿದಷ್ಟೇ ವೇಗದಲ್ಲಿ ಇಳಿಯುವುದಿಲ್ಲ. ಕಸರತ್ತು ಆರಂಭಿಸಿದೊಡನೆ ಚಮತ್ಕಾರಗಳಾಗಲಿ ಎಂಬ ನಿರೀಕ್ಷೆ ನಮ್ಮದು.

ಮೂವತ್ತರ ನಂತರವೇ ನಮ್ಮ ಸ್ನಾಯುಗಳು ಬಲಕಳೆದುಕೊಳ್ಳಲು ಆರಂಭಿಸುತ್ತವೆ. ಸೂಕ್ತವಾದ ವ್ಯಾಯಾಮವನ್ನು ದಿನಗಳೆದಂತೆ ಮೈಗೂಡಿಸಿಕೊಳ್ಳಬೇಕು. ಹಗುರವಾದ ನಡಿಗೆ, ಬೀಸುನಡಿಗೆಯಿಂದ ಆರಂಭವಾಗುವ ವ್ಯಾಯಾಮ, ಕಾರ್ಡಿಯೊ ಮಾಡುವವರೆಗೂ, ಭಾರ ಎತ್ತಿಳಿಸುವವರೆಗೂ ಮುಂದುವರಿಯಲಿ. ನಿಯಮಿತವಾಗಿರಲಿ. ನಿರ್ದಿಷ್ಟವಾಗಿರಲಿ. ನಿಮ್ಮ ಸಾಮರ್ಥ್ಯದ ಅರಿವು ನಿಮಗಿರಲಿ. ಪ್ರತಿದಿನವೂ ಚೂರುಚೂರೆ ಹೆಚ್ಚಾಗಲಿ. ಒಂದೇ ದಿನ ಎಲ್ಲವನ್ನೂ ಪ್ರಯತ್ನಿಸಿ, ಸುಸ್ತಾಗಿ, ದೇಹ ಬಸವಳಿದರೆ ಮರುದಿನ ಪ್ರತಿರೋಧ ತೋರುತ್ತದೆ.

ನಿಮ್ಮ ಆಹಾರದ ಅರಿವು ನಿಮಗಿರಲಿ: ಸರಳ ಡಯೆಟ್ ಮತ್ತು ಡಯಟ್‌ನಲ್ಲಿ ಸರಳವಾಗಿರುವುದು ಎರಡೂ ವಿಭಿನ್ನ ಅರ್ಥಗಳನ್ನು ನೀಡುತ್ತದೆ. ಸರಳ ಡಯೆಟ್ ಅಂದರೆ ನಿಮಗಿಷ್ಟವಾದ ಆಹಾರಗಳನ್ನು ಶಾಸ್ತ್ರಕ್ಕಾಗಿಯಾದರೂ ನಿಮ್ಮ ಆಹಾರ ಅಭ್ಯಾಸದಲ್ಲಿ ಸೇರಿಸುವುದು. ರಾತ್ರಿಯೂಟಕ್ಕೆ ಒಂದೆರಡು ತುತ್ತು ಅನ್ನ ಉಣ್ಣುವುದರಲ್ಲಿ ಯಾವ ತಪ್ಪೂ ಇಲ್ಲ. ಅದು ನಿಮ್ಮಲ್ಲಿ ಸಂತೃಪ್ತಿಯನ್ನು ಮೂಡಿಸುತ್ತದೆ. ಊಟ ಪರಿಪೂರ್ಣವಾದ ಭಾವ ಮೂಡಿಸುತ್ತದೆ. ಇದೊಂದು ಶಿಸ್ತು. ಡಯೆಟ್ ಸರಳವಾಗಿಸುವುದು ಎಂದು ಇಷ್ಟವಾದಾಗ, ಇಷ್ಟವಾದಷ್ಟು ಉಂಡು, ಮರುದಿನ ಉಪವಾಸ ಇರುವುದಲ್ಲ.

ತೂಕ ಕಳೆಯುವ ಸರಳ ಸೂತ್ರವೆಂದರೆ ನಿಮ್ಮ ದೇಹಕ್ಕೆ ಅಗತ್ಯ ಇರುವ ಕ್ಯಾಲೊರಿಗಳಷ್ಟು ಆಹಾರ ಸೇವಿಸುವುದು. ಮತ್ತು ಅದನ್ನು ಅರಗಿಸುವುದು. ನಮ್ಮಲ್ಲಿ ನಮ್ಮ ಅಗತ್ಯಕ್ಕಿಂತ ಹೆಚ್ಚು ಆಹಾರ ಸೇವಿಸುವ, ಅದನ್ನು ಅತಿ ಕಡಿಮೆ ಕರಗಿಸುವ ಜೀವನ ಶೈಲಿಯಲ್ಲಿ ಕಳೆದುಹೋಗಿರುತ್ತೇವೆ. ತೂಕದ ವಿಷಯ ತಾಳ ತಪ್ಪುವುದೇ ಈ ಸಂದರ್ಭದಲ್ಲಿ.

ವಿಟಮಿನ್ ಡಿ2, ವಿಟಮಿನ್ ಡಿ3 ಇವು ಧಾರಾಳವಾಗಿ ಸಿಗುವಂತೆ ಆಗಬೇಕು. ನಿಮ್ಮ ತೂಕದ ಪ್ರತಿ ಕೆ.ಜಿ.ಗೆ 0.8 ಗ್ರಾಂ ಪ್ರೊಟೀನು ಅಗತ್ಯ ಇರುತ್ತದೆ. ಅದನ್ನು ಹೇಗೆ ಹೊಂದಿಸುವುದು ಎಂಬುದು ನಿಮ್ಮ ಆಹಾರ ಪದ್ಧತಿಯನ್ನು ಅವಲಂಬಿಸಿರುತ್ತದೆ.

ಇನ್ನು ನಿರಾಳವಾಗಿರಲು ನಿಯಮಿತ ನಿದ್ದೆ ಮತ್ತು ಒತ್ತಡರಹಿತ ಜೀವನ ಅತ್ಯಗತ್ಯವಾಗಿದೆ. ನಿದ್ದೆಗಿಳಿಯುವ ಮುನ್ನ ಪ್ರತಿದಿನವೂ ಸಂಭವಿಸಿದ ಒಳಿತಿಗಾಗಿ ಕೃತಜ್ಞತೆ ಸಲ್ಲಿಸುವುದನ್ನು ರೂಢಿಸಿಕೊಳ್ಳಿ. ಇದು ಒತ್ತಡವನ್ನು ನಿಯಂತ್ರಿಸುತ್ತದೆ. ನಿದ್ದೆಗೆ ಒಂದು ಗಂಟೆ ಮೊದಲೇ ಸ್ಕ್ರೀನ್‌ಗಳ ವೀಕ್ಷಣೆ ನಿಷೇಧಿಸಿ. ಟಿವಿಯಾಗಿರಲಿ, ಸ್ಮಾರ್ಟ್‌ಫೋನ್ ಆಗಿರಲಿ ಎಲ್ಲವುದರಿಂದಲೂ ದೂರ ಇರಿ. ಧ್ಯಾನ ಮಾಡಿ. ಮಲಗಿ ಏಳಿ.

ನಲ್ವತ್ತಾಯಿತು ಎಂದು ಉಳಿದ ಜವಾಬ್ದಾರಿಗಳಿಗಾಗಿ ಮಿಡಿಯುವಂತೆಯೇ, ನಿಮ್ಮ ದೇಹಕ್ಕೂ ವಯಸ್ಸಾಗುತ್ತಿದೆ. ಅದಕ್ಕೂ ದೇಖುರೇಕಿಯ ಅಗತ್ಯವಿದೆಯೆಂದು ಮನಗಾಣಿರಿ. ಫಿಟ್ನೆಸ್‌ಗೂ, ತೂಕ ಕಳೆಯಲೂ ಇರುವ ವ್ಯತ್ಯಾಸ ಇದೇನೆ. ಜೀವನವನ್ನು ಆನಂದಿಸುವುದು, ಸ್ವಾಸ್ಥ್ಯಮಯಗೊಳಿಸುವುದು, ದೇಹದ ಧಾರಣಾ ಸಾಮರ್ಥ್ಯ ಹೆಚ್ಚಿಸಿಕೊಳ್ಳುವುದು, ಸದೃಢರಾಗುವುದು ಫಿಟ್ನೆಸ್‌ನ ಗುರಿಯಾಗಿರಲಿ. ಉಳಿದಂತೆ ಸೌಂದರ್ಯ ನಿಮ್ಮದಾಗಿಯೇ ಆಗುತ್ತದೆ. ಅಂಗ ಸೌಷ್ಠವದಲ್ಲಿ ಸ್ನಾಯುಗಳು ಬಿಗಿಯಾಗುತ್ತವೆ. ತೂಕ ಕಳೆದುಕೊಳ್ಳುವುದೇ ಗುರಿಯಾದಲ್ಲಿ ಆಗಾಗ ತೂಕದ ಏರಿಳಿತಗಳಿಗೆ ತಕ್ಕಂತೆ ನಿಮ್ಮ ದಿನಚರಿ ಬದಲಾಗುತ್ತಲೇ ಹೋಗುತ್ತದೆ.

ನಿಯಮಿತವಾದ ಡಯೆಟ್, ವ್ಯಾಯಾಮ ಇದ್ದಲ್ಲಿ ನಲ್ವತ್ತರ ನಂತರವೂ ಇಪ್ಪತ್ತರ ಹರೆಯದಲ್ಲಿ ಇದ್ದಿದ್ದಕ್ಕಿಂತ ಆಸಕ್ತಿಕರ, ಉತ್ತಮ ಗುಣಮಟ್ಟದ ಜೀವನಶೈಲಿಯಂತೂ ನಿಮ್ಮದಾಗುತ್ತದೆ.

'ಡಯೆಟ್ ಅಂಡ್ ಮಿ'

ತಮ್ಮ ತೂಕ ಕಳೆದುಕೊಳ್ಳುವ ಪ್ರಯತ್ನದಲ್ಲಿದ್ದಾಗ, ಸಪೂರವಾಗಿದ್ದರೆ ಸಾಕೆ? ದೇಹಸದೃಢವಾಗಿರಬಾರದೆ? ಆರೋಗ್ಯಕರವಾಗಿರುವುದು ಹೇಗೆ? ಎಂಬ ಪ್ರಶ್ನೆಗಳು ಎದುರಾದವು. ಗಟ್ಟಿಗಿತ್ತಿಯಾಗಬೇಕು, ಸ್ವಾಸ್ಥ್ಯವೇ ಮುಖ್ಯ ಗುರಿಯಾಗಿರಬೇಕು. ಉಳಿದ ಸೌಂದರ್ಯ ತಾನಾಗಿಯೇ ಒಡಮೂಡುತ್ತದೆ ಎಂಬ ಅನುಭವವಾಯಿತು. ನಂತರ, ಆಹಾರ ಲೋಕದ ವಿಜ್ಞಾನ, ದೇಹಕ್ಕೆ ಅಗತ್ಯ ಇರುವ ಆಹಾರ, ಪ್ರತಿ ದೇಹವೂ ಅನನ್ಯ, ಯಾವುದನ್ನು ಎಷ್ಟು ದಂಡಿಸಬೇಕು? ಎಷ್ಟು ಉಣಿಸಬೇಕು ಹೀಗೆ ಎಲ್ಲದಕ್ಕೂ ವೈಜ್ಞಾನಿಕ ಕಾರಣಗಳನ್ನು 'ಡಯಟ್ ಅಂಡ್ ಮಿ' ಪುಸ್ತಕರೂಪದಲ್ಲಿ ಸಂಗ್ರಹಿಸಿದ್ದೇನೆ. ಪಾರ್ಟ್ರಿಜ್ ಪ್ರಕಾಶನ ಈ ಪುಸ್ತಕ ಪ್ರಕಟಿಸಿದೆ.

ಸಾಂದರ್ಭಿಕ ಚಿತ್ರ

ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್

ರಾಜಸ್ವ ಸಂಗ್ರಹದಲ್ಲಿ ಶೇ 91ರಷ್ಟು ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜನವರಿ ಅಂತ್ಯದವರೆಗೆ ರಾಜಸ್ವ ಸಂಗ್ರಹಣೆಯಲ್ಲಿ ಶೇಕಡ 91ರಷ್ಟು ಗುರಿ ಸಾಧನೆ ಮಾಡಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ತಿಳಿಸಿದರು.

ಶುಕ್ರವಾರ ನಡೆದ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, 'ಸ್ವಂತ ತೆರಿಗೆ ರಾಜಸ್ವ ಸಂಗ್ರಹಣೆಯಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 21ರಷ್ಟು ಹೆಚ್ಚಳವಾಗಿದೆ. ಬಜೆಟ್ ಅಂದಾಜಿನ ಶೇ 75ರಷ್ಟು ಮೊತ್ತವನ್ನು ಈವರೆಗೆ ವೆಚ್ಚ ಮಾಡಲಾಗಿದೆ' ಎಂದರು.

2022ರ ಜನವರಿ ಅಂತ್ಯಕ್ಕೆ ರಾಜ್ಯ ಸರ್ಕಾರದ ಬಂಡವಾಳ ವೆಚ್ಚವು ₹ 26,915 ಕೋಟಿಯಷ್ಟಿತ್ತು. 2023ರ ಜನವರಿ ಅಂತ್ಯಕ್ಕೆ ಬಂಡವಾಳ ವೆಚ್ಚದ ಪ್ರಮಾಣವು ₹ 33,991 ಕೋಟಿಯಷ್ಟಿದ್ದು, ಗಣನೀಯ ಏರಿಕೆಯಾಗಿದೆ ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಹೆಚ್ಚಿಸುವ ಐತಿಹಾಸಿಕ ಕ್ರಮವನ್ನು ಸರ್ಕಾರ ಕೈಗೊಂಡಿದೆ. ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಲಾಗಿದೆ. ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ₹29,000 ಕೋಟಿ ವೆಚ್ಚ ಮಾಡಲಾಗಿದೆ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ವಿಧಾನಸಭೆಯ ಸಭಾಂಗಣದಲ್ಲಿ ಶುಕ್ರವಾರ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದರು. ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಇದ್ದಾರೆ

ಪ್ರಮುಖ ಅಂಶಗಳು

- ರೈತ ವಿದ್ಯಾನಿಧಿ ಯೋಜನೆಯಡಿ ₹ 484 ಕೋಟಿ ವಿದ್ಯಾರ್ಥಿವೇತನ
- ಜಾನುವಾರುಗಳಲ್ಲಿ ಚರ್ಮಗಂಟು ರೋಗ ನಿಯಂತ್ರಣಕ್ಕೆ ₹ 37 ಕೋಟಿ
- ನೇರ ನಗದು ವರ್ಗಾವಣೆ ಮೂಲಕ 1.39 ಕೋಟಿ ಜನರಿಗೆ ₹ 6,226 ಕೋಟಿ ಪಾವತಿ
- ಮನೆ ಬಾಗಿಲಿಗೆ ಮಾಸಾಶನ ಯೋಜನೆಯಿಂದ ₹ 461 ಕೋಟಿ ಉಳಿತಾಯ
- 2,275 ಕಿ.ಮೀ. ರಸ್ತೆಗಳ ಸುಧಾರಣೆ

2022-23ನೇ ಸಾಲಿನಲ್ಲಿ 58,588 ದಶಲಕ್ಷ ಯೂನಿಟ್ ಉತ್ಪಾದಿಸಲಾಗಿದೆ. ಹೆಚ್ಚುವರಿಯಾಗಿ ಲಭ್ಯವಿದ್ದ 4,326.45 ದಶಲಕ್ಷ ಯೂನಿಟ್ ವಿದ್ಯುತ್ ಮಾರಾಟ ಮಾಡಿದ್ದು, ₹ 2,500 ಕೋಟಿ ಗಳಿಸಲಾಗಿದೆ. ಬೆಳಕು ಯೋಜನೆಯಡಿ 2.35 ಲಕ್ಷ ವಿದ್ಯುತ್ ರಹಿತ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಇದಕ್ಕಾಗಿ ₹124 ಕೋಟಿ ವ್ಯಯಿಸಲಾಗಿದೆ ಎಂದು ವಿವರ ನೀಡಿದರು.

1,475 ತಾಂಡಾ, ಗೊಲ್ಲರಹಟ್ಟಿ, ಕುರುಬರಹಟ್ಟಿ ಮತ್ತು ಇತರ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆ. ಕಲಬುರಗಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಸಮ್ಮುಖದಲ್ಲಿ 52,000 ಫಲಾನುಭವಿಗಳಿಗೆ ಹಕ್ಕುಪತ್ರ ವಿವರಿಸಲಾಗಿದೆ. ಇದು ವಿಶ್ವದಾಖಲೆ ಎಂದು ಹೇಳಿದರು.

ಪರಿಭಾವಿತ ಅರಣ್ಯ ಪ್ರದೇಶದ ವ್ಯಾಪ್ತಿಯಿಂದ 7.73 ಲಕ್ಷ ಹೆಕ್ಟೇರ್ ಪ್ರದೇಶವನ್ನು ಕೈಬಿಡಲಾಗಿದೆ. ಅತ್ಯಾಚಾರ ಮತ್ತು ಪೋಕ್ಸೊ ಕಾಯ್ದೆಯಡಿ ದಾಖಲಾದ ಪ್ರಕರಣಗಳ ವಿಚಾರಣೆಗೆ 31 ತ್ವರಿತ ನ್ಯಾಯಾಲಯಗಳನ್ನು ಆರಂಭಿಸಲು ಮಂಜೂರಾತಿ ನೀಡಲಾಗಿದೆ. ಹೊಸ ಶಿಕ್ಷಣ ನೀತಿ ಅನುಷ್ಠಾನಕ್ಕೆ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.

'ಸರ್ಕಾರದ ವೈಫಲ್ಯ ಒಪ್ಪಿಕೊಂಡಿರುವುದಕ್ಕೆ ಅಭಿನಂದನೆ'

ಬೆಂಗಳೂರು: 'ರಾಜ್ಯಪಾಲರ ಭಾಷಣ ತೌಡು ಕುಟ್ಟಿದಂತೆ ಕಾಣಿಸುತ್ತಿದೆ. ಸರ್ಕಾರದ ವೈಫಲ್ಯವನ್ನು ಭಾಷಣದಲ್ಲಿ ಒಪ್ಪಿಕೊಂಡಿರುವುದಕ್ಕೆ ರಾಜ್ಯಪಾಲರು ಮತ್ತು ಸರ್ಕಾರವನ್ನು ಅಭಿನಂದಿಸುತ್ತೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

'ಯಾವ ಸಾಧನೆ ಮಾಡದಿರುವುದನ್ನು ಸರ್ಕಾರವೇ ಸ್ವತಃ ಒಪ್ಪಿಕೊಂಡಿದೆ. ಬಿಜೆಪಿ ಸರ್ಕಾರವು ನಾಲ್ಕು ವರ್ಷಗಳಲ್ಲಿ ಏನನ್ನೂ ಮಾಡಿಲ್ಲ. ಭ್ರಷ್ಟಾಚಾರ, ಧರ್ಮ-ಜಾತಿ ಸಂಘರ್ಷವನ್ನು ಬೆಳೆಸಿದ್ದು ಹೊರತು ಪಡಿಸಿದರೆ ಬೇರೆ ಸಾಧನೆಗಳನ್ನು ಮಾಡಿಲ್ಲ ಎನ್ನುವುದನ್ನು ರಾಜ್ಯಪಾಲರ ಭಾಷಣದಲ್ಲಿ ಒಪ್ಪಿಕೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

'ರಾಜ್ಯಪಾಲರ ಮೂಲಕ ಸರ್ಕಾರ ಹೇಳಿಸಿರುವ ಅನೇಕ ಕಾರ್ಯಕ್ರಮಗಳು ಕಾಂಗ್ರೆಸ್ ಸರ್ಕಾರದ ಅವಧಿಯ ಕಾರ್ಯಕ್ರಮಗಳಾಗಿವೆ. ರಾಜ್ಯದ ಆದಾಯಕ್ಕೆ ಬೆಂಗಳೂರಿನ ಕೊಡುಗೆ ಶೇ 70ಕ್ಕಿಂತ ಹೆಚ್ಚು. ಆದರೆ, ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಭಾಷಣದಲ್ಲಿ ಸ್ಪಷ್ಟ ಯೋಜನೆಗಳು ಇಲ್ಲ' ಎಂದು ವಿವರಿಸಿದ್ದಾರೆ.

'ಭಾಷಣ ಸುಳ್ಳಿನ ಕಂತೆ'

'ಬಿಜೆಪಿ ಸರ್ಕಾರಕ್ಕೆ ಸುಳ್ಳೇ ಮನೆ ದೇವರು ಎನ್ನುವುದು ರಾಜ್ಯಪಾಲರ ಭಾಷಣ ಸ್ಪಷ್ಟಪಡಿಸಿದೆ. ಇಡೀ ಭಾಷಣ ಸುಳ್ಳಿನ ಕಂತೆ. ರಾಜ್ಯದ ಅಭಿವೃದ್ಧಿಗಾಗಿ ಕಿವಿ ಹಿಂಡಬೇಕಾದ ರಾಜ್ಯಪಾಲರು ತುತ್ತೂರಿ ಊದಿದಂತಿದೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಕಿಡಿಕಾರಿದ್ದಾರೆ.

'ರಾಜ್ಯದ ಅಭಿವೃದ್ಧಿಗೆ ಸರ್ಕಾರಕ್ಕೆ ಯಾವ ದೂರದೃಷ್ಟಿಯೂ ಇಲ್ಲ. ರಾಜ್ಯಪಾಲರ ಭಾಷಣದಲ್ಲಿನ ಅಂಕಿ-ಅಂಶಗಳು ಸತ್ಯಕ್ಕೆ ದೂರವಾಗಿವೆ. ಕಾಂಗ್ರೆಸ್ ಸರ್ಕಾರದ ಯೋಜನೆಗಳನ್ನೇ ತಮ್ಮ ಸಾಧನೆ ಎಂದು ಬೆನ್ನು ತಟ್ಟಿಕೊಂಡಿರುವುದು ನಾಚಿಕೆಗೇಡಿತನದ ಪರಮಾವಧಿ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕಮಿಷನ್ ಆರೋಪ ಮರೆಮಾಚಲು ರಾಜ್ಯಪಾಲರ ಭಾಷಣ ಬಳಸಿಕೊಳ್ಳಲಾಗಿದೆ. ಸರ್ಕಾರದ ವಿರುದ್ಧದ ಭ್ರಷ್ಟಾಚಾರದ ಆರೋಪಗಳ ಕುರಿತು ರಾಜ್ಯಪಾಲರು ಪ್ರಸ್ತಾಪಿಸದಿರುವುದು ಇದಕ್ಕೆ ಸಾಕ್ಷಿ' ಎಂದು ಅವರು ಹೇಳಿದ್ದಾರೆ.

ಸಿದ್ದರಾಮಯ್ಯ, ಎಚ್‌ಡಿಕೆ ಗೈರು

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಹಲವರು ಜಂಟಿ ಅಧಿವೇಶನಕ್ಕೆ ಗೈರಾಗಿದ್ದರು. ಆಡಳಿತ ಪಕ್ಷದ ಬಹುತೇಕ ಸದಸ್ಯರು ಸದನಕ್ಕೆ ಹಾಜರಾಗಿದ್ದರು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು.

ವಿಧಾನಮಂಡಲದ ಮೂಲಗಳ ಪ್ರಕಾರ, ಅಂದಾಜು ಶೇಕಡ 60ರಷ್ಟು ಸದಸ್ಯರು ಸದನಕ್ಕೆ ಹಾಜರಾಗಿದ್ದರು.

'ಸಮವಸ್ತ್ರ'ದ ಬದಲಿಗೆ 'ಗಣವೇಷ'

ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಿಂದಿಯಲ್ಲಿ ತಮ್ಮ ಭಾಷಣ ಓದಿದರು. ಶಿಕ್ಷಣಕ್ಕೆ ಸಂಬಂಧಿಸಿದ ವಿಷಯ ಪ್ರಸ್ತಾಪಿಸುವಾಗ, '46 ಲಕ್ಷ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಿಸಲಾಗಿದೆ' ಎಂಬುದನ್ನು ತಿಳಿಸಲು 'ಗಣವೇಷ ವಿತರಿಸಲಾಗಿದೆ' ಎಂದರು.

ಸುದ್ದಿ 2 ನಿಮಿಷ

ಸಚಿವ ಸುಧಾಕರ್ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಚಿಕ್ಕಬಳ್ಳಾಪುರದ ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆಂಜನೇಯ ರೆಡ್ಡಿ ವಿರುದ್ಧ ಮಾನಹಾನಿಕರ ಹೇಳಿಕೆ ನೀಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾರಿಗೊಳಿಸಿದ್ದ ಸಮನ್ಸ್ ಪ್ರಶ್ನಿಸಿ ಸುಧಾಕರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸುಧಾಕರ್ ಪರ ಹಾಜರಾಗಿದ್ದ ಹಿರಿಯ ವಕೀಲ ಉದಯ ಹೊಳ್ಳ, 'ಸಾರ್ವಜನಿಕ ಭಾಷಣದಲ್ಲಿ ಸುಧಾಕರ್ ಆಡಿದ್ದಾರೆ ಎನ್ನಲಾದ ಆಕ್ಷೇಪಾರ್ಹ ಮಾತುಗಳ ಬಗ್ಗೆ ಆಂಜನೇಯ ರೆಡ್ಡಿ ತಪ್ಪು ಕಲ್ಪನೆ ಹೊಂದಿದ್ದಾರೆ. ಭಾಷಣದಲ್ಲಿ ಎಲ್ಲಿಯೂ ಅವರ ಹೆಸರನ್ನು ಸುಧಾಕರ್ ಬಳಸಿಲ್ಲ. ಆದ್ದರಿಂದ, ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿದರು. ಮನವಿ ಮಾನ್ಯ ಮಾಡಿದ ನ್ಯಾಯಪೀಠ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಿ ವಿಚಾರಣೆ ವಿಚಾರಣೆ ಮುಂದೂಡಿದೆ.

ಕೇರಳ ಗಡಿಯಲ್ಲಿ ನಕ್ಸಲ್ ತಂಡ

ಮಡಿಕೇರಿ: ಕೊಡಗು ಜಿಲ್ಲೆಯ ಕೇರಳ ಗಡಿ ಆರಳಂ ಗ್ರಾಮದಲ್ಲಿ ಮಹಿಳೆ ಸೇರಿದಂತೆ ಶಸ್ತ್ರಸಜ್ಜಿತ ಐವರು ನಕ್ಸಲರು ಕಾಣಿಸಿಕೊಂಡಿದ್ದಾರೆ. ಮನೆಯೊಂದರಲ್ಲಿ ಊಟ ಮಾಡಿ ಅಕ್ಕಿ, ಸಾಬೂನು, ಉಪ್ಪು ತೆಗೆದುಕೊಂಡು ಹೋಗಿದ್ದಾರೆ.

ತಂಡದಲ್ಲಿ ನಕ್ಸಲರ ಕಬಿನಿ, ಬಾಣಾಸುರ ಗುಂಪುಗಳ ಸದಸ್ಯರು ಒಟ್ಟಾಗಿದ್ದರು ಎನ್ನಲಾಗಿದೆ, ಇದುವರೆಗೂ ಈ 2 ಗುಂಪುಗಳ ಸದಸ್ಯರು ಪ್ರತ್ಯೇಕವಾಗಿ ಕಾಣಿಸಿಕೊಳ್ಳುತ್ತಿದ್ದರು. 5 ತಿಂಗಳಿಂದ ಬಹಿರಂಗವಾಗಿ ಕಾಣಿಸಿಕೊಂಡಿರಲಿಲ್ಲ. ಆದರೆ ಏಕಾಏಕಿ 2 ಗುಂಪುಗಳ ಸದಸ್ಯರು ಒಟ್ಟಾಗಿ ಕಾಣಿಸಿಕೊಂಡಿದ್ದು ನಕ್ಸಲ್ ನಿಗ್ರಹ ಪಡೆಯ ಅಚ್ಚರಿಗೆ ಕಾರಣವಾಗಿದೆ.

ಈ ಬೆಳವಣಿಗೆಯಿಂದ ಎಚ್ಚೆತ್ತಿರುವ ಪೊಲೀಸರು ಕೊಡಗಿನ ಕುಟ್ಟ, ಆರ್ಜಿ ಸೇರಿದಂತೆ ಗಡಿ ಭಾಗಗಳಲ್ಲಿ ಕಾರ್ಯಾಚರಣೆ ಆರಂಭಿಸಿವೆ.

'3 ವಿಮಾನ ನಿಲ್ದಾಣಗಳಿಗೆ ನಾಮಕರಣ ಏಕಕಾಲಕ್ಕೆ ನಿರ್ಧಾರ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಶಿವಮೊಗ್ಗ, ಬೆಳಗಾವಿ ಮತ್ತು ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ನಾಮಕರಣ ಕುರಿತು ಏಕಕಾಲದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಿ.ಎಸ್. ಯಡಿಯೂರಪ್ಪ ಅವರ ಹೆಸರಿಡುವ ಜನರ ಬೇಡಿಕೆಯಿತ್ತು. ಯಡಿಯೂರಪ್ಪನವರೇ ಮತ್ತೆ ಬೇಡ ಎಂದಿದ್ದಾರೆ. ಶೀಘ್ರದಲ್ಲಿಯೇ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

'ಕಾಂಗ್ರೆಸ್‌ನದ್ದು ಟಿಪ್ಪು ಸಂಸ್ಕೃತಿ, ಬಿಜೆಪಿಯದ್ದು ನಾಲ್ವಡಿ ಕೃಷ್ಣರಾಜ ಒಡೆಯರ್ ಸಂಸ್ಕೃತಿ' ಎಂಬ ಬಿಜೆಪಿಯ ಸಿ.ಟಿ. ರವಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನನ್ನ ಪ್ರಕಾರ ನಮ್ಮದು ನರೇಂದ್ರ ಮೋದಿ ಸಂಸ್ಕೃತಿ. ಹಿಂದೆಂದೂ ಇಲ್ಲದಂತೆ ಭಾರತವನ್ನು ಸಶಕ್ತವಾಗಿ, ಶ್ರೀಮಂತವಾಗಿ ಕಟ್ಟುವಲ್ಲಿ ಮೋದಿ ಶ್ರಮಿಸುತ್ತಿದ್ದಾರೆ' ಎಂದು ಹೇಳಿದರು.

ಪ್ರಣಾಳಿಕೆ ಅಭಿಯಾನ ಸಮಿತಿ ಮೊದಲ ಸಭೆಯ ಬಳಿಕ ಸಚಿವ ಡಾ. ಕೆ. ಸುಧಾಕರ್ ಹೇಳಿಕೆ

ಜನರ ಆಶೋತ್ತರಗಳಿಗೆ ಸ್ಪಂದಿಸುವ ಪ್ರಣಾಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜನರ ಆಶೋತ್ತರಗಳಿಗೆ ತಕ್ಕಂತೆ ಪ್ರಣಾಳಿಕೆ ತಯಾರಾಗಲಿದೆ. ವಿರೋಧ ಪಕ್ಷಗಳಂತೆ ಜನರ ದಿಕ್ಕು ತಪ್ಪಿಸುವ ಪ್ರಣಾಳಿಕೆ ಮಾಡುವುದಿಲ್ಲ ಎಂದು ಬಿಜೆಪಿ ಪ್ರಣಾಳಿಕೆ ತಯಾರಿ ಸಲಹಾ ಅಭಿಯಾನದ ಸಂಚಾಲಕ ಮತ್ತು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಜನರ ಬದುಕು ಕಟ್ಟಿಕೊಡುವ ಯೋಜನೆಗಳಿರುವ ಪ್ರಣಾಳಿಕೆ ತಯಾರಾಗಲಿದೆ ಎಂದು ಅವರು ಪಕ್ಷದ ಕಚೇರಿಯಲ್ಲಿ ಪ್ರಣಾಳಿಕೆ ಅಭಿಯಾನ ಸಮಿತಿ ಮೊದಲ ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಪಕ್ಷದ ಪ್ರಣಾಳಿಕೆ ತಂಡವನ್ನು ಭೇಟಿಯಾಗಿ ಜಿಲ್ಲಾವಾರು, ತಾಲ್ಲೂಕುವಾರು ಯಾರೆಲ್ಲ ತಂಡದಲ್ಲಿರಬೇಕು ಎಂದು ಚರ್ಚಿಸಲಾಗಿದೆ. ಪಕ್ಷದ ಕಚೇರಿಯಲ್ಲಿ ಸೋಮವಾರ ಮತ್ತೊಂದು ಸಭೆ ನಡೆಯಲಿದ್ದು, ಎಲ್ಲಾ ಜಿಲ್ಲೆಗಳ 200ಕ್ಕೂ ಹೆಚ್ಚು ಮುಖಂಡರು ಸಭೆಯಲ್ಲಿ ಭಾಗವಹಿಸಿ ಸಲಹೆ ನೀಡಲಿದ್ದಾರೆ. ಪ್ರಣಾಳಿಕೆ ಶೀರ್ಷಿಕೆಯನ್ನು ಸದ್ಯವೇ ಅಂತಿಮವಾಗಲಿದೆ. ಮಹಿಳೆಯರು, ಯುವಜನತೆ, ವೃದ್ಧರು, ಅಂಗವಿಕಲರಿಗೆ ನೀಡಬೇಕಾದ ಕಾರ್ಯಕ್ರಮಗಳ ಬಗ್ಗೆ ನಿರ್ಧಾರವಾಗಲಿದೆ ಎಂದರು.

ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದರೆ ಉಚಿತ ವಿದ್ಯುತ್ ನೀಡುತ್ತೇವೆ ಎಂದು ಹೇಳುತ್ತಾರೆ. ಆದರೆ, ಹಿಂದಿನ ಕಾಂಗ್ರೆಸ್ ಆಡಳಿತದಲ್ಲಿ ಎಷ್ಟು ಗಂಟೆ ನಿರಂತರವಾಗಿ ವಿದ್ಯುತ್ ನೀಡಿದ್ದಾರೆ ಎಂಬುದನ್ನು ರೈತರಿಗೆ ಕೇಳಿದರೆ ಗೊತ್ತಾಗುತ್ತದೆ. ಬಿಜೆಪಿಯು ರಚನಾತ್ಮಕವಾಗಿ ಆಲೋಚಿಸಿ ಕಾರ್ಯಕ್ರಮ ನೀಡಿ, ಜನರ ಜೀವನ ಗುಣಮಟ್ಟ ಉತ್ತಮಪಡಿಸುವ ಗುರಿ ಹೊಂದಿದೆ ಎಂದು ಸುಧಾಕರ್ ಹೇಳಿದರು.

ಪ್ರಜಾ ಮತ ಜನತಂತ್ರದ ಹಬ್ಬ ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕಲ್ಯಾಣ ಕರ್ನಾಟಕ ಹಿನ್ನಡೆಗೆ ಖರ್ಗೆ ಕಾರಣ: ರವಿಕುಮಾರ್ ಆರೋಪ

ಕಲಬುರಗಿ: 'ಕಲ್ಯಾಣ ಕರ್ನಾಟಕ ಪ್ರದೇಶ ಹಿಂದುಳಿಯಲು ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕ್ ಖರ್ಗೆ ಮತ್ತು ಕಾಂಗ್ರೆಸ್ ನಾಯಕರೇ ಕಾರಣ. ಮಲ್ಲಿಕಾರ್ಜುನ ಖರ್ಗೆ ಅವರ ಕೊಡುಗೆ ಶೂನ್ಯ. ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರ್ಬಳಕೆ ಮಾಡಿದ್ದಾರೆ' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಆರೋಪಿಸಿದರು.

ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ದಶಕಗಳ ಕಾಲ ಸಚಿವರಾಗಿದ್ದರೂ ಖರ್ಗೆ ಅವರು ಅಭಿವೃದ್ಧಿಗೆ ಆದ್ಯತೆ ನೀಡಲಿಲ್ಲ. ಬಜೆಟ್‌ನಲ್ಲಿ ಅನುದಾನ ಮೀಸಲು ಇರದಿದ್ದರೂ ಬರುತ್ತಿದ್ದ ಹಣವನ್ನು ಅವರು ಏನು ಮಾಡಿದರು? ಚಿತ್ತಾಪುರ, ಗುರುಮಠಕಲ್ ಕ್ಷೇತ್ರ ಅಭಿವೃದ್ಧಿ ಆಗದಿರುವುದಕ್ಕೆ ಹೊಣೆ ಯಾರು' ಎಂದು ಪ್ರಶ್ನಿಸಿದರು.

'ಅಭಿವೃದ್ಧಿ ಕಾರ್ಯಕೈಗೊಳ್ಳದ ಕಾರಣ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಲಿಸಿದರು. ಲಂಗು ಲಗಾಮಿಲ್ಲದೆ ಮಾತನಾಡುವ ಪ್ರಿಯಾಂಕ್ ಖರ್ಗೆ ಅವರನ್ನೂ 25 ಸಾವಿರ ಮತಗಳ ಅಂತರದಿಂದ ಸೋಲಿಸುತ್ತೇವೆ' ಎಂದರು.

ಮುತಾಲಿಕ್ ಸ್ಪರ್ಧೆಗೆ ಶ್ರೀರಾಮ ಸೇನೆಯಲ್ಲೇ ವಿರೋಧ

ಉಡುಪಿ: 'ಪ್ರಮೋದ್ ಮುತಾಲಿಕ್ ಅವರು ಕಾರ್ಕಳ ಕ್ಷೇತ್ರದಿಂದ ಸ್ಪರ್ಧಿಸಲು ನಿರ್ಧರಿಸಿರುವುದು ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಸಿದೆ' ಎಂದು ಶ್ರೀರಾಮ ಸೇನೆ ಮಂಗಳೂರು ವಿಭಾಗದ ಅಧ್ಯಕ್ಷ ಮೋಹನ್ ಭಟ್ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುತಾಲಿಕ್ ರಾಜಕೀಯ ಪ್ರವೇಶಿಸುವ ನಿರ್ಧಾರದ ಹಿಂದೆ ಕಾರ್ಕಳದ ಉದ್ಯಮಿ ವಿವೇಕಾನಂದ ಶೆಣೈ ಅವರ ಕುಮ್ಮಕ್ಕಿದೆ. ವೈಯಕ್ತಿಕ ದ್ವೇಷಕ್ಕಾಗಿ ಮುತಾಲಿಕ ಅವರನ್ನು ರಾಜಕೀಯ ದಾಳವಾಗಿ ಬಳಸಿಕೊಳ್ಳಲಾಗುತ್ತಿದೆ' ಎಂದು ಆರೋಪಿಸಿದರು.

'ಕೆಲ ತಿಂಗಳುಗಳಿಂದ ಪ್ರಮೋದ್ ಮುತಾಲಿಕ್ ಅವರು ಸಂಘಟನೆಯ ಹಿರಿಯ ನಾಯಕರು, ಕಾರ್ಯಕರ್ತರನ್ನು ಕಡೆಗಣಿಸುತ್ತಿದ್ದಾರೆ. ಪ್ರವಾಸದ ಸಂದರ್ಭದಲ್ಲೂ ಜಿಲ್ಲಾಧ್ಯಕ್ಷರಿಗೆ ತಿಳಿಸುತ್ತಿಲ್ಲ. ಈ ನಡೆ ಕಾರ್ಯಕರ್ತರಿಗೆ ತೀವ್ರ ನೋವು ತಂದಿದೆ. ಚುನಾವಣೆಯಲ್ಲಿ ಸ್ಪರ್ಧಿಸುವ ನಿರ್ಧಾರದಿಂದ ಅವರು ಹಿಂದೆ ಸರಿಯಬೇಕು' ಎಂದರು. ಬಿಜೆಪಿ ಹಾಗೂ ಸಂಘ ಪರಿವಾರದ ಮುಖಂಡರು ಮುತಾಲಿಕ ಅವರೊಂದಿಗೆ ಚರ್ಚಿಸಿ ಸೂಕ್ತ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಇಂದು ಶಾ ಭೇಟಿ; ಆರು ಜಿಲ್ಲೆಗಳ ಕೋರ್ ಕಮಿಟಿ ಸಭೆಯಲ್ಲಿ ಭಾಗಿ

ಮಂಗಳೂರು: ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಮಂಗಳೂರು ಭೇಟಿ ಬಿಜೆಪಿ ಕಾರ್ಯಕರ್ತರು, ನಾಯಕರಲ್ಲಿ ಸಂಚಲನ ಮೂಡಿಸಿದೆ.

ಅಡಿಕೆ ವಹಿವಾಟು ನಡೆಸುವ ಕ್ಯಾಂಪ್ಕೊ ಸಂಸ್ಥೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಫೆ.11ರಂದು ಬರುವ ಅಮಿತ್ ಶಾ, ಅಲ್ಲಿಂದ ನೇರವಾಗಿ ಸಂಜೆ 5.20ಕ್ಕೆ ಮಂಗಳೂರಿಗೆ ಬರಲಿದ್ದಾರೆ. ನಗರದ ಹೊರವಲಯದ ಕೆಂಜಾರಿನಲ್ಲಿ ನಡೆಯುವ ವಿಶೇಷ ಸಭೆಯಲ್ಲಿ ಕೆಲಕಾಲ ಮಾತನಾಡಿ, ಅವರು ನಂತರ ಶ್ರೀದೇವಿ ಕಾಲೇಜಿನಲ್ಲಿ ನಡೆಯುವ 'ಮಂಗಳೂರು, ಶಿವಮೊಗ್ಗ ವಿಭಾಗಗಳ ಕೋರ್ ಕಮಿಟಿ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಬಿಜೆಪಿ ಭದ್ರ ನೆಲೆಯಾಗಿರುವ ಕರಾವಳಿಯಲ್ಲಿ ಇತ್ತೀಚೆಗೆ ನಡೆದಿರುವ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ, ನಂತರ ಕರಾವಳಿಯಲ್ಲಿನ ರಾಜಕೀಯ ಬೆಳವಣಿಗೆಗಳು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಮೇಲಿನ ಬೇಸರ, ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆಯ ಮಾನದಂಡ ಇಂತಹ ಅನೇಕ ಸಂಗತಿಗಳು ಕೋರ್ ಕಮಿಟಿ ಸಭೆಯಲ್ಲಿ ಚರ್ಚೆಯಾಗುವ ಸಾಧ್ಯತೆಗಳು ಇವೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

118 ಜನರಿಗೆ ಅವಕಾಶ: 'ಕೋರ್ ಕಮಿಟಿ ಸಭೆಯಲ್ಲಿ 118 ಜನರಿಗಷ್ಟೇ ಅವಕಾಶ ಕಲ್ಪಿಸಲಾಗಿದೆ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸುದರ್ಶನ್ ಎಂ. ತಿಳಿಸಿದ್ದಾರೆ.

ಬಾಯ್ಲರ್ ಸ್ಫೋಟ: ಕಾರ್ಮಿಕ ಸಾವು

ಬಾಗಲಕೋಟೆ: ಜಿಲ್ಲೆಯ ಮುಧೋಳ ಬಳಿಯ ನಿರಾಣಿ ಸಕ್ಕರೆ ಕಾರ್ಖಾನೆಯಲ್ಲಿ ಗುರುವಾರ ರಾತ್ರಿ ಬಾಯ್ಲರ್ ಸ್ಫೋಟಗೊಂಡು ಕಾರ್ಮಿಕರೊಬ್ಬರು ಮೃತಪಟ್ಟಿದ್ದು, ಆರು ಜನರಿಗೆ ಗಾಯಗಳಾಗಿವೆ.

ಜುಂಜರಕೊಪ್ಪ ಗಲ್ಲಿಯ ನಿವಾಸಿ ಗುರುನಾಥ ಹುಚ್ಚಣ್ಣವರ (29) ಮೃತರು. ಕೆಲಸ ಮಾಡುವಾಗ ಬ್ಲಾಯರ್ ಓಪನ್ ಆಗಿದ್ದು, ಗುರುನಾಥ ತೀವ್ರವಾಗಿ ಸುಟ್ಟ ಗಾಯಗಳಿಂದ ಮೃತರಾಗಿದ್ದಾರೆ. ನಾಗನೂರಿನ ರವಿ ಗೋಟೂರ, ಯಮನಪ್ಪ ದಡ್ಡಿ, ಶಂಕರ ಸಾಲಹಳ್ಳಿ, ಬೀರಪ್ಪ ಕಾನನ್ನವರ, ಸಂಗಾನಟ್ಟಿಯ ಆನಂದ ಇಟ್ನಾಳ, ಮಹಾದೇವ ಇಟ್ನಾಳ ಗಾಯಗೊಂಡಿದ್ದಾರೆ. ಮುಧೋಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಚೇರಿ ವೇಳೆ ಹೆಚ್ಚಿಸಿ, ಕರ್ತವ್ಯದ ದಿನಗಳನ್ನು ಕಡಿಮೆ ಮಾಡಿ– ನೌಕರರ ಸಂಘ

ಶೇ 31 ತುಟ್ಟಿಭತ್ಯೆ ವಿಲೀನ, ಶೇ 40 ಫಿಟ್‌ಮೆಂಟ್‌ಗೆ ಬೇಡಿಕೆ

ಬೆಂಗಳೂರು: ಸಮಾನ ಕೆಲಸಕ್ಕೆ ಸಮಾನ ವೇತನ, ಕಚೇರಿ ವೇಳೆ ಹೆಚ್ಚಿಸಿ, ಕರ್ತವ್ಯದ ದಿನಗಳನ್ನು ಕಡಿಮೆ ಮಾಡುವುದೂ ಸೇರಿ ಹಲವು ಸಲಹೆಗಳನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ರಾಜ್ಯ 7 ನೇ ವೇತನ ಆಯೋಗಕ್ಕೆ ನೀಡಿದೆ.

ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳು ಆಯೋಗದ ಅಧ್ಯಕ್ಷ ಸುಧಾಕರ್ ರಾವ್ ಅವರನ್ನು ಶುಕ್ರವಾರ ಭೇಟಿ ಮಾಡಿ ಆಯೋಗ ಬಿಡುಗಡೆ ಮಾಡಿದ್ದ ಪ್ರಶ್ನಾವಳಿಗಳಿಗೆ ಸಲಹೆಗಳ ರೂಪದಲ್ಲಿ ಉತ್ತರ ನೀಡಿದ್ದಾರೆ.

ಪ್ರಮುಖ ಸಲಹೆಗಳು:

- ಕಚೇರಿ ವೇಳೆ ಬೆಳಿಗ್ಗೆ 9.30 ರಿಂದ ಸಂಜೆ 6 ರವರೆಗೆ ಮಾಡಬೇಕು. ತಿಂಗಳ ಮೊದಲ ಮತ್ತು ಮೂರನೇ ಶನಿವಾರವೂ ರಜೆ ನೀಡಬೇಕು.
- 6ನೇ ವೇತನ ಆಯೋಗದಲ್ಲಿ ಪ್ರಸ್ತುತ ಮೂಲ ವೇತನಕ್ಕೆ ಚಾಲ್ತಿಯಲ್ಲಿರುವ ಶೇ 31 ರಷ್ಟು ತುಟ್ಟಿಭತ್ಯೆಯನ್ನು ವಿಲೀನಗೊಳಿಸಿ ಶೇ 40 ರಷ್ಟು ಫಿಟ್‌ಮೆಂಟ್ ಸೌಲಭ್ಯವನ್ನು 01.07.2022 ರಿಂದ ಅನ್ವಯವಾಗುವಂತೆ ಜಾರಿ ಮಾಡಬೇಕು.
- ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಬೇಕು, ಆಡಳಿತದಲ್ಲಿ ತಂತ್ರಜ್ಞಾನದ ಬಳಕೆ ಹೆಚ್ಚಿಸಬೇಕು, ನೌಕರರಲ್ಲಿ ದಕ್ಷತೆ ಮತ್ತು ನೈಪುಣ್ಯ, ಕ್ರಿಯಾಶೀಲತೆ ಹೆಚ್ಚಿಸಲು ತರಬೇತಿ ನೀಡಬೇಕು.
- ಈಗ ಇರುವ 25 ಮಾಸ್ಟರ್ ವೇತನ ಶ್ರೇಣಿ ಮತ್ತು 92 ವೇತನ ಹಂತಗಳನ್ನು ಮುಂದುವರೆಸುವುದು. ಹೊಸ ವೇತನ ಶ್ರೇಣಿಗಳನ್ನು 2022 ನೇ ಸಾಲಿನ ಬೆಲೆ ಸೂಚ್ಯಂಕದ 12 ತಿಂಗಳ ಸರಾಸರಿ ಆಧಾರದ ಮೇಲೆ ವೇತನ ಶ್ರೇಣಿಗಳ ದರಗಳನ್ನು ನಿಗದಿಪಡಿಸಬೇಕು.
- ಒಬ್ಬ ಸರ್ಕಾರಿ ನೌಕರನಿಗೆ ಸೇವಾ ವಧಿಯಲ್ಲಿ ಕನಿಷ್ಠ 3 ರಿಂದ 4 ಮುಂಬಡ್ತಿ ಅವಕಾಶಗಳು ಲಭ್ಯವಾಗುವಂತೆ ಶಿಫಾರಸು ಮಾಡುವುದು.
- ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ಲಭ್ಯವಿರುವ 2021ರ ಜನಸಂಖ್ಯೆಯ ಮಾಹಿತಿಯನ್ನು ಆಧರಿಸಿ ನಗರ ಮತ್ತು ಪಟ್ಟಣ ಪ್ರದೇಶಗಳನ್ನು ಪುನರ್‌ವರ್ಗೀಕರಿಸುವುದು, ಬಿಬಿಎಂಪಿ ವ್ಯಾಪ್ತಿಯನ್ನು ಬೆಂಗಳೂರು ನಗರ ಜಿಲ್ಲೆ ಗಡಿ ವ್ಯಾಪ್ತಿಗೆ ವಿಸ್ತರಿಸುವುದು, ಪ್ರಸ್ತುತ ಜೀವನ ನಿರ್ವಹಣೆ ಆಧಾರದ ಮೇಲೆ ಕೆಳಕಂಡ ದರದಲ್ಲಿ ಮನೆ ಬಾಡಿಗೆ ಭತ್ಯೆ ನೀಡಬೇಕು. 'ಎ' ವರ್ಗಕ್ಕೆ ಶೇ 24 ರಿಂದ ಶೇ 30, 'ಬಿ' ವರ್ಗಕ್ಕೆ ಶೇ 16 ರಿಂದ ಶೇ 20, 'ಸಿ' ವರ್ಗಕ್ಕೆ ಶೇ 8 ರಿಂದ ಶೇ 15 ಹೆಚ್ಚಿಸಬೇಕು.

ಸೇರಿದಂತೆ ಇತರ ಅಂಶಗಳು ಸಲಹೆಯಲ್ಲಿವೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳು ರಾಜ್ಯ 7 ನೇ ವೇತನ ಆಯೋಗದ ಅಧ್ಯಕ್ಷ ಸುಧಾಕರ್ ರಾವ್ ಅವರನ್ನು ಶುಕ್ರವಾರ ಭೇಟಿ ಮಾಡಿ ಆಯೋಗದ ಪ್ರಶ್ನಾವಳಿಗಳಿಗೆ ಉತ್ತರಗಳನ್ನು ಒಳಗೊಂಡ ವರದಿಯನ್ನು ಸಲ್ಲಿಸಿದರು.

ಪ್ರಜಾಧ್ವನಿ

ಕಲಬುರಗಿಯಲ್ಲಿ ಶರಣಬಸವೇಶ್ವರ ಜಾತ್ರಾ ಮೈದಾನದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್‌ನ ಪ್ರಜಾಧ್ವನಿ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ವಿಶ್ವ ಅರಣ್ಯ ದಿನದಂದೇ ಪ್ರಶಸ್ತಿ ವಿತರಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಅರಣ್ಯ ಇಲಾಖೆಯಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ ಅಧಿಕಾರಿ ಮತ್ತು ಸಿಬ್ಬಂದಿಗೆ ನೀಡುವ ಮುಖ್ಯಮಂತ್ರಿಗಳ ಪದಕ ಮತ್ತು ಪ್ರಶಸ್ತಿ ವಿತರಿಸುವಲ್ಲಿ ತಡ ಮಾಡುತ್ತಿರುವ ಬಗ್ಗೆ ಇಲಾಖೆಯ ಸಿಬ್ಬಂದಿಯಲ್ಲಿ ಅಸಮಾಧಾನ ವ್ಯಕ್ತವಾಗಿದೆ.

ಪೊಲೀಸ್ ಇಲಾಖೆ ಮಾದರಿಯಲ್ಲಿ ಕರ್ನಾಟಕ ಅರಣ್ಯ ಇಲಾಖೆಯಲ್ಲೂ ಅರಣ್ಯ ಸಂರಕ್ಷಣೆ, ಅಕ್ರಮ ಕಡಿತಲೆ, ವನ್ಯಜೀವಿ ಸಂರಕ್ಷಣೆ, ಅರಣ್ಯ ಪ್ರದೇಶವನ್ನು ಒತ್ತುವರಿದಾರರಿಂದ ತೆರವುಗೊಳಿಸುವುದು ಇತ್ಯಾದಿ ಕೆಲಸಗಳಲ್ಲಿ ಗಣನೀಯ ಸಾಧನೆ ಮಾಡಿದ ಅರ್ಹ 25 ಅಧಿಕಾರಿ ಮತ್ತು ಸಿಬ್ಬಂದಿಗೆ ಪ್ರತಿ ವರ್ಷ ಚಿನ್ನದ ಪದಕ ನೀಡಲು ತೀರ್ಮಾನಿಸಿ 2017 ರಲ್ಲೇ ಆದೇಶ ಹೊರಡಿಸಲಾಗಿತ್ತು. ಆದರೆ, ಈ ಆದೇಶ ಸರಿಯಾಗಿ ಪಾಲಿಸದೇ ಇರುವುದು ಅಸಮಾಧಾನಕ್ಕೆ ಕಾರಣವಾಗಿದೆ ಎಂದು ವನ್ಯಜೀವಿ ಸಂರಕ್ಷಣವಾದಿ ಗಿರಿಧರ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2017,2018 ಮತ್ತು 2019 ರ ಸಾಲಿನ ಪ್ರಶಸ್ತಿಗಳನ್ನು ಆದೇಶದ ಅನುಸಾರ ಆಯಾ ವರ್ಷ ಮಾರ್ಚ್ 21 ರಂದು ವಿತರಿಸುವ ಬದಲು ಎಲ್ಲ ಮೂರು ವರ್ಷಗಳ ಪ್ರಶಸ್ತಿಗಳನ್ನು ಒಟ್ಟಿಗೆ 2020 ರ ನವೆಂಬರ್‌ನಲ್ಲಿ ವಿತರಿಸಲಾಗಿದೆ. ಆದರೆ, 2020,2021 ಮತ್ತು 2022 ನೇ ಸಾಲಿನ ಪ್ರಶಸ್ತಿಗಳನ್ನು ಘೋಷಣೆ ಮಾಡಲಾಗಿದೆಯಾದರೂ ಇನ್ನೂ ವಿತರಿಸಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಅವರು ಹೇಳಿದ್ದಾರೆ.

ಇಲಾಖೆಯ ಮಟ್ಟದಿಂದ ಸರಿಯಾದ ಸಮಯಕ್ಕೆ ಶಿಫಾರಸುಗಳನ್ನು ಪ್ರತಿ ವರ್ಷ ಕಳುಹಿಸಲಾಗುತ್ತಿದ್ದರೂ ಪದಕಗಳನ್ನು ಸಕಾಲದಲ್ಲಿ ವಿತರಿಸಲು ಸರ್ಕಾರದ ಮಟ್ಟದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುತ್ತಿಲ್ಲ. ಇನ್ನಷ್ಟು ತಡ ಮಾಡದೇ ಆದೇಶ ಪ್ರಕಾರ ಮಾರ್ಚ್ 21 ರಂದು ವಿಶ್ವ ಅರಣ್ಯ ದಿನದಂದು 2020,2021 ಮತ್ತು 2022 ಸಾಲಿನ ಪ್ರಶಸ್ತಿಗಳನ್ನು ವಿತರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಮಗಳಿಗೆ ₹ 150 ಕೋಟಿ ಆಕಾಶದಿಂದ ಉದುರಿದೆಯೇ: ಸಿಬಿಐ ಪರ ವಕೀಲರ ಪ್ರಶ್ನೆ

ಡಿಕೆಶಿ ವಿರುದ್ಧದ ಸಿಬಿಐ ತನಿಖೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕನಕಪುರ ಶಾಸಕ ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆಗೆ ಹೈಕೋರ್ಟ್ ಇದೇ 24ರವರೆಗೆ ಮಧ್ಯಂತರ ತಡೆ ನೀಡಿ ಆದೇಶಿಸಿದೆ.

ಈ ಸಂಬಂಧ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ವಿಚಾರಣೆ ನಡೆಸುವ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಶಿವಕುಮಾರ್ ಪರ ಹಿರಿಯ ವಕೀಲ ಸಿ.ಎಚ್. ಜಾಧವ್, 'ಅರ್ಜಿದಾರರು ಸಾರ್ವಜನಿಕ ಸೇವಕರಿದ್ದು ಅವರ ಕುಟುಂಬದ ಸದಸ್ಯರನ್ನೂ ಈ ಪ್ರಕರಣದಲ್ಲಿ ಸಿಲುಕಿಸಿ ಕಿರುಕುಳ ನೀಡಲಾಗುತ್ತಿದೆ. ಶಿವಕುಮಾರ್ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿದ್ದಾರೆ. ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಹತ್ತಿರದಲ್ಲಿದೆ. ಅವರ ರಾಜಕೀಯ ಶತ್ರುಗಳು ರಾಜಕೀಯ ಪಿತೂರಿ ಹೆಣೆದಿದ್ದಾರೆ' ಎಂದು ದೂರಿದರು.

ಜಾಧವ್ ಅವರ ವಾದವನ್ನು ಬಲವಾಗಿ ಅಲ್ಲಗಳೆದ ಸಿಬಿಐ ಪರ ವಕೀಲ ಪಿ.ಪ್ರಸನ್ನಕುಮಾರ್, 'ಶಿವಕುಮಾರ್ ಮತ್ತು ಅವರ ಕುಟುಂಬದ ಸದಸ್ಯರು 2013ರ ಏಪ್ರಿಲ್ 1ರಿಂದ ಮತ್ತು 2018 ಏಪ್ರಿಲ್ 30ರ ಮಧ್ಯದ ತಪಾಸಣೆಯ ಅವಧಿಯಲ್ಲಿ ₹ 75 ಕೋಟಿ ಮೊತ್ತದ ಅಕ್ರಮ ಆಸ್ತಿಯನ್ನು ಹೊಂದಿದ್ದಾರೆ. ಅವರು ಯಾರೂ ಇದಕ್ಕೆ ಸರಿಯಾದ ದಾಖಲೆ ಕೊಡುತ್ತಿಲ್ಲ. ಪ್ರತಿಬಾರಿ ವಿಚಾರಣೆಗೆ ಕರೆದಾಗ ಹೊಸ ದಾಖಲೆ ಕೊಡುತ್ತಾರೆ. ಅವು ನಮಗೆ ಸಾವಿರ ಪ್ರಶ್ನೆಗಳನ್ನು ಹುಟ್ಟು ಹಾಕುತ್ತಿವೆ' ಎಂದರು.

'ಅರ್ಜಿದಾರರು ಈಗ ಪ್ರಕರಣದ ತನಿಖೆಗೆ ತಡೆ ಕೇಳುತ್ತಿಲ್ಲ. ಅವರು ಕೇಳುತ್ತಿರುವುದು ಕೇವಲ ಅವರ ಕುಟುಂಬದ ಸದಸ್ಯರನ್ನು ವಿಚಾರಣೆಗೆ ಕರೆಸಬಾರದು ಎಂದಷ್ಟೇ. ನಾವು ಅವರ ಕುಟುಂಬದ ಸದಸ್ಯರಿಗೆ ನೋಟಿಸ್ ನೀಡಿಯೇ ಇಲ್ಲ. ಕಾಲೇಜಿನ ಪ್ರಿನ್ಸಿಪಾಲರನ್ನು ಕರೆದು ವಿಚಾರಣೆ ನಡೆಸಿದರೆ ಅವರು ಹೇಗೆ ಕುಟುಂಬದ ಸದಸ್ಯರಾಗುತ್ತಾರೆ' ಎಂದು ಪ್ರಶ್ನಿಸಿದರು.

'ಶಿವಕುಮಾರ್ ಮಗಳಿಗೀಗ 21 ವರ್ಷ. ಆಕೆ ₹ 150 ಕೋಟಿಯ ಒಡತಿ. ಈಕೆಗೇನು ದುಡ್ಡು ಆಕಾಶದಿಂದ ಉದುರುತ್ತಾ' ಎಂದು ಪ್ರಶ್ನಿಸಿದ ಅವರು, 'ಶಿವಕುಮಾರ್ ಕುಟುಂಬದ ಸದಸ್ಯರನ್ನು ಇನ್ನು ಮುಂದೆ ವಿಚಾರಣೆಗೆ ಕರೆಯುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಡ್ತೀವಿ. ಆರೋಪಿಗಳನ್ನು ಬಂಧಿಸಬಾರದು ಅಂತಾ ಈ ಹಿಂದೆಯೇ ಏಕಸದಸ್ಯ ನ್ಯಾಯಪೀಠದ ಆದೇಶವಿದೆ. ಅರ್ಜಿದಾರರು ಈ ಮೊದಲೇ ತಡೆ ಕೋರಿದ್ದ ಮನವಿಯನ್ನು ಹೈಕೋರ್ಟ್ ಆರಂಭದಲ್ಲೇ ತಿರಸ್ಕರಿಸಿದೆ. ತನಿಖೆ ಶುರುವಾಗಿ ಎರಡೂವರೆ ವರ್ಷ ಕಳೆದಿದೆ. ಈಗಲೂ ಕೂಡಾ ತಡೆ ಕೋರಿ ಯಾವುದೇ ಮಧ್ಯಂತರ ಅರ್ಜಿ ಸಲ್ಲಿಕೆಯಾಗಿಲ್ಲ. ಆದರೂ, ತಾವು ತಡೆ ಕೊಡುತ್ತಿದ್ದೀರಿ. ಕೊಡಬೇಡಿ, ತನಿಖೆ ಈಗ ಕೊನೆಯ ಹಂತದಲ್ಲಿದೆ. ನಾವು ಇನ್ನು ಆರು ತಿಂಗಳಲ್ಲಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸುತ್ತೇವೆ' ಎಂದರು.

ಸಿಬಿಐನ ವಾದ ಲೆಕ್ಕಿಸದ ನ್ಯಾಯಪೀಠವು, 'ಇದರಲ್ಲಿ ಸೂಕ್ಷ್ಮವಾದ ಕಾನೂನಾತ್ಮಕ ಅಂಶಗಳಿವೆ' ಎಂದು ಪ್ರತಿಪಾದಿಸಿತು. 'ತನಿಖೆಯ ಪ್ರಗತಿ ವರದಿಯನ್ನು ಕೋರ್ಟ್‌ಗೆ ಸಲ್ಲಿಸಿ' ಎಂದು ಸೂಚಿಸಿ ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿತು.

ಪ್ರಕರಣವೇನು?: 'ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13 (2), 13 (1)(ಇ) ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿದೆ. 'ಸಿಬಿಐ ದಾಖಲಿಸಿರುವ ಈ ಎಫ್‌ಐಆರ್ ಕಾನೂನು ಬಾಹಿರವಾಗಿದ್ದು ಇದನ್ನು ರದ್ದುಗೊಳಿಸಬೇಕು' ಎಂದು ಕೋರಿ ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ನೇಮಕ ಅಕ್ರಮ: ಮತ್ತೆ 8 ಸಹಶಿಕ್ಷಕರ ಸೆರೆ

ಒಂದನೇ ಪುಟದಿಂದ...

'ಹಲವು ಸಹಶಿಕ್ಷಕರು ಹಣ ನೀಡಿ ಕೆಲಸ ಪಡೆದುಕೊಂಡಿದ್ದಾರೆ. ಅವರೆಲ್ಲರಿಗೂ ವಿಚಾರಣೆಗಾಗಿ ನೋಟಿಸ್ ನೀಡಲಾಗಿತ್ತು. ಬಂಧನ ಭೀತಿಯಲ್ಲಿ ವಿಚಾರಣೆಗೆ ಗೈರಾಗಿರುವ ಹಲವರು ತಲೆಮರೆಸಿಕೊಂಡಿದ್ದಾರೆ. ಆರೋಪಿಗಳ ಪತ್ತೆಗಾಗಿ ರಾಜ್ಯದ ಹಲವೆಡೆ ಗುರುವಾರ ವಿಶೇಷ ಕಾರ್ಯಾಚರಣೆ ನಡೆಸಲಾಯಿತು' ಎಂದು ಸಿಐಡಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು. 'ಶಾಲೆ ಹಾಗೂ ಮನೆಗಳಲ್ಲಿ 8 ಸಹಶಿಕ್ಷಕರನ್ನು ಬಂಧಿಸಲಾಗಿದೆ. ಸದ್ಯ ಅವರೆಲ್ಲ ನ್ಯಾಯಾಂಗ ಬಂಧನದಲ್ಲಿದ್ದಾರೆ. ಉಳಿದ ಆರೋಪಿಗಳ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಮಾಜಿ ಸಚಿವ ಟಿ.ಜಾನ್ ನಿಧನ



ಬೆಂಗಳೂರು: ಮಾಜಿ ಸಚಿವ ಟಿ.ಜಾನ್ (92) ಅವರು ಇಂದಿರಾನಗರದ ತಮ್ಮ ನಿವಾಸದಲ್ಲಿ ಶುಕ್ರವಾರ ನಿಧನರಾದರು.

ಜಾನ್ ಅವರಿಗೆ ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಂಗಳೂರಿನಲ್ಲೇ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ. ಕೇರಳದಲ್ಲಿ ಜನಿಸಿದ್ದ ಇವರು, ಮಡಿಕೇರಿಯಲ್ಲಿ ನೆಲೆಸಿದ್ದರು. ಬೆಂಗಳೂರಿನಲ್ಲಿ ಟಿ.ಜಾನ್ ಶಿಕ್ಷಣ ಸಂಸ್ಥೆ ಕಟ್ಟಿದ ಬಳಿಕ ಬೆಂಗಳೂರಿನಲ್ಲೇ ನೆಲೆಸಿದ್ದರು. ಕಾಂಗ್ರೆಸ್‌ನಿಂದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಜಾನ್ ಅವರು ಎಸ್.ಎಂ.ಕೃಷ್ಣ ನೇತೃತ್ವದ ಸಂಪುಟದಲ್ಲಿ ಮೂಲಸೌಕರ್ಯ ಮತ್ತು ವಿಮಾನ ಯಾನ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಗುಜರಾತ್‌ನ ಕಛ್ ಜಿಲ್ಲೆಯಲ್ಲಿ 2001ರಲ್ಲಿ ಭೂಕಂಪ ಸಂಭವಿಸಿ, ಅಪಾರ ಹಾನಿಯಾಗಿತ್ತು. ಆಗ 'ಅದು ಏಸುಕ್ರಿಸ್ತ ಕೊಟ್ಟ ಶಾಪ' ಎಂಬರ್ಥದ ಹೇಳಿಕೆ ನೀಡಿದ್ದರು. ಈ ಹೇಳಿಕೆ ತೀವ್ರ ವಿವಾದಕ್ಕೆ ಕಾರಣವಾಗಿತ್ತು. ಅದೇ ದಿನವೇ, ಜಾನ್ ಅವರ ರಾಜೀನಾಮೆಯನ್ನು ಕೃಷ್ಣ ಪಡೆದಿದ್ದರು. ಕೆಲ ವರ್ಷಗಳ ಹಿಂದೆ ಕೆಪಿಸಿಸಿ ಸದಸ್ಯ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸಿದ್ದ ಅವರು ರಾಜಕಾರಣದಿಂದ ದೂರ ಉಳಿದಿದ್ದರು.

ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ನೇತೃತ್ವದಲ್ಲಿ ಅರಣ್ಯವಾಸಿಗಳ ಧರಣಿ

69,733 ಅರ್ಜಿ ತಿರಸ್ಕೃತ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರಣ್ಯ ಹಕ್ಕು ಕಾಯ್ದೆಯಡಿ ವಾಸ್ತವ್ಯ ಹಾಗೂ ಸಾಗುವಳಿ ಮಂಜೂರಿಗಾಗಿ ಸಲ್ಲಿಸಿದ್ದ 89,167 ಅರ್ಜಿಗಳ ಪೈಕಿ 69,733 ಅರ್ಜಿಗಳು ತಿರಸ್ಕೃತಗೊಂಡಿದ್ದು, ಇದಕ್ಕೆ ರಾಜ್ಯ ಸರ್ಕಾರದ ವೈಫಲ್ಯ ಕಾರಣ' ಎಂದು ಆರೋಪಿಸಿ ಅರಣ್ಯ ವಾಸಿಗಳು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಉತ್ತರ ಕನ್ನಡ ಜಿಲ್ಲೆಯ ಅರಣ್ಯವಾಸಿಗಳು, ಬೇಡಿಕೆ ಈಡೇರಿಕೆಗಾಗಿ ಘೋಷಣಾ ಫಲಕ ಪ್ರದರ್ಶಿಸಿದರು. ಕಾಂಗ್ರೆಸ್ ನಾಯಕಿ ಮಾರ್ಗರೇಟ್ ಆಳ್ವ ಪ್ರತಿಭಟನೆಗೆ ಬೆಂಬಲ ನೀಡಿದರು.

'ಅರಣ್ಯ ಪ್ರದೇಶ ಹಾಗೂ ಅರಣ್ಯ ಅವಲಂಬಿತ ವಾಸಿಗಳ ಸಂಖ್ಯೆಯಲ್ಲಿ ಕರ್ನಾಟಕ 5ನೇ ಸ್ಥಾನದಲ್ಲಿದೆ. ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನದ ಪ್ರಗತಿಯಲ್ಲಿ ಮಾತ್ರ 16ನೇ ಸ್ಥಾನದಲ್ಲಿರುವುದು ವಿಷಾದನೀಯ. ಸರ್ಕಾರದ ನಿರ್ಲಕ್ಷ್ಯದಿಂದ ಅರಣ್ಯವಾಸಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ' ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

'ಅರಣ್ಯ ಹಕ್ಕು ಕಾಯ್ದೆ ಜಾರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಅರಣ್ಯ ವಾಸಿಗಳ ಪರ ಸುಪ್ರೀಂಕೋರ್ಟ್‌ಗೆ ತಿದ್ದುಪಡಿ ಪ್ರಮಾಣಪತ್ರ ಸಲ್ಲಿಸಬೇಕು. ಸಾಂದರ್ಭಿಕ ದಾಖಲೆಗಳ ಆಧಾರದಲ್ಲಿ ಮಂಜೂರಾತಿ ನೀಡಬೇಕು' ಎಂದು ಆಗ್ರಹಿಸಿದರು.

'ಅರಣ್ಯ ವಾಸಿಗಳ ಮೇಲಿನ ದೌರ್ಜನ್ಯ ನಿಲ್ಲಬೇಕು. ಕಿರುಕುಳ ನೀಡುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಅರಣ್ಯವಾಸಿಗಳಿಗೆ ವಿಮೆ ಹಾಗೂ ಬೆಳೆ ಸಾಲ ನೀಡಬೇಕು. ಅತಿಕ್ರಮಣ ಮಂಜೂರಿಗೆ ಅರ್ಹರಿರುವ 2,513 ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಬೇಕು. ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು. ಅರಣ್ಯವಾಸಿಗಳ ಮೇಲೆ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ವಿಶೇಷ ತನಿಖೆಗೆ ಒತ್ತಾಯ: 'ಕಾಮಗಾರಿ ನೆಪದಲ್ಲಿ 5 ವರ್ಷಗಳಲ್ಲಿ ಲಕ್ಷಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗಿದ್ದು, ಈ ಬಗ್ಗೆ ವಿಶೇಷ ತನಿಖೆ ನಡೆಸಬೇಕು. ಶಿವಮೊಗ್ಗ ಜಿಲ್ಲೆಯ ಶರಾವತಿ ವನ್ಯಜೀವಿ ಅಭಯಾರಣ್ಯಕ್ಕೆ 20,000 ಹೆಕ್ಟೇರ್ ಹೆಚ್ಚುವರಿ ಅರಣ್ಯ ಪ್ರದೇಶ ಸೇರಿಸಲಾಗಿದ್ದು, ಈ ಆದೇಶವನ್ನು ಹಿಂಪಡೆಯಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಅರಣ್ಯ ವಾಸಿಗಳ 'ಬೆಂಗಳೂರು ಚಲೊ' ಪ್ರತಿಭಟನೆಯನ್ನು ಬೆಂಬಲಿಸಿ ಮಾರ್ಗರೇಟ್ ಆಳ್ವ, ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ ಎ.ರವೀಂದ್ರನಾಯ್ಕ ಅವರು ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

ಲೋಕಾಯುಕ್ತ ಬಲೆಗೆ ಪಿಡಿಒ, ಕಂಪ್ಯೂಟರ್ ಆಪರೇಟರ್

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಅಡಿ ಕೆಲಸ ಮಾಡಿದ್ದ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರ ಕುಟುಂಬಕ್ಕೆ ಕೂಲಿ ನೀಡಲು ಲಂಚಕ್ಕೆ ಬೇಡಿಕೆ ಇರಿಸಿ ಹಣ ಪಡೆಯುತ್ತಿದ್ದ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಜಾನಕಲ್ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ (ಪಿಡಿಒ) ಹಾಗೂ ಕಂಪ್ಯೂಟರ್ ಆಪರೇಟರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಪಿಡಿಒ ಕೆ. ಶ್ರೀನಿವಾಸ್ ಹಾಗೂ ಕಂಪ್ಯೂಟರ್ ಆಪರೇಟರ್ ಟಿ. ಚನ್ನಬಸಪ್ಪ ಸಿಕ್ಕಿಬಿದ್ದವರು.

ಶ್ರೀನಿವಾಸ್

ಚನ್ನಬಸಪ್ಪ

ಜಾನಕಲ್ ಗ್ರಾಮ ಪಂಚಾಯಿತಿ ಸದಸ್ಯರಾಗಿರುವ ಭೀಮಪ್ಪ ಅವರಿಂದ ಗುರುವಾರ ರಾತ್ರಿ ₹ 4,000 ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಲಂಚದ ರೂಪದಲ್ಲಿ ಪಡೆದ ಹಣವನ್ನು ಜಪ್ತಿ ಮಾಡಲಾಗಿದೆ.

ನರೇಗಾ ಅಡಿ ನಡೆದ ಕಾಮ ಗಾರಿಯಲ್ಲಿ ಭೀಮಪ್ಪ ಅವರ ಕುಟುಂಬದ ಸದಸ್ಯರು ಕೆಲಸ ಮಾಡಿದ್ದರು. ಕೂಲಿಯ ಹಣದಲ್ಲಿ ಅರ್ಧ ಬಿಡುಗಡೆ ಮಾಡಿದ ಶ್ರೀನಿವಾಸ್, ಉಳಿದ ಮೊತ್ತ ಬಿಡುಗಡೆ ಮಾಡಲು ಲಂಚ ನೀಡುವಂತೆ ಪೀಡಿಸುತ್ತಿದ್ದರು. ಮೂಡ್ಲಭೋವಿಹಟ್ಟಿಯ ಸರ್ಕಾರಿ ಶಾಲೆಯ ಕಾಂಪೌಂಡ್ ನಿರ್ಮಾಣದ ಕಾಮಗಾರಿಯ ವಿಚಾರದಲ್ಲೂ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಭೀಮಪ್ಪ ಅವರು ಈ ಕುರಿತು ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದರು.

ಲೈಂಗಿಕ ದೌರ್ಜನ್ಯ: ಅಪರಾಧಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿನಾಲ್ಕು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಿ ಶ್ರೀನಿವಾಸ್ (41) ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ನಗರದ 3ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಸುಬ್ರಮಣ್ಯಪುರ ಠಾಣೆಯಲ್ಲಿ 2020ರ ಜುಲೈ 7ರಂದು ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಇಫ್ರತ್ ಜಹಾನ್ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಗೀತಾ ಗೊರವರ ವಾದಿಸಿದ್ದರು.

'ಬಾಲಕಿಯು ಪೋಷಕರ ಜೊತೆ ಉತ್ತರಹಳ್ಳಿಯಲ್ಲಿ ವಾಸವಿದ್ದಳು. ಪೋಷಕರು ಕೆಲಸಕ್ಕೆ ಹೋದಾಗ, ಒಬ್ಬಳೇ ಮನೆಯಲ್ಲಿರುತ್ತಿದ್ದಳು. ಇದೇ ವೇಳೆಯೇ ಮನೆಗೆ ನುಗ್ಗಿದ್ದ ಆರೋಪಿ ಅತ್ಯಾಚಾರ ಎಸಗಿದ್ದ. ವಿಷಯವನ್ನು ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಯೊಡ್ಡಿದ್ದ' ಎಂದು ಪೊಲೀಸರು ಹೇಳಿದರು.

'ಹೆದರಿದ್ದ ಬಾಲಕಿ ವಿಷಯವನ್ನು ಮುಚ್ಚಿಟ್ಟಿದ್ದಳು. ಇದರ ನಡುವೆಯೇ ಎರಡನೇ ಬಾರಿ ಮನೆಗೆ ನುಗ್ಗಿದ್ದ ಆರೋಪಿ, ಬಾಲಕಿ ಮೇಲೆ ಪುನಃ ಅತ್ಯಾಚಾರ ಎಸಗಿದ್ದ. ನೊಂದ ಬಾಲಕಿ ಪೋಷಕರಿಗೆ ವಿಷಯ ತಿಳಿಸಿದ್ದಳು. ಬಾಲಕಿ ಪರವಾಗಿ ತಾಯಿ ದೂರು ನೀಡಿದ್ದರು.'

'ಅತ್ಯಾಚಾರ (ಐಪಿಸಿ 376) ಹಾಗೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಗಿರಿನಗರದ ಈರಣ್ಣ ಗುಡ್ಡೆ ನಿವಾಸಿ ಶ್ರೀನಿವಾಸ್‌ನನ್ನು ಬಂಧಿಸಿದ್ದ ಅಂದಿನ ಇನ್‌ಸ್ಪೆಕ್ಟರ್ ನರಸಿಂಹಮೂರ್ತಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ಬೈಜೂಸ್: 'ಸ್ವ ಮೌಲ್ಯಮಾಪನ' ಸಾಧನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ತಯಾರಿಗೆ ಆಕಾಶ್ ಬೈಜೂಸ್ ಸಂಸ್ಥೆಯು ನಗರದಲ್ಲಿ ಶುಕ್ರವಾರ 'ಸ್ವ ಮೌಲ್ಯಮಾಪನ' ಸಾಧನವನ್ನು ಬಿಡುಗಡೆ ಮಾಡಿತು.

ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಭಿಷೇಕ ಮಹೇಶ್ವರಿ, 'ಹತ್ತು ಮತ್ತು ಹನ್ನೊಂದನೆ ತರಗತಿ ವಿದ್ಯಾರ್ಥಿಗಳಿಗೆ ಭೌತ ವಿಜ್ಞಾನ, ರಸಾಯನ ವಿಜ್ಞಾನ, ಸಸ್ಯ ವಿಜ್ಞಾನ ಮತ್ತು ಪ್ರಾಣಿ ವಿಜ್ಞಾನ ವಿಷಯಗಳಲ್ಲಿ ಪರಿಣತರಿಂದ ರೂಪಿಸಲಾದ ಸೂಕ್ತ ಪಠ್ಯವನ್ನು ಒದಗಿಸಲಾಗುತ್ತದೆ. ಇದು ನೀಟ್ ಆಕಾಂಕ್ಷಿಗಳಿಗೆ ಯಶಸ್ಸು ಸಾಧಿಸಲು ಸಹಕಾರಿಯಾಗಲಿದೆ. ನೀಟ್ ಮಾದರಿಯಂತೆ ಪ್ರತಿ ಅಧ್ಯಾಯದ ಬಳಿಕ ವಿವಿಧ ರಸಪ್ರಶ್ನೆಗಳನ್ನು ನೀಡಲಾಗುತ್ತದೆ. ಇದು ವಿದ್ಯಾರ್ಥಿಗಳ ಪ್ರಾವೀಣ್ಯದ ಮಟ್ಟ ಹೆಚ್ಚಿಸುತ್ತದೆ ಎಂದರು. 'ಇತ್ತೀಚೆಗೆ ಪ್ರಕಟವಾದ ಜೆಇಇ ಮೇನ್ಸ್‌ನಲ್ಲಿ ಬೆಂಗಳೂರಿನ ಆಕಾಶ್ ಬೈಜೂಸ್‌ನ 27 ವಿದ್ಯಾರ್ಥಿಗಳು ಶೇ 99ರಷ್ಟು ಅಂಕ ಗಳಿಸಿದ್ದಾರೆ. ನಮ್ಮ ಶೈಕ್ಷಣಿಕ ಮತ್ತು ಅಧ್ಯಯನ ಸಾಮಗ್ರಿಗಳು ಹಲವು ವರ್ಷಗಳಿಂದ ವೈದ್ಯರು ಹಾಗೂ ಎಂಜಿನಿಯರ್‌ಗಳನ್ನು ಸೃಷ್ಟಿಸುತ್ತಿದೆ. ಸುಧಾರಿತ ಶೈಕ್ಷಣಿಕ ವಿತರಣಾ ವಿಧಾನ ಬಳಸಿಅಧ್ಯಯನ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿದ್ದೇವೆ. ನೀಟ್‌ನಲ್ಲಿ ಹೆಚ್ಚಿನ ಅಂಕ ಪಡೆಯಲು ಸ್ವಯಂ ಮೌಲ್ಯಮಾಪನ ಸಾಧನ ಸಹಕಾರಿ' ಎಂದರು.

ರಾಜ್ಯ ಯಕ್ಷಗಾನ ಸಮ್ಮೇಳನ ಇಂದಿನಿಂದ

ಉಡುಪಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಯಕ್ಷಗಾನ ಅಕಾಡೆಮಿ ಹಾಗೂ ಉಡುಪಿ ಜಿಲ್ಲಾ ಆಡಳಿತದ ಸಹಯೋಗದಲ್ಲಿ ರಾಜ್ಯಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನ ಇಲ್ಲಿ ಫೆ.11 ಮತ್ತು 12ರಂದು ನಡೆಯಲಿದೆ.

ಎಂಜಿಎಂ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮಲ್ಪೆ ಶಂಕರ ನಾರಾಯಣ ಸಾಮಗ ವೇದಿಕೆ, ಕೆರೆಮನೆ ಶಿವರಾಮ ಹೆಗಡೆ ವೇದಿಕೆ ಹಾಗೂ ಅಳಿಕೆ ರಾಮಯ್ಯ ರೈ ವೇದಿಕೆ ನಿರ್ಮಿಸಲಾಗಿದೆ.

11ರ ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಅಂಗಾರ ವಾಣಿಜ್ಯ ಮಳಿಗೆಗಳ ಉದ್ಘಾಟಿಸಲಿದ್ದಾರೆ. ಸಚಿವ ವಿ.ಸುನಿಲ್ ಕುಮಾರ್ ಧ್ವಜಾರೋಹಣ ನೆರ ವೇರಿಸುವರು.

ಯಕ್ಷಗಾನ ಕ್ಷೇತ್ರದ 75 ಸಾಧಕರನ್ನು ಸನ್ಮಾನಿಸಲಾಗುತ್ತಿದೆ. ಯಕ್ಷಗಾನ ಪರಿಕರಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಪ್ರದರ್ಶನ ಮಳಿಗೆಗಳನ್ನು ತೆರೆಯಲಾಗಿದೆ. ಒಟ್ಟು 6 ಗೋಷ್ಠಿಗಳು ನಡೆಯಲಿವೆ.

ಅಭ್ಯರ್ಥಿ ಒಳಉಡುಪಿನಲ್ಲಿ 5 ಕೆ.ಜಿ ತೂಕದ ಬಟ್ಟು!

ಕಲಬುರಗಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ಕೆಕೆಆರ್‌ಟಿಸಿ) ಚಾಲಕ ಕಂ ನಿರ್ವಾಹಕ ಹುದ್ದೆಗಳ ನೇಮಕಾತಿಗೆ ದೇಹದಾರ್ಢ್ಯ ಪರೀಕ್ಷೆಯಲ್ಲಿ ನಿಗದಿತ ತೂಕ ತೋರಿಸಲು ಒಳ ಉಡುಪುಗಳಲ್ಲಿ ತೂಕದ ಬಟ್ಟು, ಸೈಕಲ್ ಚೈನ್ ಇಟ್ಟುಕೊಂಡು ಬಂದಿದ್ದು, ಪತ್ತೆಯಾಗಿದೆ. ಐವರು ಅಭ್ಯರ್ಥಿಗಳನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ.

ಒಟ್ಟು 1,619 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. 39 ಸಾವಿರ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ದೇಹದಾರ್ಢ್ಯ ಪರೀಕ್ಷೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಪರೀಕ್ಷೆಯಲ್ಲಿ ಉತ್ತೀರ್ಣವಾಗಲು ಕಡಿಮೆ ತೂಕದ ಅಭ್ಯರ್ಥಿಯೊಬ್ಬ 5 ಕೆ.ಜಿ ತೂಕದ ಬಟ್ಟು ಇಟ್ಟುಕೊಂಡಿದ್ದ. ಕೆಲವರು ತೊಡೆ, ಸೊಂಟಕ್ಕೆ ಕಬ್ಬಿಣ ತುಂಡು, ಸೈಕಲ್ ಚೈನ್ ಕಟ್ಟಿಕೊಂಡಿದ್ದರು. ಅವರ ನಡಿಗೆಯಿಂದ ಶಂಕೆ ಮೂಡಿ ಪರಿಶೀಲಿಸಿದಾಗ ಸಿಕ್ಕಿಬಿದ್ದರು' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಂ.ರಾಚಪ್ಪ 'ಪ್ರಜಾವಾಣಿ'ಗೆ ತಿಳಿಸಿದರು..

ಸಿಗದ ಸೇವೆ: ಆರೋಗ್ಯ ಕೇಂದ್ರದ ಆವರಣದಲ್ಲೇ ಹೆರಿಗೆ

ಸಿದ್ದಾಪುರ: ಸಿಬ್ಬಂದಿ ಇಲ್ಲದೆ, ಸೌಲಭ್ಯವೂ ಸಿಗದೆ ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲೇ ಗರ್ಭಿಣಿಯೊಬ್ಬರು ಶುಕ್ರವಾರ ಶಿಶುವಿಗೆ ಜನ್ಮ ನೀಡಿದ್ದಾರೆ.

ಗುಹ್ಯ ಗ್ರಾಮದ ನಿವಾಸಿ ಮೂಕಂಡ ಸುಬ್ರಮಣಿ ಎಂಬುವರ ಕಾಫಿ ತೋಟದ ಲೈನ್ ಮನೆಯ ನಿವಾಸಿ, ಕಾರ್ಮಿಕ ಮಹಿಳೆ ಸಂಗೀತಾ ಅವರಿಗೆ ನಸುಕಿನಲ್ಲಿ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಕೇಂದ್ರಕ್ಕೆ ಬೆಳಿಗ್ಗೆ 6 ಗಂಟೆ ವೇಳೆಗೆ ಅವರನ್ನು ಕರೆತಂದಾಗ ಬಾಗಿಲು ಮುಚ್ಚಿತ್ತು. ಹಲವು ಬಾರಿ ಬಾಗಿಲು ಬಡಿದರೂ ಯಾರೂ ಬಂದಿರಲಿಲ್ಲ.

'ಅರ್ಧ ತಾಸು ಕಾದು, ಕೇಂದ್ರದ ಹಿಂಬದಿ ಬಾಗಿಲಿನಿಂದ ಹೋದಾಗ ಕಾವಲುಗಾರ ಕಂಡರು. ಅವರಿಗೆ ಮಾಹಿತಿ ನೀಡಿ, ಸಿಬ್ಬಂದಿ ಕರೆಯಲು ಕೋರಿದರೂ ಸ್ಪಂದಿಸಲಿಲ್ಲ. ಕೇಂದ್ರದ ಮುಂಬಾಗಿಲಲ್ಲೇ ಹೆರಿಗೆಯಾಯಿತು. ರಕ್ತದ ಮಡುವಿನಲ್ಲಿದ್ದ ಇಬ್ಬರನ್ನೂ ನಂತರ ಸಿಬ್ಬಂದಿ ದಾಖಲಿಸಿಕೊಂಡರು' ಎಂದು ಸುಬ್ರಮಣಿ ದೂರಿದ್ದಾರೆ.

'ಸಾಮಾನ್ಯವಾಗಿ ರಾತ್ರಿ ವೇಳೆ ಮುಂಬಾಗಿಲು ಮುಚ್ಚಿರುತ್ತದೆ. ಬದಿಯ ಬಾಗಿಲು ತೆರೆದಿರುತ್ತದೆ. ಈ ಮಾಹಿತಿ ಇಲ್ಲದೇ ಗರ್ಭಿಣಿ ಕಾರಿನಲ್ಲೇ ಕುಳಿತಿದ್ದರು. ಹೆರಿಗೆ ಬಳಿಕ ಆಸ್ಪತ್ರೆ ಸಿಬ್ಬಂದಿಯೇ ತಾಯಿ–ಮಗುವನ್ನು ಆರೈಕೆ ಮಾಡಿದ್ದಾರೆ. ಈ ಬಗ್ಗೆ ಜಿಲ್ಲಾ ಆರೋಗ್ಯ ವೈದ್ಯಾಧಿಕಾರಿಗೆ ವರದಿ ಸಲ್ಲಿಸಲಾಗುವುದು' ಎಂದು ವಿರಾಜಪೇಟೆ ತಾಲ್ಲೂಕು ಆರೋಗ್ಯ ವೈದ್ಯಾಧಿಕಾರಿ ಡಾ.ಯತಿರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಹಸುಳೆ ಸಾವು: ಶುಶ್ರೂಷಕ ಅಮಾನತು

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): 'ಸಕಾಲಕ್ಕೆ ಆಂಬುಲೆನ್ಸ್ ಸೇವೆ ಸಿಗದೇ ಹಸುಳೆ ಮೃತಪಟ್ಟ ಪ್ರಕರಣದಲ್ಲಿ ಆಂಬುಲೆನ್ಸ್ ಶುಶ್ರೂಷಕ ಮಹೇಶ್ ಅವರನ್ನು ಅಮಾನತು ಮಾಡಲಾಗಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಚ್.ಪ್ರಸಾದ್ ತಿಳಿಸಿದರು.

'ಆಂಬುಲೆನ್ಸ್‌ನಲ್ಲಿ ಆಮ್ಲಜನಕ ಲಭ್ಯವಿದ್ದರೂ ಅವರು ಸ್ಪಂದಿಸಿರಲಿಲ್ಲ. ಕರ್ತವ್ಯಲೋಪದ ಕುರಿತು ಆಂಬುಲೆನ್ಸ್ ಸೇವೆ ನೀಡುವ ಸಂಸ್ಥೆಗೆ ಮಾಹಿತಿ ನೀಡಿ ಅಮಾನತ್ತು ಮಾಡಲಾಗಿದೆ. ಹಾಲು ಕುಡಿಸುವಾಗ ವ್ಯತ್ಯಾಸವಾಗಿ ಶ್ವಾಸಕೋಶದ ಸಮಸ್ಯೆ ಏರ್ಪಟ್ಟು ಹಸುಳೆ ಮೃತಪಟ್ಟಿದೆ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಇ–ಆಡಳಿತ ಕೇಂದ್ರ
ಸಿಆಸುಇ (ಇ–ಆಡಳಿತ), ಕರ್ನಾಟಕ ಸರ್ಕಾರ
CEG
ಸಂಖ್ಯೆ: CEG/PDFR/12/2022 ದಿನಾಂಕ: 04/02/2023

ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಪ್ರಕಟಣೆ (EoI)

ತಂತ್ರಜ್ಞಾನ ಒದಗಿಸುವವರು / ಸಂಸ್ಥೆಗಳಿಂದ **Pilot and Implementation of muzzle print based identification of animals and linking with farmer ID in FRUITS** ಗಾಗಿ ಆನ್‌ಲೈನ್ ಮುಖಾಂತರ **https://eproc.karnataka.gov.in**ನಲ್ಲಿ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು (EoI) ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : **080–22208333**ನ್ನು ಸಂಪರ್ಕಿಸಬಹುದು. **EoI** ಸಲ್ಲಿಸುವ ಕೊನೆಯ ದಿನಾಂಕ: **20.02.2023.**

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಇ–ಆಡಳಿತ ಕೇಂದ್ರ
DIPR/CP/4639/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಕೆರೆಗಳು–ಯಲಹಂಕ)
3ನೇ ಮಹಡಿ, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೆಂಗಳೂರು–02.
ಸಂಖ್ಯೆ:ಕಾಪಾಅ(ಕೆರೆಗಳು–ಯಲ)/ಟೆಂಡರ್–17/2022–23 ದಿನಾಂಕ: 10.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) (ದ್ವಿಲಕೋಟೆ ಪದ್ಧತಿ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
ಜಕ್ಕೂರು ಕೆರೆಯಲ್ಲಿ ತೇವಾಂಶ ಪ್ರದೇಶ/ಜೌಗು ಪ್ರದೇಶವನ್ನು ಸುಧಾರಣೆ ಮಾಡುವುದು. (ಬಾಕಿ ಉಳಿಕೆ ಕಾಮಗಾರಿ) (2ನೇ ಕರೆ)	300.00	3,00,000/-

<u>ಟೆಂಡರ್ ವೇಳಾಪಟ್ಟಿ:</u> (1) ಟೆಂಡರ್ ದಾಖಲೆಗಳನ್ನು ದಿನಾಂಕ **13.02.2023**ರ ಬೆಳಿಗ್ಗೆ **10:00** ಗಂಟೆಯ ನಂತರ ಲಭ್ಯವಿರುತ್ತದೆ. (2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ **17.02.2023**ರ ಸಂಜೆ **4:00** ಗಂಟೆಗೆ. (3) ಟೆಂಡರ್ ದಾಖಲೆಗಳನ್ನು ದಿನಾಂಕ **20.02.2023**ರ ಸಂಜೆ **4:00** ಗಂಟೆಯವರೆಗೆ ಸಲ್ಲಿಸತಕ್ಕದ್ದು. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **21.02.2023**ರ ಸಂಜೆ **4:30** ಗಂಟೆಗೆ. (5) ಆರ್ಥಿಕ ಬಿಡ್ ತೆರೆಯುವುದನ್ನು ನಂತರ ತಾಂತ್ರಿಕ ಬಿಡ್ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು. (6) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
(ಕೆರೆಗಳು–ಯಲಹಂಕ)

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ
ಮುಖ್ಯ ಅಭಿಯಂತರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
"ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105
ದೂ: 08472–220817, ಫಾ: 08472–260818, E-mail ID : kwbceklb14@gmail.com
ಕ್ರ.ಸಂ. ಕಜಮ/ಮುಅಕ/ತಾಂತ್ರಿಕ/ನೀಸ/ಕೆಂಭಾವಿ/ಅಮೃತ್–2.0/ 1436 /2022–23 ದಿನಾಂಕ : 09–02–2023

–: ಟೆಂಡರ್ ಪ್ರಕಟಣೆ :–

1) ಕಾಮಗಾರಿ ವಿವರ: "ಅಮೃತ್–2.0 ಯೋಜನೆಯಡಿ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕೆಂಭಾವಿ ಪಟ್ಟಣಕ್ಕೆ ನಾರಾಯಣಪೂರ ಜಲಾಶಯದ ಜಲಧಾರೆ ಯೋಜನೆ ನೀರಿನ ಮೂಲದಿಂದ ನೀರು ಸರಬರಾಜು ಅಭಿವೃದ್ಧಿಪಡಿಸುವ ಯೋಜನೆಯ ಜೊತೆಗೆ 05 ವರ್ಷದ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ (01 ವರ್ಷದ ಡಿಫೆಕ್ಟ್ ಲಿಯಬಾಲಿಟಿ ಅವಧಿ ಸೇರಿಸಿ) ಡಿಸೈನ್, ಬಿಲ್ಡ್, ಆಪರೇಟ್ ಮತ್ತು ಟ್ರಾನ್ಸ್‌ಫಾರ್ (DBOT) ಮುಖಾಂತರ (ಲಮ್‌ಸಮ್) – ವೆರಿಯೇಷನ್ ಇರುವುದಿಲ್ಲ". **(ವರ್ಕ ಇಂಡೆಂಟ್ : ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ/2022–23 / ಡಬ್ಲ್ಯೂ.ಎಸ್/ವರ್ಕ_ಇಂಡೆಂಟ್3310),** 2) ಕಾಮಗಾರಿ ಅಂದಾಜು ಮೊತ್ತ ಲಕ್ಷಗಳಲ್ಲಿ : **3106.43 (ಜಿ.ಎಸ್.ಟಿ ಹೊರತು ಪಡಿಸಿ),** 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ರೂ. 36,66,000/–, 5) ಕಾಮಗಾರಿಯ ಅವಧಿ: 18 (ಹದಿನೆಂಟು ತಿಂಗಳು ಕೆಪ್ಯಾಕ್ಸ್), 6) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಷನ್ ಕೊನೆಯ ದಿನಾಂಕ: **27–02–2023 ಸಮಯ : 11:00 ಗಂಟೆಯವರೆಗೆ,** 7) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **13–03–2023 ಸಮಯ : 17:30 ಗಂಟೆಯವರೆಗೆ,** 8) ಟೆಂಡರ್ ತೆರೆಯುವ ದಿನಾಂಕ: **14–03–2023 ಸಮಯ : 11:00 ಗಂಟೆ ನಂತರ,** 9) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105 ದೂ: 08472–220817, E-mail ID : kwbceklb14@gmail.com 10) ಅಂತರಜಾಲ ತಾಣದ ವಿಳಾಸ: www.eproc.karnataka.gov.in.

ಸಹಿ/– ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/1275/ಎಂ.ಸಿ.&ಎ/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತವರು ಕಚೇರಿ, ಕೃಭಾಜನಿನಿ, ಐಬಿಸಿ ವಿಭಾಗ 1 ಕೆಂಭಾವಿ,
ತಾ: ಸುರಪುರ, ಜಿ: ಯಾದಗಿರಿ, Ph.: 08443-278674 e-Mail: ee_ibcdiv1kembhavi@yahoo.com
ಸಂಖ್ಯೆ:ಕೃಭಾಜನಿನಿ/ಐಬಿಸಿ/ವಿಭಾಗ–1/ಪಿಬಿ/2022–23/1108 ದಿನಾಂಕ:–0302–2023

ತಿದ್ದುಪಡಿ ಸಂ. – 1 (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ: Roads and bridges ಕಾಮಗಾರಿಗಳ ಅಡಿಯಲ್ಲಿ ಅನುಮೋದನೆಗೊಂಡಿರುವ ಒಟ್ಟು 02 ಕಾಮಗಾರಿಗೆ ಮರು ಟೆಂಡರ್ ಪ್ರಕಟಣೆ ನೀಡುವ ಕುರಿತು.
ಉಲ್ಲೇಖ: 1) ಈ ಕಚೇರಿ ಟೆಂಡರ್ ಪ್ರಕಟಣೆ ಪತ್ರ ಸಂ:2022–23/1090 ದಿನಾಂಕ:27–01–2023
ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಪಟ್ಟಂತೆ ಈ ಮೂಲಕ ಮೇಲ್ಕಾಣಿಸಿದ ಟೆಂಡರಿನಲ್ಲಿ ಪ್ರಕಟಿಸಲಾದ ದಿನಾಂಕಗಳಲ್ಲಿ ಬದಲಾವಣೆ ಮಾಡಲಾಗಿದೆ .ಈ ಕೆಳಕಾಣಿಸಿದ ದಿನಾಂಕಗಳನ್ನು ಬದಲಾವಣೆ ಮಾಡಲಾಗಿದೆ.

ಬದಲಾವಣೆ ಮಾಡಿದ ಕ್ಯಾಲೆಂಡರ ಇವೆಂಟ್ಸಗಳು:–

ಕ್ರ. ಸಂ	ನೋಟಿಫಿಕೇಶನ ದಿನಾಂಕ:27.01.2023 ರಂತೆ	ಬದಲಾವಣೆ ಮಾಡಿದ ಕ್ಯಾಲೆಂಡರ ಇವೆಂಟ್ಸಗಳು
1	ಗುತ್ತಿಗೆದಾರರು ದಿನಾಂಕ: 01.02.2023 ರಿಂದ 09.02.2023 ರ ಸಾಯಂಕಾಲ 4.30 ಘಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.	ಗುತ್ತಿಗೆದಾರರು ದಿನಾಂಕ: 03.02.2023 ರಿಂದ 13.02.2023 ರ ಸಾಯಂಕಾಲ 4.30 ಘಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು
2	ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 01.02.2023 ರಿಂದ 09.02.2023 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು.	ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 03.02.2023 ರಿಂದ 13.02.2023 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು.
3	Pre-bid ಸಭೆಯನ್ನು ಮಾನ್ಯ ಮುಖ್ಯ ಇಂಜಿನೀಯರ್ ಕಾಲುವೆ ವಲಯ 2 ರಾಂಪುರ (ಪ.ಆ) ಇವರ ಕಛೇರಿಯಲ್ಲಿ ದಿನಾಂಕ : 06–02–2023 ರಂದು ನಡೆಸಲಾಗುವುದು.	Pre-bid ಸಭೆಯನ್ನು ಮಾನ್ಯ ಮುಖ್ಯ ಇಂಜಿನೀಯರ್ ಕಾಲುವೆ ವಲಯ 2 ರಾಂಪುರ (ಪ.ಆ) ಇವರ ಕಛೇರಿಯಲ್ಲಿ ದಿನಾಂಕ : 08–02–2023 ರಂದು ನಡೆಸಲಾಗುವುದು.
4	ಕವರ-I(Technical bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯಲ್ಲಿ ದಿನಾಂಕ: 13–02–2023 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು	ಕವರ-I(Technical bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯಲ್ಲಿ ದಿನಾಂಕ: 15–02–2023 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು.
5	ಕವರ-II(Financial bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯಲ್ಲಿ ದಿನಾಂಕ: 15–02–2023 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು	ಕವರ–II(Financial bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯಲ್ಲಿ ದಿನಾಂಕ: 17–02–2023 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು.

ಇನ್ನುಳಿದ ನಿಯಮ ಶರತ್ತುಗಳು ಉಲ್ಲೇಖದಲ್ಲಿರುವಂತೆ ಟೆಂಡರ ಪ್ರಕಟಣೆ ಸಂಖ್ಯೆ (1) ರಲ್ಲಿರುವಂತೆ ಯಥಾಸ್ಥಿತಿಯಲ್ಲಿ ಇರುತ್ತವೆ. ಯಾವುದೆ ಬದಲಾವಣೆ ಇರುವುದ್ದಿಲ್ಲ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಲಾದ ಆಧಿಕಾರಿಗಳ ಕಚೇರಿಯಲ್ಲಿ ಸಮಯದಲ್ಲಿ ಅಥವಾ http://eproc.karnataka.gov.in/eportal/Index.seam ರಲ್ಲಿ .ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ. ಐಬಿಸಿ ವಿಭಾಗ ಸಂ 1 ಕೆಂಭಾವಿ–585216
ವಾ.ಸಾ.ಸಂ.ಇ/ಯಾದಗಿರಿ/466/ಕ.ರಾ.ಎಂ.ಸಿ.&ಎ/2022–23

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ
ಮುಖ್ಯ ಪ್ರಧಾನ ವ್ಯವಸ್ಥಾಪಕರವರ ಕಛೇರಿ (ತಾಂತ್ರಿಕ), 1ನೇ ಮಹಡಿ, ಯುಎನ್ಐ ಕಟ್ಟಡ,
ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ಬೆಂಗಳೂರು–560 052
ಸಂಖ್ಯೆ: ಮುಪ್ರವ್ಯ(ತಾಂತ್ರಿಕ)/ಬೆಂಘತ್ಯಾನಿಕಂನಿ/ಟೆಂಡರ್/08/2022–23 ದಿನಾಂಕ : 10–02–2023

ಪ್ರಸ್ತಾವನೆಗಾಗಿ ಮನವಿ (ಆರ್‌ಎಫ್‌ಪಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

1. ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಇವರು ವ್ಯವಸ್ಥಾಪಕ ನಿರ್ದೇಶಕರು, ಬೆಂಘತ್ಯಾನಿಕಂನಿ ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಸಂಸ್ಕರಣ ಸೌಲಭ್ಯಗಳನ್ನು ಸ್ಥಾಪಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕೋಷ್ಟಕದಲ್ಲಿ ತಿಳಿಸಲಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್‌ದಾರರು ಗುತ್ತಿಗೆಯನ್ನು ಪಡೆಯಲು ಅರ್ಹತೆಗಾಗಿ ಟೆಂಡರ್‌ದಾರರಿಗೆ ನೀಡಲಾದ ಸೂಚನೆಯ ಕಲಂ 3 ರಲ್ಲಿ ನಿಗದಿಪಡಿಸಲಾದ ಕನಿಷ್ಠ ಅರ್ಹತಾ ಅಗತ್ಯೆಗಳನ್ನು ಗಮನಿಸಬೇಕಾಗಿ ಸಲಹೆ ನೀಡಲಾಗಿದೆ.
2. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಲಾಗಿನ ಫಾರ್ ಕಾಂಟ್ರಾಕ್ಟರ್ಸ್ ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಕಾಂಟ್ರಾಕ್ಟರ್ಸ್‌ನಲ್ಲಿ ಲಾಗಿನ್ ಆದ ನಂತರ, ಬಲ ಬದಿಯ ಕೆಳಗೆ ಲಿಸ್ಟ್ ಆಫ್ ಟೆಂಡರ್ಸ್‌ನ್ನು ವೀಕ್ಷಿಸಲು ಕೆಳಗೆ ಸ್ಕ್ರೋಲ್ ಆಗುವುದು, ದಯವಿಟ್ಟು ಅಲ್ಲಿ ಕ್ಲಿಕ್ ಮಾಡಿ ಆರ್‌ಎಫ್‌ಪಿ ವಿವರಗಳನ್ನು ಪಡೆದು ಟೆಂಡರ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ದಾಖಲೆಗಳನ್ನು 15–02–2023 ರಿಂದ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭಾಗವಹಿಸಲು ಇಚ್ಛಿಸುವ ಆಸಕ್ತಿಯುಳ್ಳ ಸೇವೆ ಒದಗಿಸುವವರು ಮಾತ್ರ ಪೋರ್ಟಲ್‌ನಲ್ಲಿ ನೋಂದಾಯಿಸಿದ ನಂತರ ಟೆಂಡರ್‌ನ ಆನ್‌ಲೈನ್ ವ್ಯವಹಾರ ಶುಲ್ಕವನ್ನು ಪಾವತಿಸಬೇಕು. ವ್ಯವಹಾರ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
3. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ 04–03–2023 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮಾರ್ಗದರ್ಶನದಂತೆ ತೆರೆಯಲಾಗುವುದು.
4. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ವೀಕ್ಷಿಸಬಹುದು.

ಕ್ರಮ ಸಂಖ್ಯೆ	ಕೆಲಸದ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)	ಟೆಂಡರ್ ದಾಖಲೆ ಬೆಲೆ	ಗುತ್ತಿಗೆ ಅವಧಿ
1	"ಆಯ್ದ ಸ್ಥಳಗಳಲ್ಲಿ ಸುಡುವ ಪ್ರಕ್ರಿಯೆ ಅಥವಾ ತತ್ಸಮನಾದ ತಂತ್ರಜ್ಞಾನ ಬಳಸಿ 60 ತಿಂಗಳು ಅವಧಿಗಾಗಿ (ಮುಂದಿನ 24 ತಿಂಗಳಿಗೆ ವಿಸ್ತರಿಸಬಹುದಾದ) 10 ಟನ್ ಸಾಮರ್ಥ್ಯದ ಡೊಮೆಸ್ಟಿಕ್ ಸ್ಯಾನಿ ತ್ಯಾಜ್ಯ ಸಂಸ್ಕರಣ ಟ್ರೀಟ್‌ಮೆಂಟ್ ಘಟಕದ ಸರಬರಾಜು, ನಿರ್ಮಾಣ, ಸ್ಥಾಪನೆ, ಕಾರ್ಯಾರಂಭಗೊಳಿಸುವುದು ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ" ಕಾಮಗಾರಿಗಾಗಿ ಟೆಂಡರ್‌ದಾರರ ಸ್ವಂತ ವಿನ್ಯಾಸದ ಆಧಾರದಲ್ಲಿ ಒಟ್ಟಾರೆ, ಟರ್ನ್‌ಕೀ, ಸ್ಥಿರ ಬೆಲೆ, ವ್ಯತ್ಯಾಸವಿಲ್ಲದ ಟೆಂಡರ್ (ಪ್ಯಾಕೇಜ್–1 ಶುಭ್ರ ಬೆಂಗಳೂರು ಅನುದಾನ)	845.00 (ಕ್ಯಾಪೆಕ್ಸ್)	15.00	ಇ–ಪೋರ್ಟಲ್ ಪ್ರಕಾರ	6 ತಿಂಗಳು
2	"ಆಯ್ದ ಸ್ಥಳಗಳಲ್ಲಿ ಸುಡುವ ಪ್ರಕ್ರಿಯೆ ಅಥವಾ ತತ್ಸಮನಾದ ತಂತ್ರಜ್ಞಾನ ಬಳಸಿ 60 ತಿಂಗಳು ಅವಧಿಗಾಗಿ (ಮುಂದಿನ 24 ತಿಂಗಳಿಗೆ ವಿಸ್ತರಿಸಬಹುದಾದ) 5 ಟನ್ ಸಾಮರ್ಥ್ಯದ ಡೊಮೆಸ್ಟಿಕ್ ಸ್ಯಾನಿ ತ್ಯಾಜ್ಯ ಸಂಸ್ಕರಣ ಟ್ರೀಟ್‌ಮೆಂಟ್ ಘಟಕದ ಸರಬರಾಜು, ನಿರ್ಮಾಣ, ಸ್ಥಾಪನೆ, ಕಾರ್ಯಾರಂಭಗೊಳಿಸುವುದು ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ" ಕಾಮಗಾರಿಗಾಗಿ ಟೆಂಡರ್‌ದಾರರ ಸ್ವಂತ ವಿನ್ಯಾಸದ ಆಧಾರದಲ್ಲಿ ಒಟ್ಟಾರೆ, ಟರ್ನ್‌ಕೀ, ಸ್ಥಿರ ಬೆಲೆ, ವ್ಯತ್ಯಾಸವಿಲ್ಲದ ಟೆಂಡರ್ (ಪ್ಯಾಕೇಜ್–2 ಶುಭ್ರ ಬೆಂಗಳೂರು ಅನುದಾನ)	425.00 (ಕ್ಯಾಪೆಕ್ಸ್)	7.50	ಇ–ಪೋರ್ಟಲ್ ಪ್ರಕಾರ	6 ತಿಂಗಳು
3	"ಆಯ್ದ ಸ್ಥಳಗಳಲ್ಲಿ ಸುಡುವ ಪ್ರಕ್ರಿಯೆ ಅಥವಾ ತತ್ಸಮನಾದ ತಂತ್ರಜ್ಞಾನ ಬಳಸಿ 60 ತಿಂಗಳು ಅವಧಿಗಾಗಿ (ಮುಂದಿನ 24 ತಿಂಗಳಿಗೆ ವಿಸ್ತರಿಸಬಹುದಾದ) 10 ಟನ್ ಸಾಮರ್ಥ್ಯದ ಡೊಮೆಸ್ಟಿಕ್ ಸ್ಯಾನಿ ತ್ಯಾಜ್ಯ ಸಂಸ್ಕರಣ ಟ್ರೀಟ್‌ಮೆಂಟ್ ಘಟಕದ ಸರಬರಾಜು, ನಿರ್ಮಾಣ, ಸ್ಥಾಪನೆ, ಕಾರ್ಯಾರಂಭಗೊಳಿಸುವುದು ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ" ಕಾಮಗಾರಿಗಾಗಿ ಟೆಂಡರ್‌ದಾರರ ಸ್ವಂತ ವಿನ್ಯಾಸದ ಆಧಾರದಲ್ಲಿ ಒಟ್ಟಾರೆ, ಟರ್ನ್‌ಕೀ, ಸ್ಥಿರ ಬೆಲೆ, ವ್ಯತ್ಯಾಸವಿಲ್ಲದ ಟೆಂಡರ್ (ಪ್ಯಾಕೇಜ್–3 ಅಮೃತ್ ನಗರೋತ್ಥಾನ ಅನುದಾನ)	845.00 (ಕ್ಯಾಪೆಕ್ಸ್)	15.00	ಇ–ಪೋರ್ಟಲ್ ಪ್ರಕಾರ	6 ತಿಂಗಳು
4	ಬೃಬೆಂಮಪಾ ಮಿತಿಯಲ್ಲಿ 15 ವರ್ಷಗಳ ಕಾರ್ಯಾಚರಣೆ ಹಾಗೂ ನಿರ್ವಹಣೆಯೊಂದಿಗೆ ಸಾವಯವ ಮುನ್ಸಿಪಲ್ ಘನ ತ್ಯಾಜ್ಯ ಸಂಸ್ಕರಣೆಗಾಗಿ 50 ಮೆಟ್ರಿಕ್ ಟನ್‌ಗಳ ಸಾಮರ್ಥ್ಯದ ಒಂದು ಸಂಖ್ಯೆಯ ಹೊಸ ದೊಡ್ಡ ಬಯೋ–ಮೆಥನೇಷನ್ ಘಟಕದ ನಿರ್ಮಾಣ	2200.00 (ಕ್ಯಾಪೆಕ್ಸ್)	25.00	ಇ–ಪೋರ್ಟಲ್ ಪ್ರಕಾರ	6 ತಿಂಗಳು

ಸೂಚನೆ:
1. ಬಿಡ್ ಪೂರ್ವ ಸಭೆಯನ್ನು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬಿಎಸ್‌ಡಬ್ಲ್ಯೂಎಂಎಲ್ , 1ನೇ ಮಹಡಿ, ಯುಎನ್ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560052 ಇವರ ಕಛೇರಿಯಲ್ಲಿ 22.02.2023 ರಂದು 15:00 ಗಂಟೆಗೆ ಏರ್ಪಡಿಸಲಾಗಿದೆ.
2. ತಾಂತ್ರಿಕ ಅರ್ಹತಾ ದಾಖಲಾತಿಗಳನ್ನು ಟೆಂಡರ್ ದಾಖಲೆ ಪ್ರಕಾರವಾಗಿ ಅಗತ್ಯವಿರುವ ಮಾಹಿತಿ/ದಾಖಲೆಗಳೊಂದಿಗೆ 04–03–2023 ರಂದು 16:00 ಗಂಟೆಗೆ ಅಥವಾ ಮುಂಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಲ್ಲಿ ಅಪ್‌ಲೋಡ್ ಮಾಡಬೇಕು ಹಾಗೂ ತಾಂತ್ರಿಕ ಬಿಡ್ ಹೊಂದಿರುವ ಮೊದಲನೇ ಫೋಲ್ಡರ್‌ನ್ನು 06–03–2023 ರಂದು 16:30 ಗಂಟೆಯ ನಂತರ ಇ–ಪೋರ್ಟಲ್ ಮೂಲಕ ಮಾತ್ರ ನಿಗಧಿತ ಸ್ಥಳದಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಒಂದು ವೇಳೆ ಟೆಂಡರ್ ತೆರೆಯುವ ನಿಗಧಿತ ದಿನಾಂಕವು ರಜೆದಿನವಾದ್ದಲ್ಲಿ, ಮುಂದಿನ ಕೆಲಸದ ದಿನದಂದು ಅದೇ ಸಮಯ ಹಾಗೂ ಸ್ಥಳದಲ್ಲಿ ತೆರೆಯಲಾಗುವುದು.
3. ತನ್ನ ನಿಯಂತ್ರಣಕ್ಕೆ ಮೀರಿ ಯಾವುದೇ ತಂತ್ರಜ್ಞಾನದ ವಿಫಲದಿಂದ ವಿಳಂಬವಾದ್ದಲ್ಲಿ ನಿಯಮಿತವು ಜವಾಬದ್ದಾರಿ ವಹಿಸುವುದಿಲ್ಲ. ಯಾವುದೇ ಟೆಂಡರ್‌ನ ಅಪ್‌ಡೇಟ್‌ಗಳನ್ನು ಟೆಂಡರ್‌ದಾರರಿಗೆ ತಂತ್ರಜ್ಞಾನದಿಂದ ಸೂಚಿಸಲು ಪ್ರಯತ್ನಿಸುವ ವಿಧಾನಗಳಿದ್ದರೂ ಸಹ ಒಂದು ವೇಳೆ ಟೆಂಡರ್‌ದಾರರಿಗೆ ಮಾಹಿತಿಗಳು ತಲುಪದಿದ್ದಲ್ಲಿ ನಿಯಮಿತದ ಹೊಣೆಯಲ್ಲ. ಟೆಂಡರಿಗೆ ಸಂಬಂಧಿಸಿದಂತೆ ಟೆಂಡರ್‌ದಾರರು ನೂತನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಗೆ ನಿಯಮಿತವಾಗಿ ಭೇಟಿ ನೀಡಬೇಕು, ಸಹಾಯವಾಣಿ ಇ–ಮೇಲ್ ವಿಳಾಸ hphelpdesk.blr@intarvo.com. ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ದಾರರು ಟೆಂಡರ್‌ನ್ನು ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯಕ್ಕೆ ಮುಂಚಿತವಾಗಿ ತಮ್ಮ ಕಂಪ್ಯೂಟರ್ ಬ್ರೌಸರ್ ಸಾಮರ್ಥ್ಯವನ್ನು ಸೂಕ್ತವಾಗಿ ಇರಿಸಲು ಜಾಗ್ರತಿ ವಹಿಸಬೇಕು. ಇಂಟರ್‌ನೆಟ್ ವಿಫಲದ ಕಾರಣದಿಂದಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕ್ರಿಯಿಸಲು ಅಥವಾ ಯಾವುದೇ ತಾಂತ್ರಿಕ ಅಡಚಣೆ ಉಂಟಾದ್ದಲ್ಲಿ ನಿಯಮಿತವು ಜವಾಬ್ದಾರಿ ವಹಿಸುವುದಿಲ್ಲ.
4. ಯಾವುದೇ ತಿದ್ದುಪಡಿ/ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
5. ಜಿಎಸ್‌ಟಿ ಅನ್ವಯವಾದ್ದಲ್ಲಿ ಪ್ರತ್ಯೇಕವಾಗಿ ಪಾವತಿಸಬೇಕು.

ನಿಗಧಿತ ಅವಧಿ / ವೇಳಾ ಪಟ್ಟಿ: 1) ಅರ್ಹತಾ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಹಾಗೂ ಸಮಯ : 04–03–2023 ರಂದು 16:00 ಗಂಟೆಯವರೆಗೆ. 2) ಬಿಡ್ ಪೂರ್ವ ಸಭೆ : 22–02–2023 ರಂದು 15.00 ಗಂಟೆಗೆ. 3) ಟೆಂಡರ್ ತೆರೆಯುವುದು : 06–03–2023 ರಂದು 16.30 ಗಂಟೆಗೆ

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಬೆಂಘತ್ಯಾನಿಕಂನಿ
ವಾಸಾಸಂಇ/ವಾಪ್ರ/4652/ಆಕಾರ್/2022–23

ಪತ್ನಿ ಕೊಂದು ಪರಾರಿ: ಮೆಜೆಸ್ಟಿಕ್‌ನಲ್ಲಿ ಪತಿ ಬಂಧನ

ಬೆಂಗಳೂರು: ವರ್ತೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಮೋನಿಶಾ (24) ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಕೃತ್ಯ ಎಸಗಿದ್ದ ಆರೋಪದಡಿ ಪತಿ ಸಾಜೀದ್ (42) ಅವರನ್ನು ಬಂಧಿಸಿದ್ದಾರೆ.

'ಪಶ್ಚಿಮ ಬಂಗಾಳದ ಸಾಜೀದ್, ಮೋನಿಶಾ ಅವರನ್ನು ಹಲವು ವರ್ಷಗಳ ಹಿಂದೆ ಮದುವೆಯಾಗಿದ್ದರು. ಕೆಲಸ ಹುಡುಕಿಕೊಂಡು ದಂಪತಿ ನಗರಕ್ಕೆ ಬಂದಿದ್ದರು. ಇತ್ತೀಚೆಗೆ ಮೋನಿಶಾ ಅವರನ್ನು ಕೊಂದು ಸಾಜೀದ್ ಪರಾರಿಯಾಗಿದ್ದ. ಮೆಜೆಸ್ಟಿಕ್‌ನಲ್ಲಿ ಈತನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಾಜೀದ್, ಟೈಲ್ಸ್ ಜೋಡಣೆ ಕೆಲಸ ಮಾಡುತ್ತಿದ್ದ. ಮೋನಿಶಾ ಮನೆಯಲ್ಲಿರುತ್ತಿದ್ದರು. ಪತ್ನಿ ಶೀಲದ ಬಗ್ಗೆ ಅನುಮಾನಗೊಂಡಿದ್ದ ಸಾಜೀದ್ ನಿತ್ಯವೂ ಜಗಳ ಮಾಡುತ್ತಿದ್ದ. ತಲಾಖ್ ಪಡೆಯಲು ತೀರ್ಮಾನಿಸಿದ್ದ ದಂಪತಿ, ಕುಟುಂಬದವರ ಜೊತೆ ಚರ್ಚಿಸಿದ್ದರು.'

'ಇತ್ತೀಚೆಗೆ ದಂಪತಿ ನಡುವೆ ಜಗಳ ನಡೆದಿತ್ತು. ಬಟ್ಟೆಯಿಂದ ಕುತ್ತಿಗೆ ಬಿಗಿದು ಮೋನಿಶಾ ಅವರನ್ನು ಕೊಂದಿದ್ದ ಸಾಜೀದ್, ಮೃತದೇಹವನ್ನು ಸ್ಥಳದಲ್ಲೇ ಬಿಟ್ಟು ಮನೆಯ ಬೀಗ ಹಾಕಿಕೊಂಡು ಪರಾರಿಯಾಗಿದ್ದ. ಫೆ. 7ರಂದು ಮನೆಯಿಂದ ದುರ್ವಾಸನೆ ಬರುತ್ತಿತ್ತು. ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಮೃತದೇಹ ಪತ್ತೆಯಾಗಿತ್ತು' ಎಂದು ತಿಳಿಸಿದರು.

'ಕೊಲೆ ಬಳಿಕ ನಗರದ ಹಲವೆಡೆ ಸುತ್ತಾಡಿದ್ದ ಆರೋಪಿ, ತನ್ನೂರಿಗೆ ಹೋಗಲು ಮೆಜೆಸ್ಟಿಕ್‌ಗೆ ಬಂದಿದ್ದ. ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ. ಸದ್ಯ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸರು ಹೇಳಿದರು.

₹ 6 ಲಕ್ಷ ನಗದು, 1 ಚಿನ್ನದ ಗಟ್ಟಿ, ಆಟೊ, ಕಾರು ಜಪ್ತಿ

'ಖಾಕಿ' ತೊಟ್ಟು ಸುಲಿಗೆ: ಗೃಹರಕ್ಷಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ವ್ಯಾಪಾರಿ ಸಹಾಯಕರೊಬ್ಬರನ್ನು ಬೆದರಿಸಿ ಸುಲಿಗೆ ಮಾಡಿದ್ದ ಆರೋಪದಡಿ ಗೃಹರಕ್ಷಕ ಹಾಗೂ ಇಬ್ಬರು ಆಟೊ ಚಾಲಕರನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

'ಗಿರಿನಗರ ಕಸ್ತೂರ್‌ಬಾ ಕಾಲೊನಿಯ ವಿ. ನಾಗರಾಜ್ (31), ಮೈಸೂರು ರಸ್ತೆಯ ಮಾರುತಿನಗರದ ಮಂಜುನಾಥ್ (39) ಹಾಗೂ ಶ್ರೀನಗರದ ಅರುಣ್‌ಕುಮಾರ್ (33) ಬಂಧಿತರು. ಇವರಿಂದ ₹ 6 ಲಕ್ಷ ನಗದು, 1 ಚಿನ್ನದ ಗಟ್ಟಿ, ಆಟೊ ಹಾಗೂ ಕಾರು ಜಪ್ತಿ ಮಾಡಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

ನಾಗರಾಜ್


ಮಂಜುನಾಥ್

ಅರುಣ್‌ಕುಮಾರ್

'ತಮಿಳುನಾಡಿನ ಚಿನ್ನಾಭರಣ ವ್ಯಾಪಾರಿಯೊಬ್ಬರ ಸಹಾಯಕ ಸುಂದರಂ ಅವರು ಸುಲಿಗೆ ಬಗ್ಗೆ ದೂರು ನೀಡಿದ್ದರು. ಕೆಎಸ್‌ಆರ್‌ಟಿಸಿ ಗೃಹರಕ್ಷಕ ನಾಗರಾಜ್ ಹಾಗೂ ಆಟೊ ಚಾಲಕರಾದ ಮಂಜುನಾಥ್, ಅರುಣ್ ಕುಮಾರ್‌ನನ್ನು ಬಂಧಿಸಲಾಗಿದೆ' ಎಂದು ಹೇಳಿದರು.

ಪೊಲೀಸ್ ಸೋಗಿನಲ್ಲಿ ಸುಲಿಗೆ: 'ಮಾಲೀಕರ ಸೂಚನೆಯಂತೆ ಶಿವಮೊಗ್ಗಕ್ಕೆ ಹೋಗಿದ್ದ ದೂರುದಾರ ಸುಂದರಂ, ಯೊಬ್ಬರಿಂದ ₹ 6 ಲಕ್ಷ ನಗದು ಹಾಗೂ ಚಿನ್ನದ ಗಟ್ಟಿ ಪಡೆದುಕೊಂಡಿದ್ದರು. ವಾಪಸು ತಮಿಳುನಾಡಿಗೆ ತೆರಳಲು ಶಿವಮೊಗ್ಗದಿಂದ ನಗರದ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ಬಂದಿದ್ದರು. ತಮಿಳುನಾಡಿಗೆ ಹೋಗುವ ಬಸ್ಸಿನಲ್ಲಿ ಕುಳಿತಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಖಾಕಿ ಸಮವಸ್ತ್ರದಲ್ಲಿದ್ದ ಗೃಹರಕ್ಷಕ ನಾಗರಾಜ್, ಪೊಲೀಸ್ ಸೋಗಿನಲ್ಲಿ ಬಸ್ ಏರಿ ಸುಂದರಂ ಅವರನ್ನು ತಪಾಸಣೆ ನಡೆಸಿದ್ದ. ಅವರ ಬ್ಯಾಗ್ ಬಗ್ಗೆ ಅನುಮಾನ ವ್ಯಕ್ತಪಡಿಸಿ ಬಸ್ಸಿನಿಂದ ಇಳಿಸಿದ್ದ. ಇನ್ನಿಬ್ಬರು ಆರೋಪಿಗಳು ಸ್ಥಳಕ್ಕೆ ಬಂದಿದ್ದರು. ಮೂವರು ಸೇರಿ ಸುಂದರಂ ಅವರನ್ನು ಕಾರಿನಲ್ಲಿ ಹತ್ತಿಸಿಕೊಂಡು, ಮೈಸೂರು ರಸ್ತೆಯಲ್ಲಿ ಸ್ವಲ್ಪ ದೂರಕ್ಕೆ ಹೋಗಿದ್ದರು.'

'ಅಕ್ರಮವಾಗಿ ಹಣ ಹಾಗೂ ಚಿನ್ನದ ಗಟ್ಟಿ ಸಾಗಿಸುತ್ತಿರುವ ಬಗ್ಗೆ ಪ್ರಕರಣ ದಾಖಲಿಸುವುದಾಗಿ ಆರೋಪಿಗಳು ಬೆದರಿಸಿದ್ದರು. ಸುಂದರಂ ಬ್ಯಾಗ್‌ನಲ್ಲಿದ್ದ ₹ 6 ಲಕ್ಷ ನಗದು ಹಾಗೂ ಚಿನ್ನದ ಗಟ್ಟಿ ಕಿತ್ತುಕೊಂಡಿದ್ದರು. ಸುಂದರಂ ಅವರನ್ನು ಕಾರಿನಿಂದ ಇಳಿಸಿ ಆರೋಪಿಗಳು ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

ಕಟ್ಟಡದಿಂದ ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಕಟ್ಟಡವೊಂದರ ಮೇಲಿನ ಮಹಡಿಯಿಂದ ಕಾಲು ಜಾರಿ ಬಿದ್ದು ಸಮೀರ್ ತಾಪ (21) ಎಂಬುವವರು ಮೃತಪಟ್ಟಿದ್ದಾರೆ.

'ನೇಪಾಳದ ಸಮೀರ್, ತಂಗಿ-ತಮ್ಮ ಜೊತೆ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಮೂವರೂ ಕೂಲಿ ಕೆಲಸ ಮಾಡುತ್ತಿದ್ದರು. ಪಣತ್ತೂರಿನ ಶೆಡ್‌ವೊಂದರಲ್ಲಿ ವಾಸವಿದ್ದರು' ಎಂದು ಪೊಲೀಸರು ಹೇಳಿದರು.

'ಮದ್ಯವ್ಯಸನಿಯಾಗಿದ್ದ ಸಮೀರ್ ನಿತ್ಯವೂ ರಾತ್ರಿ ಕುಡಿಯುತ್ತಿದ್ದರು. ಗುರುವಾರವೂ ಮದ್ಯ ಕುಡಿದು, ಶೆಡ್‌ನಿಂದ ಹೊರಬಂದಿದ್ದರು. ಸಮೀಪದಲ್ಲಿದ್ದ ಕಟ್ಟಡವೊಂದರ ಮೊದಲ ಮಹಡಿಗೆ ಹೋಗಿದ್ದರು. ಅಲ್ಲಿಂದ, ಪಕ್ಕದ ಮನೆಯ ಚಾವಣಿಗೆ ಹೋಗಲು ಯತ್ನಿಸಿ ಕಾಲು ಜಾರಿ ಬಿದ್ದಿದ್ದರು' ಎಂದು ತಿಳಿಸಿದರು.

'ತಲೆಗೆ ತೀವ್ರ ಪೆಟ್ಟು ಬಿದ್ದು ಸಮೀರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಂಬಂಧಿಕರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

₹ 85.83 ಕೋಟಿ ದಂಡ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಫೆ. 3ರಿಂದ ಫೆ. 10ರವರೆಗೆ ₹ 85.83 ಕೋಟಿ ದಂಡ ಸಂಗ್ರಹವಾಗಿದ್ದು, 31.11 ಲಕ್ಷ ಪ್ರಕರಣಗಳು ಇತ್ಯರ್ಥಗೊಂಡಿವೆ.

ಶುಕ್ರವಾರ ಒಂದೇ ದಿನದಲ್ಲಿ ₹ 17.61 ಕೋಟಿ ದಂಡ ಸಂಗ್ರಹವಾಗಿದೆ. ದಂಡ ಪಾವತಿ ಮೇಲೆ ಶೇ 50ರಷ್ಟು ರಿಯಾಯಿತಿ ಸೌಲಭ್ಯ ಪಡೆಯಲು ಇಂದು (ಫೆ. 11) ಕೊನೆ ದಿನವಾಗಿದೆ.

ಹಾಸಿಗೆ ಹಿಡಿದಿದ್ದ ಮಹಿಳೆ: ಕತ್ತು ಹಿಸುಕಿ ಕೊಂದ ಪ್ರಿಯಕರ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ಮುಕ್ತಾ ಬರ್ಬನ್ (35) ಎಂಬುವರನ್ನು ಕತ್ತು ಹಿಸುಕಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಪ್ರಿಯಕರ ಸ್ವಪನ್ ಬರ್ಬನ್ (35) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ನೇಪಾಳದ ಮುಕ್ತಾ ಹಾಗೂ ಸ್ವಪನ್, ವೈಟ್‌ಫೀಲ್ಡ್ ಬಳಿಯ ಮನೆಯೊಂದರಲ್ಲಿ ವಾಸವಿದ್ದರು. ಗುರುವಾರ ರಾತ್ರಿ ಮುಕ್ತಾ ಅವರನ್ನು ಕತ್ತು ಹಿಸುಕಿ ಕೊಂದು ಸ್ವಪನ್ ಪರಾರಿಯಾಗಿದ್ದ. ಪ್ರಕರಣ ದಾಖಲಿಸಿಕೊಂಡು ಶುಕ್ರವಾರ ಆರೋಪಿಯನ್ನು ಬಂಧಿಸಲಾಗಿದೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಎಸ್. ಗಿರೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

9 ವರ್ಷ ಸಹಜೀವನ: 'ವಿವಾಹಿತೆ ಮುಕ್ತಾ, ನೇಪಾಳದಲ್ಲಿದ್ದ ಪತಿಯನ್ನು ತೊರೆದು ಪ್ರಿಯಕರ ಸ್ವಪನ್ ಜೊತೆಗೆ ನಗರಕ್ಕೆ ಬಂದಿದ್ದರು. ಸ್ವಪನ್ ಸಹ ವಿವಾಹಿತ. ಈತನೂ ಪತ್ನಿಯನ್ನು ತೊರೆದಿದ್ದ. ಮುಕ್ತಾ- ಸ್ವಪನ್ 9 ವರ್ಷಗಳಿಂದ ವೈಟ್‌ಫೀಲ್ಡ್‌ನ ಮನೆಯಲ್ಲಿ ಸಹಜೀವನ ನಡೆಸುತ್ತಿದ್ದರು. ತಾವಿಬ್ಬರೂ ಮದುವೆಯಾಗಿರುವುದಾಗಿ ಸ್ಥಳೀಯರಿಗೆ ಹೇಳುತ್ತಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಇತ್ತೀಚೆಗೆ ಕಾಲು ಜಾರಿ ಬಿದ್ದು ಮುಕ್ತಾ ತಲೆ ಹಾಗೂ ಕೈ-ಕಾಲುಗಳಿಗೆ ತೀವ್ರ ಪೆಟ್ಟು ಬಿದ್ದಿತ್ತು. ಮಾನಸಿಕ ಅಸ್ವಸ್ಥರಂತೆ ವರ್ತಿಸುತ್ತಿದ್ದ ಅವರು, ಹಾಸಿಗೆ ಹಿಡಿದಿದ್ದರು. ಆರೋಪಿ ಸ್ವಪನ್, ಮುಕ್ತಾ ಆರೈಕೆ ಮಾಡುತ್ತಿದ್ದ. ಮುಕ್ತಾ ನಿತ್ಯವೂ ನರಳುವುದನ್ನು ನೋಡಿ ಸ್ವಪನ್‌ಗೆ ಬೇಸರವಾಗಿತ್ತು' ಎಂದು ಪೊಲೀಸರು ಹೇಳಿದರು.

'ಮುಕ್ತಾ ಬದುಕಿದ್ದರೆ ಮತ್ತಷ್ಟು ಕಷ್ಟ ಅನುಭವಿಸಬೇಕಾಗುತ್ತದೆ. ನನಗೂ ಆರೈಕೆ ಮಾಡಲು ಆಗುವುದಿಲ್ಲ' ಎಂದು ತಿಳಿದ ಸ್ವಪನ್, ಗುರುವಾರ ರಾತ್ರಿ ಕತ್ತು ಹಿಸುಕಿ ಕೊಲೆ ಮಾಡಿದ್ದ. ಈ ಸಂಬಂಧ ಆತ ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ಮಂಡ್ಯ: ಉಸ್ತುವಾರಿ ಅಶೋಕ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಸಚಿವ ಆರ್. ಅಶೋಕ ಅವರನ್ನು ಮಂಡ್ಯ ಜಿಲ್ಲೆಯ ಉಸ್ತುವಾರಿಯಿಂದ ಕೈಬಿಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಂದಾಯ ಸಚಿವ ಅಶೋಕ ಅವರು ಇತ್ತೀಚೆಗೆ ಪತ್ರ ಬರೆದು ಮುಂದಿನ 30 ದಿನಗಳಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಕಂದಾಯ ಭೂಮಿಯ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸಬೇಕು, ಗ್ರಾಮ ವಾಸ್ತವ್ಯ, ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಮುಂತಾದ ಕಾರ್ಯಕ್ರಮಗಳು ಹಮ್ಮಿಕೊಂಡಿರುವುದರಿಂದ ಉಸ್ತುವಾರಿಯಿಂದ ಬಿಡುಗಡೆ ಮಾಡಲು ಕೋರಿದ್ದರು' ಎಂದು ಹೇಳಿದರು.

ಮಂಡ್ಯಕ್ಕೆ ಅಶೋಕ ಅಪಥ್ಯ: ಅಶೋಕ ಅವರಿಗೆ ಮಂಡ್ಯ ಜಿಲ್ಲೆ ಉಸ್ತುವಾರಿ ನೀಡಿದ ಬಗ್ಗೆ ಜಿಲ್ಲೆಯ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರಲ್ಲಿ ಅಸಮಾಧಾನ ಉಂಟು ಮಾಡಿತ್ತು. ಅಲ್ಲಿ ಜೆಡಿಎಸ್ ಜತೆ ಹೊಂದಾಣಿಕೆ ಮಾಡಿಕೊಂಡರೆ ಚುನಾವಣೆಯಲ್ಲಿ ಪಕ್ಷ ಪ್ರಬಲ ಪೈಪೋಟಿ ನೀಡಲು ಸಾಧ್ಯವಾಗದು, ಪಕ್ಷ ಗೆಲ್ಲುವ ಸಾಧ್ಯತೆ ಕಡಿಮೆಯಾಗುತ್ತದೆ ಮತ್ತು ಅವರನ್ನು ಬದಲಿಸಬೇಕು ಎಂಬ ಒತ್ತಡವೂ ಕೇಳಿ ಬಂದಿತ್ತು ಎಂದು ಮೂಲಗಳು ಹೇಳಿವೆ.

ಒಡಿಶಾ ಸಚಿವರ ಹತ್ಯೆ ಆರೋಪಿಗೆ ಸುಳ್ಳುಪತ್ತೆ ಪರೀಕ್ಷೆ

ಭುವನೇಶ್ವರ(ಪಿಟಿಐ): ಒಡಿಶಾ ಆರೋಗ್ಯ ಸಚಿವ ನಬ ಕಿಶೋರ್ ದಾಸ್ ಅವರನ್ನು ಗುಂಡಿಕ್ಕಿ ಕೊಂದ ಆರೋಪಿ ಪೊಲೀಸ್ ಅಧಿಕಾರಿ ಗೋಪಾಲ್ ದಾಸ್‌ನನ್ನು ಗುಜರಾತ್‌ನ ಗಾಂಧಿನಗರದಲ್ಲಿ ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾ ನ್ಯಾಯಾಲಯದ ಅನುಮತಿ ಪಡೆದ ನಂತರ ಆರೋಪಿಯನ್ನು ಮಂಪರು ಪರೀಕ್ಷೆಗೂ ಒಳಪಡಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಕುಲಸಚಿವರ ವಿರುದ್ಧ ದೂರು

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಸಚಿವರು ತಮ್ಮನ್ನು ನಿಂದಿಸಿ, ಅವಮಾನಿಸಿದ್ದಾರೆ ಎಂದು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳು ದೂರಿದ್ದಾರೆ.

ಈ ಬಗ್ಗೆ ರಾಜ್ಯಪಾಲರು, ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಕುಲಪತಿ ಅವರಿಗೆ ವಿದ್ಯಾರ್ಥಿಗಳು ದೂರು ನೀಡಿದ್ದಾರೆ.

ಫೆ.8ರಂದು ನಡೆದ ಅಕಾಡೆಮಿಕ್ ಕೌನ್ಸಿಲ್ ಸಭೆಯ ನೇರ ಪ್ರಸಾರದ ಕಾರ್ಯವನ್ನು ವಿಭಾಗದ ವಿದ್ಯಾರ್ಥಿಗಳು ಕೈಗೊಂಡಿದ್ದರು. ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶನದ ಅನ್ವಯ ಈ ಕಾರ್ಯ ಕೈಗೊಳ್ಳಲಾಗಿತ್ತು. ಕುಲಸಚಿವರು ಸಹ ಈ ಬಗ್ಗೆ ನಿರ್ದೇಶನ ನೀಡಿದ್ದರು.

ನೇರ ಪ್ರಸಾರದ ಕಾರ್ಯ ಮುಗಿದ ನಂತರ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರನ್ನು ಅಸಂಬದ್ಧ ಪದಗಳನ್ನು ಬಳಸಿ ಕುಲಸಚಿವರು ನಿಂದಿಸಿದ್ದಾರೆ ಎಂದು ದೂರಲಾಗಿದೆ. ಹೀಗಾಗಿ, ಇನ್ನು ಮುಂದೆ ವಿಶ್ವವಿದ್ಯಾಲಯದ ಕಾರ್ಯಕ್ರಮಗಳನ್ನು ವಿಡಿಯೋ ಚಿತ್ರೀಕರಣ ಮಾಡುವುದಿಲ್ಲ ಎಂದು ವಿಭಾಗದ ವಿದ್ಯಾರ್ಥಿಗಳು ತಿಳಿಸಿದ್ದರು. ಇದರಿಂದಾಗಿ, ಫೆ.9ರಂದು ನಡೆದ ಸಿಂಡಿಕೇಟ್ ಸಭೆಯ ನೇರ ಪ್ರಸಾರದ ವಿಡಿಯೊ ಚಿತ್ರೀಕರಣದ ಕಾರ್ಯವನ್ನು ಖಾಸಗಿ ಏಜೆನ್ಸಿಯಿಂದ ಕೈಗೊಳ್ಳಲಾಗಿದೆ.

'ನಾವು ಪತ್ರಿಕೋದ್ಯಮದ ಅಧ್ಯಯನಕ್ಕೆ ಇಲ್ಲಿ ಬಂದಿದ್ದೇವೆ. ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ವೃತ್ತಿಪರವಾಗಿ ನಮ್ಮ ಕಾರ್ಯವನ್ನು ಮಾಡಿದ್ದೇವೆ. ಆದರೆ, ಯಾವುದೇ ಸಮರ್ಪಕ ಕಾರಣ ಇಲ್ಲದೆ ನಮ್ಮನ್ನು ಅವಮಾನಿಸಲಾಗಿದೆ ಕುಲಸಚಿವರು ಬಳಸಿದ ಶಬ್ದಗಳನ್ನು ನಮ್ಮ ಪೋಷಕರು ಸಹ ಎಂದಿಗೂ ಬಳಸಿಲ್ಲ. ಪ್ರತಿಯೊಬ್ಬರ ಸ್ವಾಭಿಮಾನ, ಗೌರವವನ್ನು ಕಾಪಾಡಬೇಕು. ನಾವೆಲ್ಲರೂ ಯುವಕರಾಗಿದ್ದು, ಕನಿಷ್ಠ ತಿಳಿವಳಿಕೆ ಇದೆ. ಈ ಪತ್ರದಿಂದಾಗಿ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ವಿರುದ್ಧ ದ್ವೇಷ ಸಾಧಿಸಲು ಮುಂದಾದರೆ ಪರಿಸ್ಥಿತಿಯು ಮತ್ತಷ್ಟು ಬಿಗಡಾಯಿಸಬಹುದು. ಮುಂದಿನ ಬೆಳವಣಿಗೆಗಳಿಗೆ ವಿಶ್ವವಿದ್ಯಾಲಯವು ನಮ್ಮನ್ನು ಯಾವುದೇ ಕಾರಣಕ್ಕೂ ಹೊಣೆಗಾರರನ್ನಾಗಿ ಮಾಡಬಾರದು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ವೆಂಕಟೇಶ್ ಬಳಿ ₹ 4 ಕೋಟಿ ಅಕ್ರಮ ಆಸ್ತಿ

ಒಂದನೇ ಪುಟದಿಂದ...

ಸಾತನೂರು, ಮಾಗಡಿ ಮತ್ತು ಮಧುಗಿರಿಯಲ್ಲಿ ಕೃಷಿ ಜಮೀನು, ಬೆಂಗಳೂರಿನ ವಿಜಯನಗರದಲ್ಲಿ ಮನೆ, ನೆಲಮಂಗಲ ಮತ್ತು ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ನಿವೇಶನ ಹೊಂದಿರುವುದು ಪತ್ತೆಯಾಗಿದೆ. 1.3 ಕೆ.ಜಿ. ಚಿನ್ನಾಭರಣ ಹಾಗೂ 8 ಕೆ.ಜಿ. ಬೆಳ್ಳಿಯ ವಸ್ತುಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.


ಡಿಸಿಎಫ್ ಜಿ. ವೆಂಕಟೇಶ್ ಅವರ ಬೆಂಗಳೂರಿನ ವಿಜಯನಗರದ ಮನೆ – ಪ್ರಜಾವಾಣಿ ಚಿತ್ರ

ಬೆಂಗಳೂರಿನ ವಿಜಯನಗರದಲ್ಲಿರುವ ವೆಂಕಟೇಶ್ ಅವರ ಮನೆ, ಕೋಲಾರದಲ್ಲಿರುವ ವಸತಿಗೃಹ, ಸಾಮಾಜಿಕ ಅರಣ್ಯ ವಿಭಾಗದ ಡಿಸಿಎಫ್ ಕಚೇರಿ, ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿಯ ಚಿಕ್ಕಮುದುಡೆ ಗ್ರಾಮದಲ್ಲಿನ ಅಧಿಕಾರಿಯ ಹೆಸರಿನಲ್ಲಿರುವ ತೋಟದ ಮನೆ, ಜಮೀನುಗಳಲ್ಲೂ ಶೋಧ ನಡೆಸಲಾಗಿದೆ.

ಮಾಗಡಿ ತಾಲ್ಲೂಕಿನ ಗುಡ್ಡಹಳ್ಳಿಯಲ್ಲಿ ಸಂಬಂಧಿ ಗಂಗಮುನಿಯಪ್ಪ ಹೆಸರಿನಲ್ಲಿರುವ ತೋಟದ ಮನೆ ಮೇಲೂ ದಾಳಿ ನಡೆದಿದೆ. ಅಲ್ಲಿ ನಾಲ್ಕು ಎಕರೆ ಕೃಷಿ ಜಮೀನು ಪತ್ತೆಯಾಗಿದೆ. ಮಧುಗಿರಿ, ನೆಲಮಂಗಲ ಮತ್ತು ಮಾಲೂರಿನಲ್ಲೂ ಶೋಧ ನಡೆಸಲಾಗಿದೆ.

ರಾಜ್ಯ ಅರಣ್ಯ ಸೇವೆಯ (ಎಸ್‌ಎಫ್‌ಎಸ್) ಅಧಿಕಾರಿಯಾಗಿರುವ ವೆಂಕಟೇಶ್, ಒಂದೂವರೆ ವರ್ಷದಿಂದ ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ನಿವೃತ್ತಿಗೆ ಒಂದು ತಿಂಗಳಷ್ಟೇ ಬಾಕಿ ಇದೆ. ಆರೋಪಿ ಅಧಿಕಾರಿಯು ಪತ್ನಿಯ ಹೆಸರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ ಬೃಹತ್ ಮೊತ್ತದ ಹೂಡಿಕೆ ಮಾಡಿದ್ದು, ಆ ಬಗ್ಗೆಯೂ ತನಿಖೆ ನಡೆಯುತ್ತಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಮೂವರು ದಲ್ಲಾಳಿಗಳು ವಶಕ್ಕೆ

ಒಂದನೇ ಪುಟದಿಂದ...

ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಎಸ್ಪಿ ಕೆ.ವಿ. ಅಶೋಕ್ ನೇತೃತ್ವದಲ್ಲಿ ಆರು ತಂಡಗಳಲ್ಲಿ 35ಕ್ಕೂ ಹೆಚ್ಚು ಅಧಿಕಾರಿಗಳು ಏಕಕಾಲಕ್ಕೆ ಬಿಡಿಎ ಕಚೇರಿಗಳ ಮೇಲೆ ದಾಳಿ ನಡೆಸಿದರು

ಕೇಂದ್ರ ಕಚೇರಿಯ ಎಲ್ಲ ಪ್ರವೇಶ ದ್ವಾರಗಳನ್ನು ಬಂದ್ ಮಾಡಿ, ಅಲ್ಲಿದ್ದ ವ್ಯಕ್ತಿಗಳನ್ನು ತಪಾಸಣೆ ನಡೆಸಿದರು. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಹಾಗೂ ಸಂಸ್ಥೆಯ ಐಜಿಪಿ ಸುಬ್ರಹ್ಮಣ್ಯೇಶ್ವರ ರಾವ್ ಕೂಡ ಸ್ಥಳಕ್ಕೆ ಭೇಟಿ ನೀಡಿ ಕಾರ್ಯಾಚರಣೆ ಕುರಿತು ಮಾಹಿತಿ ಪಡೆದರು.

ಶುಕ್ರವಾರ ಮಧ್ಯಾಹ್ನ 3.30ಕ್ಕೆ ಆರಂಭವಾದ ಶೋಧ ತಡರಾತ್ರಿಯಾದರೂ ಮುಂದುವರಿದಿತ್ತು. ಬಿಡಿಎ ಕಚೇರಿಯನ್ನು ಸಂಪರ್ಕಿಸುವ ಎಲ್ಲ ಪ್ರವೇಶ ದ್ವಾರಗಳನ್ನು ಬಂದ್ ಮಾಡಿರುವ ಲೋಕಾಯುಕ್ತ ಪೊಲೀಸರು, ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಅಲ್ಲಿಯೇ ಉಳಿಸಿಕೊಂಡಿದ್ದಾರೆ. ಹೆಚ್ಚು ದೂರುಗಳು ಕೇಳಿಬಂದಿರುವ ಆರು ಕಚೇರಿಗಳಲ್ಲಿ ಶೋಧ ನಡೆಸಲಾಗುತ್ತಿದೆ.

ಭೂಸ್ವಾಧೀನ, ಎಂಜಿನಿಯರಿಂಗ್, ನಗರ ಯೋಜನೆ, ಆರ್ಥಿಕ ವಿಭಾಗ ಸೇರಿದಂತೆ ಪ್ರಮುಖ ಕಚೇರಿಗಳಲ್ಲಿ ಹಲವು ತನಿಖಾ ತಂಡಗಳು ಕಡತಗಳನ್ನು ವಶಕ್ಕೆ ಪಡೆದಿವೆ. ಸಕಾರಣ ಇಲ್ಲದೇ ಅಪಾರ ಪ್ರಮಾಣದ ಕಡತಗಳನ್ನು ವಿಲೇವಾರಿ ಮಾಡದೇ ಬಾಕಿ ಇರಿಸಿಕೊಂಡಿರುವುದು ಪತ್ತೆಯಾಗಿದೆ. ಈ ಕುರಿತು ಸಂಬಂಧಿಸಿದ ವಿಭಾಗಗಳ ಅಧಿಕಾರಿಗಳನ್ನು ಪ್ರಶ್ನಿಸಿ, ಹೇಳಿಕೆ ದಾಖಲಿಸಿಕೊಳ್ಳಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಬಿಡಿಎ ಕಚೇರಿಗಳಲ್ಲಿ ಶುಕ್ರವಾರ ಶೋಧ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ಪರಸ್ಪರ ಚರ್ಚೆಯಲ್ಲಿ ತೊಡಗಿರುವುದು – ಪ್ರಜಾವಾಣಿ ಚಿತ್ರ

ಹಿಂದೆಯೂ ಶೋಧ ನಡೆದಿತ್ತು

2021ರ ನವೆಂಬರ್‌ನಲ್ಲಿ ಇದೇ ರೀತಿಯ ದೂರುಗಳನ್ನು ಆಧರಿಸಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬಿಡಿಎ ಕಚೇರಿಗಳ ಮೇಲೆ ದಾಳಿ ನಡೆಸಿತ್ತು. ಮೂರು ದಿನಗಳ ಕಾಲ ಶೋಧ ನಡೆಸಲಾಗಿತ್ತು. ಪ್ರಾಥಮಿಕ ವಿಚಾರಣೆ ಬಳಿಕ ಹಲವು ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಲಾಗಿತ್ತು.

ಬಿಡಿಎ ಕೆಲಸಗಳಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದ ಒಂಬತ್ತು ಮಂದಿ ದಲ್ಲಾಳಿಗಳ ಮನೆಗಳ ಮೇಲೆ 2022ರ ಮಾರ್ಚ್‌ನಲ್ಲಿ ದಾಳಿಮಾಡಿದ್ದ ಎಸಿಬಿ ಅಧಿಕಾರಿಗಳು, ಶೋಧ ನಡೆಸಿದ್ದರು.

ದೂರುಗಳ ಸುರಿಮಳೆ: ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದ ಸಂದರ್ಭದಲ್ಲಿ ಹಲವಾರು ಮಂದಿ ಸಾರ್ವಜನಿಕರು ಬಿಡಿಎ ಕಚೇರಿ ಆವರಣದಲ್ಲಿದ್ದರು. ಅಲ್ಲಿಯೇ ಮೇಜು, ಕುರ್ಚಿ ಜೋಡಿಸಿಕೊಂಡು ಕುಳಿತ ತನಿಖಾಧಿಕಾರಿಗಳು, ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಿದರು.

ಬಸವರಾಜನ್ ವಿರುದ್ಧದ ಪ್ರಕರಣ: ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಮುರುಘಾಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದೂರು ಸಲ್ಲಿಸಲು ಸಂತ್ರಸ್ತೆಯರಿಗೆ ಪ್ರಚೋದನೆ ನೀಡಿದ ಆರೋಪಡಿ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಮತ್ತು ಅವರ ಪತ್ನಿ ಸೌಭಾಗ್ಯ ವಿರುದ್ಧ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯನ್ನು ಬದಲಿಸಲು ಕೋರಿದ ಅರ್ಜಿಗೆ ಸಂಬಂಧಿಸಿದಂತೆ ಸರ್ಕಾರದ ವಾದ ಮಂಡನೆಗೆ ಹೈಕೋರ್ಟ್, ಐದು ದಿನಗಳ ಕಾಲಾವಕಾಶ ನೀಡಿದೆ.

GOLDEN PALM ARMY PRE PRIMARY SCHOOL
Dickenson Road Bangalore-42
Contact No-08025581715, 9177176322

JOB OPPORTUNITIES TEACHING / NON TEACHING (ADHOC)

Sl No	Post	Qualification required	Experience
1	Principal	Graduation/Post Graduate with B.Ed/NTT	Min-3 yrs
2	Teacher	Graduation/Post Graduate with B.Ed/NTT	Min-2 yrs
3	Accountant	B.com with knowledge of accounts	Min-3yrs
4	Ayah	5th Class	
5	Gardener	5th Class	

Eligibility: (a) Computer literacy is mandatory for all the posts, other than Ayah and Gardener **(b)** Selection Process-through interview of short listed candidates only. No TA/DA admissible for interview **(d)** Salary is as per AWES norms, **(e)** No Application will be accepted via emails. Submit filled in Application Form superscripted on the envelope mentioning the post applied for ('APPLICATION FOR THE POST') along with all documents by Courier / Registered post only addressed to the HQ K&K Sub Area GS (EDN) Cubbon Road, Bangalore-560001 on or before 28th February 2023. For any clarification Contact no -08025581715, 9177176322

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101
ದೂರವಾಣಿ ಸಂಖ್ಯೆ: ಕಛೇರಿ: 08156-295427 ಫ್ಯಾಕ್ಸ್: 08156 – 295427
ಇಮೇಲ್ – eemidcbpura@gmail.com

ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 07/2022-23 ದಿನಾಂಕ : 16/06/2022 ರಲ್ಲಿ ಆಹ್ವಾನಿಸಲಾಗಿದ್ದ 4702 ವಿಶೇಷ ಘಟಕ ಯೋಜನೆ ಅಡಿಯಲ್ಲಿ ಆಹ್ವಾನಿಸಲಾಗಿದ್ದ ಕಾಮಗಾರಿಯ ಇ-ಟೆಂಡರ್‌ನಲ್ಲಿ ಯಾವೊಬ್ಬ ಗುತ್ತಿಗೆದಾರರೂ ಭಾಗವಹಿಸದೇ ಇರುವುದರಿಂದ ಮರು ಟೆಂಡರ್ ಕರೆಯಲಾಗಿದೆ ಹಾಗೂ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನ ಅಡಿಯಲ್ಲಿ (ಅಂತರ್ಜಾಲದಲ್ಲಿ) ಬಿಡ್ಡನ್ನು ಅಪ್‌ಲೋಡ್ ಮಾಡುವ ದಿನಾಂಕ: 21/02/2023 ರಂದು ಸಂಜೆ 4:00 ಗಂಟೆಯವರೆಗೆ, ಮತ್ತು ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : 24/02/2023 ಆಗಿರುತ್ತದೆ. ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ತಮ್ಮ ವಿಶ್ವಾಸಿ
ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಚಿಕ್ಕಬಳ್ಳಾಪುರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಕಾರ್ಯಪಾಲಕ ಅಭಿಯಂತರರು ಕಛೇರಿ,
ಯೋಜನೆ ವಿಭಾಗ, ಕೆ.ಆರ್.ಆರ್.ಡಿ.ಎ.
ಕೋಲಾರ-ಬಂಗಾರಪೇಟೆ ಮುಖ್ಯ ರಸ್ತೆ, ಸಿ.ಬೈರೇಗೌಡನಗರ,
ಸಿ.ಬೈರೇಗೌಡ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಕಟ್ಟಡ,
2ನೇ ಮಹಡಿ, ಕೋಲಾರ-563101. ದೂ: 08152-221670
ಸಂ: ಕಾ.ಇಂ/ಯೋ.ವಿ/ಕೆ.ಆರ್.ಆರ್.ಡಿ.ಎ/ಕೋ/ಸ.ಇಂ/516/2022-23 ದಿ: 08.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ-3ನೇ ಕರೆ
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 03(2)/2022-23, ದಿ: 08.02.2023

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್) ಕೆ.ಟಿ.ಟಿ.ಪಿ ಕಾಯ್ದೆ ನಿಯಮಾನುಸಾರ ದ್ವಿ-ಲಕೋಟೆಯಲ್ಲಿ ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ವಿಭಾಗ, ಕೆ.ಆರ್.ಆರ್.ಡಿ.ಎ. ಕೋಲಾರ ಕಛೇರಿಯ ಅಧೀನಕ್ಕೊಳಪಡುವ "2022-23ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿಯಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದ 01 (ಸಾಮಾನ್ಯ) ಪ್ಯಾಕೇಜ್ ರಸ್ತೆ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ, ಸದರಿ ಟೆಂಡರ್‌ಗೆ (ಷರತ್ತು ಮತ್ತು ನಿಬಂಧನೆಗಳಂತೆ) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ. **(E-Procurement Website: https://eproc.karnataka.gov.in)** (1) ಅರ್ಜಿ ಶುಲ್ಕ: ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ (ಹಿಂತಿರುಗಿಸಲಾಗುವುದಿಲ್ಲ). (2) ಇ.ಎಂ.ಡಿ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸುವುದು): ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ. (3) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **17.02.2023 (ಸಂಜೆ 4.30 ಗಂಟೆಯೊಳಗೆ)**. (4) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20.02.2023 (ಸಂಜೆ 4.30 ಗಂಟೆಗೆ)**. (5) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ. **ಸೂಚನೆ:** ಸದರಿ ಟೆಂಡರ್‌ನ್ನು ಯಾವುದೇ ಕಾರಣವನ್ನು ನೀಡದೇ ಹಿಂದಕ್ಕೆ ಪಡೆಯುವ ಅಥವಾ ರದ್ದುಗೊಳಿಸುವ/ತಿರಸ್ಕರಿಸುವ ಅಧಿಕಾರವನ್ನು ಕಾರ್ಯಪಾಲಕ ಅಭಿಯಂತರರು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ,
ಕೆ.ಆರ್.ಆರ್.ಡಿ.ಎ. ಕೋಲಾರ.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 508/ಎಂ.ಸಿ.ಎ/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ G20

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ-ಟೆಂಡರು ಸೂಚನೆ ಸಂ.: **CAO/CN/BNC/144/2023** ದಿನಾಂಕ: **06.02.2023**

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹೊಸಪೇಟೆ-ಬಳ್ಳಾರಿ ವಿಭಾಗ: ಹೊಸಪೇಟೆ – ಬಳ್ಳಾರಿ ವಿಭಾಗದಲ್ಲಿ ಸ್ಥಳದ ಅಂತಿಮ ಸಮೀಕ್ಷೆ (ಚತುಷ್ಪಥೀಕರಣ). (65.0 ಕಿ.ಮೀ) (ಟೆಂಡರು ಉಲ್ಲೇಖ ಸಂ. **HPT-BAY-FLS-QUAD-R**)	ರೂ. **2,60,06,813/-**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.02.2023, 15:00 ಗಂಟೆಯವರೆಗೆ

ಇ-ಟೆಂಡರು ಸೂಚನೆ ಸಂ.: **CAO/CN/BNC/145/2023** ದಿನಾಂಕ: **07.02.2023**

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಧಾರವಾಡ – ಬೆಳಗಾವಿ ಹೊಸ ಲೈನ್ ಯೋಜನೆಯಲ್ಲಿ (73.10 ಕಿ.ಮೀ.) ಇಪಿಸಿ ಮಾದರಿಯಲ್ಲಿ ದೂರ ಸಂಪರ್ಕ & ಎಲೆಕ್ಟ್ರಿಕಲ್ ಕಾಮಗಾರಿಯನ್ನೊಳಗೊಂಡಂತೆ ಕ್ಯಾರಕೊಪ್ಪ (ಹೊರ.) (ch:6100) ಮತ್ತು ಮುಮ್ಮಿಗಟ್ಟಿ (ಒಳ.) (ch:17800) (11.700 ಕಿ.ಮೀ.) ನಡುವೆ ಹೊಸ ಬ್ರಾಡ್‌ಗೇಜ್ ಟ್ರ್ಯಾಕ್ ಲೈನುಗಳ ನಿರ್ಮಾಣ ಕಾರ್ಯ. (ಟೆಂಡರು ಉಲ್ಲೇಖ ಸಂ. **DWR-BGM-EPC-01**)	ರೂ. **2,43,66,29,736/-**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.06.2023, 11:00 ಗಂಟೆಯವರೆಗೆ

ಇ-ಟೆಂಡರು ಸೂಚನೆ ಸಂ.: **CAO/CN/BNC/146/2023** ದಿನಾಂಕ: **08.02.2023**

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ಗುತ್ತಿಗೆಯ ಮೇರೆಗೆ ಚಿಕ್ಕಮಗಳೂರು – ಹಾಡಿಹಳ್ಳಿ ಮತ್ತು ಹಾಡಿಹಳ್ಳಿ – ಬೇಲೂರು ನಡುವೆ ಹೊಸ ಲೈನಿನ ಯೋಜನೆಗಾಗಿ ಯೋಜನಾ ನಿರ್ವಹಣಾ ಸೇವೆಗಳನ್ನು ಸಲ್ಲಿಸುವುದಕ್ಕಾಗಿ ಅಧೀಕೃತ ಇಂಜಿನಿಯರ್‌ರ ನೇಮಕಾತಿಗಾಗಿ ಪ್ರಸ್ತಾವನೆಯ ವಿನಂತಿ (ಆರ್‌ಎಫ್‌ಪಿ). (ಟೆಂಡರು ಉಲ್ಲೇಖ ಸಂ.: **CKM-BELUR-PMS-R**)	ರೂ. **3,52,23,901/-**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24.03.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ನಿರ್ಮಾಣ
ಬೆಂಗಳೂರು ದಂಡು
PUB/662/AAD/PRB/SWR/2022-23
S.W.Railways SWRRLY SWRRLY

AstraZeneca
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್
CIN: L24231KA1979PLC003563
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ,
ಔಟರ್ ರಿಂಗ್ ರೋಡ್, ಬೆಂಗಳೂರು – 560045
ದೂ.: +91 80 6774 8000. ವೆಬ್: www.astrazeneca.com/india

31ನೇ ಡಿಸೆಂಬರ್, 2022ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು 9 ತಿಂಗಳಿಗೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಹೇಳಿಕೆ

ರೂ. ಲಕ್ಷಗಳಲ್ಲಿ (ಪ್ರತಿ ಷೇರಿನ ಗಳಿಕೆಯ ಡೇಟಾ ಹೊರತುಪಡಿಸಿ)

ಕ್ರ. ಸಂ.	ವಿವರಗಳು	31/12/2022ಕ್ಕೆ ಕೊನೆಗೊಂಡ 3 ತಿಂಗಳಿಗೆ	31/12/2022ಕ್ಕೆ ಕೊನೆಗೊಂಡ ಪ್ರಸಕ್ತ ಅವಧಿಯ ವರ್ಷದಲ್ಲಿನ ಅಂಕಿಅಂಶಗಳು	31/12/2021ಕ್ಕೆ ಕೊನೆಗೊಂಡ 3 ತಿಂಗಳಿಗೆ ಹಿಂದಿನ ಅವಧಿಯಂತೆ
		ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	25,700.46	73,637.19	20,585.78
2	ತೆರಿಗೆಗೆ ಮುನ್ನ ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	3,945.64	11,082.48	1,626.46
3	ತೆರಿಗೆ ಕಳೆದು, ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	2,930.44	8,202.13	1,141.92
4	ತೆರಿಗೆ ಕಳೆದು, ಅವಧಿಗೆ ಸಮಗ್ರ ಆದಾಯ	2,903.27	8,149.29	1,100.11
5	ಈಕ್ವಿಟಿ ಷೇರು ಬಂಡವಾಳ	500.00	500.00	500.00
6	ಪ್ರತಿ ಷೇರಿಗೆ ಮೂಲ ಮತ್ತು ಡೈಲ್ಯೂಟೆಡ್ ಗಳಿಕೆ (ತಲಾ 2 ರೂ.ನಂತೆ)	11.72	32.81	4.57

ಟಿಪ್ಪಣಿ:
1. ಇಲ್ಲಿ ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಬಂಧನೆಗಳು, 2015 ನಿಬಂಧನೆ 33ರ ಅನ್ವಯ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಸವಿವರವಾದ ವರದಿಯ ಉದ್ಧೃತ ಭಾಗ. ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಪೂರ್ಣ ವರದಿ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟುಗಳಲ್ಲಿ (www.nseindia.com, www.bseindia.com) ಮತ್ತು ಕಂಪನಿಯ ವೆಬ್‌ಸೈಟಿನಲ್ಲಿ (www.astrazeneca.com/india) ಲಭ್ಯವಿದೆ.
2. ಈ ಹೇಳಿಕೆಯನ್ನು ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 133ರಲ್ಲಿ ಹೇಳಲಾಗಿರುವ ಕಂಪನಿಗಳ (ಭಾರತೀಯ ಅಕೌಂಟಿಂಗ್ ಮಾನಗಳು) ನಿಯಮಗಳು, 2015 (Ind AS) ಹಾಗೂ ಅನ್ವಯಿಸುವ ಮಟ್ಟಿಗೆ ಇತರ ಮಾನ್ಯತೆ ಪಡೆದ ಅಕೌಂಟಿಂಗ್ ಅಭ್ಯಾಸಗಳು ಮತ್ತು ಪಾಲಿಸಿಗಳ ಅನುಸಾರ ಸಿದ್ಧಪಡಿಸಲಾಗಿದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್‌ಗಾಗಿ

ಸಂಜೀವ್ ಕುಮಾರ್ ಪಾಂಚಾಲ್
ಮ್ಯಾನೇಜಿಂಗ್ ಡೈರೆಕ್ಟರ್
DIN: 09823879

ಸ್ಥಳ: ಬೆಂಗಳೂರು
ದಿನಾಂಕ: 10ನೇ ಫೆಬ್ರವರಿ, 2023

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್
ಕಾರ್ಪೋರೇಟ್ ಐಡೆಂಟಿಫಿಕೇಷನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು – 560022
ದೂ: +91 80 68951000 ಫ್ಯಾಕ್ಸ್: +91 80 68951001 ಇ-ಮೇಲ್: info@gokaldasexports.com ವೆಬ್‌ಸೈಟ್: www.gokaldasexports.com

ಡಿಸೆಂಬರ್ 31, 2022ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳ
ಪ್ರತ್ಯೇಕ ಹಾಗೂ ಕ್ರೋಢೀಕೃತ ಐಎನ್‌ಡಿ ಎಎಸ್ ಅಪರಿಶೋಧಿತ ಆರ್ಥಿಕ ಫಲಿತಾಂಶಗಳು
(ಸೆಬಿ (ಎಲ್‌ಒಡಿಆರ್) ನಿಯಮಾವಳಿಗಳು, 2015ರ ನಿಯಮ 47(1) (ಬಿ))

(ರೂ. ಲಕ್ಷಗಳಲ್ಲಿ, ಪ್ರತಿ ಷೇರಿನ ಗಳಿಕೆ ಹೊರತುಪಡಿಸಿ)

ಕ್ರ. ಸಂ.	ವಿವರಗಳು	ಪ್ರತ್ಯೇಕ						ಕ್ರೋಢೀಕೃತ					
		ಅಂತ್ಯಗೊಂಡ ತ್ರೈಮಾಸಿಕ			ಅಂತ್ಯಗೊಂಡ ಒಂಬತ್ತು ತಿಂಗಳು		ವರ್ಷಾಂತ್ಯ	ಅಂತ್ಯಗೊಂಡ ತ್ರೈಮಾಸಿಕ			ಅಂತ್ಯಗೊಂಡ ಒಂಬತ್ತು ತಿಂಗಳು		ವರ್ಷಾಂತ್ಯ
		ಡಿಸೆಂಬರ್ 31, 2022	ಸೆಪ್ಟೆಂಬರ್ 30, 2022	ಡಿಸೆಂಬರ್ 31, 2021	ಡಿಸೆಂಬರ್ 31, 2022	ಡಿಸೆಂಬರ್ 31, 2021	ಮಾರ್ಚ್ 31, 2022	ಡಿಸೆಂಬರ್ 31, 2022	ಸೆಪ್ಟೆಂಬರ್ 30, 2022	ಡಿಸೆಂಬರ್ 31, 2021	ಡಿಸೆಂಬರ್ 31, 2022	ಡಿಸೆಂಬರ್ 31, 2021	ಮಾರ್ಚ್ 31, 2022
		ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ
1	ಒಟ್ಟು ಆದಾಯ	52,932.57	57,717.09	52,372.00	1,71,964.35	1,21,222.21	1,80,003.49	52,809.53	57,631.95	52,406.41	1,71,710.75	1,21,304.87	1,80,100.34
2	ತೆರಿಗೆ ಮತ್ತು ಅಸಾಮಾನ್ಯ ಐಟಂಗಳ ಮುನ್ನ ನಿವ್ವಳ ಲಾಭ/(ನಷ್ಟ)	4,941.92	4,999.74	3,843.42	15,092.22	6,445.10	11,672.97	4,775.19	4,900.82	3,859.49	14,757.38	6,465.42	11,703.13
3	ತೆರಿಗೆ ಮುನ್ನ ಮತ್ತು ಅಸಾಮಾನ್ಯ ಐಟಂಗಳ ನಂತರ ನಿವ್ವಳ ಲಾಭ/(ನಷ್ಟ)	4,941.92	5,604.77	3,843.42	15,697.25	6,445.10	11,672.97	4,775.19	5,505.85	3,859.49	15,362.41	6,465.42	11,703.13
4	ತೆರಿಗೆ ಮತ್ತು ಅಸಾಮಾನ್ಯ ಐಟಂಗಳ ನಂತರ ನಿವ್ವಳ ಲಾಭ/(ನಷ್ಟ)	4,224.82	4,678.95	2,995.14	12,912.22	5,596.82	11,672.97	4,058.09	4,580.03	3,011.21	12,577.38	5,617.14	11,708.13
5	ಅವಧಿ / ವಾರ್ಷಿಕ ಒಟ್ಟು ಸಮಗ್ರ ಆದಾಯ	4,671.23	1,922.03	4,389.38	7,423.91	7,080.86	12,381.87	4,563.55	1,823.86	4,406.20	7,149.62	7,103.43	12,416.61
6	ಪಾವತಿಸಿದ ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ. 5 ಪ್ರತಿಯೊಂದಕ್ಕೆ, ಪೂರ್ಣ ಪಾವತಿಸಲಾಗಿದೆ)	3,028.90	3,028.90	2,948.37	3,028.90	2,948.37	2,948.85	3,028.90	3,028.90	2,948.37	3,028.90	2,948.37	2,948.85
7	ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿದಂತೆ ಇತರೆ ಈಕ್ವಿಟಿ	-	-	-	-	-	68,014.11	-	-	-	-	-	67,868.70
8	ಪ್ರತಿ ಈಕ್ವಿಟಿ ಷೇರಿನ ಗಳಿಕೆ (ಇಪಿಎಸ್) ಮೂಲ	6.97	7.73	5.17	21.36	11.65	23.01	6.70	7.56	5.20	20.81	11.69	23.08
	ವಿಭಜಿತ	6.63	7.34	5.01	20.32	11.17	22.07	6.37	7.19	5.04	19.79	11.21	22.14

ಸೂಚನೆ: ಮೇಲಿನ ಸಾರಸತ್ವವು 2015ರ ಸೆಬಿಯ ನಿಯಂತ್ರಣಗಳ (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ / ಅರ್ಧವಾರ್ಷಿಕ / ವಾರ್ಷಿಕ ಆರ್ಥಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಾಂಶವಾಗಿದೆ. ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ (www.bseindia.com and www.nseindia.com) ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ (www.gokaldasexports.com) ಲಭ್ಯವಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿ. ಪರವಾಗಿ
ಸಹಿ/-
ಶಿವರಾಮಕೃಷ್ಣನ್ ಗಣಪತಿ
ಉಪಾಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
DIN: 07954560

ಸ್ಥಳ : ಬೆಂಗಳೂರು
ದಿನಾಂಕ : ಫೆಬ್ರವರಿ 10, 2023

'ಸಂಹಾರಂ' ಶೀಘ್ರ ತೆರೆಗೆ

ಸಿನಿ ಹನಿ

ಒಂದು ಗಂಟೆ ಅವಧಿಯ ಚಿತ್ರವೊಂದು ತೆರೆಗೆ ಬರಲು ಸಜ್ಜಾಗಿದೆ. ಕೆಲವು ಯುವಕರೇ ಸೇರಿಕೊಂಡು ನಿರ್ಮಿಸಿದ ಚಿತ್ರ 'ಸಂಹಾರಂ'. ಇತ್ತೀಚೆಗಷ್ಟೇ ಟ್ರೈಲರ್ ಬಿಡುಗಡೆಯಾಗಿದೆ.

'ಸಂಹಾರಂ'ಗೆ 'ನೋವು, ಅಧಿಕಾರ, ಆಶ್ವಾಸನೆ' ಎಂಬ ಅಡಿಬರಹವಿದೆ. ನಟ ಶ್ರೇಯಸ್ ಮಂಜು ಟ್ರೈಲರ್ ಬಿಡುಗಡೆ ಮಾಡಿದರು.

ಚಿತ್ರವು ಸೇಡಿನ ಕಥೆಯನ್ನು ಹೊಂದಿದೆ. ತಮಿಳುನಾಡು, ಮಹರಾಷ್ಟ್ರ, ಅಮೇರಿಕದಲ್ಲಿ ನಡೆದಂತಹ ನೈಜ ಘಟನೆಗಳನ್ನು ಆರಿಸಿಕೊಂಡು ಚಿತ್ರರೂಪಕ್ಕೆ ತರಲಾಗಿದೆ. ಜನ ಪ್ರತಿನಿಧಿಯಾದವನು ಅಧಿಕಾರವನ್ನು ದುರುಪಯೋಗಪಡಿಸಿಕೊಂಡರೆ ಅದೇ ಜನರು ಯಾರ ಮೇಲೆ ನಂಬಿಕೆ ಇಡಬೇಕು ಎಂಬುದು ಒಂದು ಸಾಲಿನ ಕಥೆ.

ಚಂದನ್ ಕೇಶವ್ ರಚನೆ, ಸಂಕಲನ, ನಿರ್ದೇಶನ, ನಟನೆ ಜತೆಗೆ ಬಂಡವಾಳ ಹೂಡಿದ್ದಾರೆ. ಎಸ್. ಮನೋಜ್‌ಕುಮಾರ್ ಪಾಲುದಾರರು. ತಂದೆಯಾಗಿ ಹಿರಿಯ ನಟ ಸಂದೀಪ್ ಮಲಾನಿ ಉಳಿದಂತೆ ಹೊಸಬರುಗಳಾದ ಸಿರಿಶಾ, ನಾಗರಾಜ ಭಂಡಾರಿ, ವಿನಯ್, ಸುಪ್ರಿತ್ ಕೃಷ್ಣಮೂರ್ತಿ, ಅನುಪಮಾ ಬಸವರಾಜು, ನಾಗಭೂಷಣ್, ಪ್ರಭು ಮುಂತಾದವರು ನಟಿಸಿದ್ದಾರೆ. ಸಂಗೀತ ರಿಯೋ ಆಂಟೋನಿ, ಛಾಯಾಗ್ರಹಣ ಚೇತನ್ ಕೇಶವ್, ಸಂಭಾಷಣೆ-ಸಾಹಿತ್ಯ ನಿಹಾರಿಕಾ ರಾಘವೇಂದ್ರ ಅವರದ್ದು. ಹೆಸರಘಟ್ಟ, ಆನೇಕಲ್, ಅತ್ತಿಬೆಲೆ ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಇದು ಇನಾಮ್ದಾರನ ಸಿಲ್ಕು ಮಿಲ್ಕು

ಸಿಲ್ಕು – ಮಿಲ್ಕು ಎಂದು ಹಾಡುತ್ತಾ ಪ್ರೇಕ್ಷಕರನ್ನು ಬಡಿದೆಬ್ಬಿಸಿದೆ ಇನಾಮ್ದಾರ್ ಚಿತ್ರದ ಈ ಗೀತೆ. ಈ ಹಾಡನ್ನು ಕೊಪ್ಪದಲ್ಲಿ ಇತ್ತೀಚೆಗೆ ಬಿಡುಗಡೆ ಮಾಡಲಾಯಿತು. ಬಿಡುಗಡೆ ಮಾಡಿದ್ದು ಅಲ್ಲಿನ ಮಕ್ಕಳು. ಇದೇ ವೇಳೆ ನಟ ಪ್ರಮೋದ್ ಶೆಟ್ಟಿ ಅವರಿಗೆ ನಿರ್ದೇಶಕ ಸಂದೇಶ್ ಶೆಟ್ಟಿ 'ಸ್ಯಾಂಡಲ್‌ವುಡ್ ಘಟೋತ್ಕಜ' ಎಂಬ ಬಿರುದನ್ನೂ ನೀಡಿದ್ದಾರಂತೆ. ಅವರ ಗಡಸು ಧ್ವನಿಗೆ ಪ್ರೀತಿಯಿಂದ ಇಟ್ಟ ಬಿರುದು ಇದು ಎಂಬುದು ಚಿತ್ರತಂಡದ ವಿವರಣೆ. ಸಾವಿರಾರು ಜನ ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಸಂದೇಶ್ ಶೆಟ್ಟಿ ಆಜ್ರಿ ನಿರ್ದೇಶನದ ಸಿನಿಮಾವಿದು. ಕುಂತಿ ಅಮ್ಮ ಪ್ರೊಡಕ್ಷನ್ ಮೂಲಕ ನಿರಂಜನ್ ಶೆಟ್ಟಿ ತಲ್ಲೂರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಎರಡು ಬಣಗಳ ನಡುವಿನ ಸಂಘರ್ಷದ ಕಥೆಯಿದು. ಈ ಸೂಕ್ಷ್ಮ ಕಥಾವಸ್ತುವಿನ ಚಿತ್ರಕ್ಕೆ ರಾಕೇಶ್ ಆಚಾರ್ಯ ಸಂಗೀತ ನೀಡಿದ್ದಾರೆ. ಚಿತ್ರದಲ್ಲಿ ಮೂರು ಹಾಡುಗಳಿವೆ.

ನಾಯಕ ನಟ ರಂಜನ್ ಛತ್ರಪತಿ, ನಟಿ ಚಿರಶ್ರೀ ಅಂಚನ್ ಹಾಗೂ ಎಸ್ತರ್ ನೊರೊನಾ, ರಘು ಪಾಂಡೇಶ್ವರ್, ಕರಣ್ ಕುಂದರ್, ಯಶ್ ಆಚಾರ್ಯ, ಮಹಾಬಲೇಶ್ವರ ಕ್ಯಾದಗಿ, ರಕ್ಷಿತ್ ಶೆಟ್ಟಿ ಕಾರ್ಯಕ್ರಮದಲ್ಲಿದ್ದರು.

ದರೋಡೆಕೋರರಲ್ಲೂ ಹೂ ಮನಸ್ಸೇ?

ಕಟುಕನಿಗೂ ಒಳ್ಳೆಯ ಹೃದಯವಿರುತ್ತದೆ ಎಂದು ಹೇಳಲು ಹೊರಟಿದೆ 'ಮಾರಿಗುಡ್ಡದ ಗಡ್ಡಧಾರಿಗಳು'. ಹೊಸಮುಖಗಳೇ ಕಾಣಿಸಿಕೊಂಡಿರುವ ಚಿತ್ರವಿದು.

'90ರ ಕಾಲಘಟ್ಟದಲ್ಲಿ ಕಾಲ್ಪನಿಕ ಮಾರಿಗುಡ್ಡ ಎಂಬ ಸ್ಥಳದಲ್ಲಿ ಗಡ್ಡಧಾರಿಗಳಾದ ದರೋಡೆಕೋರರ ಗುಂಪಿನ ಕಥೆಯಿದು. ಒಂದೆಡೆ ದರೋಡೆಯ ಕಥೆಯಾದರೆ ಇನ್ನೊಂದು ಪಥದಲ್ಲಿ ಪ್ರೇಮಕಥೆ ತೆರೆದುಕೊಳ್ಳುತ್ತದೆ. ಚಿತ್ರದ ಕೊನೆಯಲ್ಲಿ ಎಲ್ಲ ಆಯಾಮಗಳು ಸೇರುತ್ತವೆ. ಕೋಲಾರ, ನರಸಾಪುರಘಟ್ಟ, ಏರೋಹಳ್ಳಿ ಘಟ್ಟ, ಕೆಜಿಎಫ್ ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ' ಎಂದಿದೆ ಚಿತ್ರತಂಡ.

ನಿರ್ದೇಶಕ ರಾಜೀವ್ ಚಂದ್ರಕಾಂತ್, 'ವಿಲನ್‌ಗೋಸ್ಕರವೇ ಈ ಕಥೆ ಬರೆದಿರುವುದು ವಿಶೇಷ. ಕಥೆಯ ಇನ್ನಷ್ಟು ವಿಶೇಷತೆಗಳನ್ನು ಚಿತ್ರದಲ್ಲಿ ನೋಡಿ' ಎಂದರು. ನಾಯಕ ಪ್ರವೀಣ್, ನಾಯಕಿ ನಮ್ರತಾ ಅಗಸಿಮನಿ, ಸಂಗೀತ ಸಂಯೋಜಕ ಕೆ.ಎಂ.ಇಂದ್ರ ಚಿತ್ರತಂಡದಲ್ಲಿದ್ದಾರೆ. ತಾರಾಗಣದಲ್ಲಿ ಗಣೇಶ್‌ರಾವ್, ಬೆನಕ ನಂಜಪ್ಪ, ರಕ್ಷಿತ್, ನಂಜುಂಡ, ನಾಗಾವಿಜಯ್, ಶಾರುಣ್ ಲೋಕೇಶ್, ಗಾಯಿತ್ರಿ, ಸೆಲ್ವಿ, ಬೇಬಿಮಾರಿಷ ನಟಿಸಿದ್ದಾರೆ. ಸಲಗ ಸೂರಿ ಈ ಚಿತ್ರದ ನಿರ್ಮಾಪಕರು.

ನಾಳೆ 'ಮಲ್ಲೇಶ್ವರಂ ಸಮುದಾಯ ಸಂಭ್ರಮ'

ಸಮಾಜದ ಒಳಿತಿಗಾಗಿ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ಹಲವು ಸರ್ಕಾರೇತರ ಸಂಸ್ಥೆಗಳಿವೆ (ಎನ್‌ಜಿಒ). ಅಂತಹ ಸಂಸ್ಥೆಗಳನ್ನು ಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ 'ಪ್ರಕೃತಿ ಓಂಕಾರ ಸ್ವಿಟ್ಜರ್‌ಲ್ಯಾಂಡ್' ಆಶ್ರಯದಲ್ಲಿ ಇದೇ ಮೊದಲ ಬಾರಿಗೆ 'ಮಲ್ಲೇಶ್ವರಂ ಸಮುದಾಯ ಸಂಭ್ರಮ' ಎಂಬ ಕಾರ್ಯಕ್ರಮ ಆಯೋಜಿಸಲಾಗಿದೆ.

ಫೆ.12ರಂದು (ಭಾನುವಾರ) ನಗರದ ಮಲ್ಲೇಶ್ವರದ ಕೆನರಾ ಯೂನಿಯನ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ರಾತ್ರಿ 8ರವರೆಗೂ ನಡೆಯಲಿದೆ.

ಮಲ್ಲೇಶ್ವರದ ಸುತ್ತಮುತ್ತಲಿನ 12 ಎನ್‌ಜಿಒಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿವೆ. ಸಾರ್ವಜನಿಕರಿಗೆ ಪ್ರವೇಶ ಉಚಿತ.

ಕೃಷಿ, ಮಹಿಳೆ ಸೇರಿದಂತೆ ವಿವಿಧ ಸಾಮಾಜಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಈ ಸಂಸ್ಥೆಗಳು ಮತ್ತು ಅವರ ಕಾರ್ಯಚಟುವಟಿಕೆಗಳನ್ನು ಇನ್ನಷ್ಟು ಜನರ ಬಳಿಗೆ ಕೊಂಡೊಯ್ಯುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಗ್ರೀನ್ ಪಾತ್ ಸಂಸ್ಥೆಯ ವಿಮಲಾ ರಂಗಾಚಾರ್ ಮತ್ತು ಎಚ್.ಆರ್. ಜಯರಾಮ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಂತರ ಸ್ಥಳೀಯ ಪ್ರತಿಭೆಗಳಿಂದ ಪ್ರತಿಭಾ ಪ್ರದರ್ಶನವಿದೆ.

ಅಜಯ ಡ್ಯಾನ್ಸ್ ಅಕಾಡೆಮಿ ಯಿಂದ ನೃತ್ಯ ಪ್ರದರ್ಶನ ಸೇರಿದಂತೆ, ಕಲಾವಿದರಿಂದ ವಯಲಿನ್ ವಾದನ, ಜನಪದ ಗೀತೆಗಾಯನ ಮತ್ತಿತರ ಕಾರ್ಯಕ್ರಮಗಳಿವೆ.

ಒನ್‌ಪ್ಲಸ್ ಹೊಸ ಉತ್ಪನ್ನ ಮಾರುಕಟ್ಟೆಗೆ

ಮೊಬೈಲ್ ಉದ್ಯಮದಲ್ಲಿನ ಮುಂಚೂಣಿ ಸಂಸ್ಥೆ ಒನ್‌ಪ್ಲಸ್, ತನ್ನ ಕ್ಲೌಡ್ 11 ಕಾರ್ಯಕ್ರಮದಲ್ಲಿ ಒನ್‌ಪ್ಲಸ್ 11 ಮೊಬೈಲ್ ಸೇರಿದಂತೆ ಹಲವಾರು ಹೊಸ ಉತ್ಪನ್ನಗಳನ್ನು ಪರಿಚಯಿಸಿದೆ. ತನ್ನ ಮೊದಲ ಆ್ಯಂಡ್ರಾಯ್ಡ್ ಟ್ಯಾಬ್ಲೆಟ್ ಅನ್ನು ಕೂಡ ಬಿಡುಗಡೆಗೊಳಿಸಿದೆ.

ಕಂಪನಿಯು ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಒನ್‌ಪ್ಲಸ್ 11, ಒನ್‌ಪ್ಲಸ್ 11R, ಒನ್‌ಪ್ಲಸ್ ಪ್ಯಾಡ್, ಒನ್‌ಪ್ಲಸ್ ಬಡ್ ಪ್ರೊ 2, ಒನ್‌ಪ್ಲಸ್ ಟಿವಿ Q2 ಪ್ರೊ ಮತ್ತು ಮೆಕ್ಯಾನಿಕಲ್ ಕೀಬೋರ್ಡ್ ಅನ್ನು ಪರಿಚಯಿಸಿತು.

ಒನ್‌ಪ್ಲಸ್ ಕ್ಲೌಡ್ 11 ವೈಶಿಷ್ಟ್ಯವೆಂದರೆ ಸ್ನಾಪ್‌ಡ್ರಾಗನ್ 8 ಜೆನ್ 2-ಬೆಂಬಲಿತ ಒನ್‌ಪ್ಲಸ್ 11. ಇದು 3 ನೇ ತಲೆಮಾರಿನ ಹ್ಯಾಸೆಲ್‌ಬ್ಲಾಡ್ ಕ್ಯಾಮೆರಾ ಸಿಸ್ಟಮ್ ಮತ್ತು 100W ವೇಗದ ಚಾರ್ಜಿಂಗ್‌ನೊಂದಿಗೆ ಕಾಣಿಸಿಕೊಂಡಿದೆ. ಇದಲ್ಲದೆ, ಫೋನ್ 16GB RAM ಹೊಂದಿದೆ. ಕಂಪನಿಯು ನಾಲ್ಕು ಪ್ರಮುಖ ಆ್ಯಂಡ್ರಾಯ್ಡ್ OS ಅಪ್‌ಡೇಟ್ ಮತ್ತು ಐದು ವರ್ಷಗಳ ಸೆಕ್ಯುರಿಟಿ ಅಪ್‌ಡೇಟ್ ನೀಡುವುದಾಗಿ ಘೋಷಿಸಿದೆ. ಒನ್‌ಪ್ಲಸ್ 11 ಒರಿಜಿನಲ್ ವರ್ಷನ್ ಬೆಲೆ ₹56,999 ರಿಂದ ಪ್ರಾರಂಭವಾಗಲಿದೆ. ಇದು ಹಿಂದಿನ ವರ್ಷದ ಒನ್‌ಪ್ಲಸ್ 10 Pro ನ ಆರಂಭಿಕ ಬೆಲೆಗೆ ಹೋಲಿಸಿದರೆ ಕಡಿಮೆಯಾಗಿದೆ.

ಒನ್‌ಪ್ಲಸ್ 11R ಸ್ನಾಪ್‌ಡ್ರಾಗನ್ 8 + Gen 1 ಪ್ರೊಸೆಸರ್ ಅನ್ನು ಆಧರಿಸಿದೆ ಮತ್ತು ಫೋನ್ ಹ್ಯಾಸೆಲ್‌ಬ್ಲಾಡ್ ಬ್ರ್ಯಾಂಡಿಂಗ್ ಅನ್ನು ಹೊರತುಪಡಿಸಿ ಟ್ರಿಪಲ್ ಕ್ಯಾಮೆರಾ ಸೆಟಪ್ ಅನ್ನು ಕೂಡ ಹೊಂದಿದೆ. ಒನ್‌ಪ್ಲಸ್ 11R ಬೆಲೆ ₹ 39,999 ರಿಂದ ಪ್ರಾರಂಭವಾಗುತ್ತದೆ. ಮೆಕ್ಯಾನಿಕಲ್ ಕೀಬೋರ್ಡ್ ಏಪ್ರಿಲ್‌ನಲ್ಲಿ ಲಭ್ಯವಾಗಲಿದೆ ಎಂದು ಕಂಪನಿ ತಿಳಿಸಿದೆ.

ಶಿಕ್ಷಣ ಮತ್ತು ಕೌಶಲ್ಯದೊಂದಿಗೆ ಯುವಸಮೂಹವನ್ನು ಸಜ್ಜುಗೊಳಿಸುವ ಹಾದಿಯಲ್ಲಿ ಶಾಸಕ ಕೆ.ಜೆ.ಜಾರ್ಜ್

ಶಿಕ್ಷಣ, ಮತ್ತು ಕೌಶಲ್ಯತರಬೇತಿ ಪಡೆದ ಯುವಸಮೂಹ ಜೀವನದಲ್ಲಿ ಯಶಸ್ವಿಯಾಗುತ್ತಾರೆ ಎಂದು ಹೇಳುವ ಮುಖಾಂತರ ಸರ್ವಜ್ಞ ನಗರ ಕ್ಷೇತ್ರದ ಏಳಿಗೆಗಾಗಿ ಯುವಸಮೂಹದ ಪ್ರಗತಿಗಾಗಿ ಸಮಗ್ರ ಯೋಜನೆಗಳನ್ನ ರೂಪಿಸಿದ್ದಾರೆ ಶಾಸಕ ಕೆ.ಜೆ ಜಾರ್ಜ್.

ಶಿಕ್ಷಣದಿಂದ ಮಾತ್ರ ದೇಶದ ಭವಿಷ್ಯ ಅಡಗಿದೆ. ನಮ್ಮ ದೇಶದಲ್ಲಿ ಹೆಚ್ಚು ಜನಸಂಖ್ಯೆಯಿದ್ದು ಎಲ್ಲರಿಗೂ ಸಮಾನ ಶಿಕ್ಷಣ ಸಿಗುವುದು ಸಾಧ್ಯವಿಲ್ಲದ ಕಾರಣ ಒಳ್ಳೆಯ ಶಿಕ್ಷಣ ಮಕ್ಕಳಿಗೆ ದೊರೆಯಲು ನಾವು ಹೆಚ್ಚು ಮಾರ್ಗಗಳನ್ನು ಅನ್ವೇಷಿಸಬೇಕಿದೆ. ಲಭ್ಯವಿರುವ ಕರ ಕುಶಲ ಹಾಗೂ ಕೈಗಾರಿಕಾ ತರಬೇತಿ ಕೂಡ ಯುವಕರಿಗೆ ಆಸರೆಯಾಗಬಲ್ಲದು, ಹಾಗಾಗಿ ಎಲ್ಲಾ ವರ್ಗದ ಯುವಸಮೂಹಕ್ಕೆ ಶಿಕ್ಷಣ, ಮತ್ತು ಉದ್ಯೋಗಕ್ಕೆ ಕೌಶಲ್ಯದ ತರಬೇತಿ ಮುಖ್ಯವಾಗುತ್ತದೆ ಇದು ಅವರನ್ನ ಆರ್ಥಿಕವಾಗಿ ಸಬಲರನ್ನಾಗಿ ಮಾಡಿ ಅವರ ಬೆಳವಣಿಗೆಗೆ ಪೂರಕವಾಗುತ್ತದೆ. ಅಂತೆಯೇ ಅವರಿಗೆ ಹೆಚ್ಚಿನ ಕೋರ್ಸ್‌ಗಳನ್ನು, ತರಬೇತಿಯನ್ನು ನೀಡಿ ಪ್ರೋತ್ಸಾಹಿಸುತ್ತಾ ಅವರನ್ನು ಜೀವನೋಪಾಯದ ದುಡಿಮೆಗೆ ಅಣಿಯಾಗಿಸಬೇಕು.

ನಮ್ಮ ಭಾರತದಲ್ಲಿ ಉನ್ನತ ದರ್ಜೆಯ ಶಿಕ್ಷಣ ಸೌಲಭ್ಯಗಳು ಸಾಕಷ್ಟು ಇದ್ದರೂ, ದೇಶದಲ್ಲಿ ಸಾಕಷ್ಟು ಜನ ಉನ್ನತ ಶಿಕ್ಷಣ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಹಾಗಾಗಿ ಎಲ್ಲರನ್ನೂ ಒಳಗೊಳ್ಳುವ, ಎಲ್ಲರಿಗೂ ಲಭ್ಯವಾಗುವ ಶಿಕ್ಷಣ ವ್ಯವಸ್ಥೆ ಇಂದಿನ ತುರ್ತು ಅಗತ್ಯವಾಗಿದೆ ಎಂದು ಸರ್ವಜ್ಞನಗರ ಕ್ಷೇತ್ರದ ವಿಧಾನಸಭಾ ಸದಸ್ಯ ಕೆ ಜೆ ಜಾರ್ಜ್ ವಿವರಿಸುತ್ತಾರೆ.

ಪ್ರತಿಯೊಬ್ಬರಿಗೂ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂದು ಪ್ರತಿಪಾದಿಸುವ ಜಾರ್ಜ್ ಅವರು ತಮ್ಮ ಕ್ಷೇತ್ರದಿಂದ ಮತ್ತು ಸುತ್ತಮುತ್ತಲಿನ ನೆರೆಹೊರೆಯ ಪ್ರದೇಶದ ಯುವಕ, ಯುವತಿಯರಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗಗಳನ್ನು ಸದೃಡಗೊಳಿಸಲು ಒಂದು ಕಾರ್ಯಯೋಜನೆಯ ಪ್ರಣಾಳಿಕೆಯನ್ನ ಸಿದ್ದಪಡಿಸಿದ್ದು ಯುವ ಸಮೂಹ ಉತ್ತಮ ಜೀವನ ನಡೆಸಲು ಅಗತ್ಯವಾದ ಕೌಶಲ್ಯಗಳ ತರಬೇತಿಯನ್ನು ನೀಡುವ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಶಿಕ್ಷಣ ನೀಡುವಾಗ ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ವ್ಯಕ್ತಿಯ ಜೀವನೋಪಾಯ ಮತ್ತು ಭವಿಷ್ಯದ ಅವಶ್ಯಕತೆಗಳಿಗೆ ಸರಿಹೊಂದುವ ಕೋರ್ಸ್‌ಗಳು ಮತ್ತು ವಿಷಯಗಳನ್ನು ನಾವು ಅಭಿವೃದ್ಧಿಪಡಿಸಿ ನೀಡಬೇಕು. ಇದು ನನ್ನ ಆದ್ಯತೆಯಾಗಿದೆ" ಎಂದು ಜಾರ್ಜ್ ಹೇಳುತ್ತಾರೆ.

ಮೇಲ್ದರ್ಜೆಗೇರಿದ ಅತ್ಯುತ್ತಮ ಗುಣಮಟ್ಟದ ಶಾಲೆಗಳು, ಅಂಗನವಾಡಿಗಳು: ಜಾರ್ಜ್ ಶಾಸಕರಾಗಿರುವ ಸರ್ವಜ್ಞ ನಗರ ಕ್ಷೇತ್ರದ ಎಲ್ಲಾ ಅಂಗನವಾಡಿಗಳ ಗುಣಮಟ್ಟವನ್ನು ಸಂಪೂರ್ಣ ಉತ್ತಮಗೊಳಿಸಿದ್ದು ಅವು ಈಗ ಮಕ್ಕಳು ನಲಿಯುತ್ತಾ ಕಲಿಯುವ ತಾಣಗಳಾಗಿವೆ. ಅಲ್ಲಿನ ಸ್ವಚ್ಚತೆ ಹಾಗೂ ಮೂಲ ಸೌಕರ್ಯವಂತೂ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಜಾರ್ಜ್ ಅವರು ಆಧುನಿಕ ಗುಣಮಟ್ಟದ ಸೌಲಭ್ಯಗಳನ್ನು ಇಲ್ಲಿ ಅಳವಡಿಸಿದ್ದು ನಾಯಕರೊಬ್ಬರು ಮನಸ್ಸು ಮಾಡಿದರೆ ತಮ್ಮ ಕ್ಷೇತ್ರವನ್ನು ಹೇಗೆ ಅಭಿವೃದ್ಧಿಪಡಿಸಲು ಸಾಧ್ಯ ಎನ್ನುವುದಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಸರ್ವಜ್ಞ ನಗರ ಕ್ಷೇತ್ರದ ಎಲ್ಲಾ 40 ಕ್ಕೂ ಹೆಚ್ಚು ಅಂಗನವಾಡಿಗಳು ಮತ್ತು 27 ಸರ್ಕಾರಿ ಶಾಲೆಗಳಿಗೆ ಜಾರ್ಜ್ ಅವರು ಅಧ್ಯಕ್ಷರಾಗಿರುವ ಎಂಬಸಿ ಗಾಲ್ಫ್ ಲಿಂಕ್ಸ್ ಬ್ಯುಸಿನೆಸ್ ಪಾರ್ಕ್‌ನ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯನ್ನು ಬಳಸಿಕೊಂಡು ಇತರೆ ಅಂಗನವಾಡಿಗಳಿಗಿಂತ ಅತ್ಯುತ್ತಮ ಅಂಗನವಾಡಿಗಳು ಹಾಗೂ ಹಾಗೂ ಶಾಲೆಗಳನ್ನಾಗಿ ಪರಿವರ್ತಿಸಿರುವ ಹೆಗ್ಗಳಿಕೆ ಇವರಿಗಿದೆ.

ಅತ್ಯಾಧುನಿಕತೆಯ ಸ್ಪರ್ಶವನ್ನು ಪಡೆದ ಶಾಲೆಗಳು: ಸರ್ವಜ್ಞ ನಗರ ಕ್ಷೇತ್ರದ ಎಲ್ಲಾ 27 ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳಿಗೆ ಸರಿಸಮಾನವಾಗಿ ಆಧುನಿಕ ಸೌಲಭ್ಯಗಳೊಂದಿಗೆ ಹೆಮ್ಮೆಯ ದ್ಯೋತಕವಾಗಿ ನಿಂತಿವೆ. ಎಲ್ಲಾ ಅರ್ಹ ಯುವಸಮೂಹಕ್ಕೆ, ಮತ್ತು ಸಮಾಜೋ-ಆರ್ಥಿಕವಾಗಿ ಹಿಂದುಳಿದ, ಮಕ್ಕಳಿಗೂ ಯಾವ ಖಾಸಗೀ ಶಾಲೆಯ ಅತ್ಯುನ್ನತ ಸೌಲಭ್ಯಗಳಿಗೂ ಕಡಿಮೆ ಇಲ್ಲದಂತೆ ಇಲ್ಲಿನ ಶಾಲೆಗಳು ಮರು ರೂಪ ಪಡೆದಿವೆ. ಎಲ್ಲಾ ವರ್ಗದ ಮಕ್ಕಳಿಗೂ ಪ್ರವೇಶವನ್ನ ಕಲ್ಪಿಸಲಾಗಿದ್ದು ಈ ಶಾಲೆಗಳಲ್ಲಿ ದಾಖಲಾತಿ ಕೂಡ ದಾಖಲೆ ಪ್ರಮಾಣದಲ್ಲಿ ಏರಿಕೆಯಾಗಿದೆ ಮತ್ತು ವಿದ್ಯಾಭ್ಯಾಸವನ್ನು ಅರ್ಧಕ್ಕೆ ಬಿಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಸಾಕಷ್ಟು ಇಳಿಕೆ ಕಂಡಿದೆ. ಇದು ಸ್ವತಃ ಜಾರ್ಜ್ ಅವರಿಗೇ ಸಂತಸದ ಸಂಗತಿಯಷ್ಟೇ ಅಲ್ಲ, ಶಾಲಾ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಿಗೂ ಅತ್ಯಂತ ಸಂತಸದ ಹಾಗೂ ಆತ್ಮವಿಶ್ವಾಸ ಹೆಚ್ಚಿಸುವಂತ ವಿಷಯವಾಗಿದೆ.

ಕೆ ಜೆ ಜಾರ್ಜ್ ಅವರು ಉನ್ನತೀಕರಿಸಿದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಂದಿಗೆ ಸಂವಾದ

ಶಾಲೆಗಳ ಉನ್ನತೀಕರಣದ ಮುಖ್ಯ ಅಂಶಗಳು

- ಪಠ್ಯಗಳನ್ನು ಸಂಪೂರ್ಣ ಅನಿಮೇಟ್ ಮಾಡಲಾಗಿದ್ದು ಎಲ್ಲಾ ಶಾಲೆಗಳಲ್ಲಿ ಸ್ಮಾರ್ಟ್ ತರಗತಿಗಳನ್ನು ಕಲ್ಪಿಸಲಾಗಿದೆ. ಇದು ಮಕ್ಕಳಿಗೆ ಉತ್ತಮ ಹಾಗೂ ಪರಿಣಾಮಕಾರೀ ಕಲಿಕೆಗೆ ಪೂರಕವಾಗಿದೆ. ಹೊಸದಾಗಿ ಶಾಲಾ ಗೋಡೆಗಳನ್ನು ಪೇಂಟ್ ಮಾಡಲಾಗಿದ್ದು ಶಾಲೆಯಲ್ಲಿ ಒಂದು ಬಗೆಯ ತಾಜಾತನದ ಭಾವನೆ ಮಕ್ಕಳಲ್ಲಿ ಮೂಡಿದೆ.
- ನವೀಕರಿಸಿದ ಸ್ವಚ್ಛ ಶೌಚಾಲಯಗಳು ಮತ್ತು ಊಟದ ಹಾಲ್‌ಗಳು ಶಾಲೆಯ ವಾತಾವರಣಕ್ಕೆ ಹೆಚ್ಚಿನ ಮೆರುಗು ನೀಡಿವೆ. ಶಾಲೆಗಳು ಅತ್ಯಂತ ಶುಚಿತ್ವ ಹಾಗೂ ಶುಭ್ರತೆಯಿಂದ ಕೂಡಿವೆ
- ನಿರ್ಮಲ ಸ್ವಚ್ಛ ಪರಿಸರ ಇರುವುದರಿಂದ ಕಲಿಕೆಯ ಸಂಭ್ರಮ ಮಕ್ಕಳಲ್ಲಿ ಮನೆಮಾಡಿದೆ.
- ಪ್ರಯೋಗಗಳ ಮೂಲಕ ತಾಂತ್ರಿಕ ಹಾಗೂ ಬೌದ್ದಿಕ ಜ್ಞಾನಕ್ಕೆ ಸಹಕಾರಿಯಾಗುವಂತ, ಕಲಿಕೆಗೆ ಅನುಕೂಲವಾಗುವಂತೆ ಶಾಲೆಗಳು ಆಧುನಿಕ ಮತ್ತು ಸಂಪೂರ್ಣ "ಸುಸಜ್ಜಿತ ಹಾಗೂ ಪ್ರಯೋಗಾತ್ಮಕ" ಲ್ಯಾಬ್ ಗಳನ್ನ ಹೊಂದಿವೆ
- ಮಕ್ಕಳ ಸಮಗ್ರ ಬೆಳವಣಿಗೆಗಾಗಿ, ಶಾಲೆಗಳಲ್ಲಿನ ಆಟದ ಮೈದಾನಗಳನ್ನು ಕ್ರೀಡಾ ಸೌಲಭ್ಯಗಳೊಂದಿಗೆ ಮೇಲ್ದರ್ಜೆಗೇರಿಸಲಾಗಿದೆ.
- ಅಂಗನವಾಡಿಗಳು ಮಕ್ಕಳ ಸಮಗ್ರ ಬೆಳವಣಿಗೆಗೆ ಅಡಿಪಾಯವನ್ನು ಹಾಕಿಕೊಡುತ್ತವೆ. ಇಲ್ಲಿ ಪೌಷ್ಟಿಕ ಆಹಾರ ಒದಗಿಸುತ್ತಿರುವುದರಿಂದ ಮಕ್ಕಳ ಆರೋಗ್ಯ ಸುಧಾರಿಸಿ ರೋಗ ನಿರೋಧಕ ಶಕ್ತಿಯು ಹೆಚ್ಚಿದೆ. ಅಪೌಷ್ಟಿಕತೆಯನ್ನು ತೊಡೆದು ಹಾಕಲು ಮತ್ತು ಮಕ್ಕಳು ಶಾಲೆ, ಅಂಗನವಾಡಿಗಳಿಗೆ ಸಂತೋಷದಿಂದ ಬರಲು ಇದು ಪೂರಕ. ಇದರಿಂದ ಪೋಷಕರೂ ಸಂತಸಗೊಂಡಿದ್ದಾರೆ.
- ಉತ್ತಮ ಮೂಲಸೌಕರ್ಯ ಇರುವುದರಿಂದ ಪರಿಸರ, ಅತ್ಯಾಧುನಿಕ ಕಲಿಕೆ ಮತ್ತು ಬೆಳವಣಿಗೆಯನ್ನ ರೂಪಿಸಲು ಇವು ಸ್ಫೂರ್ತಿದಾಯಕ ಸ್ಥಳಗಳಾಗಿವೆ.

ಉಳ್ಳವರ-ಇಲ್ಲದವರ ಮಕ್ಕಳ ನಡುವಿನ ಅಂತರ ಕಡಿಮೆ ಮಾಡುವ ನಿಟ್ಟಿನಲ್ಲಿ: "ಶ್ರೀಮಂತ ಕುಟುಂಬಗಳಿಂದ ಬಂದ ವಿದ್ಯಾರ್ಥಿಗಳು ಹಲವು ದುಬಾರಿ ಹಾಗೂ ಪ್ರಸಿದ್ಧ ಶಾಲೆಗಳಲ್ಲಿ ಓದುತ್ತಾರೆ. ಆರ್ಥಿಕ ಹಾಗೂ ಸಾಮಾಜಿಕವಾಗಿ ದುರ್ಬಲ ವರ್ಗದ ಮಕ್ಕಳು ಅದರಿಂದ ವಂಚಿತಗೊಳ್ಳುತ್ತಾರೆ ಹಾಗಾಗಿ ಹೀಗೆ ಅವಕಾಶ ವಂಚಿತರಾದ ಮಕ್ಕಳಿಗೆ ಒಳ್ಳೆಯ ಅವಕಾಶ ಮತ್ತು ಸೌಲಭ್ಯಗಳನ್ನು ನೀಡಲು ನಾನು ಬಯಸುತ್ತೇನೆ. ಶಾಲಾ ಶಿಕ್ಷಣವು ಭದ್ರ ಅಡಿಪಾಯವಾಗಿರಬೇಕು. ಅದಕ್ಕಾಗಿಯೇ ಅಸ್ತಿತ್ವದಲ್ಲಿರುವ ಸರ್ಕಾರಿ ಶಾಲೆಗಳನ್ನು ಪುನರ್ ರೂಪಿಸಲು ಮತ್ತು ಅವುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಅಭಿವೃದ್ಧಿಪಡಿಸಲು ನಾನು ನಿರ್ಧರಿಸಿ ಜಾರಿಗೊಳಿಸಿದೆ. ಇಲ್ಲಿನ ಶಿಕ್ಷಕರ ಬದ್ಧತೆ ಹಾಗೂ ಅವರು ನೀಡುವ ಶಿಕ್ಷಣದ ಗುಣಮಟ್ಟವು ಉನ್ನತವಾಗಿದ್ದು ಶಾಲೆಗಳು ಈಗ ಮಕ್ಕಳು ಬೌದ್ದಿಕವಾಗಿ ಮತ್ತು ಪರಿಣಾಮಕಾರಿಯಾಗಿ ಜ್ಞಾನವರ್ಧಿಸುವ ಮತ್ತು ಅವರ ಸಾಮಾಜಿಕ ಬೆಳವಣಿಗೆಗೆ ಅನುವು ಮಾಡಿಕೊಡುವ ವಾತಾವರಣವನ್ನು ಹೊಂದಿವೆ" ಎಂದು ಜಾರ್ಜ್ ವಿವರಿಸುತ್ತಾರೆ.

ಲಿಂಗರಾಜಪುರದಲ್ಲಿ ಹೊಸ ಪದವಿ ಕಾಲೇಜು: ಸರ್ವಜ್ಞ ನಗರ ಕ್ಷೇತ್ರದ ಲಿಂಗರಾಜಪುರಂ ನಲ್ಲಿ ಹೊಸ ಕಾಲೇಜು ತಲೆ ಎತ್ತಿದ್ದು ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡಲು ಉತ್ಸುಕರಾಗಿದ್ದಾರೆ.

ಅತ್ಯಾಧುನಿಕ ಮೂಲಸೌಕರ್ಯ ಮತ್ತು ಗುಣಮಟ್ಟದ ಬೋಧನೆ ಹಾಗೂ ವಿದ್ಯಾರ್ಥಿಗಳನ್ನು ರೂಪುಗೊಳಿಸಿ ಸ್ಪರ್ಧಾಜಗತ್ತಿನ ಜೊತೆ ಸ್ಪರ್ಧಿಸಲು ತಯಾರುಮಾಡುವುದು ಈ ಕಾಲೇಜಿನ ಉದ್ದೇಶ.

ಇಲ್ಲಿ ಸಿಗುವ ವಿದ್ಯೆ, ಅರಿವು ಮತ್ತು ಅರ್ಹತಾ ಪತ್ರ ವಿದ್ಯಾರ್ಥಿಗಳಿಗೆ ಮನೋಧೈರ್ಯ ಬರುವಂತೆ ಮಾಡುತ್ತದೆ ಮತ್ತು ಅವರು ಬಯಸುವ ಉದ್ಯೋಗವನ್ನ ಪಡೆಯಲು ಶಕ್ತರಾಗುವಂತೆ ರೂಪುಗೊಳ್ಳುತ್ತಾರೆ.

ಇಲ್ಲಿ ಶಿಕ್ಷಣ, ಬೋಧನೆ ಮತ್ತು ಉದ್ಯೋಗಕ್ಕೆ ಬೇಕಾದ ಮತ್ತು ಯಶಸ್ವಿ ವೃತ್ತಿಜೀವನ ಮತ್ತು ಜೀವನವನ್ನು ಯಶಸ್ವಿಯಾಗಿ ನಿರ್ವಹಿಸಲು ಅಗತ್ಯವಾದ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ಎಲ್ಲಾ ರೀತಿಯ ವ್ಯವಸ್ಥೆಯೊಂದಿಗೆ ನಿರ್ಮಿಸಲಾಗಿದೆ, ಇದರಿಂದ ಸಮಾಜದ ಎಲ್ಲಾ ಸ್ತರದ ಯುವ ಜನತೆ ತಮಗೆ ಸೂಕ್ತವಾದ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ಶಿಕ್ಷಣವನ್ನು ಪಡೆದು ಉದ್ಯೋಗವನ್ನ ಪಡೆಯುವ ಮೂಲಕ ಹಲವು ಪೀಳಿಗೆಗಳ ಆರ್ಥಿಕ ಸಬಲೀಕರಣ ಸಾಕಾರವಾಗಲಿದೆ.

"ಪದವಿ ಮತ್ತು ಉನ್ನತ ಶಿಕ್ಷಣವು ಹಲವು ವಿದ್ಯಾರ್ಥಿಗಳ ಮುಖ್ಯ ಗುರಿ. ಇನ್ನು ಕೆಲವರು ಡಿಪ್ಲೊಮಾ ಅಥವಾ ಕೌಶಲ್ಯತರಬೇತಿ ಪಡೆಯಬಯಸುತ್ತಾರೆ. ಮೂಲಭೂತ ಅರ್ಹತೆಯ ಹೊರತಾಗಿಯೂ, ಶಿಕ್ಷಣ ವ್ಯವಸ್ಥೆಯು ಅವರು ಕಲಿಯಬಹುದಾದ ಕೋರ್ಸ್‌ಗಳು ಮತ್ತು ವಿಷಯವನ್ನು ಒದಗಿಸುವಲ್ಲಿ ಸಫಲವಾದರೆ ಅವರ ಮೂಲಭೂತ, ಅಂತರ್ಗತ ಪ್ರತಿಭೆಯನ್ನು ಗುರುತಿಸಿ ಬೆಂಬಲಿಸುವುದು ಸಾಧ್ಯವಾಗುತ್ತದೆ. ಅದಕ್ಕಾಗಿಯೇ ನಾವು ವಿವಿಧ ಶಿಕ್ಷಣ,ತರಬೇತಿಗಳನ್ನ ಇಲ್ಲಿ ಪರಿಚಯ ಮಾಡುತ್ತಿದ್ದೇವೆ. ಎಲ್ಲರೂ ಎಲ್ಲಾ ಶಿಕ್ಷಣವನ್ನು ಉದ್ಯೋಗ ಅಥವಾ ಸ್ವಯಂ ಉದ್ಯೋಗವನ್ನು ಮಾಡಲು ಇದು ಸಹಕಾರಿಯಾಗಬೇಕು ಎಂದು ಜಾರ್ಜ್ ಹೇಳುತ್ತಾರೆ.

ಸರ್ವಜ್ಞ ನಗರ ಕ್ಷೇತ್ರವು ಮಕ್ಕಳು ಮತ್ತು ಯುವಜನರನ್ನು ಸಮಾನವಾಗಿ ಭವಿಷ್ಯಕ್ಕೆ ಸಜ್ಜುಗೊಳಿಸುವ ಬದಲಾವಣೆಗೆ ಇದು ಸಾಕ್ಷಿಯಾಗಿದೆ

ಪರಿಣಾಮಕಾರಿ ಕಲಿಕೆಗಾಗಿ ಸ್ಮಾರ್ಟ್ ತರಗತಿಗಳು



ಇತ್ತೀಚೆಗೆ ಮೇಲ್ದರ್ಜೆಗೇರಿದ ಸಾರ್ವಜನಿಕ ಶಾಲೆ

ಫ್ರೈಡ್ ಫಿಶ್ ದಿಲ್ ಖುಷ್

ಆಹಾರ

ಮೀನಿನಲ್ಲಿ ವೈವಿಧ್ಯಮಯ ತಳಿಗಳಿದ್ದಂತೆ, ಅವುಗಳಿಂದ ತಯಾರಿಸುವ ಖಾದ್ಯಗಳಲ್ಲೂ ಸಿಕ್ಕಾಪಟ್ಟೆ ವೆರೈಟಿಗಳಿವೆ. ಅಂಥವುಗಳಲ್ಲಿ ಸುಲಭ, ಸರಳ ಹಾಗೂ ಕಡಿಮೆ ಸಮಯದಲ್ಲಿ ತಯಾರಿಸಬಹುದಾದ ಮತ್ಸ್ಯ ಖಾದ್ಯಗಳ ರೆಸಿಪಿಗಳನ್ನು ಇಲ್ಲಿ ಪರಿಚಯಿಸಿದ್ದಾರೆ **ದೀಪಕ್ ಗೌಡ.**

ಫಿಶ್ ತವಾ ಫ್ರೈ (ಮಸಾಲ ಫ್ರೈ)

ಬೇಕಾಗುವ ಸಾಮಗ್ರಿಗಳು: ಬಂಗುಡೆ ಮೀನು –4, ಕಾರ್ನ್ ಫ್ಲೋರ್ –ಒಂದು ಚಮಚ, ಅರಿಶಿನ ಪುಡಿ –ಅರ್ಧ ಚಮಚ, ಖಾರದಪುಡಿ -ಒಂದು ಚಮಚ, ಶುಂಠಿ -ಬೆಳ್ಳುಳ್ಳಿ ಪೇಸ್ಟ್, ಉಪ್ಪು –ಅರ್ಧ ಚಮಚ, ಸ್ವಲ್ಪ ನೀರು, ಸ್ವಲ್ಪ ಎಣ್ಣೆ. ಮೇಲಿನ ಎಲ್ಲ ಪದಾರ್ಥಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು. ಹೀಗೆ ಬೆರೆಸಿಕೊಂಡ ಮಸಾಲೆಯನ್ನು ಮೀನಿಗೆ ಹಚ್ಚಿ ಒಂದು ಗಂಟೆ ಕಾಲ ನೆನಸಿಡಬೇಕು.

ಮಾಡುವ ವಿಧಾನ: ಪ್ಯಾನ್‌ನಲ್ಲಿ ಎರಡು ಚಮಚ ಎಣ್ಣೆ ಹಾಕಿಕೊಂಡು ಬಿಸಿ ಮಾಡಲು ಇಡಬೇಕು. ಎಣ್ಣೆ ಬಿಸಿಯಾದ ಮೇಲೆ ಮಿಶ್ರಣ ಮಾಡಿದ ಮೀನುಗಳನ್ನು ಹಾಕಿ ಫ್ರೈ ಮಾಡಲು ಬಿಡಬೇಕು. ಮೀನಿನ ಒಂದು ಭಾಗ ಚೆನ್ನಾಗಿ ಬೆಂದ ಮೇಲೆ ಮತ್ತೊಂದು ಕಡೆಗೆ ತಿರುಗಿಸಿ ಕೊಡಬೇಕು. ಹೀಗೆ ಮೀನನ್ನು 10 ನಿಮಿಷಗಳ ಕಾಲ ಫ್ರೈ ಮಾಡಲು ಬಿಡಬೇಕು. ಈಗ ಫಿಶ್ ತವಾ ಫ್ರೈ ಸೇವಿಸಲು ಸಿದ್ಧ.

ಕರಿಮೀನು ಸಾರು

ಬೇಕಾಗುವ ಸಾಮಗ್ರಿಗಳು: ಹಸಿ ಅವರೆಕಾಳು –100 ಗ್ರಾಂ, ಕರಿಮೀನು –50 ಗ್ರಾಂ, ಬದನೆಕಾಯಿ –3, ಆಲೂಗಡ್ಡೆ –2, ಸಾಸಿವೆ –ಒಂದು ಚಮಚ, ಅರಿಶಿಣ ಪುಡಿ –ಒಂದು ಚಮಚ, ಸಾಂಬಾರ್ ಪುಡಿ –ಎರಡು ಚಮಚ, ಖಾರದಪುಡಿ –ಒಂದು ಚಮಚ, ಒಗ್ಗರಣೆ ಬೇಕಾದಷ್ಟು ಎಣ್ಣೆ, ಕರಿಬೇವು, ರುಚಿಗೆ ತಕ್ಕಷ್ಟು ಉಪ್ಪು,

ಮಸಾಲೆ: ಜೀರಿಗೆ –ಅರ್ಧ ಚಮಚ, ಈರುಳ್ಳಿ –1 ಬೆಳ್ಳುಳ್ಳಿ –1 ಟಮೊಟೊ –1, ಹುಣಸೆ ಹಣ್ಣಿನ ರಸ –ಒಂದು ಕಪ್, ಕೊತ್ತಂಬರಿ ಸೊಪ್ಪು, ತುರಿದ ಕೊಬ್ಬರಿಯನ್ನು ಸೇರಿಸಿ ಮಸಾಲೆ ರುಬ್ಬಿಕೊಳ್ಳಬೇಕು.

ಮಾಡುವ ವಿಧಾನ: ಪಾತ್ರೆಯಲ್ಲಿ ಅವರೆಕಾಳು, ಆಲೂಗಡ್ಡೆ ಬೇಯಲು ಇಡಬೇಕು. ಇವು ಬೆಂದ ಮೇಲೆ ಬದನೆಕಾಯಿ ಯನ್ನು ಹಾಕಿ ಬೇಯಲು ಬಿಡಬೇಕು. ಬಳಿಕ ರುಬ್ಬಿದ ಮಸಾಲೆಯನ್ನು ಸೇರಿಸಿ ಸಾಂಬರ್ ಅನ್ನು ಚೆನ್ನಾಗಿ ಕುದಿಯಲು ಬಿಟ್ಟು ಒಗ್ಗರಣೆಗೆ ಸಿದ್ಧಪಡಿಸಿಕೊಳ್ಳಬೇಕು. ಹೀಗೆ ಚೆನ್ನಾಗಿ ಸಾಂಬಾರ್ ಕುದಿ ಬಂದ ಬಳಿಕ ಕರಿಮೀನುಗಳನ್ನು ಸಾಂಬಾರ್‌ಗೆ ಹಾಕಿ ಚೆನ್ನಾಗಿ ತಿರುಗಿಸಿ ಕೊಡಬೇಕು. 10 ರಿಂದ 15 ನಿಮಿಷಗಳವರೆಗೆ ಬೇಯಿಸಿದರೆ ಕರಿಮೀನು ಸಾರು ಸವಿಯಲು ರೆಡಿ.

ರವಾ ಫ್ರೈ

ಬೇಕಾಗುವ ಸಾಮಗ್ರಿಗಳು: ಬಂಗುಡೆ ಮೀನು -3, ರವೆ -ಒಂದು ಕಪ್, ಎಣ್ಣೆ, ವಿನೆಗರ್ -ಒಂದು ಚಮಚ, ಖಾರದಪುಡಿ -ಒಂದು ಚಮಚ, ಪೆಪ್ಪರ್ ಪುಡಿ -ಒಂದು ಚಮಚ, ಶುಂಠಿ – ಬೆಳ್ಳುಳ್ಳಿ ಪೇಸ್ಟ್, ಅರಿಶಿನ ಪುಡಿ -ಅರ್ಧ ಚಮಚ, ರುಚಿಗೆ ತಕ್ಕಷ್ಟು ಉಪ್ಪು. ಮೀನಿನಲ್ಲಿ ಹೆಚ್ಚು ಉಪ್ಪಿನಾಂಶ ಇರುವುದರಿಂದ ಕಡಿಮೆ ಉಪ್ಪು ಬಳಸಬೇಕು.

ಮಾಡುವ ವಿಧಾನ: ಒಂದು ತಟ್ಟೆಯಲ್ಲಿ ಪುಡಿಗಳನ್ನು ಹಾಕಿಕೊಂಡು ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು. ಹೀಗೆ ಮಿಶ್ರಣ ಮಾಡಿಕೊಂಡ ಮಸಾಲೆಯನ್ನು ಮೀನಿಗೆ ಚೆನ್ನಾಗಿ ಹಚ್ಚಿ, ಅರ್ಧ ಗಂಟೆ ಕಾಲ ನೆನಸಿಡಬೇಕು. ಬಳಿಕ ಪ್ಯಾನ್‌ನಲ್ಲಿ ಎಣ್ಣೆ ಬಿಸಿ ಮಾಡಲು ಇಡಿ. ಎಣ್ಣೆ ಬಿಸಿಯಾದ ಮೇಲೆ ಬಳಿಕ ಮಿಶ್ರಣ ಮಾಡಿಕೊಂಡ ಮೀನುಗಳಿಗೆ ರವೆ ಸವರಿಕೊಂಡು ಫ್ರೈ ಮಾಡಲು ಇಡಬೇಕು. ಮೀನಿನ ಒಂದು ಭಾಗ ಚೆನ್ನಾಗಿ ಬೆಂದ ಮೇಲೆ ಮತ್ತೊಂದು ಕಡೆಗೆ ತಿರುಗಿಸಿ ಕೊಡಬೇಕು. ಹೀಗೆ ಐದರಿಂದ ಹತ್ತು ನಿಮಿಷ ಚೆನ್ನಾಗಿ ಫ್ರೈ ಮಾಡಬೇಕು. ಈಗ ರವಾ ಫ್ರೈ ಸೇವಿಸಲು ಸಿದ್ಧ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦
ತಪ್ಪಿತಸ್ಥ ಮನಸ್ಸನ್ನು ಸದಾ ಅನುಮಾನ ಕಾಡುತ್ತಿರುತ್ತದೆ.
-ವಿಲಿಯಂ ಷೇಕ್ಸ್‌ಪಿಯರ್

ಭೂಕಂಪ: ಟರ್ಕಿ– ಸಿರಿಯಾಕ್ಕೆ ಎಲ್ಲ ದೇಶಗಳು ನೆರವಾಗಬೇಕು

ಟರ್ಕಿ ಮತ್ತು ಸಿರಿಯಾವನ್ನು ನಡುಗಿಸಿದ ಎರಡು ಭೂಕಂಪಗಳ ಪೂರ್ಣ ಪರಿಣಾಮ ಏನು ಎಂಬುದು ಇನ್ನಷ್ಟೇ ತಿಳಿಯಬೇಕಿದೆ. ಭೂಕಂಪದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 7.8ರಷ್ಟು ದಾಖಲಾಗಿದೆ. ಹಲವು ದಶಕಗಳಲ್ಲಿಯೇ ಈ ಪ್ರದೇಶದಲ್ಲಿ ನಡೆದ ಅತ್ಯಂತ ಘೋರವಾದ ದುರಂತ ಇದು. ಟರ್ಕಿಯಲ್ಲಿ 19 ಸಾವಿರಕ್ಕೂ ಹೆಚ್ಚು ಮತ್ತು ಸಿರಿಯಾದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೃತರ ಸಂಖ್ಯೆಯು ಇನ್ನೂ ಹೆಚ್ಚಾಗಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿಸಿದೆ. ಭೂಕಂಪದಲ್ಲಿ ಬಲಿಯಾದವರು ಇತರ ದುರಂತಗಳಿಂದ ಈಗಾಗಲೇ ಜರ್ಜರಿತರಾಗಿದ್ದವರು ಎಂಬುದು ಈಗಿನ ದುರಂತವನ್ನು ಇನ್ನಷ್ಟು ಹೃದಯವಿದ್ರಾವಕವಾಗಿಸಿದೆ. ಭೂಕಂಪದ ಕಂಪನ ಕೇಂದ್ರವು ದಕ್ಷಿಣ ಟರ್ಕಿಯ ಗಾಜಿಯಾಂಟೆಪ್ ಆಗಿತ್ತು. ಸಿರಿಯಾದಲ್ಲಿನ ಆಂತರಿಕ ಯುದ್ಧದ ಕಾರಣದಿಂದ ನಿರಾಶ್ರಿತರಾಗಿದ್ದ ಐದು ಲಕ್ಷಕ್ಕೂ ಹೆಚ್ಚು ಮಂದಿ ಈ ಊರಿನಲ್ಲಿ ಆಶ್ರಯ ಪಡೆದಿದ್ದರು. ಅವರು ದಕ್ಷಿಣ ಟರ್ಕಿಯಲ್ಲಿ ಕಂಡುಕೊಂಡಿದ್ದ ನೆಲೆ ಕೂಡ ಈಗ ನಾಶವಾಗಿದೆ. ಹೊಸದಾಗಿ ಬದುಕು ಕಟ್ಟಿಕೊಳ್ಳಲು ಅವರಲ್ಲಿ ಈಗ ಏನೂ ಇಲ್ಲ. ಹಾಗಿದ್ದರೂ ಅವರು ಹೊಸ ಬದುಕನ್ನು ಮತ್ತೆ ಆರಂಭದಿಂದಲೇ ಕಟ್ಟಿಕೊಳ್ಳಬೇಕಿದೆ. ಭೂಕಂಪದ ಪರಿಣಾಮವು ಹಲವು ಕಾರಣಗಳಿಂದಾಗಿ ವಿಧ್ವಂಸಕಾರಿ ಎನಿಸಿಕೊಂಡಿದೆ. ಎರಡು ಪ್ರಬಲ ಭೂಕಂಪಗಳು ಒಂದರ ಬೆನ್ನಿಗೆ ಒಂದರಂತೆ ಘಟಿಸಿದವು. ಬಹುಮಹಡಿ ಕಟ್ಟಡಗಳು ಕುಸಿದು ಇಟ್ಟಿಗೆ ಮತ್ತು ಕಬ್ಬಿಣದ ರಾಶಿಗಳಾದವು. ಟರ್ಕಿ ಮತ್ತು ಸಿರಿಯಾದ ವಿಸ್ತಾರ ಪ್ರದೇಶಗಳಲ್ಲಿದ್ದ ಸಾವಿರಾರು ಮನೆಗಳು ನಾಶವಾದವು. ರಕ್ಷಣಾ ಕಾರ್ಯಾಚರಣೆ ಇನ್ನೂ ನಡೆಯುತ್ತಲೇ ಇದೆ. ಆದರೆ, ಅವಶೇಷಗಳಡಿಯಲ್ಲಿ ಸಿಲುಕಿರುವವರು ಬದುಕುಳಿದಿರುವ ಸಾಧ್ಯತೆ ಒಂದೊಂದು ತಾಸು ಕಳೆದಂತೆ ಕ್ಷೀಣವಾಗುತ್ತಿದೆ. ಈಗ, ಪುನರ್ವಸತಿ ಮತ್ತು ಪರಿಹಾರದತ್ತ ಗಮನ ಕೇಂದ್ರೀಕರಿಸಬೇಕಿದೆ.

ಪುನರ್ವಸತಿ ಮತ್ತು ಪರಿಹಾರದತ್ತ ಈಗ ಗಮನ ಕೇಂದ್ರೀಕರಿಸಬೇಕಿದೆ. ಇದಕ್ಕೆ ಎಲ್ಲ ದೇಶಗಳೂ ಸಹಾಯಹಸ್ತ ಚಾಚಬೇಕು

ನೆರವಿನ ಕರೆಗೆ ಹಲವು ದೇಶಗಳು ತಕ್ಷಣ ಸ್ಪಂದಿಸಿವೆ. ಉದಾಹರಣೆಗೆ, ಭಾರತವು ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಲು ಸಿಬ್ಬಂದಿಯನ್ನು ಕಳುಹಿಸಿಕೊಟ್ಟಿದೆ. ಆಹಾರ ಪದಾರ್ಥಗಳು, ಔಷಧ, ಹೊದಿಕೆ ಮತ್ತು ಡೇರೆಗಳನ್ನು ಪೂರೈಸಿದೆ. ಕೊರೆಯುವ ಚಳಿಯಲ್ಲಿ ಜನರು ಬಯಲಿನಲ್ಲಿಯೇ ಕಳೆಯಬೇಕಾದ ದಯನೀಯ ಸ್ಥಿತಿ ಇದೆ. ಜನರಿಗೆ ಬೆಚ್ಚನೆಯ ಹೊದಿಕೆಯ ಅಗತ್ಯ ಇದೆ. ಆಹಾರ, ಔಷಧದ ತೀವ್ರ ಕೊರತೆಯೂ ಇದೆ. ಭೂಕಂಪದಲ್ಲಿ ಮೃತಪಟ್ಟ ಎಲ್ಲರಿಗೂ ಸರಿಯಾದ ರೀತಿಯಲ್ಲಿ ಅಂತ್ಯಸಂಸ್ಕಾರ ನಡೆಸಲು ಸಾಧ್ಯವಾಗಿಲ್ಲ. ಹೀಗಾಗಿ ಸಾಂಕ್ರಾಮಿಕದ ಅಪಾಯವೂ ಇದೆ. ಹಾಗಾಗಿ, ದೇಶಗಳು ಕೈಬಿಚ್ಚಿ ನೆರವು ನೀಡಿ ಸಂತ್ರಸ್ತರ ಬೆನ್ನಿಗೆ ನಿಲ್ಲಬೇಕಿದೆ.

ಇಂತಹ ಸಂಕಷ್ಟದ ಸಂದರ್ಭದಲ್ಲಿ ಬಂಡುಕೋರರು ಮತ್ತು ತೀವ್ರವಾದಿಗಳು ಸಂತ್ರಸ್ತರ ನೆರವಿಗೆ ಚುರುಕಾಗಿ ಧಾವಿಸುತ್ತಾರೆ ಎಂಬುದು ಸಂಘರ್ಷಭರಿತವಾದ ಈ ಪ್ರದೇಶ ಮತ್ತು ಇತರ ಪ್ರದೇಶಗಳ ಅನುಭವದಿಂದ ತಿಳಿದುಬಂದಿದೆ. ಬಂಡುಕೋರರು ಮತ್ತು ತೀವ್ರವಾದಿಗಳು ತಮ್ಮ ಸ್ಥಳೀಯ ಮತ್ತು ವ್ಯವಸ್ಥಿತ ಜಾಲವನ್ನು ಬಳಸಿಕೊಂಡು ಪರಿಹಾರ ಕಾರ್ಯ ನಡೆಸುತ್ತಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿ 2005ರಲ್ಲಿ ಭೂಕಂಪ ಸಂಭವಿಸಿದಾಗ ಲಷ್ಕರ್ ಎ ತಯಬಾದಂತಹ ಉಗ್ರಗಾಮಿ ಸಂಘಟನೆಯ ಸದಸ್ಯರು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಪರಿಹಾರ ಕಾರ್ಯಾಚರಣೆ ನಡೆಸಿದ್ದರು. ಇದಾದ ಬಳಿಕ ಲಷ್ಕರ್ ಎ ತಯಬಾ ಸಂಘಟನೆ ಸೇರಿದ ಯುವಕರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆ ಆಗಿತ್ತು. ಟರ್ಕಿ ಮತ್ತು ಸಿರಿಯಾದಲ್ಲಿ ಭೂಕಂಪ ಸಂಭವಿಸಿದ ಪ್ರದೇಶವೂ ತೀವ್ರವಾದಿ ಸಿದ್ಧಾಂತಗಳ ಸಂಘಟನೆಗಳು, ಸಶಸ್ತ್ರ ಸಂಘರ್ಷ ಮತ್ತು ಆಂತರಿಕ ಯುದ್ಧ ಎಲ್ಲವೂ ಇರುವ ಪ್ರದೇಶವಾಗಿದೆ. ಇಸ್ಲಾಮಿಕ್ ಸ್ಟೇಟ್, ಅಲ್ ಕೈದಾ ಮತ್ತು ಇವುಗಳ ಅಂಗಸಂಸ್ಥೆಗಳು ಇಲ್ಲಿ ಸಕ್ರಿಯವಾಗಿವೆ. ಅಂತರರಾಷ್ಟ್ರೀಯ ಸಮುದಾಯವು ತಕ್ಷಣವೇ ನೆರವಿಗೆ ಧಾವಿಸದಿದ್ದರೆ ಭೂಕಂಪ ಸಂತ್ರಸ್ತರು ತೀವ್ರವಾದಿ ಸಂಘಟನೆಗಳ ಮೊರೆ ಹೋಗುವ ಸಾಧ್ಯತೆ ಇದೆ. ಹಾಗೆ ಆಗುವುದಕ್ಕೆ ಅವಕಾಶ ಕೊಟ್ಟರೆ, ಉಗ್ರಗಾಮಿ ಸಂಘಟನೆಗಳು ಇನ್ನಷ್ಟು ಬಲ ಪಡೆದುಕೊಂಡು, ಆಂತರಿಕ ಯುದ್ಧವು ಬಿರುಸು ಪಡೆಯಬಹುದು. ಪಶ್ಚಿಮದ ದೇಶಗಳನ್ನೂ ಒಳಗೊಂಡಂತೆ ಹಲವು ದೇಶಗಳು ಟರ್ಕಿಗೆ ನೆರವು ನೀಡಿವೆ. ಆದರೆ, ಸಿರಿಯಾದ ಅಗತ್ಯಗಳನ್ನು ನಿರ್ಲಕ್ಷಿಸಿವೆ. ಅದು ಸರಿಯಾದ ನಿಲುವು ಅಲ್ಲ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ತಮ್ಮ ಭೌಗೋಳಿಕ ರಾಜಕಾರಣ ಮತ್ತು ಪೈಪೋಟಿಯನ್ನು ಬದಿಗಿಡಬೇಕು. ಮಾನವೀಯತೆ ತೋರಬೇಕು ಮತ್ತು ನಲುಗಿ ಹೋಗಿರುವ ನಾಡನ್ನು ಮರಳಿ ಕಟ್ಟಲು ಟರ್ಕಿಯೊಂದಿಗೆ ಸಿರಿಯಾಕ್ಕೂ ನೆರವಾಗಬೇಕು.

ದಿನದ ಟ್ವೀಟ್

ಬೇಕಾಗಿದೆ ತುರ್ತು ಗಮನ

ಗೂಗಲ್‌ನಲ್ಲಿ ಒಂದು ಕ್ಷಣ ಹುಡುಕಿದರೆ ಸಾಕು, ಶಿಕ್ಷಣಕ್ಕೆ ತುರ್ತಾಗಿ ಏಕೆ ಹೆಚ್ಚು ಅನುದಾನ ನೀಡಬೇಕು ಮತ್ತು ಹೊಸದಾಗಿ ಶಿಕ್ಷಕರನ್ನು ಏಕೆ ನಿಯೋಜನೆ ಮಾಡಿಕೊಳ್ಳಬೇಕು ಎಂಬುದು ಹಣಕಾಸು ಕಾರ್ಯದರ್ಶಿಗೆ ಸ್ಪಷ್ಟವಾಗುತ್ತದೆ! ಭಾರತವು ಶಿಕ್ಷಕರ ಕೊರತೆಯಿಂದ ಬಳಲುತ್ತಿರುವ ದೇಶವಾಗಿದೆ, ಕೋವಿಡ್ ಈ ಪರಿಸ್ಥಿತಿಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಉತ್ತರಪ್ರದೇಶ ಮತ್ತು ಬಿಹಾರ ಈ ಎರಡು ರಾಜ್ಯಗಳಲ್ಲೇ ಕನಿಷ್ಠ ಒಂದು ಲಕ್ಷ ಶಿಕ್ಷಕರ ಅಗತ್ಯವಿದೆ!

(ಶಿಕ್ಷಣಕ್ಕಾಗಿ ಹೆಚ್ಚು ಹಣ ವಿನಿಯೋಗಿಸುವುದರಿಂದ ಯಾವ ಸಾಧನೆಯೂ ಆಗದು ಎಂಬ ಕೇಂದ್ರ ಹಣಕಾಸು ಕಾರ್ಯದರ್ಶಿಯ ಹೇಳಿಕೆಗೆ ಪ್ರತಿಕ್ರಿಯೆ)

ಆಶಿಶ್ ಬರುವಾ

ಕಿಡಿನುಡಿ

ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರಿಗೆ ತಾಕತ್ತಿದ್ದರೆ ಮುಸ್ಲಿಂ ಸಮುದಾಯದ ವ್ಯಕ್ತಿಯನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಿ. ಅವರು ಬಿಜೆಪಿಗೆ ಸವಾಲು ಹಾಕುವ ಮುನ್ನ, ತಮಗೇ ಸವಾಲು ಹಾಕಿಕೊಳ್ಳಲಿ.

ಡಾ. ಕೆ.ಸುಧಾಕರ್, ಆರೋಗ್ಯ ಸಚಿವ

25 ವರ್ಷಗಳ ಹಿಂದೆ

ಬುಧವಾರ, 11-2-1998

- **ವಿದೇಶದಲ್ಲಿ ಹಣ ಇಟ್ಟವರ ಹೆಸರು ಬಹಿರಂಗ: ಅಟಲ್**

ಕೋಟ (ರಾಜಸ್ತಾನ) ಫೆ. 10 (ಪಿಟಿಐ)– ಬಿಜೆಪಿ ಅಧಿಕಾರಕ್ಕೆ ಬಂದರೆ ವಿದೇಶಗಳಲ್ಲಿ ಹಣ ಕೂಡಿಡುತ್ತಿರುವ ಭಾರತೀಯರ ಹೆಸರನ್ನು ಬಹಿರಂಗಗೊಳಿಸಲಾಗುವುದು ಎಂದು ಪಕ್ಷದ ಹಿರಿಯ ನಾಯಕ ಅಟಲ್ ಬಿಹಾರಿ ವಾಜಪೇಯಿ ಹೇಳಿದರು.

ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಸೇರಿದಂತೆ ಭ್ರಷ್ಟಾಚಾರ ಮತ್ತು ಕ್ರಿಮಿನಲ್ ಆರೋಪವಿರುವ ನಾಯಕರ ಮೇಲೆ ಆರೋಪ ಸಾಬೀತಾದರೆ ಅಂಥವರ ಜತೆ ತಮ್ಮ ಪಕ್ಷ ಸಂಪರ್ಕ ಕಡಿದುಕೊಳ್ಳುವುದು ಎಂದು ಸ್ಪಷ್ಟಪಡಿಸಿದರು.

ಭ್ರಷ್ಟರು ತಮ್ಮ ದೇಶವನ್ನೇ ವಂಚಿಸಿ ವಿದೇಶಿ ಬ್ಯಾಂಕ್‌ಗಳಲ್ಲಿ ಹಣ ಸಂಗ್ರಹಿಸುವುದನ್ನು ತಡೆಯಲು ಸ್ವಿಸ್ ಸರ್ಕಾರ ಖಾತೆದಾರರ ರಹಸ್ಯ ಕಾಯುವ ತನ್ನ ಬ್ಯಾಂಕಿಂಗ್ ನಿಯಮಾವಳಿಗಳನ್ನು ಬದಲಾಯಿಸುವಂತೆ ಒತ್ತಡ ತರಬೇಕೆಂದು ವಾಜಪೇಯಿ ಅವರು ಒತ್ತಾಯಿಸಿದರು.

- **ಕಾವೇರಿ ವಿವಾದ: ಸಂಕಲ್ಪ ಕೊರತೆ– ಸೋನಿಯಾ**

ಮಂಡ್ಯ, ಫೆ. 10– 'ಕಾವೇರಿ ಜಲ ವಿವಾದವನ್ನು ಬಗೆಹರಿಸಲು ರಾಜಕೀಯ ಇಚ್ಛಾಶಕ್ತಿ ಮತ್ತು ಸದಾಶಯ ಅಗತ್ಯ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಇಂದು ಬೆಳಿಗ್ಗೆ ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಹೇಳಿದರು.

ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಸೇರಿದ್ದ ಬೃಹತ್ ಸಾರ್ವಜನಿಕ ಸಭೆಗೆ ರಾಹುಲ್ ಜತೆ ಆಗಮಿಸಿ, ಕಾಂಗ್ರೆಸ್ ಪಕ್ಷದ ಪ್ರಚಾರ ಭಾಷಣ ಮಾಡಿದ ಅವರು 'ಕರ್ನಾಟಕಕ್ಕೆ ನೆರೆಯ ರಾಜ್ಯಗಳೊಂದಿಗೆ ನೀರಿನ ತಕರಾರು ಇರುವುದರ ಅರಿವು ನಮಗಿದೆ' ಎಂದರು.

50 ವರ್ಷಗಳ ಹಿಂದೆ

ಭಾನುವಾರ, 11-2-1973

- **ಸದ್ಯಕ್ಕೆ ಭುಟ್ಟೊ ಜೊತೆ ಶೃಂಗಸಭೆ ಇಲ್ಲ: ಇಂದಿರಾ ಸ್ಪಷ್ಟನೆ**

ನವದೆಹಲಿ, ಫೆ. 10 – ಸದ್ಯದಲ್ಲಿ ಅಧ್ಯಕ್ಷ ಭುಟ್ಟೊ ಅವರೊಡನೆ ಮತ್ತೊಂದು ಶೃಂಗಸಭೆ ನಡೆಯುವ ಸಾಧ್ಯತೆಯನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ತಳ್ಳಿಹಾಕಿದರು.

ಭಾರತ– ಪಾಕಿಸ್ತಾನ– ಬಾಂಗ್ಲಾದೇಶಗಳ ಶೃಂಗಸಭೆ ನಡೆಯುವ ಸಂಭವ ಕುರಿತು ರಾವಲ್ಪಿಂಡಿಯಲ್ಲಿ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ವಾಲ್ಡ್‌ಹೈಂ ಅವರು ನೀಡಿದ ಹೇಳಿಕೆಯನ್ನು ತಾವು ಕಠಮಂಡುವಿನಿಂದ ವಾಪಸಾದ ನಂತರ ಪತ್ರಕರ್ತರು ತಮ್ಮ ಗಮನಕ್ಕೆ ತಂದಾಗ ಪ್ರಧಾನಿ 'ಅದನ್ನು ಹೇಳುವುದು ಬಹಳ ಕಷ್ಟ' ಎಂದು ಹೇಳಿದರು.

- **ಭಾರತಕ್ಕೆ ಪಾಕ್ ಬೆದರಿಕೆ ತಪ್ಪಿಲ್ಲ: ಮಾಣೆಕ್ ಷಾ**

ಲಂಡನ್, ಫೆ. 10– ಭಾರತಕ್ಕೆ ಪಾಕಿಸ್ತಾನದ ಅಪಾಯ ಇನ್ನೂ ಇದೆ ಎಂಬುದು ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಅವರ ಅಭಿಪ್ರಾಯ. 'ಭೂ ಪ್ರದೇಶ ಆಕ್ರಮಿಸುವ ಮಿಲಿಟರಿ ಸಾಮರ್ಥ್ಯ ಪಾಕಿಸ್ತಾನಕ್ಕೆ ಇರುವ ಬಗ್ಗೆ ನನಗೆ ಅನುಮಾನ ಇದೆ. ಪಾಕಿಸ್ತಾನ ಇನ್ನೂ ಒಂದೆರಡು ಬಾರಿ ಅಪ್ರಧಾನ ಎನಿಸುವ ಆದರೆ ಭಾರಿ ಆದ ಯತ್ನಗಳನ್ನು ನಡೆಸಬಹುದು. ಆದರೆ ಪ್ರಸಂಗ ಬೃಹತ್ತಾಗಿ ಪರಿಣಮಿಸುವ ಸಾಧ್ಯತೆ ಇದೆ' ಎಂದು ಅವರು ಹೇಳಿದರೆಂದು ಗಾರ್ಡಿಯನ್ ಪತ್ರಿಕೆ ಬರೆದಿದೆ. ಆ ಪತ್ರಿಕೆಯ ದೆಹಲಿ ವರದಿಗಾರರು ಪಡೆದ ಸಂದರ್ಶನದಲ್ಲಿ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಹಾಗೆ ಹೇಳಿದರು.

ಸಂವಿಧಾನದ ಭವ್ಯ ದೃಷ್ಟಿಗೆ ಪ್ರತಿಕೂಲವಾದ ನೆನಪುಗಳನ್ನು ಅಳಿಸುವ ಪ್ರಕ್ರಿಯೆ ಅಪೂರ್ಣವಾಗಿದೆ

ಅಮೃತ ಉದ್ಯಾನದಿಂದ ಅಮೃತ ಕಾಲ

ಸೂರ್ಯ-ನಮಸ್ಕಾರ
ಎ.ಸೂರ್ಯಪ್ರಕಾಶ್

ರಾಷ್ಟ್ರಪತಿ ಭವನದ ಆವರಣದಲ್ಲಿರುವ ಮೊಘಲ್ ಉದ್ಯಾನಕ್ಕೆ 'ಅಮೃತ ಉದ್ಯಾನ' ಎಂದು ರಾಷ್ಟ್ರಪತಿಯವರು ಮರುನಾಮಕರಣ ಮಾಡಿರುವುದಕ್ಕೆ ಮತ್ತದೇ ಟೀಕಾಕಾರರು ಯಥಾಪ್ರಕಾರ ಕೊಂಕು ನುಡಿದಿದ್ದಾರೆ. ಮಹತ್ವದ ಸ್ಥಳಗಳ ಹೆಸರುಗಳನ್ನು ಭಾರತೀಕರಣಗೊಳಿಸುವ ವಿಷಯದಲ್ಲಿ 'ನಿರ್ದಿಷ್ಟ ಆಯ್ಕೆ'ಗಳಿಗೆ ಮಾತ್ರ ಒತ್ತು ಕೊಡುವ ಕಾಂಗ್ರೆಸ್ ಪಕ್ಷದ ಸದಸ್ಯರು, ಭಾರತೀಯತೆಯನ್ನು ಪ್ರತಿಬಿಂಬಿಸುವ ಪ್ರತಿಯೊಂದನ್ನೂ ದ್ವೇಷಿಸುವ ಕಮ್ಯುನಿಸ್ಟರು ಮತ್ತು ಮೋದಿಯವರ ಪ್ರತೀ ಕಾರ್ಯದಲ್ಲಿ ಕೊಂಕು ಹುಡುಕುತ್ತ ಅವರನ್ನು ಬೈಯುವವರ ಗುಂಪಿನವರು– ಇವರೇ ಉದ್ಯಾನದ ಮರುನಾಮಕರಣದಲ್ಲಿ ತಪ್ಪು ಹುಡುಕುತ್ತಿರುವ ಟೀಕಾಕಾರರು.

ರಾಷ್ಟ್ರಪತಿಯವರ ಈ ನಿರ್ಧಾರವು ಸ್ವಾತಂತ್ರ್ಯದ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಭಾರತೀಯ ಮನಃಸ್ಥಿತಿಯಿಂದ ವಸಾಹತುಶಾಹಿ ಮನೋಭಾವವನ್ನು ಸಂಪೂರ್ಣವಾಗಿ ಕಿತ್ತುಹಾಕಬೇಕೆಂಬ ಮೋದಿ ನೇತೃತ್ವದ ಸರ್ಕಾರದ ಸಂಕಲ್ಪಕ್ಕೆ ಅನುಗುಣವಾಗಿಯೇ ಇದೆ. ಮುಂದಿನ ಕಾಲು ಶತಮಾನವನ್ನು ಪ್ರಧಾನಿಯವರು ಅಮೃತ ಕಾಲ ಎಂದು ಕರೆದಿದ್ದಾರೆ. ಈ ಅವಧಿಯಲ್ಲಿ ಭಾರತ ಮತ್ತೆ ವಿಶ್ವದ ಮುಂಚೂಣಿ ರಾಷ್ಟ್ರವಾಗಿ ಹೊರಹೊಮ್ಮಲಿದ್ದು, ವೈಭವದ ದಿನಗಳನ್ನೂ ಕಾಣಲಿದೆ. ಮೊಘಲ್ ಉದ್ಯಾನದ ಮರುನಾಮಕರಣವು ವಸಾಹತುಶಾಹಿ ಯುಗದ ಕೊನೆಯ ಕುರುಹುಗಳನ್ನು ತೆಗೆದುಹಾಕುವ ದೊಡ್ಡ ಕಾರ್ಯಸೂಚಿಯ ಭಾಗವಾಗಿದೆ. ವಿದೇಶಿ ಆಕ್ರಮಣಕಾರರು ದೇಶದ ಹೆಚ್ಚಿನ ಭಾಗಗಳನ್ನು ಅತಿಕ್ರಮಿಸಿದಾಗ, ಭಾರತೀಯ ನಾಗರಿಕತೆಯನ್ನು ಸಂಪೂರ್ಣವಾಗಿ ಹತ್ತಿಕ್ಕಿದ್ದರು ಹಾಗೂ ಭಾರತದ ಜನ ತಮ್ಮ ಶಕ್ತಿ ಮತ್ತು ಸಾಮರ್ಥ್ಯದ ಮೇಲೆ ತಾವೇ ನಂಬಿಕೆ ಕಳೆದುಕೊಳ್ಳುವಂತಹ ಸನ್ನಿವೇಶವನ್ನೂ ಸೃಷ್ಟಿಸಿದ್ದರು.

ಮೋದಿಯವರು 2014ರಲ್ಲಿ ಪ್ರಧಾನಿಯಾದ ದಿನದಿಂದಲೂ ಕಾಂಗ್ರೆಸ್ ಪಕ್ಷವು ತೀವ್ರ ವಿಸ್ಮೃತಿಯಿಂದ ಬಳಲುತ್ತಿದೆ. ಕಿಂಗ್ಸ್‌ವೇಗೆ ರಾಜಪಥ, ಕ್ವೀನ್ಸ್‌ವೇಗೆ ಜನಪಥ, ಕರ್ಜನ್ ರಸ್ತೆಗೆ ಕಸ್ತೂರಬಾ ಗಾಂಧಿ ಮಾರ್ಗ ಮತ್ತು ಯಾರ್ಕ್ ರಸ್ತೆಗೆ ಮೋತಿಲಾಲ್ ನೆಹರೂ ಮಾರ್ಗ ಎಂದು, ತಾನೇ ಅಧಿಕಾರದಲ್ಲಿದ್ದಾಗ ಮರುನಾಮಕರಣ ಮಾಡಿದ್ದನ್ನೂ ಆ ಪಕ್ಷ ಮರೆತಂತಿದೆ. ಅದೇ ರೀತಿ, ದೆಹಲಿಯ ಪ್ರತಿಷ್ಠಿತ ಶಾಪಿಂಗ್ ಪ್ರದೇಶ ಎನಿಸಿದ ಕನ್ನಾಟ್ ಸರ್ಕಸ್ ಮತ್ತು ಕನ್ನಾಟ್ ಪ್ಲೇಸ್‌ಗೆ– ಡ್ಯೂಕ್ ಆಫ್ ಕನ್ನಾಟ್ ಸ್ಮರಣೆಗಾಗಿ ಇಡಲಾಗಿದ್ದ ಹೆಸರು– ಕ್ರಮವಾಗಿ ಇಂದಿರಾ ಚೌಕ ಮತ್ತು ರಾಜೀವ್ ಚೌಕ ಎಂದು ಮರುನಾಮಕರಣ ಮಾಡಿದ್ದು ಕೂಡ ಇದೇ ಕಾಂಗ್ರೆಸ್ ನೇತೃತ್ವದ ಸರ್ಕಾರ. ಕ್ವೀನ್ ವಿಕ್ಟೋರಿಯಾ ರಸ್ತೆ (ರಾಜೇಂದ್ರ ಪ್ರಸಾದ್ ರಸ್ತೆ), ಕಿಂಗ್ ಎಡ್ವರ್ಡ್ ರಸ್ತೆ (ಮೌಲಾನಾ ಆಜಾದ್ ರಸ್ತೆ) ಮತ್ತು ವಿಲಿಂಗ್ಡನ್ ಕ್ರೆಸೆಂಟ್‌ನ (ಮದರ್ ತೆರೆಸಾ ಕ್ರೆಸೆಂಟ್) ಹೆಸರು ಬದಲಾಗಿದ್ದು ಕೂಡ ಕಾಂಗ್ರೆಸ್ ಪಕ್ಷವೇ ಆಡಳಿತದಲ್ಲಿದ್ದಾಗ ಎನ್ನುವುದನ್ನು ಮರೆಯುವಂತಿಲ್ಲ.

ಮರುನಾಮಕರಣದ ವಿಷಯವನ್ನು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳು ನಿರ್ವಹಿಸುತ್ತಿರುವ ರೀತಿಯಲ್ಲಿ ಭಾರಿ ಅಂತರವಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ರಸ್ತೆಗೆ ಮಾಡಿದ ಮರುನಾಮಕರಣಗಳೆಲ್ಲವೂ ಅದೇ ಪಕ್ಷದ ಮುಖಂಡರಿಗೆ ಸಂಬಂಧಿಸಿದ್ದವು. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಒಂದು ನಿರ್ದಿಷ್ಟ ಕುಟುಂಬಕ್ಕೆ ಸೇರಿದವರ ಹೆಸರುಗಳನ್ನೇ ರಸ್ತೆಗಳಿಗೆ ನಾಮಕರಣ ಮಾಡಲಾಗಿತ್ತು. ಹೀಗಾಗಿ ಮರುನಾಮಕರಣದ ಹಿಂದಿನ ಆ ಪಕ್ಷದ ಉದ್ದೇಶ ಉದಾತ್ತವಾಗಿರಲಿಲ್ಲ. ವಸಾಹತುಶಾಹಿ ಯುಗದ ಕೊನೆಯ ಕುರುಹುಗಳನ್ನು ತೆಗೆದುಹಾಕುವ ಉದ್ದೇಶಕ್ಕಿಂತಲೂ ತನ್ನ ನಾಯಕರನ್ನು ಮೆರೆಸುವುದೇ ಆ ಪಕ್ಷಕ್ಕೆ ಮಹತ್ವದ್ದಾಗಿತ್ತು. ಕಾಂಗ್ರೆಸ್ ಮತ್ತು ಬಿಜೆಪಿಯ ಉದ್ದೇಶಗಳ ನಡುವೆ ಮುಖ್ಯವಾದ ವ್ಯತ್ಯಾಸ ಇರುವುದು ಇಲ್ಲೇ. ರಾಜಪಥವನ್ನು ಕರ್ತವ್ಯಪಥ ಎಂದು ಮತ್ತು ಮೊಘಲ್ ಉದ್ಯಾನವನ್ನು ಅಮೃತ ಉದ್ಯಾನ ಎಂದು ಮರುನಾಮಕರಣ ಮಾಡುವ ಸರ್ಕಾರದ ಸದ್ಯದ ನಿರ್ಣಯದ ಹಿಂದೆ ವಸಾಹತುಶಾಹಿ ಯುಗದ ಕುರುಹುಗಳನ್ನು ತೆಗೆದುಹಾಕುವ ಧೋರಣೆಯೇ ಎದ್ದು ಕಾಣುತ್ತದೆ.

ರಸ್ತೆಗಳಿಗೆ ಹೆಚ್ಚು ಮರುನಾಮಕರಣ ಮಾಡಿದ್ದು ಕಾಂಗ್ರೆಸ್ ನೇತೃತ್ವದ ಸರ್ಕಾರವೇ ಆಗಿದೆ. ಹೀಗಿದ್ದೂ, ಭಾರತೀಯತೆ ಮತ್ತು ಭಾರತದ ಅಪ್ರತಿಮ ನಾಗರಿಕತೆಯ ಇತಿಹಾಸದ ಪ್ರಶ್ನೆ ಬಂದಾಗ ಆ ಪಕ್ಷ ಸದಾ ಗೊಂದಲದಲ್ಲೇ ಇರುತ್ತದೆ. ಮೋದಿ ನೇತೃತ್ವದ ಸರ್ಕಾರವು 2015ರಲ್ಲಿ ಔರಂಗಜೇಬ್ ರಸ್ತೆಯ ಹೆಸರನ್ನು ಎಪಿಜೆ ಅಬ್ದುಲ್ ಕಲಾಂ ರಸ್ತೆ ಎಂದು ಬದಲಾಯಿಸುವ ನಿರ್ಧಾರ ಕೈಗೊಂಡಾಗ ಆ ಪಕ್ಷ ನಡೆದುಕೊಂಡ ರೀತಿಯೇ ಇದಕ್ಕೆ ಉದಾಹರಣೆ. ಕಾಂಗ್ರೆಸ್, ಆಗ ತೀವ್ರವಾದ ಪ್ರತಿಭಟನೆಯನ್ನು ನಡೆಸಿತ್ತು. ಧರ್ಮನಿರಪೇಕ್ಷ ಹಾಗೂ ಪ್ರಜಾತಾಂತ್ರಿಕ ಭಾರತವು ಧಾರ್ಮಿಕ ಮೂಲಭೂತವಾದಿಯನ್ನು, ನಿರಂಕುಶ ಆಡಳಿತಗಾರನನ್ನು, ಹಿಂದೂ, ಸಿಖ್ ಮತ್ತು ಭಾರತ ಮೂಲದ ಇನ್ನಿತರ ಧರ್ಮಗಳ ಅನುಯಾಯಿಗಳ ಜೊತೆ ಅತ್ಯಂತ ಕಠಿಣವಾಗಿ ನಡೆದುಕೊಂಡವನನ್ನು ವೈಭವೀಕರಿಸುವುದು ಅದೆಷ್ಟು ಅಸಂಗತ ನಡೆ ಎಂಬ ಬಗ್ಗೆ ಆಲೋಚಿಸಲು ಕಾಂಗ್ರೆಸ್ಸಿಗರು ಸಿದ್ಧರಿರಲಿಲ್ಲ.



ಔರಂಗಜೇಬನ ಕಥೆ, ಸಂಕ್ಷಿಪ್ತವಾಗಿ, ಹೀಗಿದೆ: ಹಿಂದೂ ದೇವಾಲಯಗಳು ಮತ್ತು ಶಾಲೆಗಳನ್ನು ಧ್ವಂಸಗೊಳಿಸುವಂತೆ ಆತ 1669ರಲ್ಲಿ ಆದೇಶ ಹೊರಡಿಸಿದ. ಕಾಶಿ ವಿಶ್ವನಾಥ ಮಂದಿರ, ಸೋಮನಾಥ ಮಂದಿರ, ಮಥುರಾ ಕೃಷ್ಣ ಮಂದಿರ ಸೇರಿದಂತೆ ನೂರಾರು ದೇವಾಲಯಗಳು ಆಗ ಧ್ವಂಸಗೊಂಡವು. ಹಿಂದೂಗಳ ಬಗೆಗಿನ ಆತನ ದ್ವೇಷಕ್ಕೆ ಮಿತಿಯೇ ಇರಲಿಲ್ಲ. ಮಥುರಾದಲ್ಲಿ ದೇವಾಲಯವನ್ನು ಕೆಡವಿದ ಜಾಗದಲ್ಲೇ ಮಸೀದಿಯನ್ನು ನಿರ್ಮಿಸಿದ. ಹಿಂದೂಗಳು ತಮ್ಮ ಮತದಲ್ಲೇ ಮುಂದುವರಿಯಲು ಬಯಸಿದರೆ ಅವರ ಮೇಲೆ 'ಜೆಜಿಯಾ' ಎಂಬ ತೆರಿಗೆ ವಿಧಿಸಿದ, ಹಿಂದೂ ಜಾತ್ರೆಗಳನ್ನು ನಿಷೇಧಿಸಿದ, ಹಿಂದೂ ಗುಮಾಸ್ತರು ಮತ್ತು ಲೆಕ್ಕಪರಿಶೋಧಕರನ್ನು ವಜಾಗೊಳಿಸಿದ, ಸರಕುಗಳನ್ನು ಆಮದು ಮಾಡಿಕೊಳ್ಳುವಾಗ ಹಿಂದೂಗಳಿಗೆ ಹೆಚ್ಚಿನ ತೆರಿಗೆ ಹಾಕಿದ, ಅಪರಾಧಿಗಳು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರೆ ಅವರ ಶಿಕ್ಷೆಯನ್ನು ಕಡಿಮೆ ಮಾಡಿದ– ಹೀಗೆ ಆತನ ಮತಾಂಧ ಕಾರ್ಯಗಳಿಗೆ ಕೊನೆ ಎಂಬುದೇ ಇರಲಿಲ್ಲ.

ಸಿಖ್ಖರ ವಿಷಯದಲ್ಲೂ ಆತ ಅಷ್ಟೇ ಕಠಿಣ ವ್ಯಕ್ತಿಯಾಗಿದ್ದ. ಗುರು ತೇಘ್ ಬಹದ್ದೂರ್ ಅವರನ್ನು ಜೈಲಿಗೆ ತಳ್ಳಿದ ಆತ, ಹಲವು ದಿನಗಳವರೆಗೆ ಅವರಿಗೆ ಚಿತ್ರಹಿಂಸೆ ನೀಡಿದ. ಇಸ್ಲಾಂಗೆ ಮತಾಂತರಗೊಳ್ಳಲು ನಿರಾಕರಿಸಿದ್ದರಿಂದ ಅವರ ತಲೆಯನ್ನೇ ಕತ್ತರಿಸಿದ. ನಂತರ ಗುರು ಗೋವಿಂದ ಸಿಂಗ್ ಅವರತ್ತ ವಕ್ರದೃಷ್ಟಿ ಬೀರಿದ ಆತ, ಅವರ ನಾಲ್ವರು ಪುತ್ರರನ್ನು ಕೊಲ್ಲಿಸಿದ.

ವಿಲ್ ಡ್ಯುರಾಂಟ್ ಅವರು ತಮ್ಮ ಅವಿಸ್ಮರಣೀಯ ಕೃತಿ 'ದಿ ಸ್ಟೋರಿ ಆಫ್ ಸಿವಿಲೈಸೇಷನ್'ನಲ್ಲಿ ಹೀಗೆ ಹೇಳಿದ್ದಾರೆ: 'ತನ್ನ ಅರ್ಧ ಶತಮಾನದ ಆಳ್ವಿಕೆಯಲ್ಲಿ, ಔರಂಗಜೇಬ್ ಭಾರತದಿಂದ ಇಸ್ಲಾಂ ಧರ್ಮವೊಂದನ್ನು ಹೊರತುಪಡಿಸಿ ಉಳಿದೆಲ್ಲ ಧರ್ಮಗಳನ್ನು ನಿರ್ಮೂಲನೆ ಮಾಡಲು ಯತ್ನಿಸಿದ'. ಇದಕ್ಕಿಂತ ದೊಡ್ಡ ದೋಷಾರೋಪಣೆ ಬೇರೆ ಯಾವ ಆಡಳಿತಗಾರನ ಮೇಲಾದರೂ ಇರಲು ಸಾಧ್ಯವೇ? ಇದಕ್ಕಿಂತ ದೊಡ್ಡ ಮತಾಂಧ ಯಾರಾದರೂ ಇರಬಹುದೇ? ಔರಂಗಜೇಬ್‌ನಲ್ಲಿ ನಮ್ಮ ಧರ್ಮನಿರಪೇಕ್ಷ ಮತ್ತು ಪ್ರಜಾಸತ್ತಾತ್ಮಕ ರಾಷ್ಟ್ರ ಹೆಮ್ಮೆಪಡುವಂಥದ್ದು ಏನಾದರೂ ಇದೆಯೇ? ಪ್ರಧಾನಿ ಮೋದಿ ಅವರು ಕಲ್ಪನಾ ದಾರಿದ್ರ್ಯ ಎಂದು ಕರೆದಿರುವುದು ಇದಕ್ಕಾಗಿಯೇ. ಸ್ವಾತಂತ್ರ್ಯದ ಬಳಿಕ ರಾಷ್ಟ್ರದ ಚುಕ್ಕಾಣಿ ಹಿಡಿದ ಹಲವರು ಅಂತಹ ದಾರಿದ್ರ್ಯವನ್ನು ರಾಷ್ಟ್ರದ ಮೇಲೆ ಹೇರಿದ್ದಾರೆ ಎಂದು ಅವರು ಹೇಳಿರುವುದು ಕೂಡ ಈ ಹಿನ್ನೆಲೆಯಲ್ಲಿಯೇ.

ಆದ್ದರಿಂದ, ವೈವಿಧ್ಯವನ್ನು ಗೌರವಿಸುವ ಮತ್ತು ವೈವಿಧ್ಯಮಯ ಜನರ ಸಾಮರಸ್ಯದ ಸಹಬಾಳ್ವೆಯನ್ನು ಗೌರವಿಸುವ ಸಂವಿಧಾನದ ಭವ್ಯ ದೃಷ್ಟಿಗೆ ಪ್ರತಿಕೂಲವಾದ ನೆನಪುಗಳನ್ನು ಅಳಿಸುವ ಪ್ರಕ್ರಿಯೆಯು ಇನ್ನೂ ಅಪೂರ್ಣವಾಗಿದೆ ಎಂದೇ ಹೇಳಬೇಕು. ನಾವು ಕಷ್ಟಪಟ್ಟು ಸಂಪಾದಿಸಿದ ಸ್ವಾತಂತ್ರ್ಯ ಮತ್ತು ಭಾರತದ ಸಂವಿಧಾನ ಎಂಬ ಅಸಾಮಾನ್ಯ ದಾಖಲೆಯ ಮೂಲಕ ನಮಗೆ ನಾವೇ ಮಾಡಿಕೊಂಡಿರುವ ಉದಾರವಾದ, ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸಂರಕ್ಷಿಸಲು ಬಾಬರ್ ಮತ್ತು ಇತರ ವಸಾಹತುಶಾಹಿ ಪಳೆಯುಳಿಕೆಗಳಿಗೂ ಔರಂಗಜೇಬನಿಗೆ ಆಗಿರುವ ಗತಿಯನ್ನೇ ಕಾಣಿಸಬೇಕಾಗಿದೆ.

ಚುರುಮುರಿ

ಸುಮ್ಮನಿದ್ದಿದ್ದರೆ...

• ಆನಂದ

'ಅನೇಕ ವೇಳೆ ಏನೂ ಮಾಡದೆ ಸುಮ್ಮನಿದ್ದರೆ ಸಾಕು ಅದೇ ಫಲ ಕೊಡುತ್ತದೆ' ಎಂದು ಮಡದಿ ಹೇಳಿದಾಗ ಅವಳು ತತ್ವಜ್ಞಾನಿಯಂತೆ ಕಂಡಳು.

ಏನೂ ಮಾಡದೆ ಸುಮ್ಮನಿದ್ದರೆ ಸಾಕು ಎಂದರೆ? ಅದೇ ಫಲವನ್ನೂ ಕೊಡುತ್ತದೆ ಎಂದರೆ ಇನ್ನೂ ಗೊಂದಲಕಾರಿ ಅಲ್ಲವೆ? 'ಅಮ್ಮಾ ತಾಯಿ, ಸ್ವಲ್ಪ ವಿವರಿಸು' ಎಂದೆ.

'ಬಿಬಿಸಿ, ಮೋದೀಜಿ ಬಗ್ಗೆ ಹಳೆಯದನ್ನೆಲ್ಲಾ ಕೆದಕಿ ಒಂದು ಸಾಕ್ಷ್ಯಚಿತ್ರ ಬಿಡುಗಡೆ ಮಾಡಿದೆ. ಅದರಲ್ಲಿರುವುದೆಲ್ಲಾ ನಿಜ ಎಂದು ಅದರ ವಾದ. ಅದಕ್ಕೆ ಸರ್ಕಾರ ಸುಪ್ರೀಂ ಕೋರ್ಟೇ ಮೋದಿ ಅವರಿಗೆ ಕ್ಲೀನ್ ಚಿಟ್ ನೀಡಿರುವಾಗ ಈ ಸಾಕ್ಷ್ಯಚಿತ್ರ ಬೇಕಿತ್ತೆ ಎಂದು ಹೇಳಿ ಅಷ್ಟಕ್ಕೆ ಸುಮ್ಮನಿದ್ದಿದ್ದರೆ ಸಾಕಿತ್ತು. ಅದನ್ನು ನಿರ್ಬಂಧಿಸಿ, ಪ್ರದರ್ಶನ ತಡೆಯಲು ಪ್ರಯತ್ನಿಸುತ್ತಿದ್ದಂತೆ ಸಾಕ್ಷ್ಯಚಿತ್ರದ ಬಗ್ಗೆ ಜನರ ಕುತೂಹಲ ಹೆಚ್ಚತೊಡಗಿತು. ಸರ್ಕಾರ ಅದನ್ನು ಅಲಕ್ಷಿಸಿದ್ದಿದ್ದರೆ ಪ್ರಚಾರವೇ ಸಿಗುತ್ತಿರಲಿಲ್ಲ'.

'ಯು ಹ್ಯಾವ್ ಎ ಪಾಯಿಂಟ್'.

'ಇನ್ನೊಂದು, ಶಾರುಖ್ ಖಾನ್‌ರ 'ಪಠಾಣ್' ಚಿತ್ರ. ಯಾವುದೋ ಒಂದು ನೆಪ ಮುಂದೊಡ್ಡಿ, ಅದನ್ನು ಬಾಯ್ಕಾಟ್ ಮಾಡಬೇಕು ಎಂದು ಕೆಲವರು ಕೂಗೆಬ್ಬಿಸಿದರು. ಆದರೇನಾಯಿತು ಕೊನೆಗೆ? ಜನ ನೋಡೋದಿಕ್ಕೆ ಶುರು ಮಾಡಿದರು. ಚಿತ್ರ ಕೋಟಿ ಕೋಟಿ ಬಾಚ್ಕೊಳ್ತಿದೆ. ಬಾಯ್ಕಾಟ್ ಮಾಡಿ ಎಂದವರೇ ಎಸ್‌ಆರ್‌ಕೆಗೆ, ನಿರ್ಮಾಪಕರಿಗೆ ಪರೋಕ್ಷವಾಗಿ ಸಹಾಯ ಮಾಡಿದಂತಾಯಿತು...'

'ಸುಮ್ಮನಿದ್ದಿದ್ದರೆ...?'

'ಚಿತ್ರ ಚೆನ್ನಾಗಿದ್ದರೆ ತಾನಾಗಿಯೇ ಯಶಸ್ಸು ಕಾಣುತ್ತದೆ. ಬಹಿಷ್ಕರಿಸಿ, ಬಹಿಷ್ಕರಿಸಿ ಅಂತ ಬೊಬ್ಬಿಡ್ತಾ ಇದ್ದರೆ ಚೆನ್ನಾಗಿಲ್ಲದೇ ಇರೋ ಚಿತ್ರ ಸಹ ಗಲ್ಲಾಪೆಟ್ಟಿಗೆಯಲ್ಲಿ ಗೆಲ್ಲುತ್ತದೆ. 'ಪಠಾಣ್' ಗಳಿಕೆ ನೋಡಿ ಎಸ್‌ಆರ್‌ಕೆಗೇ ಆಶ್ಚರ್ಯ ಆಗಿರಬಹುದು'.

'ಬಹಿಷ್ಕಾರ ಬ್ರಿಗೇಡ್ ಈಗೇನು ಮಾಡ್ತಿರಬಹುದು?'

'ಅವರೂ ಗುಟ್ಟಾಗಿ ಸೆಕೆಂಡ್ ಷೋ ನೋಡಿಕೊಂಡು ಬಂದಿರಬಹುದು. ದೀಪಿಕಾ ಪಡುಕೋಣೆ ಡ್ಯಾನ್ಸ್ ಖುಷಿ ಕೊಟ್ಟಿರಲೂಬಹುದು'.

ಸಂಗತ

ದೇಹದಾರ್ಢ್ಯ ಮತ್ತು ನಕಲಿ ಆಹಾರ!

ಆರೋಗ್ಯ ವರ್ಧನೆಗೆಂದು ಭೇಟಿ ನೀಡುವ ಕೇಂದ್ರಗಳು ಅನಾರೋಗ್ಯವನ್ನು ಆಹ್ವಾನಿಸುವಂತಾದರೆ...?

• ಡಾ. ವಿನಯ ಶ್ರೀನಿವಾಸ್

ಕೆಲ ದಿನಗಳ ಹಿಂದೆ ಪ್ರಕಟವಾದ 'ಜಿಮ್‌ಗಳಲ್ಲಿ ನಕಲಿ ಬ್ರ್ಯಾಂಡ್‌ನ ಪೌಡರ್ ಮಾರಾಟ' ಎಂಬ ಸುದ್ದಿ ಕೆಲವರಲ್ಲಿ ಆತಂಕ ಹುಟ್ಟಿಸಿದೆ. ಅದಕ್ಕೆ ಕಾರಣ, 'ಆ ನಕಲಿ ಪುಡಿಗಳಲ್ಲಿ ಜೀವಕ್ಕೇ ಅಪಾಯ ತಂದೊಡ್ಡುವ ಅಂಶಗಳೂ ಇರಬಹುದು' ಎಂದು ಪರಿಶೀಲಿಸಿದ ಅಧಿಕಾರಿಗಳೇ ಎಚ್ಚರಿಸಿರುವುದು. ಇತ್ತೀಚೆಗೆ ಜಿಮ್‌ಗಳಲ್ಲಿ ವ್ಯಾಯಾಮ ಮಾಡುತ್ತಲೇ ಕೆಲವು ಯುವಜನರು ಹೃದಯಾಘಾತಕ್ಕೆ ಒಳಗಾದ ಪ್ರಕರಣಗಳು ವರದಿಯಾಗಿರುವಾಗ, ಇಂತಹ ಸುದ್ದಿ ಇನ್ನಷ್ಟು ಆತಂಕ ಹುಟ್ಟಿಸುತ್ತದೆ.

ಹಾಗೆ ನೋಡಿದರೆ ಈ ಜಿಮ್ ಪರಿಕಲ್ಪನೆ ಹೊಸತೇನಲ್ಲ. ಹಿಂದೆಯೂ ಗರಡಿ ಮನೆಗಳಲ್ಲಿ ಜನರಿಗೆ ದೇಹದಾರ್ಢ್ಯದ ಬಗ್ಗೆ ತರಬೇತಿ ಕೊಡಲಾಗುತ್ತಿತ್ತು. ಆದರೆ ಅಲ್ಲಿ ಸೂಕ್ತ ವ್ಯಾಯಾಮಗಳನ್ನು ಮಾಡಿಸುತ್ತಿದ್ದರೆ ವಿನಾ ಈ ಆಹಾರ ಪೂರೈಕೆಯ ವ್ಯವಸ್ಥೆ ಇರಲಿಲ್ಲ. ಏನಿದ್ದರೂ ನೈಸರ್ಗಿಕ ಆಹಾರ ಸೇವನೆಗೆ ಮಹತ್ವ ಕೊಡುತ್ತಿದ್ದರಷ್ಟೆ. ಸಸ್ಯಾಹಾರಿಗಳಿಗೆ ಹಾಲು, ಮೊಸರು, ಮೊಳಕೆ ಬರಿಸಿದ ಕಾಳುಗಳನ್ನು ಸೇವಿಸಲು; ಮಾಂಸಾಹಾರಿಗಳಿಗೆ ಮೊಟ್ಟೆ, ಮೀನು ಮಾಂಸವನ್ನು ತಿನ್ನಲು ಸೂಚಿಸುತ್ತಿದ್ದರು. ದೇಹ ದಂಡನೆಗೆ ಒತ್ತು ಕೊಡುತ್ತಿದ್ದರು.

ಬದಲಾದ ಕಾಲಘಟ್ಟದಲ್ಲಿ ಗರಡಿ ಮನೆಗಳು ಇಳಿಮುಖವಾಗಿ ಜಿಮ್‌ಗಳು ಎಲ್ಲೆಂದರಲ್ಲಿ ತಲೆಯೆತ್ತುತ್ತಿವೆ. ದೇಹಕ್ಕೆ ಕಸರತ್ತು ಮಾಡಿಸುವುದರ ಜೊತೆಗೆ ಕೆಲವು ತರಬೇತುದಾರರು ಆಹಾರ ಕ್ರಮವನ್ನೂ ಸೂಚಿಸುತ್ತಿದ್ದಾರೆ. ಅಷ್ಟೇ ಅಲ್ಲ, ಪೂರಕ ಆಹಾರವನ್ನೂ ಅವರೇ ಒದಗಿಸುತ್ತಾರೆ ಕೂಡ. ಆದರೆ ಪೂರಕ ಆಹಾರಗಳ ತಯಾರಿಕೆಯಲ್ಲಿ ಒಂದಿಷ್ಟು ನಿಯಮಗಳಿರುತ್ತವೆ. ಅದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಸುಪರ್ದಿಯಲ್ಲಿ ನಡೆಯಬೇಕಾದದ್ದು. ಅಂತಹ ಕೇಂದ್ರಗಳನ್ನು ಕಾಲಕಾಲಕ್ಕೆ ಪರಿವೀಕ್ಷಣೆಗೆ ಒಳಪಡಿಸುವುದು, ಆಹಾರದ ಗುಣಮಟ್ಟವನ್ನು ಆಗಾಗ್ಗೆ ಪರೀಕ್ಷಿಸುವುದು ಪ್ರಾಧಿಕಾರದಿಂದ ಕಡ್ಡಾಯವಾಗಿ ನಡೆಯಬೇಕು. ತಯಾರಕರ ಜೊತೆಯಲ್ಲಿ ವಿತರಕರನ್ನೂ ಪರಿವೀಕ್ಷಣೆಗೆ ಒಳಪಡಿಸಬೇಕು. ಆಹಾರದ ಡಬ್ಬಿಗಳ ಮೇಲೆ ಎಲ್ಲ ವಿವರಗಳು ಕಡ್ಡಾಯವಾಗಿ ಅಚ್ಚಾಗಿರಬೇಕು. ಈ ಎಲ್ಲ ಪ್ರಕ್ರಿಯೆಗಳು ನಿಯಮಾನುಸಾರ ನಡೆಯದಿದ್ದಾಗ ಇಂತಹ ಅನಾಚಾರಗಳು ಘಟಿಸುತ್ತವೆ.

ಜಿಮ್‌ಗಳಿಗೆ ಸೇರುವವರಲ್ಲಿ ಯುವಜನರು ಮತ್ತು ಮಹಿಳೆಯರೇ ಹೆಚ್ಚು. ಸಾಮಾನ್ಯವಾಗಿ ಮಹಿಳೆಯರು ತೂಕ ಇಳಿಸಲು ಅಥವಾ ಸ್ನಾಯುಗಳನ್ನು ಶಕ್ತಿಯುತಗೊಳಿಸಿಕೊಳ್ಳಲು ಸೇರುತ್ತಾರೆ. ಯುವಜನರು ಸ್ನಾಯುಗಳ ವರ್ಧನೆಗೆ ಮತ್ತು ಆ ಮೂಲಕ ದೇಹದಾರ್ಢ್ಯವನ್ನು ಪಡೆಯುವುದಕ್ಕೆ ಒತ್ತು ಕೊಡುತ್ತಾರೆ. ಸಿಕ್ಸ್ ಪ್ಯಾಕ್, ಫೋರ್ ಪ್ಯಾಕ್, ಬೈಸೆಪ್ಸ್, ಟ್ರೈಸೆಪ್ಸ್ ಎಂದೆಲ್ಲ ಹೇಳುತ್ತಾ ತಮ್ಮ ನೆಚ್ಚಿನ ಸಿನಿಮಾ ಹೀರೊಗಳನ್ನು ಅನುಕರಿಸಲು ಜಿಮ್ ಸೇರುವವರೇ ಹೆಚ್ಚು. ಹುಡುಗಿಯರ ಮುಂದೆ ಸದೃಢವಾಗಿ ಕಾಣುವುದು, ಹೆಚ್ಚುಗಾರಿಕೆ ತೋರಿಸಿಕೊಳ್ಳುವುದೂ ಕೆಲವರ ಉದ್ದೇಶವಾಗಿರುತ್ತದೆ. ಅವರ ಇಚ್ಛೆಗಳೇನೇ ಇರಲಿ, ಆದರೆ ಅವೆಲ್ಲವೂ ಅವರಿಗೆ ದಿಢೀರ್ ಆಗಬೇಕು. ಒಂದೇ ತಿಂಗಳಲ್ಲಿ ತೂಕ ಇಳಿಯಬೇಕು, ಎರಡೇ ತಿಂಗಳಲ್ಲಿ ಸ್ನಾಯುಗಳನ್ನು ವೃದ್ಧಿಸಿಕೊಳ್ಳಬೇಕು ಎಂಬುದು ಅವರ ಮಂತ್ರ. ಈ ವಿಚಾರಗಳನ್ನು ತರಬೇತುದಾರರ ಮುಂದೆ ಅಲವತ್ತುಕೊಂಡಾಗ ಅವರು ವ್ಯಾಯಾಮ ತರಬೇತಿಯ ಜೊತೆ ಪೂರಕ ಆಹಾರವನ್ನೂ ಸೂಚಿಸುತ್ತಾರೆ.

ಇಂಥ ಆಹಾರವು ದೊಡ್ಡ ಪೊಟ್ಟಣಗಳಲ್ಲಿ ಲಭ್ಯವಿದ್ದು ತುಸು ದುಬಾರಿಯೇ ಆಗಿರುತ್ತದೆ. ಕಾಲೇಜು ವಿದ್ಯಾರ್ಥಿಗಳಿಗೆ ಇದಕ್ಕೆಲ್ಲ ಹಣ ಹೊಂದಿಸುವುದು ಕಷ್ಟ. ಹಾಗಾಗಿಯೇ ಅವರು ಒಂದು ಜಿಮ್‌ನಿಂದ ಮತ್ತೊಂದು ಜಿಮ್‌ಗೆ ಅಲೆಯುತ್ತಾ ಎಲ್ಲಿ ಕಡಿಮೆ ಹಣಕ್ಕೆ ಇಂತಹ ಆಹಾರ ಮತ್ತು ತರಬೇತಿ ಸಿಗಬಹುದು ಎಂದು ಹುಡುಕುತ್ತಾರೆ. ವಿದ್ಯಾರ್ಥಿಗಳ ಈ ಪರಿಸ್ಥಿತಿಯನ್ನು ಕೆಲವು ತರಬೇತುದಾರರು ದುರುಪಯೋಗ ಮಾಡಿಕೊಳ್ಳುತ್ತಾರೆ. ಆಹಾರ ವಿತರಕರು ಮತ್ತು ತಯಾರಕರ ಜೊತೆ ಶಾಮೀಲಾಗಿ, ಪ್ರಾಧಿಕಾರದ ಮಾನದಂಡ ಹೊಂದಿರದ ಕಡಿಮೆ ದರದ ನಕಲಿ ಆಹಾರವನ್ನು ಕೊಡಲು ಮುಂದಾಗುತ್ತಾರೆ.



ದಿಢೀರ್ ಬೆಳವಣಿಗೆ, ಸ್ನಾಯು ವರ್ಧನೆಗೆಂದು ಸ್ಟಿರಾಯ್ಡ್ ಪುಡಿಗಳನ್ನು ಆಹಾರದಲ್ಲಿ ಬೆರೆಸಿದ್ದರೆ ಅದನ್ನು ಸೇವಿಸಿದವರ ಪಾಡೇನು? ಇಂಥ ಸ್ಟಿರಾಯ್ಡ್‌ಗಳು ಆರೋಗ್ಯದ ದೃಷ್ಟಿಯಿಂದ ಬಹಳ ಅಪಾಯಕಾರಿ.

ನೈಸರ್ಗಿಕ ಆಹಾರ ಪದ್ಧತಿಯೇ ಶರೀರದ ಸಮಗ್ರ ಆರೋಗ್ಯಕ್ಕೆ ಉತ್ತಮ. ಮೊಟ್ಟೆ, ಸೋಯಾ, ಹಾಲು, ಮೊಸರು, ಮೀನು ಮತ್ತು ಕೋಳಿ ಮಾಂಸದಲ್ಲಿ ಪ್ರೋಟೀನ್ ಹೇರಳವಾಗಿದೆ. ಕ್ಯಾಲ್ಸಿಯಂ, ರಂಜಕದಂತಹ ಪೌಷ್ಟಿಕಾಂಶಗಳೂ ಇವೆ. ಸೊಪ್ಪು, ತರಕಾರಿಗಳಲ್ಲಿ ಎಲ್ಲ ಸೂಕ್ಷ್ಮ ಪೋಷಕಾಂಶಗಳೂ ಲಭ್ಯವಿವೆ. ಆಯಾ ಋತುಮಾನದಲ್ಲಿ ಸಿಗುವ ಹಣ್ಣುಗಳನ್ನು ತಿನ್ನುವ ಅಭ್ಯಾಸವೂ ನಮಗೆ ಬಹಳಷ್ಟು ಪೌಷ್ಟಿಕಾಂಶಗಳನ್ನು ಒದಗಿಸಬಲ್ಲದು. ಒಣಹಣ್ಣುಗಳ ಬಳಕೆ ಸತ್ವಗಳ ಜೊತೆ ಶಕ್ತಿಯನ್ನೂ ಕೊಡಬಲ್ಲದು.

ಆಹಾರ ಸೇವನೆ ಬಗ್ಗೆ ಸ್ಪಷ್ಟ ಜ್ಞಾನವಿದ್ದರೆ ಅದೇ ದಿವ್ಯೌಷಧ. ದೇಹದಾರ್ಢ್ಯವನ್ನು ನಿರ್ದಿಷ್ಟ ಕಾರಣಗಳಿಗಾಗಿ ಪಡೆಯುವವರು, ಸ್ಪರ್ಧೆಗಳಲ್ಲಿ ಭಾಗವಹಿಸುವವರು ಮಾತ್ರ ಈ ಪೂರಕ ಆಹಾರಗಳನ್ನು ಜಿಮ್‌ಗಳಲ್ಲಿ ಸರಿಯಾಗಿ ಪರಿಶೀಲಿಸಿ ಸೇವಿಸಬಹುದು. ಉಳಿದಂತೆ ನಿಯಮಿತ ವ್ಯಾಯಾಮಕ್ಕಾಗಿ ಅಥವಾ ತೂಕ ಇಳಿಕೆಗಾಗಿ ಜಿಮ್‌ಗಳಿಗೆ ಸೇರುವವರು ನೈಸರ್ಗಿಕ ಆಹಾರ ಪದ್ಧತಿ ರೂಢಿಸಿಕೊಳ್ಳುವುದು ಉತ್ತಮ ಮತ್ತು ಸುರಕ್ಷಿತ.

ಲೇಖಕಿ: ರೋಗಲಕ್ಷಣಶಾಸ್ತ್ರಜ್ಞೆ

ವಾಚಕರ ವಾಣಿ

ಸಂಡೂರು ಬೆಟ್ಟಕ್ಕೆ ಬರಲಿ ರೋಪ್‌ವೇ

ರಾಜ್ಯದ ಚಾಮುಂಡಿ ಬೆಟ್ಟ, ನಂದಿ ಬೆಟ್ಟ ಸೇರಿದಂತೆ 14 ಕಡೆ ರೋಪ್‌ವೇ ಯೋಜನೆ ಆರಂಭಕ್ಕೆ ಪೂರ್ವ ಕಾರ್ಯಸಾಧ್ಯತಾ ಅಧ್ಯಯನ ನಡೆಸಲಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಹೇಳಿರುವುದನ್ನು (ಪ್ರ.ವಾ., ಫೆ. 9) ತಿಳಿದು ಖುಷಿಯಾಯಿತು. ಜೊತೆಗೆ ಪ್ರಪಂಚದಲ್ಲಿ ಕಬ್ಬಿಣದ ಗಣಿಗಾರಿಕೆಗೆ ಹೆಸರು ಪಡೆದಿರುವ ಸಂಡೂರಿನ ಬೆಟ್ಟಗಳಲ್ಲೂ ರೋಪ್‌ವೇ ವ್ಯವಸ್ಥೆ ಮಾಡಬೇಕು. ಗಣಿ ಲಾರಿಗಳ ಸಂಚಾರದಿಂದ ಹೈರಾಣಾಗಿರುವ ಇಲ್ಲಿನ ಗುಡ್ಡಗಾಡು ಜನರ ಸುಲಲಿತ ಪ್ರಯಾಣಕ್ಕೆ ಇದರಿಂದ ಅನುಕೂಲವಾಗಲಿದೆ.

ಆರ್.ಶಿವರಾಂ, ಸಂಡೂರು

ಕರ್ತವ್ಯಲೋಪ ಮರೆಮಾಚುವ ಪ್ರಹಸನ?!

'ಫೆಬ್ರುವರಿ 14ರಂದು ಪ್ರೇಮಿಗಳ ದಿನದ ಬದಲು ಎಲ್ಲೆಡೆ ಸಕಾರಾತ್ಮಕ ಶಕ್ತಿ ತುಂಬಲು, ವೈಯಕ್ತಿಕ ಹಾಗೂ ಸಾಮೂಹಿಕ ಸಂತಸ ಉತ್ತೇಜಿಸಲು ಗೋವು ಅಪ್ಪಿಕೊ ದಿನ ಆಚರಿಸುವಂತೆ' ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಯು ನಾಗರಿಕರಿಗೆ ಮನವಿ ಮಾಡಿದ್ದು (ಪ್ರ.ವಾ., ಫೆ. 9) ಬಾಲಿಶವಾಗಿತ್ತು. 1970ರಲ್ಲಿ ಉತ್ತರಾಖಂಡದ ಹಿಮಾಲಯ ಪ್ರದೇಶದ ಗುಡ್ಡಗಾಡು ನಿವಾಸಿಗಳಾದ ಮಹಿಳೆಯರು ತೀವ್ರವಾದ ಅರಣ್ಯನಾಶವನ್ನು ತಡೆಯಲು, ಮರಗಳನ್ನು ಕಡಿಯುವವರು ಬಂದಾಗ ತಾವು ಮರಗಳನ್ನು ಅಪ್ಪಿಕೊಂಡು 'ಕಡಿಯುವುದಾದರೆ ನಮ್ಮನ್ನೇ ಕಡಿಯಿರಿ' ಎಂದು ಘೋಷಿಸಿದ ದಿಟ್ಟತನದ, ವಿನೂತನ ಚಿಂತನೆಯ ಆ ಪ್ರತಿಭಟನೆ ಎಲ್ಲಿ, ಅಧಿಕಾರ ಸ್ಥಾನದಲ್ಲಿರುವವರು ಕರೆ ನೀಡಿದ್ದ ಈ 'ಅಪ್ಪಿಕೊ ಗೋವು ದಿನ' ಎಂಬ ಅಪ್ರಯೋಜಕ ಆಲೋಚನೆ ಎಲ್ಲಿ?!

'ನೀನಾರಿಗಾದೆಯೊ ಎಲೆ ಮಾನವ' ಎಂದು ಮನುಷ್ಯನ ಬದುಕಿನ ಅನುಪಯುಕ್ತತೆಯನ್ನು ಬಿಂಬಿಸುವ 'ಗೋವಿನ ಹಾಡು' ಹಾಗೂ 'ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಬಂಧು ಬಳಗ' ಎಂದು 'ಪುಣ್ಯಕೋಟಿಯ ಕಥೆ'ಯ ಮೂಲಕ ಸಾರಿದ ಅನಕ್ಷರಸ್ಥ ಜನಪದರ ಮಾನಸಿಕ ಔನ್ನತ್ಯವನ್ನು ನೆನೆದಾಗ, ವೈಜ್ಞಾನಿಕ ಸಾಧನೆಯ ಮೂಲಕ ನಾಗರಿಕತೆಯ ತುತ್ತತುದಿಗೇರಿದ ಪ್ರಸ್ತುತ ಕಾಲಮಾನದ ಮನುಷ್ಯರು ಈ ಸಮಾಜವನ್ನು ಎಳೆದೊಯ್ಯುತ್ತಿರುವುದಾದರೂ ಎಲ್ಲಿಗೆ ಎಂಬ ವಿಷಾದದ ಪ್ರಶ್ನೆ ಮೂಡುತ್ತದೆ! ಗೋಶಾಲೆಗಳ ಹೆಸರಲ್ಲಿ ನಡೆಯುತ್ತಿರುವ ದರೋಡೆಗಳನ್ನು ತಡೆಯಲಾಗದ, ಎಲ್ಲೆಂದರಲ್ಲಿ ಅನಾಥವಾಗಿ ಬಿದ್ದು ಸಾಯುತ್ತಿರುವ ದನಗಳನ್ನು ಸಂರಕ್ಷಿಸಲಾಗದ ಅಧಿಕಾರಸ್ಥರು ತಮ್ಮ ಕರ್ತವ್ಯಲೋಪವನ್ನು ಮರೆಮಾಚಲು ಕೈಗೊಂಡಿದ್ದ ಈ ಪ್ರಹಸನವನ್ನು ಸಾರ್ವಜನಿಕರು ಖಂಡಿಸಿದ್ದು ಸರಿಯಾದುದು. ಈ ನಿರ್ಧಾರ ವಾಪಸು ಪಡೆದಿರುವುದು ಸಮಾಧಾನಕರ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಏನು ಹೇಳಲಿ?

ಪ್ರಿಯ ಅದಾನಿಗೆ ಹೇಗೆ
ಸಾಂತ್ವನ ಹೇಳುವುದೆಂದು ತಿಳಿಯುತ್ತಿಲ್ಲ...!
ಪಂಪ ಹೇಳಿದ 'ಭೂಮಿ ಗೆದ್ದ ರಾಜನಿಗೆ
ತನ್ನ ಹೆಸರು ಕೆತ್ತಿಸಲು ಜಾಗವೇ
ಇಲ್ಲದಾಗಿದ್ದ' ಪರ್ವತದ ಕಥೆ ಹೇಳಲೇ?
ಬಸವಣ್ಣನವರ 'ಕಾಣಿಯ ಗೆಲ್ಲ
ಅರ್ಧ ಕಾಣಿಯ ಸೋಲ'
ಎಂಬ ಸೆಟ್ಟಿಯ ವಚನವನೇಳಲೇ?
ಪುರಂದರರ ಕಕ್ಕುಲಾತಿ ರೊಕ್ಕವಿದೆಂಬ
ಕೀರ್ತನೆಯ ಉದಾಹರಿಸಲೇ?
ಅಥವಾ ಜನಪದರು ಹಾಡಿದಂತೆ
ಬಂಗಾರ ನಿನಗೇ ಸ್ಥಿರವಲ್ಲ ಎನ್ನಲೇ?
ಇಲ್ಲಾಂದರೆ...
ಸಿರಿಗರ ಹೊಡೆದವರ ನುಡಿಸಲು
ಬಾರದೆಂದು ಸುಮ್ಮನಿರಲೇ...
ತಿಳಿಯದಾಗಿದೆ!

ಜೆ.ಬಿ.ಮಂಜುನಾಥ, ಪಾಂಡವಪುರ

ಸಂಚಾರ ನಿಯಮ: ದಂಡ ಕಟ್ಟುವುದೇ ಸಾಧನೆಯಲ್ಲ

ಸಂಚಾರ ನಿಯಮ ಉಲ್ಲಂಘಿಸಿದವರಿಗೆ ವಿಧಿಸಲಾದ ದಂಡದ ಮೊತ್ತವನ್ನು ನಿಗದಿತ ಅವಧಿಯೊಳಗೆ ಪಾವತಿಸುವವರಿಗೆ ಶೇ 50ರಷ್ಟು ವಿನಾಯಿತಿಯನ್ನು ಸರ್ಕಾರ ಘೋಷಿಸಿದ್ದರಿಂದ ಸಹಸ್ರಾರು ಮಂದಿ ದಂಡ ಕಟ್ಟಲು ಮುಂದಾಗಿದ್ದಾರೆ. ದಂಡ ಕಟ್ಟುವುದು ಒಂದು ಸಾಹಸದ ಅಥವಾ ಗೌರವದ ಕಾರ್ಯವಲ್ಲ ಎಂಬುದನ್ನು ವಾಹನ ಚಾಲಕರು ಮತ್ತು ಮಾಲೀಕರು ಮನಗಾಣಬೇಕು. ಸಂಚಾರ ನಿಯಮಗಳಿರುವುದು ನಮ್ಮ ಒಳಿತಿಗೆ, ಅವುಗಳನ್ನು ಪಾಲಿಸದೆ ಹಲವರ ಜೀವಕ್ಕೆ ಹಾನಿಯಾಗಿದೆ ಎಂಬುದನ್ನು ಅರಿಯಬೇಕು.

ಸಂಚಾರ ಪೊಲೀಸರು ದಂಡ ವಿಧಿಸುವುದೊಂದೇ ತಮ್ಮ ಕರ್ತವ್ಯವೆಂದು ಭಾವಿಸದೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ನಿಯಮ ಪಾಲಿಸುವವರನ್ನು ಪ್ರೋತ್ಸಾಹಿಸಬೇಕು. ಜನರೂ ತಮ್ಮ ಶ್ರಮದ ದುಡಿಮೆಯ ಹಣವು ವ್ಯರ್ಥವಾಗಿ ದಂಡ ಕಟ್ಟಲು ಬಳಕೆಯಾಗದಂತೆ ನೋಡಿಕೊಳ್ಳಬೇಕಾದರೆ, ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಮುಂದಾಗಬೇಕು.

ಡಾ. ರುದ್ರೇಶ್ ಅದರಂಗಿ, ಬೆಂಗಳೂರು

ಗಾಂಧಿ ಉಪನಾಮಕ್ಕೆ ತಕರಾರೇಕೆ?

'ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಶ್ರೇಷ್ಠ ಆಡಳಿತಗಾರ ಆಗಿದ್ದೇ ಆದಲ್ಲಿ ಅವರ ವಂಶಸ್ಥರು ತಮ್ಮ ಹೆಸರಿನ ಜೊತೆ ಅವರ ಉಪನಾಮವನ್ನು ಏಕೆ ಬಳಸುತ್ತಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಕೇಳಿದ್ದಾರೆ (ಪ್ರ.ವಾ., ಫೆ. 10). ಇದು ನಿಜವಾಗಿಯೂ ಅರ್ಥಹೀನ ಪ್ರಶ್ನೆ. ಮೋದಿಯವರು ಸಾಮಾನ್ಯವಾಗಿ, ವಿರೋಧ ಪಕ್ಷದವರಿಗೆ ಉತ್ತರಿಸುವುದೇ ಇಲ್ಲ. ಅದೇಕೆ ಹೀಗೆ ಮಾತನಾಡಿದರೋ ಆಶ್ಚರ್ಯವಾಗುತ್ತದೆ.

ಇಂದಿರಾ ಅವರು ಫಿರೋಜ್ ಗಾಂಧಿ ಅವರನ್ನು ವಿವಾಹವಾದ ನಂತರ, ಇಂದಿರಾ ಗಾಂಧಿ ಆದರು. ಅಂತೆಯೇ ಅವರ ಮಕ್ಕಳು, ಮೊಮ್ಮಕ್ಕಳು ರಾಜೀವ್ ಗಾಂಧಿ, ಸಂಜಯ್ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಆಗಿದ್ದಾರೆ. ಇದಕ್ಕೆ ಏಕೆ ತಕರಾರು? ಮೋದಿಯವರು ಎಲ್ಲೋ ಉದ್ವೇಗದಲ್ಲಿ ಮಾತನಾಡಿದ್ದಾರೆ. ಇದನ್ನು ಕಡತದಿಂದ ತೆಗೆಯಬಹುದಲ್ಲವೇ?

ಜಿ.ಎಚ್.ವೆಂಕಟೇಶ ಮೂರ್ತಿ, ಚಿಂತಾಮಣಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ನಾಯಕರಿಗೆ ಅಧಿಕಾರ ಹಿಡಿಯುವ ಹಂಬಲ

ಮತಭಿಕ್ಷೆಗೆ ಬಂದರು 'ಮಹಾನುಭಾವರು'

• ವೈ.ಗ. ಜಗದೀಶ್

ಪ್ರಮುಖ ಮೂರು ಪಕ್ಷಗಳು ಆಶ್ವಾಸನೆಗಳ ಮಳೆಗರೆಯಲು ಶುರುವಿಟ್ಟುಕೊಂಡಿದ್ದು, ಅಧಿಕಾರ ಸಿಕ್ಕಿದರೆ ಪ್ರತಿ ಮನೆಯ ಮುಂದೆ ಹಾಲುಜೇನಿನ ಹೊಳೆ ಹರಿಸುತ್ತೇವೆ ಎಂಬಂತಹ ಭರವಸೆಗಳನ್ನು ನೀಡುತ್ತಿದ್ದಾರೆ. ಆದರೆ, ಅಧಿಕಾರಕ್ಕೆ ಬಂದ ಮೇಲೆ ಈ ನಾಯಕರು ಕಣ್ಣಿಗೇ ಕಾಣಿಸುವುದಿಲ್ಲ ಎಂಬುದು ಜನರಿಗೆ ಗೊತ್ತಿಲ್ಲದ್ದೇನೂ ಅಲ್ಲ

ಮತ್ತೆ ಅಧಿಕಾರ ಹಿಡಿಯುವ ಕನಸಿಗೆ ರೆಕ್ಕೆ ಕಟ್ಟಿಕೊಂಡ ವಿವಿಧ ರಾಜಕೀಯ ಪಕ್ಷಗಳ ನಾಯಕರು, ಶಾಸಕರಾಗಿ ಮರು ಆಯ್ಕೆಯಾಗಬೇಕೆಂಬ ಮಹದಾಸೆ ಹೊತ್ತವರು, ಶಾಸಕರಾಗಬೇಕೆಂಬ ಹಂಬಲದಲ್ಲಿರುವವರು ಭರವಸೆಗಳೆಂಬ 'ಬಣ್ಣಬಣ್ಣದ ಬಲೂನು' ಹಿಡಿದು ಜನರ ಮುಂದೆ ಮತಭಿಕ್ಷೆಗೆ ಬರುತ್ತಿದ್ದಾರೆ. ಆಮಿಷಗಳೊಡ್ಡಿ ತಮ್ಮ ಪ್ರಭಾವಳಿ ಉಳಿಸಿಕೊಳ್ಳಲು ಹೆಣಗುತ್ತಿದ್ದಾರೆ. ಒಮ್ಮೆ ಗೆದ್ದರೆ ಮತ್ತೊಂದು ಚುನಾವಣೆವರೆಗೆ 'ಕಾಣದಂತೆ ಮಾಯವಾಗುವ ಮೋಡಿಗಾರರು' ಈಗ ಬಿಡುಬೀಸಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಕರ್ನಾಟಕ ವಿಧಾನಸಭೆ ಚುನಾವಣೆಯ ಮತದಾನಕ್ಕೆ ತಿಂಗಳಲ್ಲಿ ದಿನಾಂಕ ಘೋಷಣೆಯಾಗಲಿದೆ. ಮತ್ತೆ ಗೆಲ್ಲಲೇಬೇಕೆಂಬ ಛಲ ತೊಟ್ಟಂತಿರುವ ಹಾಲಿ ಶಾಸಕರು ಕ್ಷೇತ್ರದಲ್ಲೇ ಮೊಕ್ಕಾಂ ಹೂಡಿ, ಮತದಾರರನ್ನು ಸೆಳೆಯುವ ವಿವಿಧ ದಾರಿ ಹಿಡಿದಿದ್ದಾರೆ. ಕೋವಿಡ್‌ನ ಆಪತ್ಕಾಲದಲ್ಲಿ ಕೆಲವು ಶಾಸಕರು ಆರೋಗ್ಯ ಸೌಲಭ್ಯ, ಆಹಾರ ವಸ್ತುಗಳನ್ನು ಪೂರೈಸಿದ್ದರು. ಕೆಲವರು ಜನರ ಗೋಳಿಗೆ ಕಿವಿಯಾಗಿರಲೇ ಇಲ್ಲ. ಚುನಾವಣೆ ಹತ್ತಿರವಾಗುತ್ತಿದ್ದಂತೆ ಆರೋಗ್ಯ ಶಿಬಿರ, ಉದ್ಯೋಗ ಮೇಳ, ಪ್ರತಿ ಹಬ್ಬಕ್ಕೂ ಭರಪೂರ ಉಡುಗೊರೆ, ಹೊಸ ಬಟ್ಟೆಯಂತಹ ಉಡುಗೊರೆ ಕೊಟ್ಟು ಮತ-ಮುಖ ಉಳಿಸಿಕೊಳ್ಳುವ ಕೆಲಸಕ್ಕೆ ಕೈಹಾಕಿದ್ದಾರೆ.

ರಾಷ್ಟ್ರೀಯ ಪಕ್ಷಗಳ ನಾಯಕರಂತೂ 'ತಾ ಮೇಲು ತಾ ಮೇಲು' ಎಂಬಂತೆ ನಾಡಿನ ದಿಕ್ಕುದಿಕ್ಕಿಗೆ ದೌಡಾಯಿಸಿ, ಮತಯಾಚನೆಯ ಕಸರತ್ತು ನಡೆಸಿದ್ದಾರೆ. ದೇವರಜಾತ್ರೆಗಳಿಗಿಂತ ಮತಯಾತ್ರೆಯ ಅಬ್ಬರವೇ ಜೋರಾಗಿದೆ. ರಾಜಕೀಯ ಪಕ್ಷಗಳು ಕಾಸುಕೊಟ್ಟು ಮತದಾರರನ್ನು ಮತಯಾತ್ರೆಗೆ ಕರೆದೊಯ್ಯುತ್ತಿರುವುದರಿಂದ ಬರಗಾಲ ದಲ್ಲಿ ಮಳೆಬಂದಂತಹ ವಾತಾವರಣ ನಾಡಿನುದ್ದಕ್ಕೂ ನಿರ್ಮಾಣವಾಗಿದೆ. ಮೂರೂ ಪಕ್ಷಗಳು ಯಾತ್ರೆ ಮಾಡುತ್ತಿರುವುದರಿಂದ ದುಡಿಮೆಯಲ್ಲಿ ಆಸಕ್ತಿಯಿಲ್ಲದ ಜನರಲ್ಲಿ ಹಬ್ಬದ ಸಡಗರ ಹಬ್ಬಿದೆ.

ಒಂದೂವರೆ ವರ್ಷಕ್ಕೂ ಹೆಚ್ಚು ಅವಧಿಯಿಂದ ಮುಖ್ಯಮಂತ್ರಿಯಾಗಿರುವ ಬಸವರಾಜ ಬೊಮ್ಮಾಯಿ, 'ಸಹಾಯ ಮತ್ತು ಧ್ವನಿ ಇಲ್ಲದವರ ಸಂಕಷ್ಟ ನಿವಾರಣೆಗೆ ಕೆಲವು ಕಾರ್ಯಕ್ರಮಗಳನ್ನು ಈ ಬಾರಿಯ ಬಜೆಟ್ ರೂಪಿಸಲಾಗುತ್ತಿದೆ' ಎಂದು ಬುಧವಾರ ಘೋಷಿಸಿದ್ದಾರೆ. ಪ್ರತಿಯೊಂದು ಕುಟುಂಬದ ಮಹಿಳೆಗೆ ತಿಂಗಳಿಗೆ ₹2 ಸಾವಿರ ನೀಡುವ 'ಗೃಹಶಕ್ತಿ' ಯೋಜನೆ ಆರಂಭಿಸುವುದಾಗಿ ಅವರು ಹೇಳಿದ್ದಾರೆ. ಮೀಸಲಾತಿ ಹೆಚ್ಚಳದ ವಿವಿಧ ಹತಾರಗಳನ್ನು ಮುಂದಿಟ್ಟಿರುವ ಬೊಮ್ಮಾಯಿ, ವಿವಿಧ ಸಮುದಾಯಗಳ ಮತಗಳ ಮೇಲೆ ಕಣ್ಣು ನೆಟ್ಟಿದ್ದಾರೆ.

ಅಧಿಕಾರ ಹಿಡಿಯಲು ಮೂರೇಗೇಣು ಎಂಬ ಭಾವನೆ ಹೊಂದಿರುವ ಕಾಂಗ್ರೆಸ್ ನಾಯಕರು, ಬೊಮ್ಮಾಯಿ ಅವರು ಗೃಹ ಶಕ್ತಿ ಘೋಷಣೆಗೆ ಮುನ್ನವೇ ಕುಟುಂಬದ ಗೃಹಿಣಿಗೆ ತಿಂಗಳಿಗೆ ₹2 ಸಾವಿರ ನೀಡುವ 'ಗೃಹಲಕ್ಷ್ಮೀ' ಯೋಜನೆ ಪ್ರಕಟಿಸಿಯೇ ಬಿಟ್ಟರು. ಜತೆಗೆ ಪ್ರತಿಮನೆಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವುದಾಗಿ ಭರವಸೆಯ ಹೊಳೆಯನ್ನೇ ಹರಿಸಿದ್ದಾರೆ.

ಶೇ 50ರಷ್ಟಿರುವ ಮಹಿಳಾ ಮತದಾರರನ್ನು ಸೆಳೆಯಲು ಬಿಜೆಪಿ–ಕಾಂಗ್ರೆಸ್ ಎರಡೂ ಪಕ್ಷಗಳು ಪೈಪೋಟಿಗೆ ಬಿದ್ದಂತಿವೆ. ಪಕ್ಷವನ್ನು ಅಧಿಕಾರಕ್ಕೆ ತಂದೇ ತೀರುವೆ ಎಂದು ಪಣತೊಟ್ಟಿರುವ ಎಚ್.ಡಿ.ಕುಮಾರಸ್ವಾಮಿ, ಉದ್ಯೋಗ, ಕೃಷಿ, ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆ ತರಲು 'ಪಂಚರತ್ನ' ಯೋಜನೆ ಮುಂದಿಟ್ಟು ಹೊರಟಿದ್ದಾರೆ.

ಹೀಗೆ, ಪ್ರಮುಖ ಮೂರು ಪಕ್ಷಗಳು ಆಶ್ವಾಸನೆಗಳ ಮಳೆಗರೆಯಲು ಶುರುವಿಟ್ಟುಕೊಂಡಿದ್ದು, ಅಧಿಕಾರ ಸಿಕ್ಕಿದರೆ ಪ್ರತಿ ಮನೆಯ ಮುಂದೆ ಹಾಲುಜೇನಿನ ಹೊಳೆ ಹರಿಸುತ್ತೇವೆ ಎಂಬಂತಹ ಭರವಸೆಗಳನ್ನು ನೀಡುತ್ತಿದ್ದಾರೆ. ಆದರೆ, ಅಧಿಕಾರಕ್ಕೆ ಬಂದ ಮೇಲೆ ಈ ನಾಯಕರು ಕಣ್ಣಿಗೇ ಕಾಣಿಸುವುದಿಲ್ಲ ಎಂಬುದು ಜನರಿಗೆ ಗೊತ್ತಿಲ್ಲದ್ದೇನೂ ಅಲ್ಲ. ಮತ್ತೊಂದು ಚುನಾವಣೆವರೆಗೆ ಮೂಕಬಸವಣ್ಣನಾಗುವ ಸ್ಥಿತಿ ಮತದಾರರದ್ದಾಗಿದೆ ಎಂಬುದಕ್ಕೆ ಇತಿಹಾಸದ ಅಧ್ಯಯನವೇನೂ ಬೇಕಿಲ್ಲ.

ಇಷ್ಟೆಲ್ಲದರ ಮಧ್ಯೆ ಜನರ ಕಷ್ಟಗಳು ಚರ್ಚೆಯ ಮುನ್ನೆಲೆಗೆ ಬರುತ್ತಿಲ್ಲ. ಬೆಲೆ ಏರಿಕೆಯ ಬರೆಯ ನೋವು ಆಲಿಸುವವರೂ ಇಲ್ಲ. ಬೆಳೆನಷ್ಟ, ಬೆಳೆಗೆ ಸಿಗದ ಬೆಲೆಯಿಂದ ನೊಂದವರಿಗೆ ಸಾಂತ್ವನವೂ ಇಲ್ಲ. ಆಶ್ವಾಸನೆ ಕೊಟ್ಟು ಮತ ಸೆಳೆವ ಮಾಟವಷ್ಟೇ ಕೋರೈಸುತ್ತಿದೆ.

ನೆರೆ ಬಂದಾಗಲೂ ನಾಡಿಗೆ ಬಾರದ, ಜನರು–ರೈತರ ಗೋಳು ಏನೆಂದು ಕೇಳದ ಪ್ರಧಾನಿ ನರೇಂದ್ರ ಮೋದಿ ಅವರು ಈಗ ತಿಂಗಳಿಗೆ ಎರಡು ಬಾರಿ ಬರಲಾರಂಭಿಸಿದ್ದಾರೆ. ನೆರೆ ಹಾನಿ ಪರಿಶೀಲಿಸಿ, ಪರಿಹಾರ ನಿಗದಿ ಮಾಡಬೇಕಾದ ಹೊಣೆ ಹೊತ್ತ ಗೃಹ ಸಚಿವ ಅಮಿತ್ ಶಾ, ಆಗ ರಾಜ್ಯದ ಮುಖವನ್ನೇ ನೋಡಿರಲಿಲ್ಲ. ಈಗ ನೋಡಿದರೆ, ಮನೆ ಮಗನಂತೆ ಇಲ್ಲೇ ತಿರುಗಾಡುತ್ತಿದ್ದಾರೆ.

ನಾಲ್ಕೂ ಮುಕ್ಕಾಲು ವರ್ಷ ಸುಮ್ಮನಿದ್ದ ಎಲ್ಲ ಪಕ್ಷಗಳ ನಾಯಕರಿಗೆ ಜನರ ಮೇಲೆ ಅಪಾರ ಕಾಳಜಿ, ಅನುಕಂಪ ಎಲ್ಲವೂ ಬಂದು ಬಿಟ್ಟಿದೆ. ಮನೆಗೆ ಹೋದರೆ ಬಾಗಿಲು ತೆರೆಯದಿದ್ದವರು, ಮನೆಯಿಂದ ಹೊರಗೇ ಬರದಿದ್ದವರು ಈಗ ಮನೆಮನೆಗೆ ಭೇಟಿ ಕೊಡುತ್ತಿದ್ದಾರೆ. ಹಗಲು ರಾತ್ರಿಯೆನ್ನದೇ ಸುತ್ತಾಡುತ್ತಾ, ಯಾರದ್ದೋ ಮನೆಯಲ್ಲಿ, ಹಾಸ್ಟೆಲ್‌ಗಳಲ್ಲಿ ಮಲಗುತ್ತಾ, ಮಠ–ದೇವಸ್ಥಾನ ದರ್ಶನ ಮಾಡುತ್ತಾ ಪುನೀತರಾಗುತ್ತಿದ್ದಾರೆ.

2004ರಿಂದೀಚೆಗೆ ಚುನಾವಣೋತ್ತರ ರಾಜಕೀಯ ಬೆಳವಣಿಗೆ ನೋಡಿದರೆ, ಗೆಲ್ಲುವ ವರೆಗಷ್ಟೇ ಪಕ್ಷ; ಗೆದ್ದ ಮೇಲೆ ಕತ್ತೆಬಾಲ ಎಂಬಂತೆ ರಾಜಕಾರಣಿಗಳು ಆಡುತ್ತಿದ್ದಾರೆ. ಅದಕ್ಕೆ ಪೂರ್ವದಲ್ಲಿಯೂ ಪಕ್ಷಾಂತರ ಇರಲಿಲ್ಲವೆಂದಲ್ಲ. ಆದರೆ, ಒಂದು ಚುನಾವಣೆಯಿಂದ ಮತ್ತೊಂದು ಚುನಾವಣೆಯವರೆಗಾದರೂ ಪಕ್ಷ ನಿಷ್ಠೆ ಇರುತ್ತಿತ್ತು. ಚುನಾವಣೆ ಘೋಷಣೆಯಾದ ಮೇಲಷ್ಟೆ ಅನುಕೂಲಕರ ಪಕ್ಷಕ್ಕೆ ಹೋಗುತ್ತಿದ್ದರು. ವಿಭಿನ್ನ ರಾಜಕೀಯ ವಿಚಾರಧಾರೆ ಹೊಂದಿರುವವರು, ಅಧಿಕಾರಕ್ಕೆ ಅನುಕೂಲ ಸಿಂಧು ರಾಜಕಾರಣ ಮಾಡುತ್ತಿರಲಿಲ್ಲ. ಅಧಿಕಾರ ಸಿಕ್ಕದಿದ್ದರೆ ವಿರೋಧ ಪಕ್ಷದಲ್ಲೇ ಕೂರುವಷ್ಟು ಸ್ವಾಭಿಮಾನವಾದರೂ ಇತ್ತು.

ಈಗ ಹಾಗಿಲ್ಲ; ಎದುರಾಳಿ ಪಕ್ಷದ ನಾಯಕನನ್ನು ಹೀಗಳೆದವರು, ಫಲಿತಾಂಶ ಹೊರಬೀಳುತ್ತಿದ್ದಂತೆ ಅಕ್ಕಪಕ್ಕ ನಿಂತು ಅಧಿಕಾರ ನಡೆಸಿದ್ದುಂಟು. 2008ರಿಂದೀಚೆಗೆ ಫಲಿತಾಂಶ ಹೊರಬೀಳುತ್ತಲೇ ಮತ್ತೊಂದು ಪಕ್ಷಕ್ಕೆ ವಾಲುವ, ಆರೇಳು ತಿಂಗಳಿನಲ್ಲಿ ರಾಜೀನಾಮೆ ಕೊಟ್ಟು ಚುನಾವಣೆಯಲ್ಲಿ ತಮ್ಮ ವಿರುದ್ಧ ಸೆಣಸಿದ್ದ ಪಕ್ಷಕ್ಕೆ ಸೇರುವಷ್ಟು ಕಾಲ ಬದಲಾಗಿ ಹೋಗಿದೆ. ಈಗ ಎದುರುಬದುರು ಸ್ಪರ್ಧೆಯಲ್ಲಿರುವ ಕಾಂಗ್ರೆಸ್–ಜೆಡಿಎಸ್, ಜೆಡಿಎಸ್–ಬಿಜೆಪಿ ಅಥವಾ ಯಾವುದೇ ಪಕ್ಷದಿಂದ ಗೆದ್ದ ಶಾಸಕರು ಫಲಿತಾಂಶದ ಬಳಿಕ ಎಲ್ಲಿರಲಿದ್ದಾರೆ ಎಂಬುದು ಸ್ವತಃ ಅವರಿಗೂ ಗೊತ್ತಿಲ್ಲ. 16 ವರ್ಷಗಳಲ್ಲಿ ಆದ ಬದಲಾವಣೆ ಎಂದರೆ ಚುನಾವಣೆಗೆ ಸ್ಪರ್ಧಿಸಲಷ್ಟೇ ಪಕ್ಷದ ಚಿಹ್ನೆ. ಆಮೇಲೆ ಅಧಿಕಾರಕ್ಕೆ ಸನ್ನೆ. ಗೆಲ್ಲಿಸಿದ ಮತದಾರರಿಗೆ ಗುನ್ನೆ. ಇದು ಬಹುತೇಕ ಜನಪ್ರತಿನಿಧಿಗಳ ರಾಜಕೀಯ ವರಸೆಯಾಗಿದೆ. ಈ ಎಲ್ಲ ಬದಲಾವಣೆಗಳ ಮಧ್ಯೆಯೇ ಕರ್ನಾಟಕ ಮತ್ತೊಂದು ಚುನಾವಣೆಯನ್ನು ಎದುರು ನೋಡುತ್ತಿದೆ.

ಮನೆಯೊಂದು ಮೂರು ಕವಲು

• ಎಸ್. ರವಿ ಪ್ರಕಾಶ್

'ಬ್ಲಡ್ ಈಸ್ ಥಿಕ್ಕರ್ ದ್ಯಾನ್ ವಾಟರ್' ಎಂಬುದು ಇಂಗ್ಲಿಷ್‌ನ ಲೋಕೋಕ್ತಿ. ಮನೆಯಲ್ಲಿ ಎಷ್ಟೇ ಕಚ್ಚಾಟ– ಕಾದಾಟವಿದ್ದರೂ ಹೊರಗಿನವರು ಮೂಗು ತೂರಿಸಿದಾಗ ರಕ್ತಹಂಚಿಕೊಂಡವರು ಒಗ್ಗಟ್ಟಾಗುತ್ತಾರೆ ಎನ್ನುವುದೇ ತಾತ್ಪರ್ಯ. ಆದರೆ, ಈ ಲೋಕೋಕ್ತಿ ಈಗಿನ ರಾಜಕೀಯಕ್ಕೆ ಅಷ್ಟಾಗಿ ಅನ್ವಯವಾಗುವುದಿಲ್ಲ. ಕುಟುಂಬದ ಸದಸ್ಯರು 'ನನ್ನ ಹಾದಿ ನನ್ನದು...' ಎಂಬ ಮನೋಭಾವ ಬೆಳೆಸಿಕೊಂಡಿರುವ ಹಲವು ಉದಾಹರಣೆಗಳು ಇವೆ. ಅಣ್ಣ–ತಮ್ಮ, ತಂದೆ–ಮಕ್ಕಳು... ತಮಗೆ ಸ್ಥಾನ ದಕ್ಕಬಹುದಾದ ಬೇರೆ ಬೇರೆ ಪಕ್ಷಗಳಲ್ಲಿ ನೆಲೆಯೂರಲು ಪ್ರಯತ್ನಿಸುತ್ತಿದ್ದಾರೆ.

ವೈಯಕ್ತಿಕ ಹಿತಾಸಕ್ತಿ ಮತ್ತು ಬೆಳವಣಿಗೆಯ ನೆಲೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಯೋಚಿಸುವುದರಿಂದ ರಾಜಕೀಯ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಒಂದೇ ಕುಟುಂಬದ ಹಲವು ಸದಸ್ಯರು ಬೇರೆ ಬೇರೆ ಪಕ್ಷಗಳಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ. ರಾಜಕೀಯದಲ್ಲಿರುವ ಹಲವು ಕುಟುಂಬಗಳು 'ಮನೆಯೊಂದು ಮೂರು ಬಾಗಿಲು' ಎಂಬ ಹಂತಕ್ಕೆ ತಲುಪಿವೆ.

ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಬಯಕೆ ಹೊಂದಿರುವವರು ತಯಾರಿ ನಡೆಸಿಕೊಳ್ಳುತ್ತಿದ್ದಾರೆ. ರಾಜಕೀಯದಲ್ಲಿ ಈಗಾಗಲೇ ಇರುವ ಕುಟುಂಬಗಳಲ್ಲೂ ಅದರ ತಲ್ಲಣಗಳನ್ನು ಕಾಣಬಹುದು. ನಿರ್ದಿಷ್ಟ ಪಕ್ಷದಲ್ಲಿ ಟಿಕೆಟ್ ಸಿಗದೇ ಹೋದರೆ, ಮತ್ತೊಂದು ಪಕ್ಷಕ್ಕೆ ಹೋಗಿ ನೆಲೆ ಕಂಡುಕೊಳ್ಳುವ ಪ್ರಯತ್ನ ನಡೆಸುವುದು ಸಾಮಾನ್ಯ. ಆ ವಿದ್ಯಮಾನವೂ ಈಗಾಗಲೇ ರಾಜ್ಯದ ಉದ್ದಗಲಕ್ಕೂ ಆರಂಭವಾಗಿದೆ.

ಬಳ್ಳಾರಿಯಲ್ಲಿ ಜನಾರ್ದನ ರೆಡ್ಡಿ ಪ್ರತ್ಯೇಕ ಪಕ್ಷ ಕಟ್ಟಿದ್ದಾರೆ. ಬೆಳಗಾವಿಯ ಜಾರಕಿಹೊಳಿ ಕುಟುಂಬದಲ್ಲಿ ಸದ್ಯಕ್ಕಂತೂ ಸುಸೂತ್ರವಾಗಿದೆ. ಜಾರಕಿಹೊಳಿ ಸಹೋದರರು ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳಲ್ಲಿಯೂ ಇದ್ದಾರೆ. ವಿಧಾನಪರಿಷತ್ ಸದಸ್ಯರಾದ ಲಖನ್ ಜಾರಕಿಹೊಳಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸಾಧ್ಯತೆ ಇಲ್ಲ.

ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ಕ್ಷೇತ್ರದ ಶಾಸಕ ಶಿವಾನಂದ ಪಾಟೀಲ ಕಾಂಗ್ರೆಸ್ ಪಕ್ಷದಲ್ಲಿದ್ದಾರೆ. ಇವರ ಸಹೋದರ ವಿಜುಗೌಡ ಪಾಟೀಲ ಸದ್ಯ ಬಿಜೆಪಿಯಲ್ಲಿದ್ದಾರೆ. ವಿಜು ಅವರು ಬಬಲೇಶ್ವರ ವಿಧಾನಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ.

ಮೈಸೂರಿನ ಚಾಮರಾಜ ಕ್ಷೇತ್ರದ ಮಾಜಿ ಶಾಸಕ ವಾಸು ಹಿರಿಯ ಕಾಂಗ್ರೆಸಿಗ. ಈ ಬಾರಿ ಅವರಿಗೆ ಟಿಕೆಟ್ ಸಿಗುತ್ತದೆ ಎಂದು ಕೇಂದ್ರದ ಮಾಜಿ ಸಚಿವ ವೀರಪ್ಪ ಮೊಯ್ಲಿ ಮೈಸೂರಿನಲ್ಲಿ ಘೋಷಿಸಿದ್ದಾರೆ. ಆದರೆ, ವಾಸು ಅವರ ಪುತ್ರರಾದ ಕವೀಶ್ ಗೌಡ ಹಾಗೂ ಹವೀಶ್ ಗೌಡ ಈಚೆಗೆ ಬಿಜೆಪಿ ಸೇರಿದ್ದಾರೆ.

ಕೊಪ್ಪಳ ಜಿಲ್ಲೆಯ ಗಂಗಾವತಿಯ ಮಾಜಿ ಸಂಸದ ಎಚ್.ಜಿ. ರಾಮುಲು ಕಾಂಗ್ರೆಸ್ ನಾಯಕ. ಆದರೆ, ಸದ್ಯ ಅವರು ರಾಜಕಾರಣದಲ್ಲಿ ಸಕ್ರಿಯರಾಗಿಲ್ಲ. ಅವರ ಪುತ್ರ ಎಚ್.ಆರ್. ಶ್ರೀನಾಥ್ ಜೆಡಿಎಸ್ ಅನ್ನು ಈಚೆಗಷ್ಟೇ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ರಾಮುಲು ಅವರ ಇನ್ನೊಬ್ಬ ಮಗ ಎಚ್.ಆರ್. ಚನ್ನಕೇಶವ ಬಿಜೆಪಿಯಲ್ಲಿದ್ದು, ಟಿಕೆಟ್ ಪಡೆಯಲು ಕಸರತ್ತು ನಡೆಸಿದ್ದಾರೆ.

ಬೀದರ್ ಜಿಲ್ಲೆ ಹುಮ್ನಾಬಾದ್ ಶಾಸಕ ರಾಜಶೇಖರ ಪಾಟೀಲ ಅವರ ಸಹೋದರರಾದ ಚಂದ್ರಶೇಖರ ಪಾಟೀಲ ಮತ್ತು ಭೀಮರಾವ್ ಪಾಟೀಲ ಕಾಂಗ್ರೆಸ್‌ನಿಂದ ವಿಧಾನಪರಿಷತ್ ಸದಸ್ಯರಾಗಿದ್ದಾರೆ. ರಾಜಶೇಖರ ಅವರ ದೊಡ್ಡಪ್ಪನ ಪುತ್ರ ಸಿದ್ದುಪಾಟೀಲ ಬಿಜೆಪಿ ಟಿಕೆಟ್‌ನಿಂದ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದಾರೆ. ರಾಜಶೇಖರ ಪಾಟೀಲರ ಬೀಗರಾದ ಧನರಾಜ್ ತಾಳಂಪಳ್ಳಿ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ.

ಬೆಂಗಳೂರಿನ ಪುಲಿಕೇಶಿನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸಮೂರ್ತಿ ತಂಗಿ ಗಗನ ಸುಕನ್ಯಾ ಅವರು ಆಮ್ ಆದ್ಮಿ ಪಾರ್ಟಿ ಸೇರಿದ್ದಾರೆ. ಕೋಲಾರ ಕೆಡಿಪಿ ಸದಸ್ಯೆ ಆಗಿರುವ ಸುಕನ್ಯಾ ವಿಧಾನಸಭೆ ಚುನಾವಣೆ ಟಿಕೆಟ್ ಆಕಾಂಕ್ಷಿ.

ಪೂರಕ ಮಾಹಿತಿ: ಪ್ರಜಾವಾಣಿ ಬ್ಯೂರೋಗಳಿಂದ

ಅಪ್ಪ ಬಿಜೆಪಿ, ಮಗ ಕಾಂಗ್ರೆಸ್

ಶರತ್ ಬಚ್ಚೇಗೌಡ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ ಪ್ರತಿನಿಧಿಸುವ ಬಿ.ಎನ್. ಬಚ್ಚೇಗೌಡ ಅವರು ಬಿಜೆಪಿ ಸಂಸದರಾದರೆ, ಅವರ ಮಗ ಶರತ್ ಬಚ್ಚೇಗೌಡ ಹೊಸಕೋಟೆಯ ಕಾಂಗ್ರೆಸ್ ಶಾಸಕ. ಮನೆ ಒಂದೇ ಆದರೂ ತಂದೆ, ಮಗ ಪ್ರತಿನಿಧಿಸುವ ಪಕ್ಷಗಳು ಮಾತ್ರ ಬದ್ಧ ರಾಜಕೀಯ ಪ್ರತಿಸ್ಪರ್ಧಿಗಳು!

ಕಳೆದ ವಿಧಾನಸಭಾ ಉಪ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಸಿಗದ ಕಾರಣ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಗ ಶರತ್ ಅವರನ್ನು ತಮ್ಮದೇ ಪಕ್ಷದ ಅಭ್ಯರ್ಥಿ ಎಂ.ಟಿ.ಬಿ. ನಾಗರಾಜ್ ವಿರುದ್ಧ ಗೆಲ್ಲಿಸಿಕೊಂಡು ಬರುವಲ್ಲಿ ಬಚ್ಚೇಗೌಡ ಸಫಲರಾಗಿದ್ದರು. ತಾಂತ್ರಿಕವಾಗಿ ಇನ್ನೂ ಬಿಜೆಪಿಯಲ್ಲಿರುವ ಸಂಸದ ಬಿ.ಎನ್. ಬಚ್ಚೇಗೌಡ ಅವರು ರಾಜಕೀಯವಾಗಿ ತಟಸ್ಥರಾಗಿದ್ದಾರೆ. ಅಧಿಕಾರ ಅವಧಿ ಮುಗಿದ ನಂತರ ರಾಜಕೀಯ ನಿವೃತ್ತಿ ಪಡೆಯುತ್ತಾರೆ ಎಂದು ಹೇಳಲಾಗುತ್ತಿದೆ. ಅವರ ಮಗ ಹಾಗೂ ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ ಈಗ ಕಾಂಗ್ರೆಸ್ ಜೊತೆ ಗುರುತಿಸಿಕೊಂಡಿದ್ದಾರೆ. ಬರುವ ವಿಧಾನಸಭಾ ಚುನಾವಣೆಯಲ್ಲಿಯೂ ಅವರು ಕಾಂಗ್ರೆಸ್ ಪಕ್ಷದ ಟಿಕೆಟ್‌ನ ಪ್ರಬಲ ಆಕಾಂಕ್ಷಿ.

ನೆಲೆ ಕಾಣಲು ಅಪ್ಪ– ಮಗನ ತಿಣುಕಾಟ

ಮಂಥರ್‌ಗೌಡ

ಹಾಸನ ಜಿಲ್ಲೆಯಲ್ಲಿ ಮಾಜಿ ಸಚಿವ ಎ.ಮಂಜು ಅವರು ತಮ್ಮ ರಾಜಕೀಯ ಅಸ್ತಿತ್ವವನ್ನು ಕಂಡುಕೊಳ್ಳುವುದರ ಜತೆಗೆ ತಮ್ಮ ಮಗನಿಗೂ ರಾಜಕೀಯ ನೆಲೆ ಕಲ್ಪಿಸಲು ತಿಣುಕಾಡುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿದ್ದ ಎ.ಮಂಜು ಕಳೆದ ಲೋಕಸಭಾ ಚುನಾವಣೆ ವೇಳೆ ಬಿಜೆಪಿ ಸೇರಿ ಹಾಸನ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಅವರ ಪುತ್ರ ಮಂಥರ್‌ಗೌಡ ಕಾಂಗ್ರೆಸ್ ಪಕ್ಷದಿಂದ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತರು. ಇದೀಗ ಮಂಜು ಅವರು ಅರಕಲಗೂಡು ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಲಿದ್ದಾರೆ. ಮಂಥರ್‌ಗೌಡ ಮಡಿಕೇರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ. ಅವರನ್ನು ಜೆಡಿಎಸ್‌ಗೆ ಕರೆತರುವ ಪ್ರಯತ್ನಗಳು ನಡೆದಿವೆ.

ಬಾವ– ನಾದಿನಿ ಸೆಣಸಾಟಕ್ಕೆ ತಾಲೀಮು

ಲಕ್ಷ್ಮೀ ಅರುಣಾ

ಬಿಜೆಪಿಯಲ್ಲಿ ತಮ್ಮನ್ನು ಕಡೆಗಣಿಸಲಾಗಿದೆ ಎಂದು ಅಸಮಾಧಾನಗೊಂಡ ಮಾಜಿ ಸಚಿವ ಜಿ. ಜನಾರ್ದನ ರೆಡ್ಡಿ, ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಕಟ್ಟಿದ್ದಾರೆ. ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದಿಂದ ತಮ್ಮ ಪತ್ನಿ ಲಕ್ಷ್ಮೀ ಅರುಣಾ ಅವರನ್ನು ಕಣಕ್ಕಿಳಿಸುವುದಾಗಿ ಪ್ರಕಟಿಸಿದ್ದಾರೆ. ಜನಾರ್ದನ ರೆಡ್ಡಿ ಅವರ ಸೋದರ ಈ ಕ್ಷೇತ್ರದ ಹಾಲಿ ಶಾಸಕ ಜಿ. ಸೋಮಶೇಖರರೆಡ್ಡಿ. ಈ ಸಲವೂ ಬಿಜೆಪಿಯಿಂದ ಸ್ಪರ್ಧೆ ಮಾಡುವುದಾಗಿ ಸೋಮಶೇಖರ ಘೋಷಿಸಿದ್ದಾರೆ. ಬಿಜೆಪಿ ಟಿಕೆಟ್ ಕೊಡದಿದ್ದರೆ ಪಕ್ಷೇತರವಾಗಿ ಸ್ಪರ್ಧಿಸಿ ಗೆದ್ದು ಪುನಃ ಬಿಜೆಪಿಗೆ ಹೋಗುವುದಾಗಿಯೂ ಹೇಳಿದ್ದಾರೆ. ಹಾಗೇನಾದರೂ ಬಾವ ಮತ್ತು ನಾದಿನಿ ನಡುವೆ ಸ್ಪರ್ಧೆ ಏರ್ಪಟ್ಟರೆ ಕ್ಷೇತ್ರದ ಚುನಾವಣೆ ರೋಚಕವಾಗಲಿದೆ. ಚುನಾವಣೆ ಹತ್ತಿರ ಬರುತ್ತಿದ್ದಂತೆ ಬಳ್ಳಾರಿಯಲ್ಲಿ ಜಿದ್ದಾಜಿದ್ದಿಯ ಕೆಂಧೂಳು ಆಗಸವನ್ನು ಮುಟ್ಟುವ ಸಾಧ್ಯತೆ ಇದೆ.

ಅಪ್ಪ ಬಿಜೆಪಿ, ಮಗಳು ಕಾಂಗ್ರೆಸ್

ಡಾ. ಅನುರಾಗ ಮಾಲಕರಡ್ಡಿ

ಯಾದಗಿರಿ ಜಿಲ್ಲೆಯ ಬಿಜೆಪಿ ಹಿರಿಯ ಮುಖಂಡ ಎ.ಬಿ.ಮಾಲಕರಡ್ಡಿ ಅವರ ಪುತ್ರಿ ಡಾ. ಅನುರಾಗ ಕಾಂಗ್ರೆಸ್‌ನಿಂದ ಟಿಕೆಟ್ ಬಯಸಿ, ಅರ್ಜಿ ಸಲ್ಲಿಸಿದ್ದಾರೆ. ಆರು ಬಾರಿ ಗೆದ್ದಿರುವ ಮಾಲಕರಡ್ಡಿಯವರು 2019ರ ಲೋಕಸಭಾ ಚುನಾವಣೆ ವೇಳೆ ಹಿರಿಯರಿಗೆ ಕಾಂಗ್ರೆಸ್‌ನಲ್ಲಿ ಗೌರವ ಸಿಗುತ್ತಿಲ್ಲ ಎಂದು ಕಾಂಗ್ರೆಸ್ ತೊರೆದಿದ್ದರು. ಆದರೆ, ಅವರ ಪುತ್ರಿ ಡಾ.ಅನುರಾಗ ಕಾಂಗ್ರೆಸ್‌ನಲ್ಲಿದ್ದು, ಯಾದಗಿರಿ ಮತಕ್ಷೇತ್ರದ ಟಿಕೆಟ್ ಆಕಾಂಕ್ಷಿ ಆಗಿದ್ದಾರೆ.

ಬಾಮ್ಮೈದನಿಗೆ ಸಡ್ಡು ಹೊಡೆದ ಭಾವ!



ಶರತ್ ಚಂದ್ರ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಬಾವ ಶರತ್ ಚಂದ್ರ ಅವರು ರಾಮನಗರ ಜಿಲ್ಲೆಯ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಆಗಿದ್ದರು. ಆದರೆ, ಡಿ.ಕೆ. ಸಹೋದರರು ಅವರ ಸ್ಪರ್ಧೆಯ ಬಗ್ಗೆ ಆಸಕ್ತಿ ತೋರಲಿಲ್ಲ. ಹೀಗಾಗಿ ಕೆಪಿಸಿಸಿ ಅಧ್ಯಕ್ಷರಿಗೇ ಸಡ್ಡು ಹೊಡೆದು ಶರತ್ ಚಂದ್ರ ಆಮ್ ಆದ್ಮಿ (ಎಎಪಿ) ಪಕ್ಷ ಸೇರಿದ್ದಾರೆ. ಚುನಾವಣೆಯಲ್ಲಿ ಅವರು ಎಎಪಿ ಅಭ್ಯರ್ಥಿಯಾಗಿ ಚನ್ನಪಟ್ಟಣದಿಂದ ಸ್ಪರ್ಧಿಸುವ ಸಾಧ್ಯತೆ ಇದೆ. ಶರತ್ ಚಂದ್ರ ಅವರು 2018ರಲ್ಲಿ ಕೂಡ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು.

ಹೊಂದಿಸಲು ಬಾಕಿ ಇನ್ನೂ ಇದೆ

ಶರತ್ ಹೆಗ್ಡೆ

ನಾವು ನೋಡಿದ ಸಿನಿಮಾ

ಚಿತ್ರ: ಹೊಂದಿಸಿ ಬರೆಯಿರಿ
ನಿರ್ದೇಶನ: ರಾಮೇನಹಳ್ಳಿ ಜಗನ್ನಾಥ
ತಾರಾಗಣ: ನವೀನ್ ಶಂಕರ್, ಶ್ರೀ ಮಹಾದೇವ್, ಐಶಾನಿ ಶೆಟ್ಟಿ, ಅರ್ಚನಾ ಜೋಯಿಸ್, ಅರ್ಚನಾ ಕೊಟ್ಟಿಗೆ, ಸಂಯುಕ್ತಾ ಹೊರನಾಡು, ಅನಿರುದ್ಧ ಆಚಾರ್ಯ
ಸಂಗೀತ: ಜೋ ಕೋಸ್ಟಾ
ಛಾಯಾಗ್ರಹಣ: ಶಾಂತಿಸಾಗರ್ ಎಚ್.ಜಿ.
ನಿರ್ಮಾಣ: ಸಂಡೇ ಸಿನಿಮಾಸ್

ಬದುಕನ್ನು ಬಂದಹಾಗೆ ಸ್ವೀಕರಿಸಿ. ಹೊಂದಾಣಿಕೆಯಿಂದ ಬಾಳಿ. ಬೆಳಕು ಇರುವಲ್ಲಿ ಕತ್ತಲಿಗೆ ಜಾಗವಿಲ್ಲ... ಹೀಗೆ ಬದುಕು, ಸಂಬಂಧಗಳ ಮೌಲ್ಯಗಳನ್ನು ಹೇಳಲು ಹೊರಟ ಸಿನಿಮಾ 'ಹೊಂದಿಸಿ ಬರೆಯಿರಿ'.

ಕಾಲೇಜು ಹುಡುಗರ ತುಂಟತನ, ಹೀರೊ ಬಿಲ್ಡಪ್‌ಗೆ ಹೊಡೆದಾಟ, ಸೀನಿಯರ್– ಜ್ಯೂನಿಯರ್ ತರಲೆ, ಒಂದೆರಡು ಕ್ಷಣ ನಗು ಮೂಡಿಸಿ ಮಾಯವಾಗುವ ಸನ್ನಿವೇಶ, ಎಂಜಿನಿಯರಿಂಗ್ ಕಾಲೇಜು ಹುಡುಗ–ಹುಡುಗಿಯರ ಎಂಟನೇ ತರಗತಿ ಮಟ್ಟದ ಪ್ರೇಮಕಥೆ, ಪ್ರೇಯಸಿಗೆ ಮುತ್ತಿಟ್ಟವನನ್ನು ಎಳೆದೊಯ್ಯುವ ಪೊಲೀಸ್‌ಗಿರಿ..! ಇದನ್ನೆಲ್ಲ ಹೊಂದಿಸಿ ತೆಗೆದ ಸಿನಿಮಾ ಇದು.

ನಾಲ್ವರು ಗೆಳೆಯರ ಗುಂಪಿನಲ್ಲಿ ಆರಂಭವಾಗುವ ಪ್ರೇಮಕಥೆ, ಗೆಳತಿಯರ ಬಳಗದಲ್ಲೊಬ್ಬಳ ಆತ್ಮಹತ್ಯೆ ಎಂಬ ಉಪಕಥೆ. ಅಲ್ಲೊಂದು – ಇಲ್ಲೊಂದು ಮೌನ ಬೋಧನೆ, ಯಾರು ಯಾರನ್ನು ಪ್ರೀತಿಸುತ್ತಾರೆ, ಎಲ್ಲಿ ಸೇರುತ್ತಾರೆ, ಏನಾಗುತ್ತದೆ ಎಂಬುದೊಂದೂ ಅರ್ಥವಾಗದೇ ಗೋಜಲು, ಪೇಲವತೆಗಳ ಮೊದಲಾರ್ಧವನ್ನು ಪ್ರೇಕ್ಷಕ ಸಹಿಸಿಕೊಳ್ಳಲೇಬೇಕು.

ಉತ್ತರಾರ್ಧದಲ್ಲಿ ಅಷ್ಟೋ ಇಷ್ಟೋ ಕಥೆ ಸಾಗುತ್ತದೆ. ಅದೂ ಗಂಡ ಹೆಂಡತಿಯ ಚಿಲ್ಲರೆ ಜಗಳಗಳು, ಅಪ್ಪ ಅಮ್ಮನ ಬೋಧನೆ, ಅದುವರೆಗೆ ಕಾಣೆಯಾಗಿದ್ದ ಅಂತರ್ಮುಖಿ ನಾಯಕ (ನವೀನ್ ಶಂಕರ್) ಮೇಷ್ಟ್ರಾಗಿ, ಬದುಕು ಬದಲಿಸಿಕೊಂಡು ಗರ್ಭಿಣಿ ವಿಧವೆಯೊಬ್ಬಳನ್ನು (ಅರ್ಚನಾ ಜೋಯಿಸ್) ಮದುವೆಯಾಗುವುದು, ಅವಳೊಂದು ಹೆಣ್ಣು ಮಗು ಹೆತ್ತು ಸಾಯುವುದು, ಕೊನೆಗೆ ಚಿತ್ರದ ಶುಭಂ. ದ್ವಿತಿಯಾರ್ಧದಲ್ಲಿ ಪ್ರೇಕ್ಷಕರು ನಿಶ್ಯಬ್ದರಾಗಿಬಿಡುವುದು ಚಿತ್ರದ ಸಾಮರ್ಥ್ಯ ಎನ್ನಬಹುದು.

ಏನೇ ಆದರೂ ದ್ವಿತೀಯಾರ್ಧದ ಕಥೆಯ ಓಟ ಸಾಲದು. ಗೆಳೆಯರ ಪೈಕಿ, ಇಬ್ಬರಿಗೆ ಸಹೋದ್ಯೋಗಿಗಳೇ ಇಷ್ಟವಾಗುವುದು, ಅವರ ಪೈಕಿ ಒಬ್ಬನ ಗೆಳತಿ ಕೈಕೊಡುವುದು... ಮತ್ತೊಂದಿಷ್ಟು ಹುಡುಕಾಟಗಳು, ಗೋಜಲುಗಳು, ಬೋಧನೆಗಳಲ್ಲಿ ಎರಡೂ ಕಾಲು ಗಂಟೆ ಕಳೆದುಹೋಗುತ್ತದೆ.

ಹಾಗಿದ್ದರೂ ನವೀನ್ ಶಂಕರ್‌ನ ನಟನೆ, ಪಕ್ವತೆಗೆ ಪೂರ್ಣ ಅಂಕ ನೀಡಬಹುದು. ಅಂತರ್ಮುಖಿ ಯುವಕನ ಪಾತ್ರ. ಎಲ್ಲ ಪಾತ್ರಗಳನ್ನು ಮೀರಿಸಿದ ಅಭಿನಯವನ್ನು ಅವರು ತೋರಿದ್ದಾರೆ. ಅರ್ಚನಾ ಜೋಯಿಸ್ ಅಭಿನಯ ಗಾಂಭೀರ್ಯದಿಂದ ಮನಮುಟ್ಟುತ್ತದೆ. ಐಶಾನಿ ಶೆಟ್ಟಿ 'ಗೊಂಬೆ' ಆಗಿಬಿಟ್ಟಿದ್ದಾರೆ. ಸಂಯುಕ್ತಾ ಹೊರನಾಡು ನಗು ತೋರಿಸಿ ಹೋಗಿದ್ದಾರೆ. ಪುಟ್ಟಪಾತ್ರವಾದರೂ ಕಾಣಿಸುವ ಸಿಸಿಲಿಯಾ ಡೆಬ್ಬರಮಾ ನೆನಪಿನಲ್ಲುಳಿಯುತ್ತಾರೆ.

ಬೆಳಕಲಿ ಕಾಣದ ಇರುಳಿಗೂ..., ತಲೆಹರಟೆ ಮಾಡುತ್ತಿದೆ ಈ ಹೃದಯ... ಹಾಡುಗಳು ಚೆನ್ನಾಗಿವೆ. ಹಿನ್ನೆಲೆ ಸಂಗೀತವೂ ಹಿತಮಿತವಾಗಿದೆ. ಛಾಯಾಗ್ರಹಣವೂ ಚೆನ್ನಾಗಿದೆ. ಕುಪ್ಪಳಿಯ ಕವಿಶೈಲ, ಸಮುದ್ರ ತೀರ, ಮಲೆನಾಡು ತಾಣಗಳನ್ನು ಸುಂದರವಾಗಿ ಸೆರೆಹಿಡಿಯಲಾಗಿದೆ.

ಪ್ರಸ್ತುತ ಅಹಂನಿಂದ ಮನದೊಳಗೆ ಗೋಡೆ ಕಟ್ಟಿಕೊಂಡು ಬಾಳುವ ಯುವ ಜೋಡಿಗಳಿಗೆ ಈ ಚಿತ್ರ ಪ್ರಬಲವಾದ ಸಂದೇಶ ನೀಡಿದೆ. ಒಟ್ಟಿನಲ್ಲಿ ಅಬ್ಬರಗಳಿಲ್ಲದ, ಶಾಂತ ಹರಿವಿನ ಸಿನಿಮಾ ನೋಡಬೇಕೆನ್ನುವವರಿಗೆ, ಒಂದಿಷ್ಟು ಸಂದೇಶ ಬಯಸುವವರಿಗೆ ಇಷ್ಟವಾಗಬಹುದಾದ ಚಿತ್ರ.

ಪದಬಂಧ 5227

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
3.ಊಟ ಮಾಡದಿರುವುದು (4)
5.ಕರದಲ್ಲಿರುವುದು ಪರಿಷ್ಕೃತವಾಗದಿರುವ ಪ್ರತಿ (3)
6.ಮತಿ ಇದ್ದವ ನೀಡಿದ ಒಪ್ಪಿಗೆ! (4)
8.ಕೊಡು ಕೊಡು ಎನ್ನುತ್ತಿರುವ ಅಜ್ಜ (2)
9.ಉಮೇದುವಾರನಿಗಿರುವ ಹುರುಪು (3)
10.ವರನಿಗೆ ಜೋಡಿಯಾದ ಮದುವೆ ಹೆಣ್ಣು (2)
11.ಕಾನನದಲ್ಲಿನ ವಾಸ (4)
12.ವಂಗ ದೇಶದಿಂದ ತಂದಿರುವ ಸಾಂಬಾರ ಪದಾರ್ಥ (3)
15.ದಿನವೆಲ್ಲಾ ಕಾಲಕಳೆದ ಹೊಳೆಯ ದಂಡೆ (4)
16.ಮರಮುಟ್ಟುಗಳನ್ನು ತಿಂದು ಮಣ್ಣು ಮಾಡುವ ಹುಳು (3)

ಮೇಲಿಂದ ಕೆಳಕ್ಕೆ

1.ಪತಿಯ ಜೊತೆಯಿರುವ ಹೆಂಡತಿ (2)
2.ಈತ ಹೆಂಡತಿಯನ್ನು ಕಳೆದುಕೊಂಡವನು (3)
4.ಒಳ್ಳೆಯ ಗತಿ ಅಥವಾ ಮೋಕ್ಷ (3)
5.ಕೈಯನ್ನು ತಟ್ಟುವಿಕೆ (5)
6.ಆ ಮದುವೆಗೆಂದು ತರಿಸಿಕೊಂಡ ವಸ್ತು! (3)
7.ಲಗ್ನ ಮಾಡಿಕೊಳ್ಳುತ್ತಿರುವವನು (5)
9.ಮೇಲುಸಿರು ಬಿಡುವವನಿಗೆ ಗೂರಲು ರೋಗ! (3)
11.ವನದ ಕಡೆ ಕಾಣುತ್ತಿರುವ ಮುಖ (3)
13.ಚಂದಾ ಹಣವಿದು (3)
14.ಭೂಲೋಕದ ಅಮೃತ (2)



5226ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಹಿಷ್ಕಾರ 3.ನರುಗಂಪು
5.ಸದರ 7.ಪರ
9.ಗುರು 10.ಹಾವುಗೆ
11.ದುಬಾರಿ 13.ಮರ
14.ನಿಜ 16.ಶಂಕರ
18.ತೆಗಳಿಕೆ
19.ತಿಲಾಂಜಲಿ

ಮೇಲಿಂದ ಕೆಳಕ್ಕೆ:
1.ಬಳಪ 2.ರಸ
3.ನರ 4.ಪುಕಾರು
6.ದಣಿವು 8.ರಕ್ತಸಂಚಾರ
9.ಗುಪ್ತಗಾಮಿನಿ
12.ಬಾಲಕ 13.ಮಮತೆ
15.ಜಗಲಿ 16.ಶಂಕೆ 17.ರತಿ

ಸುಡೊಕು 5613

		6		4		3		5
			5					
	9	2		3		7		1
2	1		9		3	6		
				1			5	3
3	8			5			7	
9		8						7
				9			3	
4		3			1	2		6

5612 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಫೆಬ್ರುವರಿ 11, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ಪಂಚಮಿ ಗಂ. 09-09 ನಕ್ಷತ್ರ: ಚಿತ್ತಾ ಗಂ. 25-40 ಯೋಗ: ಶೂಲ ಗಂ. 16-22, ಕರಣ: ತೈತಿಲ ಗಂ. 09-09, ಮಕರ ಮಾಸದ 28 ನೇ ದಿನ. ರಾಹುಕಾಲ : ಬೆಳಿಗ್ಗೆ 09-00 –10-30
ಸೂರ್ಯೋದಯ : 06-58 ಸೂರ್ಯಾಸ್ತ : 06-31
ಮುಸ್ಲಿಂ ದಿನಾಂಕ : 19 ರಜಬ್
ಅದೃಷ್ಟ ಸಂಖ್ಯೆ : 2, 8

ಮೇಷ: ಬೌದ್ಧಿಕ ಚಟುವಟಿಕೆಗಳ ಬೆಳವಣಿಗೆಗೆ ಬೇಕಾದ ಪ್ರತಿಭಾನ್ವಿತರ ಸಮಾಗಮ ಆಗಲಿದೆ. ಉಪಯೋಗಿಸಿಕೊಳ್ಳುವುದು ನಿಮ್ಮ ಸ್ವಂತಿಕೆಯ ವಿಚಾರ-ವಾಗಿರುತ್ತದೆ. ದೇವತಾ ಕಾರ್ಯಗಳಿಗಾಗಿ ದೂರ ಸಂಚಾರ ಒದಗಿ ಬರಲಿದೆ.

ವೃಷಭ: ಮಾಡುವ ಯಾವುದೇ ಬದಲಾವಣೆಯಾದರೂ ಅವು ಧನಾತ್ಮಕ ಫಲಿ-ತಾಂಶಗಳನ್ನು ನೀಡುವುದಿಲ್ಲ. ಏನಕ್ಕೂ ಯೋಚಿಸಿ ನಿರ್ಧಾರಗಳನ್ನು ಕೈಗೊಳ್ಳಿ. ಸಮಾಜದಲ್ಲಿ ಗೌರವ ಕಾಪಾಡಿಕೊಳ್ಳುವ ಬಗ್ಗೆ ಗಮನಹರಿಸಿ.

ಮಿಥುನ: ಈ ದಿನ ಸಂತೋಷ ನೀಡುವ ಹಲವು ವಿಷಯಗಳು ಕೇಳಿ ಬರುವುದು. ಹಣದ ಹರಿವು ತೃಪ್ತಿಕರವಾಗಿರುವುದರಿಂದ ಯಾವುದೇ ರೀತಿಯ ತೊಂದರೆ ಇರಲಾರದು. ಪ್ರಯಾಣದಿಂದಾಗಿ ಆಯಾಸ ಉಂಟಾಗಬಹುದು.

ಕರ್ಕಾಟಕ: ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಿನ ಚಾಕಚಕ್ಯತೆಯನ್ನು ತೋರಿದರೆ ವ್ಯವಹಾರ ಸಾಧ್ಯವಾಗುವುದು. ಮೆಕಾನಿಕಲ್ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚು ಪರಿಶ್ರಮ ಪಡುವುದು ಅಗತ್ಯವಾಗಲಿದೆ. ಶ್ರೀ ವಿಷ್ಣು ಸಹಸ್ರನಾಮವನ್ನು ಪಠಿಸಿರಿ.

ಸಿಂಹ: ಮಾಹಿತಿ ತಂತ್ರಜ್ಞಾನದಲ್ಲಿ ಕೆಲಸ ಮಾಡುವವರಿಗೆ ಆದಾಯ ಕಾಣಲಿದೆ. ಸಾಂಸಾರಿಕವಾಗಿ, ಸಾಮಾಜಿಕವಾಗಿ ವರ್ತನೆಯಲ್ಲಿ ಸಮತೋಲನ ಹಾಗೂ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಉತ್ತಮವೆಂದು ಅನಿಸುವುದು.

ಕನ್ಯಾ: ನೀವಿಂದು ಸ್ವತಂತ್ರ ಮನೋಭಾವದಿಂದ ಹೊರಬಂದು ಆತ್ಮೀಯರ ಸಲಹೆಗಳಿಗೆ ಹೊಂದಿಕೊಳ್ಳುವಿರಿ. ಬುದ್ಧಿವಂತಿಕೆ ಹಾಗೂ ಯೋಜನೆಗಳು ಸಂವಹನ ಸುಲಭಗೊಳಿಸುತ್ತದೆ. ಕಿರು ಸಂಚಾರವು ಇರುವುದು.

ತುಲಾ: ಮನೆಯಲ್ಲಿ ಎದುರಾಗುವ ಅನಿವಾರ್ಯವಾದ ಹೊಂದಾಣಿಕೆಯನ್ನು ಸುಲಭವಾಗಿ ಮಾಡಿಕೊಳ್ಳುವಿರಿ. ವಿದ್ಯಾರ್ಥಿನಿಯರಿಗೆ ವಿಶೇಷವಾಗಿ ಪ್ರಗತಿ ಪ್ರಾಪ್ತಿಯಾಗಬಹುದು. ಪ್ರಯಾಣದಲ್ಲಿ ವಿಳಂಬವಾಗುತ್ತದೆ.

ವೃಶ್ಚಿಕ: ಸಮಾಜದಲ್ಲಿ ಮತ್ತು ವೈಯಕ್ತಿಕವಾಗಿ ನೀವು ಅಪೇಕ್ಷಿಸಿದ ಪ್ರಗತಿಯನ್ನು ಇಂದು ಸಾಧಿಸುವಿರಿ. ಯಶಸ್ಸಿನ ಹೊಸ ಮಾರ್ಗಗಳು ಅರಿವಾಗುವುದು. ಹಣ್ಣು, ತರಕಾರಿ ವ್ಯಾಪಾರದಿಂದ ಬಹಳಷ್ಟು ಲಾಭ ಬರುವುದು.

ಧನು: ಉತ್ತಮ ಗುಣಗಳು ನಿಮ್ಮನ್ನು ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಹಾಯ ಮಾಡುವುದು. ಲೇಖಕರಿಗೆ ತಮ್ಮ ಲೇಖನಗಳಿಗೆ ಉತ್ತಮ ವಿಷಯಗಳು ಸಿಗುವುದು. ಶೀತಬಾಧೆ ಕಾಡಬಹುದು.

ಮಕರ: ವೃತ್ತಿಯ ಕೆಲಸವನ್ನು ಆಲಸ್ಯದಿಂದಾಗಲಿ ಅಥವಾ ತಾಂತ್ರಿಕ ದೋಷದಿಂದಾಗಲಿ ಮುಂದೂಡುವುದು ಸರಿಯಲ್ಲ. ಬೇರೆ ಬೇರೆ ಪರ್ಯಾಯ ಮಾರ್ಗವನ್ನು ಹುಡುಕಿಕೊಂಡು ಕೆಲಸವನ್ನು ಮುಗಿಸುವ ಪ್ರಯತ್ನ ನಡೆಸಿ.

ಕುಂಭ: ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಾಣುವಿರಿ. ಜೀವನ ಕ್ರಮವನ್ನು ಬದಲಿಸದೆ ಮುಂದುವರಿಯುವಿರಿ. ಅವಮಾನಿಸುತ್ತಿರುವವರೇ ನಿಮ್ಮ ಸಹಾಯ ಕೋರಿ ಬರಲಿದ್ದಾರೆ.

ಮೀನ: ಇಂದು ಸೂಕ್ತ ಸಮಯದಲ್ಲಿ ಸರಿಯಾದ ಕೆಲಸ ಮಾಡುವುದರಿಂದ ಅದೃಷ್ಟ ಖುಲಾಯಿಸಲಿದೆ. ರೈತರು ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯುವಿರಿ. ಜಮೀನು ಕೊಡು ಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿದೆ.

ಭೂಕಂಪ: ಟರ್ಕಿ, ಸಿರಿಯಾದಲ್ಲಿ 23 ಸಾವಿರ ಮಂದಿ ಸಾವು

ಪವಾಡದಂತೆ ಬದುಕಿ ಬಂದರು

ಕಹ್ರಮನ್ಮರಸ್, ಟರ್ಕಿ(ಎಎಫ್‌ಪಿ): ಭೂಕಂಪದಿಂದ ಹಾನಿಯಾದ ಟರ್ಕಿ ಮತ್ತು ಸಿರಿಯಾದಲ್ಲಿ ಅವಶೇಷಗಳಡಿ ಸಿಲುಕಿ ಐದು ದಿನಗಳ ನಂತರವೂ ಮಕ್ಕಳು, ವೃದ್ಧರು, ಗಾಯಾಳುಗಳು ಪವಾಡದಂತೆ ಬದುಕುಳಿದಿರುವ ನಿದರ್ಶನಗಳು ಗೋಚರಿಸುತ್ತಿವೆ. ಈ ದುರಂತದಲ್ಲಿ ಇದುವರೆಗೆ ಉಭಯ ರಾಷ್ಟ್ರಗಳಲ್ಲಿ ಮಡಿದವರ ಸಂಖ್ಯೆ ಶುಕ್ರವಾರ 23,000ಕ್ಕೆ ಏರಿದೆ.

ಶತಮಾನದ ಅತ್ಯಂತ ಭೀಕರ ಭೂಕಂಪಕ್ಕೆ ತುತ್ತಾದ ಟರ್ಕಿಯ ಪ್ರಮುಖ ನಗರಗಳಲ್ಲಿ ಒಂದಾದ ಕಹ್ರಮನ್ಮರಸ್‌ನಲ್ಲಿ ಅವಶೇಷ ತೆರವುಗೊಳಿಸಿದಂತೆ ಶವಗಳು ಸಿಗುತ್ತಲೇ ಇವೆ. ಇಲ್ಲಿ ಬೀಸುವ ಗಾಳಿಯಲ್ಲಿ ಕೊಳೆತ ಶವಗಳ ದುರ್ವಾಸನೆ ಬೆರೆತಿರುವುದು ರಕ್ಷಣಾ ಸಿಬ್ಬಂದಿ ಅನುಭವಕ್ಕೆ ಬರುತ್ತಿದೆ.

ದುರಂತ ನಂತರ ಶೋಧ ಮತ್ತು ರಕ್ಷಣೆಗೆ ಮೊದಲ 72 ಗಂಟೆಗಳ ನಿರ್ಣಾಯಕವಾಗಿದ್ದವು. ಈ ಸಮಯ ಮುಗಿದ ನಂತರವೂ ಕಹ್ರಮನ್ಮರಸ್ ನಗರದಲ್ಲಿ ಶುಕ್ರವಾರ ಅವಶೇಷಗಳಡಿ ಚಿಕ್ಕಮಕ್ಕಳು ಪವಾಡದಂತೆ ಬದುಕುಳಿದಿರುವುದು ಪತ್ತೆಯಾಯಿತು. ಸಿಬ್ಬಂದಿ ಈ ಮಕ್ಕಳನ್ನು ಸುರಕ್ಷಿತವಾಗಿ ರಕ್ಷಿಸಿರುವುದನ್ನು ಟರ್ಕಿ ಮಾಧ್ಯಮಗಳು ವರದಿ ಮಾಡಿವೆ.

ಆಗ್ನೇಯ ನಗರ ಅಂಟಾಕ್ಯಾದಲ್ಲಿ ಭಗ್ನಾವಶೇಷಗಳಡಿ 105 ಗಂಟೆಗಳ ಕಾಲ ಸಿಲುಕಿದ್ದ 18 ತಿಂಗಳ ಯೂಸುಫ್ ಹುಸೇಯಿನ್ ಹೆಸರಿನ ಹಸುಳೆಯನ್ನು ರಕ್ಷಣಾ ಸಿಬ್ಬಂದಿ ಸುರಕ್ಷಿತವಾಗಿ ಹೊರ ತಂದರು. ಇದಾದ 20 ನಿಮಿಷಗಳಲ್ಲಿ 7 ವರ್ಷದ ಮುಹಮ್ಮದ್ ಹುಸೇಯಿನ್ ಎಂಬ ಬಾಲಕನನ್ನು ರಕ್ಷಿಸಿದರು ಎಂದು ಎನ್‌ಟಿವಿ ಸುದ್ದಿ ವಾಹಿನಿ ವರದಿ ಮಾಡಿದೆ.

ಅಂಟಾಕ್ಯಾ ನಗರದಲ್ಲೇ, 3 ವರ್ಷದ ಮಗು ಜೆಯನೆಪ್ ಎಲಾ ಪಾರ್ಲಾಕ್, ಅದಿಯಮನ್ ಪ್ರಾಂತ್ಯದಲ್ಲಿ 60 ವರ್ಷದ ಐಯುಪ್ ಅಕ್ ಹಾಗೂ ಗಾಝಿಯಾನ್‌ಟೆಪ್‌ನಲ್ಲಿ ಇಬ್ಬರು ಮಕ್ಕಳನ್ನು ರಕ್ಷಿಸಲಾಯಿತು.

'ಅದಿಯಮನ್‌ನಲ್ಲಿ ಅವಶೇಷಗಳಡಿ ಸಿಲುಕಿದ್ದ ಇಬ್ಬರನ್ನು ಅರ್ಧ ತಾಸಿನ ಹಿಂದೆ ತಮ್ಮ ತಂಡಗಳು ಸುರಕ್ಷಿತವಾಗಿ ರಕ್ಷಿಸಿವೆ' ಎಂದು ಜೆಕ್ ಅಗ್ನಿಶಾಮಕ ಸೇವೆ ಶುಕ್ರವಾರ ಟ್ವೀಟ್ ಮಾಡಿದೆ.

ಭಗ್ನಗೊಂಡ ಹತಾಯ್ ಪ್ರಾಂತ್ಯದಲ್ಲಿ 90 ಗಂಟೆಗಳ ಕಾಲ ಅವಶೇಷಗಳಡಿ ಸಿಲುಕಿದ್ದ 10 ದಿನದ ನವಜಾತ ಗಂಡು ಶಿಶು ಮತ್ತು ತಾಯಿಯನ್ನು ಗುರುವಾರ ರಕ್ಷಣಾ ಸಿಬ್ಬಂದಿ ಸುರಕ್ಷಿತವಾಗಿ ಕಾಪಾಡಿದ್ದಾರೆ ಎಂದು ಟರ್ಕಿ ಅಧಿಕಾರಿಗಳು ತಿಳಿಸಿದ್ದಾರೆ.

ಅದಿಯಮನ್‌ನಲ್ಲಿ ಕುಸಿದ ಮನೆಯ ಅವಶೇಷಗಳಡಿ ಸೈಪ್ರಸ್‌ನ ಐದು ಮಕ್ಕಳ ಶವ, ಇಬ್ಬರು ಶಿಕ್ಷಕರ ಶವವನ್ನು ಹೊರ ತೆಗೆಯಲಾಯಿತು. 19 ಮಕ್ಕಳು ಒಂದೇ ಸ್ಥಳದಲ್ಲಿ ಅಸುನೀಗಿವೆ ಎಂದು ಮಾಧ್ಯಮ ವರದಿ ಹೇಳಿವೆ.

ಸಿರಿಯಾದ ಬಂಡುಕೋರರ ಹಿಡಿತದ ವಾಯವ್ಯದ ಜೆಂಡಾಯೆರಿಸ್‌ನಲ್ಲಿ ಅವಶೇಷಗಳಡಿ ಐದು ದಿನಗಳಿಂದ ಸಿಲುಕಿದ್ದ 6 ವರ್ಷದ ಮೂಸಾ ಮೈಯಿದಿ ಎಂಬ ಬಾಲಕನನ್ನು ರಕ್ಷಣಾ ಸಿಬ್ಬಂದಿ ಸುರಕ್ಷಿತವಾಗಿ ರಕ್ಷಿಸಿದ್ದಾರೆ. ಬಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಅಧಿಕಾರಿಗಳು ತಿಳಿಸಿದರು.

ಉಭಯ ರಾಷ್ಟ್ರಗಳಲ್ಲಿ ಸೋಮವಾರ 7.8 ತೀವ್ರತೆಯ ಭೂಕಂಪ ಸಂಭವಿಸಿತ್ತು. ಸಹಸ್ರಾರು ಜನ ಗಾಯಗೊಂಡಿದ್ದಾರೆ, ಕಟ್ಟಡಗಳು ನೆಲಸಮವಾಗಿವೆ. ಸಾವಿರಾರು ಜನರು ನೆಲೆ ಕಳೆದುಕೊಂಡಿದ್ದಾರೆ. ಸಂತ್ರಸ್ತರು ತಾತ್ಕಾಲಿಕ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ಜೀವ ಹಿಂಡುವ ಚಳಿ, ಆಹಾರ–ನೀರು ಹಾಗೂ ಬೆಚ್ಚನೆಯ ಹೊದಿಕೆಗಳ ಕೊರತೆಯು ಸಂತ್ರಸ್ತರ ಸಂಕಷ್ಟವನ್ನು ಉಲ್ಬಣಿಸುವಂತೆ ಮಾಡಿದೆ.

ಟರ್ಕಿಯ ಗಾಝಿಯಾನ್‌ಟೆಪ್‌ನ ನುರ್ದಗಿ ಪ್ರದೇಶದಲ್ಲಿ ಶುಕ್ರವಾರ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು —ಎಪಿ/ಎಎಫ್‌ಪಿ ಚಿತ್ರ

ಕ್ರೀಡಾಕೂಟಕ್ಕಾಗಿ ಟರ್ಕಿಗೆ ಬಂದಿದ್ದ ಮಕ್ಕಳು ಸಾವು

ಸೈಪ್ರಸ್ ದ್ವೀಪದಿಂದ ಶಾಲಾ ಕ್ರೀಡಾಕೂಟಕ್ಕಾಗಿ ಟರ್ಕಿಗೆ ಬಂದಿದ್ದ 11ರಿಂದ 14 ವರ್ಷದ 24 ಮಕ್ಕಳು, ಇವರ 10 ಜನರ ಪೋಷಕರು ಹಾಗೂ ನಾಲ್ವರು ಶಿಕ್ಷಕರು ಹಾಗೂ ಒಬ್ಬರು ವಾಲಿಬಾಲ್ ಕೋಚ್ ಉಳಿದಿದ್ದ ಹೋಟೆಲ್ ಸಂಪೂರ್ಣ ಕುಸಿದಿದೆ. ಇವರೆಲ್ಲರೂ ಜೀವಂತ ಸಮಾಧಿಯಾಗಿದ್ದು, ಎಲ್ಲ ಮೃತ ದೇಹಗಳನ್ನು ಹೊರತೆಗೆಯಲಾಯಿತು.

ಬ್ರಿಟನ್: ಭಾರತದ ವಿದ್ಯಾರ್ಥಿಗಳು ಜೀತಕ್ಕೆ?

ಲಂಡನ್ (ಪಿಟಿಐ): ಇಲ್ಲಿನ ನಾರ್ತ್‌ವೇಲ್ಸ್‌ನಲ್ಲಿ ಭಾರತ ಮೂಲದ ಐವರು ವ್ಯಕ್ತಿಗಳು ನಡೆಸುತ್ತಿರುವ ಕಾಳಜಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ 50ಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಜೀತದಾಳಾಗುವ ಭೀತಿ ಎದುರಿಸುತ್ತಿದ್ದಾರೆ. ಈ ಸಂಬಂಧ ಸಹಾಯ ಮತ್ತು ಆಪ್ತಸಮಾಲೋಚನೆಗಾಗಿ ವಿದ್ಯಾರ್ಥಿಗಳು ತಮ್ಮ ಕಚೇರಿಯನ್ನು ಸಂಪರ್ಕಿಸುವಂತೆ ಭಾರತೀಯ ಹೈಕಮಿಷನ್ ಶುಕ್ರವಾರ ಹೇಳಿದೆ.

ಕಾರ್ಮಿಕರ ನಿಂದನೆ ಮತ್ತು ಶೋಷಣೆ ಮಾಡುತ್ತಿರುವ ಆರೋಪದ ಮೇಲೆ ಈ ಐವರ ವಿರುದ್ಧ 'ಗ್ಯಾಂಗ್ ಮಾಸ್ಟರ್ಸ್ ಮತ್ತು ಲೇಬರ್ ಅಬ್ಯೂಸ್ ಅಥಾರಿಟಿ' (ಜಿಎಲ್‌ಎಎ) ಪ್ರಕರಣ ದಾಖಲಿಸಿದೆ. ಈ ಸಂಸ್ಥೆಯು ಕಾರ್ಮಿಕರ ಶೋಷಣೆ ಬಗ್ಗೆ ತನಿಖೆ ಮಾಹಿತಿ ಸಂಗ್ರಹಿಸಿ, ಕ್ರಮ ತೆಗೆದುಕೊಳ್ಳುತ್ತದೆ.

ಆರೋಪಿಗಳಾದ ಮ್ಯಾಥ್ಯೂ ಐಸಾಕ್, ಜೆನು ಚೆರಿಯನ್, ಎಲ್ದೋಸ್ ಚೆರಿಯನ್, ಎಲ್ದೋಸ್ ಕುರಿಯಾಚ್ಚನ್ ಮತ್ತು ಜೆಕೊಬ್ ಲಿಜಿ ಎಂಬುವರನ್ನು ಬಂಧಿಸಲಾಗಿದೆ. ಬಂಧಿತರೆಲ್ಲರೂ ಕೇರಳದವರು ಎಂದು ಮೂಲಗಳು ಹೇಳಿವೆ.

'ಈ ಪ್ರಕರಣದಲ್ಲಿ ಕಳೆದ 14 ತಿಂಗಳುಗಳಲ್ಲಿ 50ಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಶೋಷಣೆಗೆ ಒಳಗಾಗಿದ್ದಾರೆ' ಎಂದೂ ಜಿಎಲ್‌ಎಎ ವರದಿ ಮಾಡಿತ್ತು.

'ಬ್ರಿಟನ್ ಮುಸ್ಲಿಮರಲ್ಲಿ ಭಾರತ ವಿರೋಧಿ ಭಾವನೆ ಕೆರಳಿಸಲು ಪಾಕ್ ಯತ್ನ'

ಲಂಡನ್ (ಪಿಟಿಐ): ಬ್ರಿಟನ್‌ನಲ್ಲಿರುವ ಮುಸ್ಲಿಮರಲ್ಲಿ ಭಾರತ ವಿರೋಧಿ ಭಾವನೆ ಕೆರಳಿಸುವ ಕಾರ್ಯದಲ್ಲಿ ಪಾಕಿಸ್ತಾನ ತೊಡಗಿದೆ. ಕಾಶ್ಮೀರ ಹಾಗೂ ಖಾಲಿಸ್ತಾನ ವಿಷಯಗಳನ್ನು ಮುಂದಿಟ್ಟುಕೊಂಡು, ಮುಸ್ಲಿಮರನ್ನು ಉಗ್ರಗಾಮಿಗಳಾಗುವಂತೆ ಪ್ರಚೋದಿಸುವ ಕೃತ್ಯಗಳು ನಡೆಯುತ್ತಿವೆ ಎಂದು ಬ್ರಿಟನ್ ಸರ್ಕಾರ ಸಿದ್ಧಪಡಿಸಿರುವ ವರದಿಯೊಂದರಲ್ಲಿ ಎಚ್ಚರಿಸಲಾಗಿದೆ.

ದೇಶದಲ್ಲಿ ಹೆಚ್ಚುತ್ತಿರುವ ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಿಸುವ ಸಂಬಂಧ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸುಗಳನ್ನು ಈ ವರದಿ ಒಳಗೊಂಡಿದೆ.

'ಇಸ್ಲಾಮಿಕ್ ಭಯೋತ್ಪಾದನೆ ಹೆಚ್ಚುತ್ತಿದ್ದು, ದೇಶಕ್ಕೆ ಅಪಾಯವನ್ನೊಡ್ಡಿದೆ' ಎಂದಿರುವ ವರದಿ, ಭಯೋತ್ಪಾದನೆಯನ್ನು ನಿಗ್ರಹಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವರದಿಯಲ್ಲಿ ಹಲವು ಶಿಫಾರಸುಗಳನ್ನು ಮಾಡಲಾಗಿದೆ.

'ಬ್ರಿಟನ್‌ನಲ್ಲಿ ಖಾಲಿಸ್ತಾನ ಪರ ಗುಂಪುಗಳಿವೆ. ಈ ಗುಂಪುಗಳ ಸದಸ್ಯರ ಸಂಖ್ಯೆಯೂ ಕಡಿಮೆ ಇದೆ. ಆದರೆ, ಈ ಸದಸ್ಯರಿಗೆ ತಪ್ಪು ಮಾಹಿತಿ ನೀಡಿ, ಅವರನ್ನು ತೀವ್ರಗಾಮಿಗಳಾಗುವಂತೆ ಮಾಡಲಾಗುತ್ತಿದೆ' ಎಂದು 'ಸಾರ್ವಜನಿಕ ನೇಮಕಾತಿಗಳ' ಆಯುಕ್ತ ವಿಲಿಯಮ್ಸ್ ಶಾಕ್ರಾಸ್ ಎಚ್ಚರಿಸಿದ್ದಾರೆ.

'ಕಾಶ್ಮೀರದಲ್ಲಿ ಹಿಂಸಾಚಾರ ನಡೆಸುವಂತೆ ಪಾಕಿಸ್ತಾನ ಮೂಲದ ಧರ್ಮಗುರುವೊಬ್ಬರು ಹಾಗೂ ಬ್ರಿಟನ್‌ನಲ್ಲಿರುವ ತೀವ್ರಗಾಮಿಗಳ ಗುಂಪುಗಳು ಕರೆ ನೀಡುತ್ತಿರುವ ಬಗ್ಗೆ ನನ್ನ ಬಳಿ ಸಾಕ್ಷ್ಯಗಳಿವೆ. ಕಾಶ್ಮೀರ ವಿಷಯ ಮುಂದಿಟ್ಟುಕೊಂಡು ನಡೆದ ಪ್ರತಿಭಟನೆಗಳ ಬಗ್ಗೆ ಬ್ರಿಟನ್‌ನಲ್ಲಿರುವ ಮುಸ್ಲಿಮರು ಹೆಚ್ಚು ಆಸಕ್ತಿ ತೋರುತ್ತಿರುವುದನ್ನು ಕಂಡಿದ್ದೇನೆ. ಪ್ರತಿಭಟನೆ ನಡೆದ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿರುವುದನ್ನು ಸಹ ಗಮನಿಸಿದ್ದೇನೆ' ಎಂದು ಶಾಕ್ರಾಸ್ ಅವರು ಈ ವರದಿಯಲ್ಲಿ ಹೇಳಿದ್ದಾರೆ.

'ಇಸ್ಲಾಂ ಮೂಲಭೂತವಾದವನ್ನು ನಿಗ್ರಹಿಸುವುದು ಮುಸ್ಲಿಂ ವಿರೋಧಿ ಎನಿಸದು. ಹೀಗಾಗಿ, ಇಲ್ಲಿನ ಕೆಲ ಮುಸ್ಲಿಮರು ಭಯೋತ್ಪಾದನಾ ಕೃತ್ಯಗಳಲ್ಲಿ ತೊಡಗುವುದನ್ನು ತಡೆಯಲು ಮುಸ್ಲಿಂ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕ್ರಮ ಜರುಗಿಸಬೇಕು' ಎಂದೂ ಅವರು ಪ್ರತಿಪಾದಿಸಿದ್ದಾರೆ.

ಉಕ್ರೇನ್: ರಷ್ಯಾದಿಂದ ಕ್ಷಿಪಣಿ ದಾಳಿ ತೀವ್ರ

ಕೀವ್ (ಎಪಿ): ಉಕ್ರೇನ್‌ನ ಪೂರ್ವ ಮತ್ತು ದಕ್ಷಿಣ ಭಾಗಗಳನ್ನು ಗುರಿಯಾಗಿಸಿ ರಷ್ಯಾ ಪಡೆಗಳು ಶುಕ್ರವಾರ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿವೆ ಎಂದು ಉಕ್ರೇನ್ ಸೇನೆ ಮೂಲಗಳು ತಿಳಿಸಿವೆ.

ಪೂರ್ವ ಉಕ್ರೇನ್‌ನ ಲುಹಾನ್ಸ್ಕ್ ಮತ್ತು ಡೊನೆಟ್ಸ್ಕ್ ಪ್ರಾಂತ್ಯದಲ್ಲಿರುವ ಕೈಗಾರಿಕಾ ಪ್ರದೇಶಗಳನ್ನು ಗುರಿಯಾಗಿಸಿ ತೀವ್ರ ದಾಳಿ ನಡೆದಿದೆ. ಈ ಪ್ರದೇಶದಲ್ಲಿ 2014ರಿಂದಲೂ ರಷ್ಯಾ ಬೆಂಬಲಿತ ಪ್ರತ್ಯೇಕತಾವಾದಿಗಳು ಮತ್ತು ಉಕ್ರೇನ್ ಪಡೆಗಳ ನಡುವೆ ಸೆಣಸಾಟ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಉಕ್ರೇನ್‌ನ ಎರಡನೇ ಅತಿದೊಡ್ಡ ನಗರ ಹಾರ್ಕೀವ್‌ನಲ್ಲಿ ಕ್ಷಿಪಣಿ ದಾಳಿಯಿಂದಾಗಿ ಮೂಲಸೌಕರ್ಯಗಳು ಹಾನಿಗೀಡಾಗಿವೆ. ಝಪೋರಿಝಿಯಾ ಮೇಲೆ ಒಂದು ತಾಸಿನಲ್ಲಿ 17ಕ್ಕೂ ಹೆಚ್ಚು ಬಾರಿ ಕ್ಷಿಪಣಿ ದಾಳಿ ನಡೆದಿದೆ ಎಂದು ಅಲ್ಲಿನ ನಗರಾಡಳಿತ ಕಾರ್ಯದರ್ಶಿ ಅನಾಟೋಲಿ ಕುರ್ಟೀವ್ ತಿಳಿಸಿದ್ದಾರೆ.

ಕ್ಷಿಪಣಿ ದಾಳಿಯ ಭೀತಿಯಿಂದ ಕೀವ್ ನಗರದಲ್ಲಿ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಲಾಗಿದೆ. ಕ್ಷಿಪಣಿಗಳನ್ನು ಹೊತ್ತ ರಷ್ಯಾದ ಟಿಯು–95 ಯುದ್ಧ ವಿಮಾನಗಳು ಈ ನಗರದ ಸಮೀಪ ಹಾರಾಟ ನಡೆಸುತ್ತಿದ್ದು, ಕ್ಷಿಪಣಿ ದಾಳಿಯ ಭೀತಿ ಹೆಚ್ಚಾಗಿದೆ ಎಂದು ಮೂಲಗಳು ತಿಳಿಸಿವೆ.

ಸ್ಟಾರ್‌ಶಿಪ್ ಎಂಜಿನ್ ಕ್ಷಮತೆ ಪರೀಕ್ಷೆ

ಕ್ಯಾಲಿಫೋರ್ನಿಯಾ (ಎಪಿ): ಸ್ಪೇಸ್ ಎಕ್ಸ್ ಸಂಸ್ಥೆಯು ತನ್ನ ದೈತ್ಯ ಬಾಹ್ಯಾಕಾಶ ನೌಕೆ 'ಸ್ಟಾರ್‌ಶಿಪ್' ಅನ್ನು ಕಕ್ಷೆಗೆ ಕಳುಹಿಸುವ ನಿಟ್ಟಿನಲ್ಲಿ ನೌಕೆಯ ಎಂಜಿನ್ ಕ್ಷಮತೆ ಪರೀಕ್ಷೆಯನ್ನು ಪೂರ್ಣಗೊಳಿಸಿದೆ.

'ಮೊದಲ ಹಂತದ 33 ಬೂಸ್ಟರ್ ಎಂಜಿನ್‌ಗಳಲ್ಲಿ 31 ಎಂಜಿನ್‌ಗಳನ್ನು ದಕ್ಷಿಣ ಟೆಕ್ಸಾಸ್‌ನ ಉಡ್ಡಯನ ವೇದಿಕೆಯಲ್ಲಿ 10 ಸೆಕೆಂಡ್‌ಗಳ ಕಾಲ ಏಕಕಾಲಕ್ಕೆ ಉರಿಸಲಾಯಿತು. ಈ ವೇಳೆ ನಮ್ಮ ತಂಡವು ಒಂದು ಎಂಜಿನ್‌ನನ್ನು ಆಫ್ ಮಾಡಿತ್ತು ಮತ್ತು ಇನ್ನೊಂದು ಎಂಜಿನ್ ಅನ್ನು ಸ್ಥಗಿತಗೊಳಿಸಿತ್ತು. ನೌಕೆ ಕಕ್ಷೆಗೆ ತಲುಪಲು ಇಷ್ಟು ಎಂಜಿನ್‌ಗಳು ಸಾಕು' ಎಂದು ಸಂಸ್ಥೆಯ ಸಿಇಒ ಇಲಾನ್ ಮಸ್ಕ್ ಟ್ವೀಟ್ ಮಾಡಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

4ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಮುದ್ದುಲಕ್ಷ್ಮಮ್ಮ
(ಲೇಟ್ ಜಿ.ಅಶ್ವಥಯ್ಯನವರ ಧರ್ಮಪತ್ನಿ)
ಯಲಹಂಕ, ಬೆಂಗಳೂರು–560064
ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ.
ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ.
ನಿಮ್ಮ ಆದರ್ಶಗಳೇ ನಮಗೆ ದಾರಿದೀಪ.
ಇಂತಿ ಶ್ರೀ ವೈ. ಎ. ಶ್ರೀನಿವಾಸಮೂರ್ತಿ ಮತ್ತು ಸಹೋದರರು.
ಮೊ. 9845278780, 9845538678

ಶಿವೈಕ್ಯ

ಶ್ರೀ ಎಸ್. ಪ್ರಭುಸ್ವಾಮಿ (83 ವರ್ಷ)
ಎಕ್ಸಿಕ್ಯೂಟಿವ್ ಚೇರ್ಮನ್, ಪ್ರುಡೆನ್ಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ಇವರು ದಿನಾಂಕ: 10–2–2023ನೇ ಶುಕ್ರವಾರ ಸಂಜೆ 6 ಗಂಟೆಗೆ ಶಿವೈಕ್ಯರಾಗಿರುತ್ತಾರೆ. ಇವರ ಅಂತ್ಯಕ್ರಿಯೆಯು ಇಂದು (ಶನಿವಾರ) ಬೆಂಗಳೂರಿನ ಚಾಮರಾಜಪೇಟೆ ವೀರಶೈವ ರುದ್ರಭೂಮಿಯಲ್ಲಿ ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ.
ದುಃಖತಪ್ತರು: ಕುಟುಂಬದವರು

LOOKING TO BUILD, BUY OR SELL A PROPERTY
Please refer Classifieds on Sunday

21ನೇ ವರ್ಷದ ಸವಿನೆನಪು

ನನ್ನ ಹೆಸರು ಗೌತಮ್
ನನ್ನ ತಂದೆ ತಾಯಿಯ
ಮಡಿಲಲ್ಲಿ ಬೆಳೆಯುವ
ನನ್ನನ್ನು ದೇವರ ಮಡಿಲಿಗೆ
ಕಳಿಸಿದರು. ದೇವರಲ್ಲೂ
ಮತ್ತು ನಿಮ್ಮಲ್ಲಿಯೂ
ಸದಾ ಮಗುವಾಗಿರುವೆ
ಗೌತಮ್ ವಿ.ಪಣತೂರು
ಜನನ: 27-09-1993 ನಿಧನ:11-02-2002
ಇಂತಿ: ಪಿ.ವಿ. ವೆಂಕಟಸ್ವಾಮಿರೆಡ್ಡಿ, ಪಾರ್ವತಮ್ಮ, ಚಂದನ್ ವಿ. ರೆಡ್ಡಿ, ಶ್ವೇತಾ ಪಿ.ಸಿ. ಅಬ್ಬಯ್ಯ ರೆಡ್ಡಿ, ಸುಶೀಲಮ್ಮ.

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

General

SANGEETHAM NILAYA 48/49 dasappa layout 3rd block ramamurthy nagar Bangalore 2400sq ft. 9591932764

Bannerghatta Road

FULLY FURNISHED 3 BHK Flat Arekere Near Vijaya Bank Layout For Immediate Sale Rs 55 Lakhs Negotiable Brokers Excuse Contact 9448881715

Shanthi Nagar

EAST FACING Vaastu Centrally Located 2 BHK Flat 1200 Sft A Khata 1st Floor Furnished Cauvery Water UPS Closed Carpark 82 Lakh: 8073546855

House

Mysore

ಮನೆ ಮಾರಾಟಕ್ಕಿದೆ 17x50 ಎರಡು ಅಂತಸ್ತು, 11B ಖಾತೆ (ಫಾರಂ 3 ಬರುತ್ತಿದೆ). ಶ್ರೀರಾಂಪುರ, ಮೈಸೂರು (25ಲಕ್ಷ ಬ್ಯಾಂಕ್ಲೋನ್ ಹೊಂದಿದೆ) 46ಲಕ್ಷ, Negotiable. ಸಂಪರ್ಕಿಸಿ: 6361239157.

Residential/ Commercial

East

ಬಳ್ಳಾರಿ ಬೆಂಗಳೂರು ರಸ್ತೆಯಲ್ಲಿನ ಶ್ರೀ ವರಲಕ್ಷ್ಮೀ ಬಡಾವಣೆಯಲ್ಲಿ ಬುಡಾ ಅನುಮೋದಿತ /ರೇರಾ ನೋಂದಾಯಿತ ಸಂಪೂರ್ಣ ಅಭಿವೃದ್ಧಿಪಡಿಸಲಾದ ನಿವೇಶನಗಳು (18 ನಿವೇಶನಗಳು - 22000 ಚ. ಅ.) ಮಾರಾಟಕ್ಕೆ ಲಭ್ಯವಿರುತ್ತವೆ. ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಸೂಕ್ತ, ಕನ್‌ಸ್ಟ್ರಕ್ಷನ್‌ಗೆ ಸಿದ್ಧ. ಭವಿಷ್ಯದಲ್ಲಿ ಉತ್ತಮ ಬೆಲೆ. ಬ್ಯಾಂಕ್ ಲೋನ್ ಸೌಲಭ್ಯವಿದೆ. ಆಸಕ್ತಿಯುಳ್ಳವರು ಮಾಲೀಕರನ್ನು ಸಂಪರ್ಕಿಸಬಹುದು - 9949533633.

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Multiple Vacancy

LOOKING FOR ASM,SR & SO for a potato chips manufacturing company. Attractive Packages Offered. Multiple Positions Open.Call: 9460636175 / 8073649592/ 9045936322. Email: techorganea@gmail.com

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9611225388/ 9611225266

Situation Required

REQUIRED FIELD Sales Executives for Housan,Tumkur,Bellari,Hubli for reputed Company. Call / Send Bio - Data to whatsapp No : 9496585910 / 9154791112

Wanted

PART TIME work ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಬರವಣಿಗೆಯ ಮೂಲಕ ತಿಂಗಳಿಗೆ 12,000 ರಿಂದ 20,000ವರೆಗೂ ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ 8749098879

ವ್ಯಾಪಾರ

Business Offers

Finance

ನಾವು ಎಲ್ಲಾರೀತಿಯ ವೈಯಕ್ತಿಕ, ಆಸ್ತಿ, ವ್ಯಾಪಾರ, ಕೃಷಿ ಮತ್ತು ಅಡಮಾನ ಸಾಲಗಳನ್ನು ಒದಗಿಸುತ್ತೇವೆ. ಏಜೆಂಟ್ ಸ್ವಾಗತ. Ph: 7992783372, 8901923173

ಸಾರ್ವಜನಿಕ ಪ್ರಕಟಣೆ

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಚನ್ನಗಿರಿ.
ಓ.ಎಸ್. ನಂ.:61/2021
ವಾದಿ: ಶ್ರೀಮತಿ ಸಿ.ಎಸ್. ಪುಷ್ಪ ಮತ್ತು ಇತರರು. –ವಿರುದ್ಧ– ಪ್ರತಿವಾದಿಯರು: ಚಂದ್ರಶೇಖರಪ್ಪ ಟಿ.ಎಸ್. ಮತ್ತು ಇತರರು. 3ನೇ ಪ್ರತಿವಾದಿಯ ವಿಳಾಸ: ಕು॥ ಮೇಘ ತಂದೆ ಟಿ.ಎಸ್. ಶಿವು, ವಯಸ್ಸು ಸುಮಾರು 24 ವರ್ಷ, ವಾಸ: ಮುದಿಗೆರೆ ಗ್ರಾಮ, ಚನ್ನಗಿರಿ ತಾಲ್ಲೂಕು. 4ನೇ ಪ್ರತಿವಾದಿಯ ವಿಳಾಸ: ಕು॥ ಮೌಲ್ಯ ತಂದೆ ಟಿ.ಎಸ್. ಶಿವು, ವಯಸ್ಸು ಸುಮಾರು 21 ವರ್ಷ, ವಾಸ: ಮುದಿಗೆರೆ ಗ್ರಾಮ, ಚನ್ನಗಿರಿ ತಾಲ್ಲೂಕು.
ಸಾರ್ವಜನಿಕ ಪ್ರಕಟಣೆ
ಏನೆಂದರೆ, ಈ ಮೇಲ್ಕಂಡ ಪ್ರಕರಣವನ್ನು ವಾದಿಯರು ನಿಮ್ಮ ಮತ್ತು ಇತರೆ ಪ್ರತಿವಾದಿಯರ ವಿರುದ್ಧ ದಾವಾಸ್ತಿಗೆ ಸಂಬಂಧಿಸಿದಂತೆ ಪಾಲುವಿಭಾಗ ಕೋರಿ ಈ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಪ್ರಸ್ತುತ ಈ ದಾವೆಯಲ್ಲಿ 3 & 4ನೇ ಪ್ರತಿವಾದಿಯರಾದ ತಾವುಗಳು ತಮ್ಮ ಅಹವಾಲನ್ನು ಸಲ್ಲಿಸಲು ಮೇಲ್ಕಂಡ ಘನ ನ್ಯಾಯಾಲಯಕ್ಕೆ ದಿನಾಂಕ: 16.03.2023ರಂದು ಬೆಳಗ್ಗೆ 11:00 ಗಂಟೆಗೆ ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ನಿಮ್ಮ ತಕರಾರನ್ನು ಸಲ್ಲಿಸಲು ತಿಳಿಸಿದೆ. ಒಂದು ವೇಳೆ ನೀವು ಮೇಲೆ ತಿಳಿಸಿದ ಸಮಯ ಮತ್ತು ದಿನಾಂಕದಂದು ಹಾಜರಾಗಲು ತಪ್ಪಿದಲ್ಲಿ ನಿಮ್ಮನ್ನು ಏಕತರ್ಫಿ ಎಂದು ಪರಿಗಣಿಸಿ ಸದರಿ ದಾವೆಯನ್ನು ತೀರ್ಮಾನ ಮಾಡಲಾಗುವುದು ಎಂದು ತಿಳಿಯುವುದು. ನ್ಯಾಯಾಲಯದ ಆದೇಶ ಮತ್ತು ಮೊಹರಿನೊಂದಿಗೆ ದಿನಾಂಕ 06.02.2023ರಂದು ನೀಡಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ,
ಸಹಿ/– ಶಿರಸ್ತೆದಾರರು, ಹಿರಿಯ ಸಿವಿಲ್ ನ್ಯಾಯಾಧೀಶರು ನ್ಯಾಯಾಲಯ, ಚನ್ನಗಿರಿ.
ವಾದಿಯರ ಪರ ವಕೀಲರು: ಎಂ. ತಿಪ್ಪೇಸ್ವಾಮಿ, ವಕೀಲರು, ಚನ್ನಗಿರಿ

ಶಿಕ್ಷಣ

Coaching Classes

ACE INDIA IAS Rajarajeshwarinagar Banglore coaching for IAS/KAS/ Banking started admissions. Contact: 9019308383 9845655761

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9844174018

PROPERTY CORNER

Asset Developers
2.9lakh
20*30 site
ನೋಂದಣಿಗೆ ಮತ್ತು ಮನೆ ಕಟ್ಟಲು ಸಿದ್ಧವಿರುವ ಸೈಟುಗಳು ಮಾರಾಟಕ್ಕಿವೆ
Lowest Price
ನೆಲಮಂಗಲ ರೈಲ್ವೆ ಗೊಲ್ಲಹಳ್ಳಿ ಹತ್ತಿರ
8884055599

HEALTH SPECIAL

ಆರೋಗ್ಯ
ಎಲ್ಲಾ ತರಹದ ಕ್ಯಾನ್ಸರ್, ಸಕ್ಕರೆ ಕಾಯಿಲೆ, ಕೀಲುಗಳ ನೋವು, ಲಕ್ವಾ, ಕಿಡ್ನಿದೋಷ, ಲೈಂಗಿಕ ನಿಶ್ಯಕ್ತಿ, ಮಕ್ಕಳಾಗದಿರುವಿಕೆ, ಇತ್ಯಾದಿ ಕಾಯಿಲೆಗಳಿಗೆ ಬೇಗನೇ ಗುಣಪಡಿಸುವ ಗಿಡಮೂಲಿಕೆ ಔಷಧಿ – ಚಿಕಿತ್ಸೆಗಾಗಿ ಸಂಪರ್ಕಿಸಿರಿ
ಡಾ॥ ಹನುಮಂತ ಮುರನಾಳ (Govt.Regd.)
Mob: 9448816993 / 9980394503
ಪ್ರತಿ ಬುಧವಾರ ಕೊಣ್ಣೂರ (ತಾ॥ ನರಗುಂದ) ಕೆ.ಎಸ್.ಆರ್.ಟಿ.ಸಿ ಬಸ್‌ಸ್ಟ್ಯಾಂಡ್ ಎದುರಿನ ಕಾಂಪ್ಲೆಕ್ಸ್‌ನಲ್ಲಿ "ಸಂಜೀವಿನಿ ಕ್ಲಿನಿಕ್"ದಲ್ಲಿ ಹಾಗೂ ಉಳಿದ ದಿನಗಳಲ್ಲಿ ಬೀಳಗಿ / ಭಗವತಿ ಬ್ರಾಂಚ್‌ನಲ್ಲಿ ಇರುತ್ತಾರೆ.

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಪ್ರವಾಸ

Travel

27/03/2023ರಿಂದ 13/16ದಿನಗಳ ವಿಮಾನ ಮತ್ತು AC ಬಸ್ಸಿನಲ್ಲಿ ಅಖಂಡನೇಪಾಳ ಮತ್ತು ಮುಕ್ತಿನಾಥ್,ಕಾಶಿ, ಗಯಾ,ನೈಮಿಷಾರಣ್ಯ,ಪುರಿ 27/04/2023ರಿಂದ ಚಾರುಧಾಮ್ ಸಮೇತ ಮಸ್ಸೂರಿ,ಹರಿದ್ವಾರ,ಮಾನ, ಋಷಿಕೇಶ್ ಹಾಗೂ ದಕ್ಷಿಣಭಾರತ ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್ 9480182865/ 8105657052 (ಷಣ್ಮುಗಾನಂದ)

23.04.2023 10.05.2023 ರಿಂದ 14/21/19 ದಿನಗಳ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ ಅಮೃತ್‌ಸರ್ ವೈಷ್ಣೋದೇವಿ ದೆಹಲಿ,ಕಾಶಿ,ಗಯಾ,ಪ್ರಯಾಗ ಅಯೋಧ್ಯ. 05.03.2023 ರಿಂದ 15 ದಿನಗಳ ಓಂಕಾರೇಶ್ವರ ಉಜ್ಜಯಿನಿ,ದ್ವಾರಕ ಮಾತ್ರಗಯಾ ಸಂಪರ್ಕಿಸಿ: 'ಶ್ರೀಸುಧಾ ಟ್ರಾವೆಲ್ಸ್' 22429289 9019301300 9448119290

27/04/2023ರಿಂದ 13ದಿನಗಳ ದೆಹಲಿ,ಆಗ್ರಾ,ಕಾಶಿ, ಅಲಹಾಬಾದ್ ಹಾಗೂ ಚಾರಧಾಮ್ ಯಾತ್ರೆಗಳು 30/06/2023ರಿಂದ 12ದಿನಗಳ ಅಮರನಾಥ್ ವೈಷ್ಣೋದೇವಿ,ವಾಘಬಾರ್ಡರ್. ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್: 8105657052/ 9480182865. (ಷಣ್ಮುಗಾನಂದ)

12 ದಿನಗಳ ದೆಹಲಿ ಆಗ್ರಾ,ಮಥುರ ಕಾಶಿ,ಗಯಾ ಅಲಹಾಬಾದ್ ಅಯೋಧ್ಯ ಹಾಗೂ ಇತರೆ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9880079588 9900080793

ನಮ್ಮ ಕಾಶಿಯಾತ್ರೆಗೆ ಅಥವಾ ಮುಕ್ತಿನಾಥ ನೇಪಾಳ ಯಾತ್ರೆಗೆ ನಿಮ್ಮ ಹೆತ್ತವರನ್ನು ಕಳಿಸಿಕೊಡಿ. ಕಾಳಜಿಯಿಂದ ಪ್ರವಾಸ ಮಾಡಿಸುತ್ತೇವೆ. ನಾಲಂದಾ, ಕುಂದಾಪುರ 8310028157.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

Office of the
Prl. District & Sessions Judge,
Bengaluru Rural District, Bengaluru.

ADM/148/2022 Date : 09-01-2023

TENDER NOTIFICATION

Inviting Tender from the reputed Service Providers/Manpower Agencies who are interested to provide Four numbers of Manpower in different cadre for maintaining office work of Fast Track Special Court-III, Bengaluru Rural District, Bengaluru, situated at City Civil Court Complex, Bengaluru.

1) Requirement of Four Numbers Man Power in different cadres for Fast Track Special Court-III is as follows.

Sl. No.	Name of the Post	Number of Post	Qualification required for the Post
01	Typist	02	Passed PUC or 3 Years Diploma Course or equivalent Course with Kannada & English Senior Typewriting
02	Attender	01	Passed S.S.L.C.
03	Peon	01	
	Total	04	

Formal agreement will have to be executed before the commencement of the job by agreeing the terms and conditions.

The sealed cover shall be superscribed as "TENDER FOR PROVIDING SERVICE CONTRACT FOR THE FAST TRACK SPECIAL COURT-III, BENGALURU RURAL DISTRICT, BENGALURU".

Last Date for receiving Tenders is 23-02-2023 till 5.30 p.m. Tenders will be Opened on 24-02-2023 at 10.30 a.m. in the Chamber of Prl. District and Sessions Judge, Bengaluru Rural District, Bengaluru.

For more details visit official Website i.e., https://districts.ecourts.gov.in/bangalorerural

Sd/-
Prl. District & Sessions Judge,
Bengaluru Rural District, Bengaluru.

DIPR/Bagalkote/4589/Manipal/2022-23

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235043, ಇ–ಮೇಲ್: bgkeezpe@yahoo.com

ಸಂಖ್ಯೆ : ಕಾನಿಇಂ/ಪಂ.ರಾ.ಇಂ.ವಿ./ಬಿಜಿಕೆ/ಪಿಬಿ–1/ಮುಧೋಳ/ಶಾಲೆ/7.00/ ಟೆಂಡರ್/2022–23/5300 ದಿನಾಂಕ : 09–02–2023

ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಏಕ-ಲಕೋಟೆ) ಕೆ.ಡಬ್ಲ್ಯೂ-1 & 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ಏಕ–ಲಕೋಟೆ ಪದ್ದತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನ್‌ಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

2022–23 ನೇ ಸಾಲಿನ ಬಾಗಲಕೋಟೆ ಜಿಲ್ಲೆಯ ಮುಧೋಳ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾದ ರೂ. 7.00 ಕೋಟಿ ವಿಶೇಷ ಅನುದಾನದಡಿ ಆಯ್ಕೆಯಾದ ಶಾಲೆಗಳಲ್ಲಿನ ಭೋದನಾ ಕೊಠಡಿಗಳ ನಿರ್ಮಾಣದ ಅನುದಾನ ಮಂಜೂರಾದ ಅನುದಾನ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ಅಡಿಯಲ್ಲಿ ಇತರೆ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : 99789 ಮತ್ತು ಪರಿಶಿಷ್ಟ ಜಾತಿ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : 99679, 99681, 99682 ಹಾಗೂ ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಾದ ಇಂಡೆಂಟ್ ಸಂಖ್ಯೆ : 99788 ಟೆಂಡರ ಕಾಮಗಾರಿ ವಿವರ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್‌ಗಿಟ್ಟ ಮೊತ್ತ ರೂ. 13.90 ದಿಂದ 32.80 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ ಅರ್ಜಿಯ ಬೆಲೆ, ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ,

1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 21–02–2023 ರ ಸಾಯಂಕಾಲ 5.30 ಗಂಟೆವರೆಗೆ.
2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 23–02–2023 ರಂದು ಮುಂಜಾನೆ 11.00 ಗಂಟೆಯ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ : http://www.eprocurment.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/868/ಮಣಿಪಾಲ್/2022–23

ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–2ರವರ ಕಚೇರಿ (ಬಿಎಸ್‌ಡಬ್ಲ್ಯೂಎಂಎಲ್), 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು – 560052.

No:DGM-2/(BSWML)/PR-123/22-23 Date:10.02.2023

ತಿದ್ದುಪಡಿ–1

ವಿಷಯ: ಟೆಂಡರ್ ಪ್ರಕಟಣೆಯ ಟೆಂಡರ್ ವೇಳಾಪಟ್ಟಿ ವಿಸ್ತರಣೆ
ಉಲ್ಲೇಖ: ಈ ಕಚೇರಿಯ ಟೆಂಡರ್ ಪ್ರಕಟಣೆ ಸಂ: DGM-2/BSWML/TEND/16/2022-23 Dated: 04.02.2023.
ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಕಾರಣಗಳಿಂದಾಗಿ ಮೇಲ್ಕಂಡ ಟೆಂಡರ್ ಪ್ರಕಟಣೆಯ ಟೆಂಡರ್ ವೇಳಾಪಟ್ಟಿಯನ್ನು ವಿಸ್ತರಿಸಲಾಗಿದೆ.

ಕ್ರ. ಸಂ.	ವಿವರಣೆ	ಟೆಂಡರ್ ಪ್ರಕಟಣೆಯ ಪ್ರಕಾರ	ವಿಸ್ತರಿಸಿದ ದಿನಾಂಕಗಳನ್ನು ಈ ರೀತಿ ಓದಿಕೊಳ್ಳುವುದು
1	ಪೂರ್ವಭಾವಿ ಸಭೆ ದಿನಾಂಕ ಹಾಗೂ ಸಮಯ	10–02–2023ರ ಮಧ್ಯಾಹ್ನ 3:00 ಗಂಟೆಗೆ.	15–02–2023ರ ಮಧ್ಯಾಹ್ನ 3:00 ಗಂಟೆಗೆ.
2	ಅರ್ಹತಾ ದಾಖಲೆಗಳನ್ನು ಅಪ್‌ಲೋಡ್ ಮಾಡುವ ದಿನಾಂಕ ಹಾಗೂ ಸಮಯ	19–02–2023ರ ಸಂಜೆ 4:00 ಗಂಟೆಯವರೆಗೆ.	23–02–2023ರ ಸಂಜೆ 4:00 ಗಂಟೆಯವರೆಗೆ.
3	ಟೆಂಡರ್ ತೆರೆಯುವ ದಿನಾಂಕ ಹಾಗೂ ಸಮಯ:	20–02–2023ರ ಸಂಜೆ 4:30 ಗಂಟೆಗೆ.	24–02–2023ರ ಸಂಜೆ 4:30 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in. ಸಂಪರ್ಕಿಸಬಹುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್

DIPR/CP/4644/2022-23

ಶೆಲ್ಡನ್ ಜಾಕ್ಸನ್–ಅರ್ಪಿತ್ ಶತಕದ ಆರ್ಭಟ; ಕರ್ನಾಟಕದ ಮುಂದೆ ಕಠಿಣ ಹಾದಿ

ಹಿನ್ನಡೆಯ ಭೀತಿಯಲ್ಲಿ ಆತಿಥೇಯರು

• ಗಿರೀಶ ದೊಡ್ಡಮನಿ

ಬೆಂಗಳೂರು: ಇಬ್ಬರು ಅನುಭವಿ ಫೀಲ್ಡರ್‌ಗಳು ಕೈಚೆಲ್ಲಿದ ಕ್ಯಾಚ್‌ಗಳು ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡಕ್ಕೆ ತುಟ್ಟಿಯಾಗುವ ಆತಂಕ ಮೂಡಿಸಿವೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಸೆಮಿಫೈನಲ್‌ನಲ್ಲಿ ಸೌರಾಷ್ಟ್ರ ತಂಡವು ಮೊದಲ ಇನಿಂಗ್ಸ್ ಮುನ್ನಡೆಯ ಹೊಸ್ತಿಲಲ್ಲಿದೆ. ಇದಕ್ಕೆ ಕಾರಣವಾಗಿದ್ದು ಅನುಭವಿ ಬ್ಯಾಟರ್ ಶೆಲ್ಡನ್ ಜಾಕ್ಸನ್ (160; 245ಎ, 4X23, 6X2) ಮತ್ತು ನಾಯಕ ಅರ್ಪಿತ್ ವಾಸವದ (ಬ್ಯಾಟಿಂಗ್ 112; 219ಎ) ಅವರ ಶತಕಗಳು. ಇವರಿಬ್ಬರೂ ತಮಗೆ ಸಿಕ್ಕ ತಲಾ ಒಂದು ಜೀವದಾನವನ್ನು ಶತಕದಲ್ಲಿ ಪರಿವರ್ತಿಸಿಕೊಂಡರು. ಅಲ್ಲದೇ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 232 ರನ್ ಪೇರಿಸಿದರು.

ಇದರಿಂದಾಗಿ ಸೌರಾಷ್ಟ್ರವು ಶುಕ್ರವಾರ ದಿನದಾಟದ ಕೊನೆಗೆ 112 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 364 ರನ್ ಗಳಿಸಿದೆ. ಆತಿಥೇಯ ತಂಡವು ಮಯಂಕ್ ದ್ವಿಶತಕದ ಬಲದಿಂದ ಪೇರಿಸಿದ 407 ರನ್‌ಗಳನ್ನು ಚುಕ್ತಾ ಮಾಡಲು ಇನ್ನೂ 43 ರನ್‌ಗಳಷ್ಟೇ ಬೇಕು.

ಗುರುವಾರ ಸಂಜೆಯ ಸಮರ್ಥ್ ಬಿಟ್ಟ ಕ್ಯಾಚ್‌ನಿಂದಾಗಿ ಶೆಲ್ಡನ್ ಈ ಋತುವಿನ ಮೊದಲ ಶತಕ ದಾಖಲಿಸಿದರು. 36 ವರ್ಷದ ಶೆಲ್ಡನ್‌ಗೆ ಕರ್ನಾಟಕದ ಎದುರು ನಾಲ್ಕನೇಯದ್ದು. ವೈಶಾಖ ಎಸೆತವನ್ನು ಪುಲ್ ಮಾಡಿ ಸಿಕ್ಸರ್‌ಗೂ ಎತ್ತಿದ ಅವರ ಹೊಡೆತಕ್ಕೆ ಚೆಂಡು ಖಾಲಿ ಗ್ಯಾಲರಿಗೆ ಹೋಗಿಬಿತ್ತು. ಅವರ ಆರ್ಭಟ ಮತ್ತು ನಿಖರ ಪದಚಲನೆಯ ಆಟದಿಂದಾಗಿ ಫೀಲ್ಡಿಂಗ್ ನಿಯೋಜನೆಗಳ ಪ್ರಯೋಗಗಳು ವಿಫಲವಾದವು.

ಮೂರನೇ ದಿನದಾಟದಲ್ಲಿ ಮೂರು ರನ್ ಗಳಿಸಿದ್ದ ಅರ್ಪಿತ್ ಕ್ಯಾಚ್ ಅನ್ನು ಮನೀಷ್ ಪಾಂಡೆ ಕೈಬಿಟ್ಟರು. ಬಿರುಸಿನ ಹೊಡೆತಗಳ ಆಟಗಾರ ಶೆಲ್ಡನ್ ಅವರ ಬ್ಯಾಟಿಂಗ್ ಮುಂದೆ ಕರ್ನಾಟಕದ ಬೌಲರ್‌ಗಳು ಲೈನ್ ಮತ್ತು ಲೆಂಗ್ತ್ ಕಾಪಾಡಿಕೊಳ್ಳಲು ಕಷ್ಟಪಟ್ಟರು. ಸ್ಪಿನ್ನರ್‌ಗಳಂತೂ ದುಬಾರಿಯಾದರು. ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಕೇವಲ ಹತ್ತು ಓವರ್‌ಗಳಲ್ಲಿ 58 ರನ್ ಕೊಟ್ಟರು.

ಇಡೀ ದಿನದಲ್ಲಿ ಕರ್ನಾಟಕದ ಬೌಲರ್‌ಗಳಿಗೆ ಸಿಕ್ಕಿದ್ದು ಎರಡು ವಿಕೆಟ್ ಮಾತ್ರ. ಬೆಳಗಿನ ಅವಧಿಯಲ್ಲಿ ಹರ್ವಿಕ್ ದೇಸಾಯಿ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೌಶಿಕ್ ಬೀಳಿಸಿದರು. ಮಧ್ಯಾಹ್ನ ಶೆಲ್ಡನ್ ಅವರನ್ನು ಗೌತಮ್ ಎಲ್‌ಬಿ ಬಲೆಗೆ ಕೆಡವಿ ನಿಟ್ಟುಸಿರುಬಿಟ್ಟರು. ಆದರೆ, ಗೌತಮ್ ಬೌಲಿಂಗ್‌ನಲ್ಲಿ ಅರ್ಪಿತ್ ಆರು ಬೌಂಡರಿಗಳನ್ನು ಬಾರಿಸಿದರು. ಇದರಿಂದಾಗಿ ಅಪಾರ ಒತ್ತಕ್ಕೊಳಗಾದಂತೆ ಕಂಡ ಆತಿಥೇಯ ಆಟಗಾರರು ಜೋರಾಗಿ ಅಪೀಲ್ ಮಾಡುವುದು ಮತ್ತು ಎಲ್‌ಬಿಡಬ್ಲ್ಯುಮನವಿಗಳ ಸಂದರ್ಭದಲ್ಲಿ ಅಂಪೈರ್‌ಗಳ ಜೊತೆ ವಾದ ಸಾಮಾನ್ಯವಾಗಿತ್ತು.

ಪಾಂಡೆ ಅಪೀಲ್‌ಗೆ ಅಸಮಾಧಾನ: ಫೀಲ್ಡರ್ ಮನೀಷ್ ಪಾಂಡೆ ತಮ್ಮ ಮುಂದೆ ನೆಲಕ್ಕೆ ಬಿದ್ದು ಪುಟಿದೆದ್ದ ಚೆಂಡನ್ನು ಹಿಡಿದು ಅಪೀಲ್ ಮಾಡಿದರು. ಉಳಿದ ಆಟಗಾರರು ಸಂಭ್ರಮಿಸಿದ್ದೂ ಆಯಿತು. ಆದರೆ ಕ್ರೀಸ್‌ನಲ್ಲಿದ್ದ ಬ್ಯಾಟರ್ ಶೆಲ್ಡನ್ ಮತ್ತು ಅರ್ಪಿತ್ ಅವರು ಒಪ್ಪಲಿಲ್ಲ. ಫೀಲ್ಡ್ ಅಂಪೈರ್‌ಗಳೂ ಔಟ್ ನೀಡಲಿಲ್ಲ. ಆದರೆ ಪಾಂಡೆಯವರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಗಳು ವ್ಯಕ್ತವಾಗಿವೆ. ಅಂತರರಾಷ್ಟ್ರೀಯಮಟ್ಟದ ಆಟಗಾರ ಕ್ರೀಡಾ ಸ್ಫೂರ್ತಿ ಮರೆಯಬಾರದಿತ್ತು ಎಂದು ಅಭಿಮಾನಿಗಳು ಬೇಸರವ್ಯಕ್ತಪಡಿಸಿದ್ದಾರೆ.

ಶತಕೋತ್ತರ ಅರ್ಧಶತಕ ಪೂರೈಸಿದಾಗ ಸೌರಾಷ್ಟ್ರದ ಶೆಲ್ಡನ್ ಜಾಕ್ಸನ್ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ 407 (133.3 ಓವರ್)

ಸೌರಾಷ್ಟ್ರ 4ಕ್ಕೆ364 (112 ಓವರ್) (ಗುರುವಾರ 30 ಓವರ್‌ಗಳಲ್ಲಿ 2ಕ್ಕೆ 75)

ದೇಸಾಯಿ ಎಲ್‌ಬಿಡಬ್ಲ್ಯು ಬಿ ಕೌಶಿಕ್ 33 (106ಎ, 4X4), ಶೆಲ್ಡನ್ ಎಲ್‌ಬಿಡಬ್ಲ್ಯು ಬಿ ಗೌತಮ್ 160 (245ಎ, 4X23, 6X2), ಅರ್ಪಿತ್ ಬ್ಯಾಟಿಂಗ್ 112 (219ಎ, 4X15), ಚಿರಾಗ್ ಬ್ಯಾಟಿಂಗ್ 19 (42ಎ, 4X2)

ಇತರೆ: 18 (ಬೈ 8, ಲೆಗ್‌ಬೈ 8, ವೈಡ್ 2)

ವಿಕೆಟ್ ಪತನ: 3–92 (ಹರ್ವಿಕ್ ದೇಸಾಯಿ; 34.6), 4–324 (ಶೆಲ್ಡನ್ ಜಾಕ್ಸನ್; 97.6)

ಬೌಲಿಂಗ್: ವಿದ್ವತ್ ಕಾವೇರಪ್ಪ 28–5–64–2, ವಿ. ಕೌಶಿಕ್ 28–8–70–1, ವೈಶಾಖ ವಿಜಯಕುಮಾರ್ 22–4–82–0, ಕೆ. ಗೌತಮ್ 22–1–68–1, ಶ್ರೇಯಸ್ ಗೋಪಾಲ್ 11–1–58–0, ಆರ್. ಸಮರ್ಥ್ 1–0–6–0

ಫೈನಲ್ ಹಾದಿ ಕಠಿಣ

ಪಂದ್ಯದಲ್ಲಿ ಇನ್ನೆರಡು ದಿನಗಳ ಆಟ ಬಾಕಿಯಿದೆ. ಆತಿಥೇಯ ತಂಡಕ್ಕೆ ಫೈನಲ್ ಪ್ರವೇಶಿಸಲು ಎರಡು ಕಠಿಣ ಹಾದಿಗಳಿವೆ. ಮೊದಲನೆಯದ್ದು; ಕರ್ನಾಟಕ ತಂಡವು ನಾಲ್ಕನೇ ದಿನದಾಟವಾದ ಶನಿವಾರ ಬೆಳಿಗ್ಗೆ ಸೌರಾಷ್ಟ್ರದ ಆರು ವಿಕೆಟ್‌ಗಳನ್ನು ಬೇಗನೆ ಉರುಳಿಸಿ ಹಿನ್ನಡೆ ತಪ್ಪಿಸಿಕೊಳ್ಳಬೇಕು. ನಂತರದ ಅವಧಿಯಲ್ಲಿ ದೊಡ್ಡ ಮೊತ್ತವನ್ನು ಪೇರಿಸಿ ಸೌರಾಷ್ಟ್ರಕ್ಕೆ ಎರಡನೇ ಇನಿಂಗ್ಸ್ ಆಡಲು ಅವಕಾಶ ನೀಡಬೇಕು. ಆಗ ಪಂದ್ಯ ಡ್ರಾ ಆದರೂ ಕರ್ನಾಟಕ ಫೈನಲ್ ಪ್ರವೇಶಿಸುತ್ತದೆ.

ಎರಡನೇಯದಾಗಿ; ಒಂದೊಮ್ಮೆ ಸೌರಾಷ್ಟ್ರವೇ ಇನಿಂಗ್ಸ್ ಮುನ್ನಡೆ ಪಡೆದರೆ, ಕರ್ನಾಟಕವು ಪಂದ್ಯ ಜಯಿಸಿದರೆ ಮಾತ್ರ ಫೈನಲ್‌ಗೆ ಸಾಗಬಹುದು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಪಂಜಾಬ್ ಎದುರು ಇನಿಂಗ್ಸ್ ಹಿನ್ನಡೆ ಅನುಭವಿಸಿದ ನಂತರ ಗೆದ್ದು ಬಂದಿರುವ ಸೌರಾಷ್ಟ್ರದ ಮಾದರಿಯಲ್ಲಿ ಕರ್ನಾಟಕವು ಆಡಬೇಕಾಗಬಹುದು. ಆದರೆ ಮೂರನೇ ದಿನದಾಟವನ್ನು ಅವಲೋಕಿಸಿದರೆ ಕರ್ನಾಟಕ ತಂಡದ ಹಾದಿಯೇ ಹೆಚ್ಚು ಕಠಿಣವಾಗಿದೆ. ಟೂರ್ನಿಯುದ್ದಕ್ಕೂ ತಂಡದ ಅಜೇಯ ಓಟಕ್ಕೆ ಪ್ರಮುಖ ಕಾರಣರಾದ ಮಧ್ಯಮವೇಗದ ಬೌಲರ್‌ಗಳಿಗೆ ಸೌರಾಷ್ಟ್ರ ಬ್ಯಾಟರ್‌ಗಳು ದಿಟ್ಟ ಉತ್ತರ ನೀಡುತ್ತಿದ್ದಾರೆ.

ಶಾಟ್‌ಪಟ್: ತಜಿಂದರ್ ಪಾಲ್‌ಗೆ ಚಿನ್ನ

ಅಸ್ತಾನ ಕಜಕಸ್ತಾನ (ಪಿಟಿಐ): ಭಾರತದ ತಜಿಂದರ್ ಪಾಲ್ ಸಿಂಗ್ ತೂರ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಒಳಾಂಗಣ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಶಾಟ್‌ಪಟ್ ವಿಭಾಗದಲ್ಲಿ ಚಿನ್ನ ಗೆದ್ದರು. ಟೂರ್ನಿಯ ಮೊದಲ ದಿನವಾದ ಶುಕ್ರವಾರ ಭಾರತಕ್ಕೆ ಒಲಿದ ಮೊದಲ ಚಿನ್ನ ಇದು. ತೂರ್ ಅವರು 19.49 ಮೀಟರ್ಸ್ ಸಾಧನೆ ಮಾಡಿದರು. ಕರಣ್‌ವೀರ್ ಸಿಂಗ್ ಬೆಳ್ಳಿ ಗೆದ್ದರು. ಟ್ರಿಪಲ್ ಜಂಪ್ ಅಥ್ಲೀಟ್ ಪ್ರವೀಣ್ ಚಿತ್ರವೇಲ್ (16.98 ಮೀ.) ರಾಷ್ಟ್ರೀಯ ದಾಖಲೆಯೊಂದಿಗೆ ಬೆಳ್ಳಿ ಗೆದ್ದರು. ಲಾಂಗ್ ಜಂಪ್‌ನಲ್ಲಿ ಜೆಸ್ವಿನ್ ಅಲ್‌ಡ್ರಿನ್ (7.92 ಮೀ.) ರಾಷ್ಟ್ರೀಯ ದಾಖಲೆ ಉತ್ತಮಪಡಿಸಿ ಫೈನಲ್ಸ್‌ಗೆ ಅರ್ಹತೆ ಗಳಿಸಿದರು. ಪೆಂಟಾಥ್ಲಾನ್‌ನಲ್ಲಿ ಸ್ವಪ್ನಾ ಬರ್ಮನ್ ಬೆಳ್ಳಿ ಗೆದ್ದರು.

ಬಿಎಫ್‌ಸಿಗೆ ಬ್ಲಾಸ್ಟರ್ಸ್ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಎಫ್‌ಸಿ ತಂಡ ದವರು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿ ಯಲ್ಲಿ ಶನಿವಾರ ಕೇರಳ ಬ್ಲಾಸ್ಟರ್ಸ್ ತಂಡದ ಸವಾಲು ಎದುರಿಸಲಿದ್ದಾರೆ.

‘ಪ್ಲೇ ಆಫ್’ನಲ್ಲಿ ಸ್ಥಾನ ಖಚಿತಪಡಿಸಿಕೊಳ್ಳಲು ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಬಿಎಫ್‌ಸಿಗೆ ಗೆಲುವು ಅನಿವಾರ್ಯ. ಬೆಂಗಳೂರಿನ ತಂಡ 25 ಪಾಯಿಂಟ್ಸ್‌ಗಳೊಂದಿಗೆ ಏಳನೇ ಸ್ಥಾನದಲ್ಲಿದ್ದು, ಇನ್ನೂ ಮೂರು ಪಂದ್ಯಗಳನ್ನು ಆಡಲಿದೆ. ಅಗ್ರ ಆರು ತಂಡಗಳು ಮಾತ್ರ ‘ಪ್ಲೇ ಆಫ್’ಗೆ ಅರ್ಹತೆ ಪಡೆಯಲಿವೆ.

ಆದ್ದರಿಂದ ಶನಿವಾರ ಪೂರ್ಣ ಮೂರು ಪಾಯಿಂಟ್ಸ್ ಕಲೆಹಾಕಲು ವಿಫಲವಾದರೆ, ಬಿಎಫ್‌ಸಿಯ ‘ಪ್ಲೇ ಆಫ್’ ಕನಸಿಗೆ ಹಿನ್ನಡೆ ಉಂಟಾಗಲಿದೆ.

ಅಡ್ರಿಯಾನ್ ಲುನಾ ನಾಯಕತ್ವದ ಕೇರಳ ಬ್ಲಾಸ್ಟರ್ಸ್ ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಶನಿವಾರ ಗೆದ್ದರೆ, ಈ ತಂಡದ ‘ಪ್ಲೆ ಆಫ್’ ಸ್ಥಾನ ಖಚಿತವಾಗಲಿದೆ.

ಬಿಎಫ್‌ಸಿಯ ರಾಯ್‌ಕೃಷ್ಣ ಮತ್ತು ಶಿವಶಕ್ತಿ ನಾರಾಯಣನ್ ಅವರು ಅತ್ಯುತ್ತಮ ಫಾರ್ಮ್‌ನಲ್ಲಿದ್ದು, ಬ್ಲಾಸ್ಟರ್ಸ್ ವಿರುದ್ಧವೂ ಕಾಲ್ಚಳಕ ತೋರುವ ಹುಮ್ಮಸ್ಸಿನಲ್ಲಿದ್ದಾರೆ. ರೋಹಿತ್ ಕುಮಾರ್ ಹಾಗೂ ಜಾವಿ ಹೆರ್ನಾಂಡಿಜ್ ಮಿಡ್‌ಫೀಲ್ಡ್‌ನಲ್ಲಿ ತಂಡದ ಶಕ್ತಿ ಎನಿಸಿದ್ದಾರೆ.

ಅಡ್ರಿಯಾನ್ ಲುನಾ ಮತ್ತು ದಿಮಿತ್ರೊಸ್ ದಿಯಾಮಂತಕೊಸ್ ಅವರಂತಹ ಆಟಗಾರರನ್ನು ಒಳಗೊಂಡ ಬ್ಲಾಸ್ಟರ್ಸ್ ತಂಡದ ಆಕ್ರಮಣ ತಡೆಯಬೇಕಾದರೆ ಬಿಎಫ್‌ಸಿ ಡಿಫೆಂಡರ್‌ಗಳಿಗೆ ಕಠಿಣ ಪರಿಶ್ರಮ ನಡೆಸಬೇಕಾಗಿದೆ. ಪಂದ್ಯದ ಎಲ್ಲ ಟಿಕೆಟ್‌ಗಳೂ ಮಾರಾಟವಾಗಿದ್ದು, ಶನಿವಾರವೂ ಕಂಠೀರವ ಕ್ರೀಡಾಂಗಣ ಕಿಕ್ಕಿರಿದು ತುಂಬಲಿದೆ.

ಪಂದ್ಯ ಆರಂಭ: ಸಂಜೆ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಬಿಎಫ್‌ಸಿ ತಂಡದ ಸುನಿಲ್ ಚೆಟ್ರಿ (ಎಡ) ಹಾಗೂ ರಾಯ್ ಕೃಷ್ಣ

ನೆಟ್‌ಬಾಲ್ 14ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಪುರುಷರ ನೆಟ್‌ಬಾಲ್ ಚಾಂಪಿಯನ್‌ಷಿಪ್ ಇದೇ 14ರಿಂದ 17ರವರೆಗೆ ನಡೆಯಲಿದೆ.

ಬೆಂಗಳೂರಿನ ಸೌಂದರ್ಯ ಕಾನೂನು ಕಾಲೇಜು ಹಾಗೂ ಹುಬ್ಬಳ್ಳಿಯ ಕರ್ನಾಟಕ ಕಾನೂನು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಟೂರ್ನಿ ನಡೆಯಲಿದೆ.

‘ನಾಗಸಂದ್ರದ ಸಿಡೇದ ಹಳ್ಳಿಯಲ್ಲಿರುವ ಸೌಂದರ್ಯ ಕಾನೂನು ಕಾಲೇಜು ಮೈದಾನದಲ್ಲಿ ಟೂರ್ನಿ ನಡೆಯಲಿದೆ. ಕರ್ನಾಟಕ ಸೇರಿದಂತೆ ಬೇರೆ ಬೇರೆ ರಾಜ್ಯಗಳಿಂದ 74 ವಿಶ್ವವಿದ್ಯಾಲಯಗಳ ತಂಡಗಳು ಸ್ಪರ್ಧಿಸಲಿವೆ’ ಎಂದು ಸೌಂದರ್ಯ ಎಜುಕೇಷನಲ್ ಟ್ರಸ್ಟ್‌ನ ಕಾರ್ಯನಿರ್ವಾಹಕ ಅಧಿಕಾರಿ ಕೀರ್ತನ್ ಕುಮಾರ್ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಟೂರ್ನಿಯು ಲೀಗ್ ಕಮ್ ನಾಕೌಟ್ ಮಾದರಿಯಲ್ಲಿ ನಡೆಯಲಿದೆ. ಸುಮಾರು 1200ಕ್ಕೂ ಹೆಚ್ಚು ಸ್ಪರ್ಧಿಗಳು ಕಣಕ್ಕಿಳಿಯಲಿದ್ದಾರೆ’ ಎಂದರು.

ಈ ಸಂದರ್ಭದಲ್ಲಿ ಸೌಂದರ್ಯ ಕಾನೂನು ಕಾಲೇಜಿನ ಪ್ರಾಂಶುಪಾಲ ಬಿ.ಪಿ. ಮಹೇಶ್, ದೈಹಿಕ ಶಿಕ್ಷಕ ಹರೀಶ್, ನೆಟ್ ಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಗಿರೀಶ್ ಇದ್ದರು.

ವಾಲಿಬಾಲ್: ಮುಂಬೈ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುರುಕಿನ ಪ್ರದರ್ಶನ ನೀಡಿದ ಮುಂಬೈ ಮಿಟಿಯೋರ್ಸ್ ತಂಡದವರು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಭರ್ಜರಿ ಗೆಲುವು ಪಡೆದರು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಮುಂಬೈ ತಂಡ 5–0 ರಲ್ಲಿ ಚೆನ್ನೈ ಬ್ಲಿಟ್ಜ್ ವಿರುದ್ಧ ಗೆದ್ದಿತು.

ಪ್ರಬಲ ಪೈಪೋಟಿ ನಡೆದ ಮೊದಲ ಸೆಟ್‌ಅನ್ನು ಮಿಟಿಯೋರ್ಸ್ 15–14 ರಲ್ಲಿ ಗೆದ್ದು ಮುನ್ನಡೆ ಸಾಧಿಸಿತು. ಬಳಿಕದ ಸೆಟ್‌ಗಳನ್ನು 15–6, 15–11, 15–12, 15–9 ರಲ್ಲಿ ಜಯಿಸಿತು.

ಇಂದಿನ ಪಂದ್ಯ: ಕ್ಯಾಲಿಕಟ್ ಹೀರೋಸ್–ಹೈದರಾಬಾದ್ ಬ್ಲ್ಯಾಕ್‌ಹಾಕ್ಸ್

ಆರಂಭ: ಸಂಜೆ 7



ಮುಂಬೈ ಮಿಟಿಯೋರ್ಸ್ ತಂಡದ ಎ.ಕಾರ್ತಿಕ್ ಅವರ ಸ್ಮಾಷ್ ತಡೆಯಲು ಎದುರಾಳಿ ತಂಡದ ತುಷಾರ್ ಪ್ರಯತ್ನಿಸಿದರು ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಷೇರುಪೇಟೆ ವಹಿವಾಟು 123



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,893
ಇಂದಿನ ಅಂತ್ಯ	17,856
▼	37
ದಿನದ ಕನಿಷ್ಠ	17,801

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹448

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹1160 (1170)
ಸೂರ್ಯಕಾಂತಿ (ರಿಫೈನ್ಡ್)	₹1165 (1165)
ಪಾಮೋಲಿನ್	₹952 (962)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹470-690
ದ್ವಿತಳಿ (ಬಿ.ವಿ)	₹266-734

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹140.50
ಆರ್‌ಎಸ್‌ಎಸ್-5	₹135.50
ಗುಡ್ ಲಾಟ್	₹130.50

(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ

10–2–2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11800-11900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1070 (1070)
ಪಾಮ್ ವಾರದ ಡೆಲಿವರಿ	950 (960)
ಸೂರ್ಯಕಾಂತಿ ಎಣ್ಣೆ ಕಚ್ಚಾ	1060 (1060)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 56,850 (57,350)

ಬೆಳ್ಳಿ ಕೆ.ಜಿ 66,750 (67,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	350-400
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	650-700
ಜರಡಿ	1150-1200
ಹೆರಕಿದ್ದು	1150-1200
ಹಸಿರು ಸಾಧಾರಣ	700-750
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1350-1450
ಕಾಳು ಮೆಣಸು	485
ಬಂಟ್ವಾಳ	
ಕೋಕ	12500-25000
ಹಳತು	48000-54500
ಹೊಸತು	22500-40000
ಚಿತ್ರದುರ್ಗ	
ಆಪಿ	46119-46529
ಬೆಟ್ಟೆ	35129-35579
ಕೆಂಪುಗೋಟು	30100-30500
ರಾಶಿ	45639-46069
ಕುಮಟ	
ಚಿಪ್ಪು	27809-32809
ಕೋಕ	17869-29869
ಹಳೆಚಾಲಿ	35209-38269
ಹೊಸಚಾಲಿ	33209-35559
ಕುಂದಾಪುರ	
ಹಳೆಚಾಲಿ	40000-49500
ಹೊಸಚಾಲಿ	35000-40000
ಶಿವಮೊಗ್ಗ	
ಬೆಟ್ಟೆ	46600-52510
ಗೊಬರಲು	21509-34789
ರಾಶಿ	41500-46119
ಸರಕು	43009-79100
ಸಿದ್ದಾಪುರ	
ಬಿಳಿಗೋಟು	26609-32799
ಚಾಲಿ	26599-31899
ಕೋಕ	26599-31899
ಕೆಂಪುಗೋಟು	30089-36999
ರಾಶಿ	43189-45899
ತಟ್ಟಿಬೆಟ್ಟೆ	36209-40569
ಶಿರಸಿ	
ಬೆಟ್ಟೆ	32099-44521
ಬಿಳಿಗೋಟು	23099-33619
ಚಾಲಿ	30919-40599
ಕೆಂಪುಗೋಟು	23699-35109
ರಾಶಿ	38589-46329
ಯಲ್ಲಾಪುರ	
ಬಿಳಿಗೋಟು	22612-33333
ಕೋಕ	16612-30212
ಹಳೆಚಾಲಿ	37499-40571
ಹೊಸಚಾಲಿ	33012-36690
ಕೆಂಪುಗೋಟು	26009-34969
ರಾಶಿ	41539-49399
ಹೊಸನಗರ	
ಚಾಲಿ	31199-35889
ಕೆಂಪುಗೋಟು	32600-35399
ರಾಶಿ	43269-46879
ಸಿಪ್ಪೆಗೋಟು	6099-6099

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15000	15000	14800	173.70 ಸೆಂಟ್ಸ್
ಎಸಿ	7280	7250	6550	
ಆರ್‌ಪಿ	10250	10000	9700	ಲಂಡನ್
ಆರ್‌ಸಿ	5100	185 on OT	4800	2037 ಡಾಲರ್ಸ್

ವೀಳ್ಯದೆಲೆಗೆ ದಾಖಲೆ ಬೆಲೆ

ಪ್ರಜಾವಾಣಿ ವಾರ್ತೆ

ತೋವಿನಕೆರೆ (ತುಮಕೂರು): ವೀಳ್ಯದೆಲೆ ಬೆಲೆ ಮತ್ತಷ್ಟು ಏರಿಕೆಯಾಗಿದೆ. ತೋವಿನಕೆರೆ ಸಂತೆಯಲ್ಲಿ ಶುಕ್ರವಾರ ಒಂದು ಕಟ್ಟು (100 ಎಲೆಗಳು) ವೀಳ್ಯದೆಲೆ ₹ 210ಕ್ಕೆ ಮಾರಾಟವಾಗಿದೆ.

‘ಇದು ದಾಖಲೆಯ ಬೆಲೆ. ಈವರೆಗೆ ಇಷ್ಟು ಬೆಲೆಗೆ ಮಾರಾಟವಾಗಿದ್ದನ್ನು ನೋಡಿಲ್ಲ ಎಂದು ವರ್ತಕರು ಹೇಳುತ್ತಿದ್ದಾರೆ’ ಎಂದು ತೋವಿನಕೆರೆಯ ಬೆಳೆಗಾರ ನಾರಾಯಣಪ್ಪ ತಿಳಿಸಿದರು.

ಮಧುಗಿರಿ ತಾಲ್ಲೂಕಿನ ಗೌಡನಹಳ್ಳಿಯ ಬೆಳೆಗಾರ ಲಕ್ಷ್ಮಣ ಅವರು ತಂದಿದ್ದ ವೀಳ್ಯದೆಲೆ ಕಟ್ಟು ₹ 210ಕ್ಕೆ ಮಾರಾಟವಾಯಿತು.

ಜನವರಿ ತಿಂಗಳಲ್ಲಿ ₹ 100ರ ಗಡಿ ದಾಟಿ, ಫೆಬ್ರುವರಿ ಮೊದಲ ವಾರ ₹ 160ಕ್ಕೆ ಏರಿಕೆ ಕಂಡಿತ್ತು. ಈಗ ಒಂದು ಕಟ್ಟಿನ ಬೆಲೆ ₹ 200 ದಾಟಿದೆ. ಚಿಲ್ಲರೆಯಾಗಿ ಒಂದು ಕಟ್ಟನ್ನು ₹ 250ರವರೆಗೂ ಮಾರಾಟ ಮಾಡಲಾಗುತ್ತಿದೆ.

ಪೇಟಿಎಂನಲ್ಲಿದ್ದ ಅಷ್ಟೂ ಷೇರು ಮಾರಾಟ ಮಾಡಿದ ಅಲಿಬಾಬಾ

ನವದೆಹಲಿ (ಪಿಟಿಐ): ಚೀನಾದ ಅಲಿಬಾಬಾ ಕಂಪನಿಯು ಪೇಟಿಎಂನ ಮಾತೃಸಂಸ್ಥೆ ಒನ್‌97 ಕಮ್ಯುನಿಕೇಷನ್ಸ್‌ನಲ್ಲಿ ಉಳಿಸಿಕೊಂಡಿದ್ದ ಅಷ್ಟೂ ಷೇರುಗಳನ್ನು ಮಾರಾಟ ಮಾಡಿದೆ. ಅಲಿಬಾಬಾ ಕಂಪನಿಯು ಶುಕ್ರವಾರ ಶೇಕಡ 3.16ರಷ್ಟು ಷೇರುಗಳನ್ನು ₹ 1,360 ಕೋಟಿಗೆ ಮಾರಾಟ ಮಾಡಿದೆ. ಈ ಮೂಲಕ ಒನ್‌97 ಕಮ್ಯುನಿಕೇಷನ್ಸ್‌ನಿಂದ ಸಂಪೂರ್ಣವಾಗಿ ಹೊರ ಬಂದಿದೆ ಎಂದು ಮೂಲಗಳು ಹೇಳಿವೆ.

ಕಂಪನಿಯು 2022ರ ಡಿಸೆಂಬರ್ ಅಂತ್ಯಕ್ಕೆ ಪೇಟಿಎಂನಲ್ಲಿ ಶೇ 6.26ರಷ್ಟು ಷೇರುಗಳನ್ನು ಹೊಂದಿತ್ತು. ಈ ವರ್ಷದ ಜನವರಿಯಲ್ಲಿ ಶೇ 3.1ರಷ್ಟು ಷೇರುಗಳನ್ನು ಮಾರಾಟ ಮಾಡಿತ್ತು. ಈಗ ಶೇ 3.16ರಷ್ಟು ಷೇರುಗಳನ್ನು ಮಾರಾಟ ಮಾಡಿದೆ.

ಪ್ರತಿ ಷೇರಿಗೆ ₹645–655ರಂತೆ ಮಾರಾಟ ನಡೆದಿದೆ ಎಂದು ಗೊತ್ತಾಗಿದೆ. ಈ ಮಾರಾಟದ ಕುರಿತು ಪೇಟಿಎಂ ಮತ್ತು ಅಲಿಬಾಬಾ ಕಂಪನಿಗಳು ಪ್ರತಿಕ್ರಿಯೆ ನೀಡಿಲ್ಲ. ಆದರೆ, ಅಲಿಬಾಬಾ ಸಮೂಹದ ಆ್ಯಂಟ್ ಫೈನಾನ್ಶಿಯಲ್ ಕಂಪನಿಯು ಪೇಟಿಎಂನಲ್ಲಿ ಹೊಂದಿರುವ ಶೇ 25ರಷ್ಟು ಷೇರುಗಳನ್ನು ಮಾರಾಟ ಮಾಡಿಲ್ಲ.

ಹೊಸ ತೆರಿಗೆ ಪದ್ಧತಿ: ಸಚಿವೆ ನಿರ್ಮಲಾ ಹೇಳಿಕೆ

ಉಳಿಯಲಿದೆ ಹೆಚ್ಚು ಹಣ

ನವದೆಹಲಿ (ಪಿಟಿಐ): ವಾರ್ಷಿಕ ₹ 7 ಲಕ್ಷದವರೆಗಿನ ಆದಾಯಕ್ಕೆ ತೆರಿಗೆಯಿಂದ ಸಂಪೂರ್ಣವಾಗಿ ವಿನಾಯಿತಿ ನೀಡುವ ಹೊಸ ತೆರಿಗೆ ದರ ಪದ್ಧತಿಯು ಜನರ ಕೈಯಲ್ಲಿ ಹೆಚ್ಚಿನ ಹಣವನ್ನು ಉಳಿಸುತ್ತದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರತಿಪಾದಿಸಿದ್ದಾರೆ.

ಬಜೆಟ್ ಕುರಿತ ಚರ್ಚೆಗೆ ಲೋಕಸಭೆಯಲ್ಲಿ ಉತ್ತರಿಸಿದ ಅವರು, ‘ಈ ಬಜೆಟ್ ಅಭಿವೃದ್ಧಿ ಹಾಗೂ ಹಣಕಾಸಿನ ಶಿಸ್ತಿನ ನಡುವೆ ಸಮತೋಲನ ಸಾಧಿಸಿದೆ’ ಎಂದು ಹೇಳಿದ್ದಾರೆ. ಹೊಸ ತೆರಿಗೆ ದರ ಪದ್ಧತಿಯು ಬಹಳ ಆಕರ್ಷಕವಾಗಿದೆ ಎಂದು ಅವರು ಹೇಳಿದ್ದಾರೆ.

ಹೊಸ ತೆರಿಗೆ ದರ ಪದ್ಧತಿಯು ಮಧ್ಯಮ ವರ್ಗಕ್ಕೆ ಸೇರಿದ, ಆದಾಯ ತೆರಿಗೆ ಪಾವತಿಸುವ ಬಹುತೇಕರಿಗೆ ಪ್ರಯೋಜನಕಾರಿ ಆಗಿದೆ. ಇಲ್ಲಿ ಹೆಚ್ಚುವರಿ ಆದಾಯಕ್ಕೆ ನೀಡಿರುವ ತೆರಿಗೆ ವಿನಾಯಿತಿಯು ಸಂಪೂರ್ಣವಾಗಿ ಷರತ್ತು ರಹಿತವಾಗಿದೆ. ಹೀಗಾಗಿ ಈ ಪದ್ಧತಿಯ ಅಡಿಯಲ್ಲಿ ಜನರ ಕೈಯಲ್ಲಿ ಹೆಚ್ಚು ಹಣ ಉಳಿಯುತ್ತದೆ ಎಂದು ಅವರು ಹೇಳಿದ್ದಾರೆ.

ವಾರ್ಷಿಕ ₹ 9 ಲಕ್ಷ ಆದಾಯ ಇದ್ದು, ಅದರಲ್ಲಿ ₹ 4.5 ಲಕ್ಷವನ್ನು ತೆರಿಗೆ ವಿನಾಯಿತಿಗೆ ಸಂಬಂಧಿಸಿದ ಹೂಡಿಕೆಗಳಲ್ಲಿ ತೊಡಗಿಸುವ ವ್ಯಕ್ತಿಗೆ ಹೊಸ ತೆರಿಗೆ ದರ ಪದ್ಧತಿಯು ಪ್ರಯೋಜನಕಾರಿ ಅಲ್ಲ ಎಂದು ಆರ್‌ಎಸ್‌ಪಿ ಸದಸ್ಯ ಎನ್.ಕೆ. ಪ್ರೇಮಚಂದ್ರನ್ ಅವರು ಹೇಳಿದ್ದಕ್ಕೆ ನಿರ್ಮಲಾ ಒಂದಿಷ್ಟು ವಿವರಣೆ ನೀಡಿದರು.

‘ಇಷ್ಟು ಆದಾಯ ಇರುವ ವ್ಯಕ್ತಿಯು ₹ 4.5 ಲಕ್ಷ ಉಳಿತಾಯ ಮಾಡಬೇಕು ಎಂದಾದರೆ ಬಹಳಷ್ಟು ಪ್ರಯತ್ನ ಬೇಕಾಗುತ್ತದೆ. ಆ ವ್ಯಕ್ತಿಗೆ ಯಾವಾಗಲೂ ಅಷ್ಟೊಂದು ಹಣ ಉಳಿಸಲು, ಅಷ್ಟು ಉಳಿಸಿದ ನಂತರವೂ ಕುಟುಂಬದ ಖರ್ಚುಗಳಿಗೆ ಹಣ ಇರಿಸಿಕೊಳ್ಳಲು ಆಗುವುದಿಲ್ಲ’ ಎಂದು ನಿರ್ಮಲಾ ವಿವರಿಸಿದರು.

ಕೇಂದ್ರ ಸರ್ಕಾರ ಕೈಗೊಂಡ ಹಲವು ಕ್ರಮಗಳ ಪರಿಣಾಮವಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಗರಿಷ್ಠ ಮಿತಿಯೊಳಗೆ ಬಂದಿದೆ ಎಂದು ಅವರು ವಿವರಿಸಿದರು.

ತಗ್ಗಿದ ಕೈಗಾರಿಕಾ ಉತ್ಪಾದನೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ನವೆಂಬರ್‌ನಲ್ಲಿ ಶೇ 7.3ರಷ್ಟು ಇದ್ದಿದ್ದು ಡಿಸೆಂಬರ್‌ನಲ್ಲಿ ಶೇ 4.3ಕ್ಕೆ ಇಳಿಕೆ ಕಂಡಿದೆ.

ತಯಾರಿಕಾ ವಲಯದ ಚಟುವಟಿಕೆಗಳು ಮಂದಗತಿಯಲ್ಲಿ ಸಾಗಿದ್ದರಿಂದ ಬೆಳವಣಿಗೆ ಪ್ರಮಾಣ ಇಳಿಕೆ ಕಂಡಿದೆ. ಆದರೆ, 2021ರ ಡಿಸೆಂಬರ್‌ನಲ್ಲಿ ಕೈಗಾರಿಕಾ ಉತ್ಪಾದನೆ ಸೂಚ್ಯಂಕವು (ಐಐಪಿ) ಶೇ 1ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಐಐಪಿ ಏರಿಕೆ ಆಗಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ತಯಾರಿಕಾ ವಲಯದ ಬೆಳವಣಿಗೆಯು 2022ರ ಡಿಸೆಂಬರ್‌ನಲ್ಲಿ ಶೇ 2.6ರಷ್ಟು ಆಗಿದೆ. ನವೆಂಬರ್‌ನಲ್ಲಿ ಶೇ 6.4ರಷ್ಟು ಆಗಿತ್ತು.

ಗಣಿ ವಲಯದ ಬೆಳವಣಿಗೆ ಶೇ 9.8 ಮತ್ತು ವಿದ್ಯುತ್ ವಲಯದ ಬೆಳವಣಿಗೆ ಶೇ 10.4ರಷ್ಟು ಆಗಿದೆ. ಬಂಡವಾಳ ಸರಕುಗಳ ವಲಯ ಶೇ 7.6ರಷ್ಟು ಬೆಳವಣಿಗೆ ಕಂಡಿದೆ. ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ಐಐಪಿ ಶೇ 5.4ರಷ್ಟು ಆಗಿದೆ. 2021ರ ಇದೇ ಅವಧಿಯಲ್ಲಿ ಶೇ 15.3ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಇಳಿಕೆ ಆಗಿದೆ.

ಹೂಡಿಕೆದಾರರ ಜೊತೆ ‘ಅದಾನಿ’ ನಂಟು: ಸೆಬಿ ತನಿಖೆ

ಒಂದನೇ ಪುಟದಿಂದ

ಕಂಪನಿಯ ಸ್ಥಾಪಕರು ಅಥವಾ ಸ್ಥಾಪಕರ ಗುಂಪಿನ ಜೊತೆ ಸಂಬಂಧ ಹೊಂದಿರುವ ಯಾವುದೇ ಸಂಸ್ಥೆಯು ಆರಂಭಿಕ ಹೂಡಿಕೆದಾರ ವರ್ಗದ ಅಡಿಯಲ್ಲಿ ಭಾಗಿಯಾಗುವಂತಿಲ್ಲ ಎಂದು ನಿಯಮಗಳು ಹೇಳುತ್ತವೆ. ಆರಂಭಿಕ ಹೂಡಿಕೆದಾರರು ಸಂಸ್ಥಾಪಕರ ಗುಂಪಿನ ಜೊತೆ ಸಂಬಂಧ ಹೊಂದಿರುವವರೇ ಎಂಬ ಬಗ್ಗೆ ತನಿಖೆ ನಡೆಯಲಿದೆ ಎಂದು ಮೂಲಗಳು ಹೇಳಿವೆ.

ತನಿಖೆಯ ವಿಚಾರವಾಗಿ ಸೆಬಿ ಹಾಗೂ ಅದಾನಿ ಸಮೂಹ, ಗ್ರೇಟ್ ಇಂಟರ್‌ನ್ಯಾಷನಲ್ ಟಸ್ಕರ್ ಫಂಡ್, ಆಯುಷ್ಮತ್ ಲಿ. ಕಡೆಯಿಂದ ಪ್ರತಿಕ್ರಿಯೆ ಸಿಕ್ಕಿಲ್ಲ. ಎಫ್‌ಪಿಒ ಪ್ರಕ್ರಿಯೆ ನಿರ್ವಹಿಸಿದ್ದ ಎಲಾರಾ ಕ್ಯಾಪಿಟಲ್, ಮೊನಾರ್ಕ್ ನೆಟ್ವರ್ತ್ ಕ್ಯಾಪಿಟಲ್ ಕೂಡ ಸೆಬಿ ಪರಿಶೀಲನೆಯ ವ್ಯಾಪ್ತಿಯಲ್ಲಿವೆ.

ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಸೆಬಿ ಜೊತೆ ಸಂಪರ್ಕದಲ್ಲಿದೆ, ಪ್ರಧಾನಿಯವರ ಕಚೇರಿಗೆ ವಿವರ ನೀಡಿದೆ ಎಂದು ಗೊತ್ತಾಗಿದೆ. ಆದರೆ, ವಿವರಗಳು ಗೊತ್ತಾಗಿಲ್ಲ. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹಾಗೂ ಪ್ರಧಾನಿಯವರ ಕಚೇರಿಯಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

‘ನಕಾರಾತ್ಮಕ’ ಮಟ್ಟಕ್ಕೆ ರೇಟಿಂಗ್

ನವದೆಹಲಿ (ಪಿಟಿಐ): ಮೂಡಿಸ್ ಇನ್ವೆಸ್ಟರ್ ಸರ್ವಿಸ್ ಸಂಸ್ಥೆಯು ಅದಾನಿ ಸಮೂಹದ ನಾಲ್ಕು ಕಂಪನಿಗಳ ರೇಟಿಂಗ್ ಮುನ್ನೋಟವನ್ನು ‘ನಕಾರಾತ್ಮಕ’ ಮಟ್ಟಕ್ಕೆ ತಗ್ಗಿಸಿದೆ. ಈ ಮೊದಲು ಈ ಕಂಪನಿಗಳ ರೇಟಿಂಗ್ ಮುನ್ನೋಟ ‘ಸ್ಥಿರ’ ಎಂದಾಗಿತ್ತು.

ಕಂಪನಿಗಳ ಷೇರುಮೌಲ್ಯ ತೀವ್ರವಾಗಿ ಕುಸಿತ ಕಂಡ ನಂತರದಲ್ಲಿ ರೇಟಿಂಗ್ ಮುನ್ನೋಟ ತಗ್ಗಿಸಲಾಗಿದೆ. ಅದಾನಿ ಗ್ರೀನ್ ಎನರ್ಜಿ, ಅದಾನಿ ಗ್ರೀನ್ ಎನರ್ಜಿ ರಿಸ್ಟ್ರಿಕ್ಟಡ್ ಗ್ರೂಪ್, ಅದಾನಿ ಟ್ರಾನ್ಸ್‌ಮಿಷನ್ ಸ್ಟೆಪ್–ಒನ್ ಲಿ. ಮತ್ತು ಅದಾನಿ ಎಲೆಕ್ಟ್ರಿಸಿಟಿ ಮುಂಬೈ ಲಿ. ಕಂಪನಿಗಳ ರೇಟಿಂಗ್ ಮುನ್ನೋಟ ‘ನಕಾರಾತ್ಮಕ’ ಆಗಿದೆ.

ಕುಸಿದ ಬಂಡವಾಳ ಮೌಲ್ಯ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಬಹುತೇಕ ಕಂಪನಿಗಳ ಷೇರುಮೌಲ್ಯವು ಶುಕ್ರವಾರದ ವಹಿವಾಟಿನಲ್ಲಿ ಕುಸಿತ ಕಂಡವು. ಅದಾನಿ ಎಂಟರ್‌ಪ್ರೈಸಸ್‌ನ ಷೇರುಮೌಲ್ಯವು ಶೇ 4ರಷ್ಟು ಕುಸಿದಿದೆ. ಷೇರುಪೇಟೆ ನೋಂದಾಯಿತ 10 ಕಂಪನಿಗಳ ಪೈಕಿ ಎಂಟು ಕಂಪನಿಗಳ ಷೇರುಮೌಲ್ಯ ಕುಸಿದಿದೆ.

ಅದಾನಿ ಸಮೂಹದ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ಶುಕ್ರವಾರ ಶೇ 3.3ರಷ್ಟು ಕುಸಿದಿದೆ. ಜನವರಿ 24ರ ಮಟ್ಟಕ್ಕೆ ಹೋಲಿಸಿದರೆ, ಈಗ ಸಮೂಹದ ಮಾರುಕಟ್ಟೆ ಬಂಡವಾಳವು ಶೇ 51ರಷ್ಟು ಕುಸಿದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ದೀಪಕ್ ಜಸನಿ ಹೇಳಿದ್ದಾರೆ.

ಅಭಿಪ್ರಾಯ ಕೇಳಿದ ‘ಸುಪ್ರೀಂ’

ಒಂದನೇ ಪುಟದಿಂದ

‘ಇದೊಂದು ಮುಕ್ತವಾದ ಸಂವಾದ. ಅವರು ಒಂದು ವಿಚಾರವನ್ನು ನ್ಯಾಯಾಲಯದ ಮುಂದೆ ತಂದಿದ್ದಾರೆ. ಭಾರತದ ಹೂಡಿಕೆದಾರರನ್ನು ರಕ್ಷಿಸುವುದು ಹೇಗೆ ಎಂಬುದು ನಮ್ಮ ಕಾಳಜಿ. ಇಲ್ಲಿ ಶಾರ್ಟ್ ಸೆಲ್ಲಿಂಗ್ ನಡೆದಿದೆ. ಬಹುಶಃ ಸೆಬಿ ಕೂಡ ತನಿಖೆ ನಡೆಸುತ್ತಿರಬಹುದು. ನಾವು ತಪ್ಪು ಹುಡುಕುವ ಕೆಲಸ ಮಾಡುತ್ತಿಲ್ಲ ಎಂಬುದನ್ನು ಸೆಬಿಯ ಅಧಿಕಾರಿಗಳಿಗೆ ತಿಳಿಸಿ’ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಪೀಠವು ಹೇಳಿತು.

ಷೇರುಪೇಟೆಯಲ್ಲಿ ಬಂಡವಾಳ ಹರಿವು ಇತ್ತೀಚಿನ ದಿನಗಳಲ್ಲಿ ಅಪಾರವಾಗಿದೆ. ಹೀಗಿರುವಾಗ ಹೂಡಿಕೆದಾರರ ಹಿತಾಸಕ್ತಿ ಕಾಯ್ದುಕೊಳ್ಳಲು ಗಟ್ಟಿಯಾದ ನಿಯಂತ್ರಣ ವ್ಯವಸ್ಥೆ ಬೇಕು. ಹಣಕಾಸು ಸಚಿವಾಲಯ ಮತ್ತು ಇತರರಿಂದಲೂ ಮಾಹಿತಿ ಬೇಕಾಗಿದೆ ಎಂದು ಪೀಠವು ಹೇಳಿದೆ.

₹10 ಲಕ್ಷ ಕೋಟಿ ನಷ್ಟವಾಗಿದೆ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಹೇಳಲಾಗಿದೆ. ಹೂಡಿಕೆದಾರರ ಹಿತರಕ್ಷಣೆ ಆಗುವುದನ್ನು ಖಚಿತಪಡಿಸಿಕೊಳ್ಳುವುದು ಹೇಗೆ? ಸೆಬಿ ಯಾವ ಪಾತ್ರ ವಹಿಸಬೇಕು ಎಂದು ಪೀಠವು ಕೇಳಿದೆ.

ಸದೃಢವಾದ ನಿಯಂತ್ರಣ ವ್ಯವಸ್ಥೆಯ ಜೊತೆಗೆ, ಷೇರುಪೇಟೆ ಪರಿಣತರು ಮತ್ತು ಇತರರು ಇರುವ ಸಮಿತಿಯನ್ನೂ ರಚಿಸಬಹುದು ಎಂದು ಪೀಠವು ಸಲಹೆ ನೀಡಿದೆ.

ಈಗಾಗಲೇ ಇರುವ ನಿಯಂತ್ರಣ ಚೌಕಟ್ಟನ್ನು ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿದೆ ಎಂದೂ ಪೀಠವು ಹೇಳಿದೆ.

ಸೆಬಿ ಮತ್ತು ಇತರ ಸಂಸ್ಥೆಗಳು ಅಗತ್ಯವಿರುವ ಎಲ್ಲವನ್ನೂ ಮಾಡುತ್ತಿವೆ ಎಂದು ಸೆಬಿ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ಹೇಳಿದರು.

‘ಹಿಂಡನ್‌ಬರ್ಗ್ ರಿಸರ್ಚ್’ ವರದಿ ಕುರಿತ ಅರ್ಜಿ ಮತ್ತು ಎರಡು ಪಿಐಎಲ್‌ಗಳ ವಿಚಾರಣೆಯನ್ನು ಫೆಬ್ರುವರಿ 13ರಂದು ನಡೆಸಲು ನ್ಯಾಯಪೀಠ ನಿರ್ಧರಿಸಿದೆ.

ವಕೀಲರಾದ ವಿಶಾಲ್ ತಿವಾರಿ ಮತ್ತು ಎಂ.ಎಲ್ ಶರ್ಮಾ ಅವರು ಪ್ರತ್ಯೇಕವಾಗಿ ಪಿಐಎಲ್ ಸಲ್ಲಿಸಿದ್ದರು.

ಸಂತಾಪ ಸೂಚನೆ

ಶ್ರೀ. ಮರಿಗೌಡರವರು

ನಿವೃತ್ತ ಜಿಲ್ಲಾ ನೋಂದಣಾಧಿಕಾರಿ

ದಿನಾಂಕ 10-02-2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಅಂತಿಮ ದರ್ಶನ: 11-02-2023

ಬೆಳಿಗ್ಗೆ 9:00 ಗಂಟೆ ಯಿಂದ 12 ಗಂಟೆಯವರೆಗೆ ಸೂರನಹಳ್ಳಿ, ಹೊಳೆನರಸೀಪುರ ತಾಲ್ಲೂಕು ಹಾಸನ.

ಇಂತಿ ದು:ಖತಪ್ತ ಕುಟುಂಬದವರು ಹಾಗೂ ಬಂಧು ಮಿತ್ರರು

ಮೊಬೈಲ್ ಸಂಖ್ಯೆ:

93422 38059 / 9972440303

ಬಾರ್ಡರ್– ಗಾವಸ್ಕರ್ ಟ್ರೋಫಿ: ಜಡೇಜ, ಅಕ್ಷರ್ ಅಜೇಯ ಅರ್ಧಶತಕ; ಭಾರತಕ್ಕೆ ಮುನ್ನಡೆ

ರೋಹಿತ್ ಶರ್ಮಾ ಶತಕ ಸಂಭ್ರಮ

ಪ್ರಜಾವಾಣಿ ವಾರ್ತೆ

ನಾಗಪುರ: ಒತ್ತಡದ ಸಮಯದಲ್ಲಿ ಛಲಭರಿತ ಆಟವಾಡುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟ ರೋಹಿತ್ ಶರ್ಮಾ ಸೊಗಸಾದ ಶತಕ ಗಳಿಸಿ ಸಂಭ್ರಮಿಸಿದರು.

ನಾಯಕನ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ ಬಾರ್ಡರ್– ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ 144 ರನ್‌ಗಳ ಮುನ್ನಡೆ ಗಳಿಸಿದ್ದು, ಆಸ್ಟ್ರೇಲಿಯಾ ತಂಡದ ಮೇಲೆ ಒತ್ತಡ ಹೇರುವಲ್ಲಿ ಯಶಸ್ವಿಯಾಗಿದೆ.

ವಿಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಶುಕ್ರವಾರದ ಆಟದ ಅಂತ್ಯಕ್ಕೆ ಆತಿಥೇಯ ತಂಡ 7 ವಿಕೆಟ್‌ಗಳಿಗೆ 321 ರನ್ ಗಳಿಸಿದೆ. ರವೀಂದ್ರ ಜಡೇಜ (66) ಮತ್ತು ಅಕ್ಷರ್ ಪಟೇಲ್ (52) ಅಜೇಯ ಅರ್ಧಶತಕಗಳ ಮೂಲಕ ಎದುರಾಳಿ ತಂಡವನ್ನು ಕಾಡಿದರು.

ಬೌಲಿಂಗ್‌ಗೆ ನೆರವು ನೀಡುತ್ತಿದ್ದ ಪಿಚ್‌ನಲ್ಲಿ ರನ್ ಗಳಿಸುವುದು ಕಷ್ಟಕರವಾಗಿತ್ತು. ಆದರೂ ರೋಹಿತ್ (120) ಆಕರ್ಷಕ ಹೊಡೆತಗಳ ಮೂಲಕ ಮಿಂಚಿದರು. 212 ಎಸೆತಗಳ ಇನಿಂಗ್ಸ್ 15 ಬೌಂಡರಿ ಮತ್ತು ಎರಡು ಸಿಕ್ಸರ್‌ಗಳನ್ನು ಒಳಗೊಂಡಿತ್ತು. ಸುಮಾರು ಆರು ಗಂಟೆ ಕ್ರೀಸ್‌ನಲ್ಲಿದ್ದ ಅವರು ಸ್ಪಿನ್ ಮತ್ತು ವೇಗದ ದಾಳಿಯನ್ನು ಸಮರ್ಥವಾಗಿ ಎದುರಿಸಿದರು. 81ನೇ ಓವರ್‌ನಲ್ಲಿ ಪ್ಯಾಟ್ ಕಮಿನ್ಸ್ ಅವರ ಸುಂದರ ಎಸೆತದಲ್ಲಿ ಔಟಾದರು.

ಟೆಸ್ಟ್‌ನಲ್ಲಿ ರೋಹಿತ್ ಗಳಿಸಿದ ಒಂಬತ್ತನೇ ಶತಕ ಇದು. ನಾಯಕನಾಗಿ ಕ್ರಿಕೆಟ್‌ನ ಎಲ್ಲ ಮೂರು ಮಾದರಿಗಳಲ್ಲಿ ಶತಕ ಗಳಿಸಿದ ಭಾರತದ ಮೊದಲ ಬ್ಯಾಟರ್ ಎಂಬ ಗೌರವಕ್ಕೆ ಪಾತ್ರರಾದರು. ಮೂರೂ ಮಾದರಿಗಳಲ್ಲಿ ಹಲವು ವರ್ಷ ತಂಡವನ್ನು ಮುನ್ನಡೆಸಿದ್ದ ಮಹೇಂದ್ರ ಸಿಂಗ್ ಧೋನಿ ಮತ್ತು ವಿರಾಟ್ ಕೊಹ್ಲಿ ಅವರಿಗೂ ಈ ಸಾಧನೆ ಮಾಡಲು ಆಗಿರಲಿಲ್ಲ.

ರೋಹಿತ್ ಮತ್ತು ಜಡೇಜ ಆರನೇ ವಿಕೆಟ್‌ಗೆ 61 ರನ್ ಸೇರಿಸಿದರೆ, ಜಡೇಜ–ಅಕ್ಷರ್ ಜೋಡಿ ಮುರಿಯದ ಎಂಟನೇ ವಿಕೆಟ್‌ಗೆ ಈಗಾಗಲೇ 81 ರನ್ ಕಲೆಹಾಕಿದೆ. ಬೌಲಿಂಗ್‌ನಲ್ಲಿ ಮಿಂಚಿದ್ದ ಜಡೇಜ, ಬ್ಯಾಟ್ ಮೂಲಕವೂ ಪ್ರವಾಸಿ ತಂಡಕ್ಕೆ ತಲೆನೋವಾಗಿ ಪರಿಣಮಿಸಿದ್ದಾರೆ. ಭಾರತ ಎರಡನೇ ದಿನದಾಟದಲ್ಲಿ 244 ರನ್ ಪೇರಿಸಿತು.

ಮರ್ಫಿ ಮ್ಯಾಜಿಕ್: ಒಂದು ವಿಕೆಟ್‌ಗೆ 77 ರನ್‌ಗಳಿಂದ ಆಟ ಮುಂದುವರಿಸಿದ್ದ ಭಾರತ, ಮೊದಲ ಎರಡು ಅವಧಿಗಳಲ್ಲಿ ಆಗಿಂದಾಗ್ಗೆ ವಿಕೆಟ್‌ಗಳನ್ನು ಕಳೆದುಕೊಂಡಿತು. ಚೊಚ್ಚಲ ಪಂದ್ಯವನ್ನಾಡಿದ ಟಾಡ್ ಮರ್ಫಿ (82ಕ್ಕೆ 5) ಕೈಚಳಕ ಮೆರೆದರು.

ಅರ್ಧಶತಕ ಗಳಿಸಿದ ಅಕ್ಷರ್ ಪಟೇಲ್ ಸಂಭ್ರಮ ಮತ್ತು ರವೀಂದ್ರ ಜಡೇಜ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರಗಳು

ಆರ್.ಅಶ್ವಿನ್ ಅವರನ್ನು ಔಟ್ ಮಾಡಿ ಎರಡನೇ ದಿನದಾಟದಲ್ಲಿ ವಿಕೆಟ್ ಬೇಟೆ ಶುರು ಮಾಡಿದ ಮರ್ಫಿ, ಚೇತೇಶ್ವರ ಪೂಜಾರ ಮತ್ತು ವಿರಾಟ್ ಕೊಹ್ಲಿ ಅವರನ್ನು ಬೇಗನೇ ಪೆವಿಲಿಯನ್‌ಗೆ ಕಳುಹಿಸಿದರು. 'ಟಿ20 ಸ್ಪೆಶಲಿಸ್ಟ್' ಸೂರ್ಯಕುಮಾರ್ ಯಾದವ್ ವಿಫಲರಾದರು. ನೇಥನ್ ಲಯನ್ ಎಸೆತದಲ್ಲಿ ಅವರು ಬೌಲ್ಡ್ ಆದರು.

ಶ್ರೀಕರ್ ಭರತ್ ಅವರಿಗೂ ಮರ್ಫಿ ಬೌಲಿಂಗ್‌ನ ಮರ್ಮ ಅರಿಯಲು ಆಗಲಿಲ್ಲ. ಇದರಿಂದ ಸ್ಕೋರ್ 240 ರನ್ ಆಗುವಷ್ಟರಲ್ಲಿ ಏಳು ವಿಕೆಟ್‌ಗಳು ಬಿದ್ದವು. ಭಾರತ ತಂಡವನ್ನು 300 ರನ್‌ಗಳ ಒಳಗೆ ಕಟ್ಟಿಹಾಕುವ ಕನಸನ್ನು ಆಸ್ಟ್ರೇಲಿಯಾ ಬೌಲರ್‌ಗಳು ಕಂಡಿದ್ದರು. ಆದರೆ ಆದರೆ ಜಡೇಜ ಮತ್ತು ಅಕ್ಷರ್ ಅದಕ್ಕೆ ಅವಕಾಶ ನೀಡಲಿಲ್ಲ. ದಿನದ ಅಂತಿಮ ಅವಧಿಯಲ್ಲಿ ಇಬ್ಬರೂ ಎಚ್ಚರಿಕೆಯಿಂದ ಆಡಿದರು.

ದಿನದಾಟದ ಕೊನೆಯ ಓವರ್‌ನಲ್ಲಿ ಜಡೇಜಗೆ ಜೀವದಾನ ಲಭಿಸಿತು. ಲಯನ್ ಎಸೆತದಲ್ಲಿ ಮೊದಲ ಸ್ಲಿಪ್‌ನಲ್ಲಿ ಸ್ಟೀವನ್ ಸ್ಮಿತ್ ಕ್ಯಾಚ್ ಕೈಚೆಲ್ಲಿದರು. 37 ಓವರ್ ಬೌಲರ್ ಮಾಡಿದ ಲಯನ್‌ಗೆ ದಕ್ಕಿದ್ದು ಒಂದು ವಿಕೆಟ್ ಮಾತ್ರ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 177 (63.5 ಓವರ್)

ಭಾರತ 7ಕ್ಕೆ 321 (114 ಓವರ್) (ಗುರುವಾರದ ಆಟದಲ್ಲಿ 1 ವಿಕೆಟ್‌ಗೆ 77)

ರೋಹಿತ್ ಬಿ ಕಮಿನ್ಸ್ 120 (212 ಎ., 4X15, 6X2), ಅಶ್ವಿನ್ ಎಲ್‌ಬಿಡಬ್ಲ್ಯು ಬಿ ಮರ್ಫಿ 23 (62 ಎ., 4X2, 6X1), ಪೂಜಾರ ಸಿ ಬೊಲಾಂಡ್ ಬಿ ಮರ್ಫಿ 7 (14 ಎ., 4X1), ಕೊಹ್ಲಿ ಸಿ ಕ್ಯಾರಿ ಬಿ ಮರ್ಫಿ 12 (26 ಎ., 4X2), ಸೂರ್ಯಕುಮಾರ್ ಬಿ ಲಯನ್ 8 (20 ಎ., 4X1), ಜಡೇಜ ಬ್ಯಾಟಿಂಗ್ 66 (170 ಎ., 4X9), ಭರತ್ ಎಲ್‌ಬಿಡಬ್ಲ್ಯು ಬಿ ಮರ್ಫಿ 8 (10 ಎ., 4X1), ಅಕ್ಷರ್ ಬ್ಯಾಟಿಂಗ್ 52 (102 ಎ., 4X8)

ಇತರೆ: 5 (ಲೆಗ್‌ಬೈ 2, ನೋಬಾಲ್ 3)

ವಿಕೆಟ್ ಪತನ: 2–118 (ಆರ್. ಅಶ್ವಿನ್; 40.1), 3–135 (ಚೇತೇಶ್ವರ ಪೂಜಾರ; 44.1), 4–151 (ವಿರಾಟ್ ಕೊಹ್ಲಿ; 52.1), 5–168 (ಸೂರ್ಯಕುಮಾರ್ ಯಾದವ್; 59.1), 6–229 (ರೋಹಿತ್ ಶರ್ಮಾ; 80.4), 7–240 (ಶ್ರೀಕರ್ ಭರತ್; 83.1)

ಬೌಲಿಂಗ್: ಪ್ಯಾಟ್ ಕಮಿನ್ಸ್ 18–2–74–1, ಸ್ಕಾಟ್ ಬೊಲಾಂಡ್ 17–4–34–0, ನೇಥನ್ ಲಯನ್ 37–10–98–1, ಟಾಡ್ ಮರ್ಫಿ 36–9–82–5, ಮಾರ್ನಸ್ ಲಾಬುಷೇನ್ 5–0–24–0, ಮ್ಯಾಟ್ ರೆನ್‌ಷಾ 1–0–7–0

ಫುಟ್‌ಬಾಲ್: ಕರ್ನಾಟಕ– ಪಂಜಾಬ್ ಪಂದ್ಯ ಡ್ರಾ

ಬೆಂಗಳೂರು: ದಿಟ್ಟ ಆಟವಾಡಿದ ಕರ್ನಾಟಕ ತಂಡದವರು ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಪಂಜಾಬ್ ತಂಡದೊಂದಿಗೆ ಡ್ರಾ ಸಾಧಿಸಿದರು.

ಒಡಿಶಾದಲ್ಲಿ ನಡೆಯುತ್ತಿರುವ ಟೂರ್ನಿಯ ಎ ಗುಂಪಿನ ಹಣಾಹಣಿಯಲ್ಲಿ ಕರ್ನಾಟಕ 2–2ರಿಂದ ಪಂಜಾಬ್ ತಂಡದೊಂದಿಗೆ ಸಮಬಲ ಸಾಧಿಸಿತು. ಪಂಜಾಬ್ ತಂಡಕ್ಕಾಗಿ ಕಮಲ್ ದೀಪ್ (65ನೇ ನಿಮಿಷ) ಮತ್ತು ಬಿಪುಲ್ ಕಾಲಾ (69ನೇ ನಿ.) ಗೋಲು ಗಳಿಸಿ ಮುನ್ನಡೆ ತಂದುಕೊಟ್ಟಿದ್ದರು. ಕಮಲೇಶ್ ಪಿ. (82ನೇ ನಿ.) ಮತ್ತು ರಾಬಿನ್ ಯಾದವ್ (90 + 3ನೇ ನಿ.) ಗಳಿಸಿದ ಗೋಲುಗಳು ಕರ್ನಾಟಕ ಡ್ರಾ ಸಾಧಿಸಲು ಕಾರಣವಾದವು.

ಭಾನುವಾರ ನಡೆಯಲಿರುವ ಮುಂದಿನ ಪಂದ್ಯದಲ್ಲಿ ಕರ್ನಾಟಕ ತಂಡವು ಕೇರಳ ತಂಡವನ್ನು ಎದುರಿಸಲಿದೆ.

ಸ್ಮೃತಿ ಕಣಕ್ಕಿಳಿಯುವುದು ಅನುಮಾನ

ಕೇಪ್‌ಟೌನ್ (ಪಿಟಿಐ): ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರು ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಆಡುವುದು ಅನುಮಾನ.

ಭಾರತ– ಪಾಕಿಸ್ತಾನ ಪಂದ್ಯ ಭಾನುವಾರ ನಡೆಯಲಿದೆ. ಆಸ್ಟ್ರೇಲಿಯಾ ವಿರುದ್ಧ ಸೋಮವಾರ ನಡೆದಿದ್ದ ಅಭ್ಯಾಸ ಪಂದ್ಯದಲ್ಲಿ ಸ್ಮೃತಿ ಅವರ ಕೈಬೆರಳಿಗೆ ಗಾಯವಾಗಿದ್ದು, ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ.

'ಅಭ್ಯಾಸ ಪಂದ್ಯದಲ್ಲಿ ಗಾಯಗೊಂಡಿದ್ದ ಸ್ಮೃತಿ ಅವರು ವಿಶ್ವಕಪ್ ಟೂರ್ನಿಯಿಂದ ಹೊರಬೀಳುವರೇ ಎಂಬುದನ್ನು ಈಗ ಹೇಳಲು ಸಾಧ್ಯವಿಲ್ಲ. ಪಾಕಿಸ್ತಾನ ವಿರುದ್ಧದ ಮೊದಲ ಪಂದ್ಯಕ್ಕೆ ಅವರು ಅಲಭ್ಯರಾಗಿದ್ದಾರೆ' ಎಂದು ಐಸಿಸಿ ಮೂಲಗಳು ಹೇಳಿವೆ.

26 ವರ್ಷದ ಸ್ಮೃತಿ, ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ್ದರು. ಕೇವಲ ಮೂರು ಎಸೆತ ಎದುರಿಸಿ ಔಟಾಗಿದ್ದರು.

ಸ್ಮೃತಿ ಮಂದಾನ

ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಫಿಟ್‌ನೆಸ್ ಕೂಡಾ ಚಿಂತೆಗೆ ಕಾರಣವಾಗಿದೆ. ಕಳೆದ ವಾರ ನಡೆದಿದ್ದ ದಕ್ಷಿಣ ಆಫ್ರಿಕಾ ವಿರುದ್ಧದ ತ್ರಿಕೋನ ಸರಣಿಯ ಫೈನಲ್‌ನಲ್ಲಿ ಅವರು ಭುಜದ ಗಾಯಕ್ಕೆ ಒಳಗಾಗಿದ್ದರು.

ಇಂದಿನ ಪಂದ್ಯಗಳು
ಇಂಗ್ಲೆಂಡ್– ವೆಸ್ಟ್ ಇಂಡೀಸ್
ಆರಂಭ: ಸಂಜೆ 6.30
ಆಸ್ಟ್ರೇಲಿಯಾ– ನ್ಯೂಜಿಲೆಂಡ್
ಆರಂಭ: ರಾತ್ರಿ 10.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಫುಟ್‌ಬಾಲ್: ಕರ್ನಾಟಕಕ್ಕೆ ಬೆಳ್ಳಿ

ಬೆಂಗಳೂರು: ಕರ್ನಾಟಕ ತಂಡದವರು ಮಧ್ಯಪ್ರದೇಶದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ನಿರಾಸೆ ಅನುಭವಿಸಿ, ಬೆಳ್ಳಿ ಪದಕ ಪಡೆದುಕೊಂಡರು.

ಶುಕ್ರವಾರ ನಡೆದ ಫೈನಲ್‌ನಲ್ಲಿ ಕರ್ನಾಟಕ ತಂಡವನ್ನು 2–0 ಗೋಲುಗಳಿಂದ ಮಣಿಸಿದ ಕೇರಳ, ಚಿನ್ನ ಗೆದ್ದುಕೊಂಡಿತು. ಪ್ರಬಲ ಪೈಪೋಟಿ ನಡೆದ ಪಂದ್ಯದ 31ನೇ ನಿಮಿಷದಲ್ಲಿ ಸಿ.ಪಿ.ಶ್ರೀರಾಜ್ ಅವರು ಕೇರಳ ತಂಡಕ್ಕೆ ಮೊದಲ ಗೋಲು ತಂದಿತ್ತರು. ಕೆ.ಕಿರಣ್ 43ನೇ ನಿಮಿಷದಲ್ಲಿ ಎರಡನೇ ಗೋಲು ಗಳಿಸಿದರು.

ಕರ್ನಾಟಕ ತಂಡ ಮರುಹೋರಾಟ ನಡೆಸಲು ಪ್ರಯತ್ನಿಸಿತಾದರೂ, ಕೇರಳದ ಡಿಫೆಂಡರ್‌ಗಳು ಅವಕಾಶ ನೀಡಲಿಲ್ಲ.

ಈಜು: ಮಿಂಚಿದ ಶಾಲಿನಿ

ಬೆಂಗಳೂರು: ಕರ್ನಾಟಕದ ಶಾಲಿನಿ ಆರ್. ದೀಕ್ಷಿತ್ ಅವರು ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಎರಡು ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಶುಕ್ರವಾರ ನಡೆದ ಮಹಿಳೆಯರ 200 ಮೀಟರ್ಸ್ ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಶಾಲಿನಿ 2 ನಿಮಿಷ 26.70 ಸೆಕೆಂಡುಗಳಲ್ಲಿ ಗುರಿ ತಲುಪಿ ಎರಡನೇ ಸ್ಥಾನ ಪಡೆದರು. ಈ ವಿಭಾಗದಲ್ಲಿ ಮಹಾರಾಷ್ಟ್ರದ ಪಲಕ್ ಜೋಷಿ (2 ನಿ. 24.02 ಸೆ.) ಚಿನ್ನ ಗೆದ್ದರು.

ಮಹಿಳೆಯರ 4X100 ಮೀ. ಮೆಡ್ಲೆಯಲ್ಲಿ ಶಾಲಿನಿ, ಹಾಷಿಕಾ ರಾಮಚಂದ್ರ, ಎಸ್. ಲಾಕ್ಷ್ಯಾ ಮತ್ತು ಧೀನಿಧಿ ದೇಶಿಂಗು ಅವರನ್ನೊಳಗೊಂಡ ಕರ್ನಾಟಕ ತಂಡ (4 ನಿ. 31.97 ಸೆ.) ಬೆಳ್ಳಿ ಪದಕ ಜಯಿಸಿತು. ಮಹಾರಾಷ್ಟ್ರ (4 ನಿ. 30.42 ಸೆ.) ಚಿನ್ನ ತನ್ನದಾಗಿಸಿಕೊಂಡಿತು.

ಶಾಲಿನಿ ಆರ್ ದೀಕ್ಷಿತ್

ಮಹಿಳೆಯರ 200 ಮೀ. ಮೆಡ್ಲೆಯಲ್ಲಿ ಕರ್ನಾಟಕದ ಮಾನವಿ ವರ್ಮಾ (2 ನಿ. 25.90 ಸೆ.) ಬೆಳ್ಳಿ ಮತ್ತು ವಿಹಿತಾ ನಯನಾ (2 ನಿ. 28.44 ಸೆ.) ಕಂಚು ಜಯಿಸಿದರು. ಈ ವಿಭಾಗದ ಚಿನ್ನವು ಮಹಾರಾಷ್ಟ್ರದ ಅಪೇಕ್ಷಾ ಫರ್ನಾಂಡಿಸ್ (2 ನಿ. 24.91 ಸೆ.) ಅವರ ಪಾಲಾಯಿತು.

ಕೂಟದ ಈಜುಸ್ಪರ್ಧೆಗಳಲ್ಲಿ ಒಟ್ಟು 21 ಪದಕ (6 ಚಿನ್ನ, 9 ಬೆಳ್ಳಿ ಮತ್ತು 6 ಕಂಚು) ಗೆದ್ದಿರುವ ಕರ್ನಾಟಕ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

ಸ್ಕ್ವಾಷ್: ಸೆಮಿಗೆ ಭಾರತ ತಂಡಗಳು

ಚೆನ್ನೈ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಇಲ್ಲಿ ನಡೆಯುತ್ತಿರುವ 21ನೇ ಏಷ್ಯನ್ ಜೂನಿಯರ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದವು.

ಶುಕ್ರವಾರ ನಡೆದ ರೌಂಡ್ ರಾಬಿನ್ ಲೀಗ್ ಕೊನೆಯ ಪಂದ್ಯದಲ್ಲಿ ಪುರುಷರ ತಂಡ 2–1 ರಲ್ಲಿ ಮಲೇಷ್ಯಾ ತಂಡವನ್ನು ಮಣಿಸಿತು.

ಕೃಷ್ಣ ಮಿಶ್ರಾ ಅವರು ಸೋತರೆ, ಪಾರ್ಥ್ ಅಂಬಾನಿ ಹಾಗೂ ಶೌರ್ಯ ಬಾವಾ ಅವರು ಎದುರಾಳಿಗಳನ್ನು ಮಣಿಸಿದರು.

ಮಹಿಳಾ ತಂಡದವರು 3–0 ರಲ್ಲಿ ಸಿಂಗಪುರ ತಂಡವನ್ನು ಮಣಿಸಿ ನಾಲ್ಕರಘಟ್ಟಕ್ಕೆ ಲಗ್ಗೆಯಿಟ್ಟರು. ಅನಾಹತ್ ಸಿಂಗ್, ಯುವ್ನಾ ಗುಪ್ತಾ ಮತ್ತು ಪೂಜಾ ಆರತಿ ತಮ್ಮ ಎದುರಾಳಿಗಳನ್ನು ಮಣಿಸಿದರು.

19ಕ್ಕೆ ಚೆಸ್ ಟೂರ್ನಿ

ಬೆಂಗಳೂರು: ಎಸ್‌ಸಿಎಂಎ ಮುಕ್ತ ರ್‍ಯಾಪಿಡ್ ಚೆಸ್ ಟೂರ್ನಿಯು ಫೆಬ್ರುವರಿ 19ರಂದು ಧಾರವಾಡದಲ್ಲಿ ನಡೆಯಲಿದೆ.

ಧಾರವಾಡದ ಶಂಕರಮಠದ ಯಾಲಕ್ಕಿ ಶೆಟ್ಟರ ಕಾಲನಿಯ ವಿದ್ಯಾ ಭಾರತಿ ಸಭಾಭವನದಲ್ಲಿ ಟೂರ್ನಿ ಆಯೋಜನೆಯಾಗಲಿದೆ. ಟೂರ್ನಿಯ ಒಟ್ಟು ಬಹುಮಾನ ಮೊತ್ತ ₹ 85 ಸಾವಿರ ಆಗಿದೆ. ನೋಂದಣಿಗಾಗಿ https://chessfee.com/tmt_details.php?id=515 ಅಥವಾ 8762191789, 8431737265, 9113020605 ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದು.

ಕಬಡ್ಡಿ: ಮೂರು ತಿಂಗಳೊಳಗೆ ಚುನಾವಣೆ ನಡೆಸಿ– ಹೈಕೋರ್ಟ್

ನವದೆಹಲಿ (ಪಿಟಿಐ): ಭಾರತ ಅಮೆಚೂರ್ ಕಬಡ್ಡಿ ಫೆಡರೇಷನ್‌ಗೆ (ಎಕೆಎಫ್‌ಐ) ಮೂರು ತಿಂಗಳೊಳಗೆ ಚುನಾವಣೆ ನಡೆಸುವಂತೆ ದೆಹಲಿ ಹೈಕೋರ್ಟ್ ಫೆಡರೇಷನ್‌ನ ಆಡಳಿತಗಾರರಿಗೆ ಸೂಚಿಸಿದೆ.

ಆಡಳಿತ ಮಂಡಳಿಯ ಸದಸ್ಯರ 'ವಯಸ್ಸು ಮತ್ತು ಅಧಿಕಾರಾವಧಿಯ ನಿರ್ಬಂಧ' ಸೇರಿದಂತೆ ಕೋರ್ಟ್‌ನ ನಿರ್ದೇಶನಗಳಿಗೆ ಅನುಗುಣವಾಗಿ ಚುನಾವಣೆ ಅಧಿಸೂಚನೆ ಹೊರಡಿಸಬೇಕು ಎಂದು ನ್ಯಾಯಾಲಯ ಹೇಳಿದೆ. ರಾಷ್ಟ್ರೀಯ ಕ್ರೀಡಾ ಸಂಹಿತೆಯು ಎಕೆಎಫ್‌ಐ ಮಾತ್ರವಲ್ಲದೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಅದರ ಎಲ್ಲಾ ಅಂಗಸಂಸ್ಥೆಗಳಿಗೂ ಅನ್ವಯಿಸುತ್ತದೆ ಎಂದು ಕೋರ್ಟ್ ಹೇಳಿದೆ.

ಚುನಾವಣೆಗಳು ನಡೆಯಬೇಕಾಗಿರುವುದರಿಂದ, ಕ್ರೀಡಾ ಸಂಹಿತೆಯ ಅನುಷ್ಠಾನಕ್ಕೆ ಸಂಬಂಧಿಸಿದ ಐದು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಕೋರ್ಟ್ ತಿಳಿಸಿದೆ.



ಸುನಿಲ ಕುಮಾರ, ವಯಸ್ಸು 34, ಸಿತಾಮರ್ಥಿ ಜಿಲ್ಲೆ, ಬಿಹಾರ. ನಾನು ಭಾರಿ ಗ್ಯಾಸ್, ಕಾನ್ಸ್ಟಿಪೇಶನ್ ಮತ್ತು ಅಸಿಡಿಟಿ ಸಮಸ್ಯೆಯಿಂದ ಬಳಲುತ್ತಿದ್ದೆ. ಇದರಿಂದಾಗಿ ತಲೆನೋವು ಮತ್ತು ಹಸಿವಿನ ಕೊರತೆಯಂತಹ ಸಮಸ್ಯೆಗಳು ಕೂಡ ಪೀಡಿಸತೊಡಗಿದ್ದವು. ನಂತರ ಒಂದು ದಿನ ಸ್ನೇಹಿತನೊಬ್ಬನ ಸಲಹೆಯ ಪ್ರಕಾರ ಕಾನ್ಸ್ಟಿಪೇಶನ್, ಗ್ಯಾಸ್ ಮತ್ತು ಅಸಿಡಿಟಿ ಸಮಸ್ಯೆಗಳಿಗೆ ಸಾಮಾನ್ಯ ಪರಿಹಾರ ಎನಿಸಿದ, ಪೇಟ್ ಸಫಾ ಆಯುರ್ವೇದಿಕ ಹರಳುಗಳು ಮತ್ತು ಮಾತ್ರೆಗಳನ್ನು ಸೇವಿಸತೊಡಗಿದೆ. ಅವನ್ನು ಬಳಸಿದ ನಂತರ ನನ್ನ ಹೊಟ್ಟೆಗೆ ಸಂಬಂಧಿತ ಎಲ್ಲಾ ಸಮಸ್ಯೆಗಳು ಸಾಕಷ್ಟು ನಿವಾರಣೆಗೊಂಡವು. ಇದೊಂದು ಅದ್ಭುತ ಉತ್ಪನ್ನವಾಗಿದೆ. ಯಾರಾದರೂ ನನ್ನಂತೆಯೇ ಸಮಸ್ಯೆಗಳಿಗೆ ಈಡಾಗಿದ್ದರೆ, ಅಂತವರು ಇದನ್ನು ಉಪಯೋಗಿಸಿ ಗುಣಮುಖರಾಗಬಹುದು.

ನನ್ನ ಹೆಸರು ವಿರೇಂದ್ರ ಸಿಂಗ್ ಲೋಧಿ, ವಯಸ್ಸು 20 ವರ್ಷ, ಮಧ್ಯ ಪ್ರದೇಶದ ದಾಮೊಹ್ ಜಿಲ್ಲೆಯ ನಿವಾಸಿ. ನನಗೆ ಬಹುಕಾಲದಿಂದ ಗ್ಯಾಸ್, ಹೊಟ್ಟೆ ಸಮಸ್ಯೆ ಮತ್ತು ಅಸಿಡಿಟಿ ರೀತಿಯ ಸಮಸ್ಯೆಗಳು ಬಾಧಿಸುತ್ತಿದ್ದವು. ಇದರಿಂದಾಗಿ ನನ್ನ ಪರಿಸ್ಥಿತಿ ತುಂಬಾ ಹದಗೆಟ್ಟಂತೆ ಆಗಿತ್ತು. ನಂತರ ಒಂದು ದಿನ 16 ವಿಶೇಷ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಪೇಟ್ ಸಫಾ ಆಯುರ್ವೇದಿಕ ಹರಳುಗಳು ಮತ್ತು ಮಾತ್ರೆಗಳ ಬಗ್ಗೆ ಮಾಹಿತಿ ಸಿಕ್ಕಿತು. ಅದನ್ನು ಉಪಯೋಗಿಸಿದ ಮೊದಲ ದಿನವೇ ನನ್ನ ಕಾನ್ಸ್ಟಿಪೇಶನ್, ಗ್ಯಾಸ್ ಮತ್ತು ಅಸಿಡಿಟಿ ಸಮಸ್ಯೆಗಳು ಸಾಕಷ್ಟು ಕಡಿಮೆಯಾಯಿತು. ಇಂದು ನಾನು ತುಂಬಾ ಚೆನ್ನಾಗಿದ್ದೇನೆ. ನನಗೆ ಇದರಿಂದ ತುಂಬಾ ಲಾಭವಾಯಿತು. ಒಂದು ಸಲ ಪೇಟ್ ಸಫಾ ಬಳಸಿ ನೋಡಿರಿ ಮತ್ತು ವ್ಯತ್ಯಾಸವನ್ನು ನೀವೇ ತಿಳಿಯುವಿರಿ.

ಪಿಂಟು ರಾಜ್, ವಯಸ್ಸು 37, ನೊಯ್ಡಾ, ಉತ್ತರಪ್ರದೇಶ. ಕಳೆದ ಹಲವು ವರ್ಷಗಳಿಂದ ನನಗೆ ಮಲಬದ್ಧತೆ ಸಮಸ್ಯೆಯಿಂದ ತುಂಬಾ ಚಿಂತೆಯಾಗಿತ್ತು. ಅದೊಂದೇ ಅಲ್ಲ, ಅಸಿಡಿಟಿ ಮತ್ತು ಗ್ಯಾಸ್ ಸಮಸ್ಯೆಗಳಿಂದ ಕೂಡ ಬಳಲುತ್ತಿದ್ದೆ. ಪರಿಣಿತ ವೈದ್ಯರಿಂದ ಚಿಕಿತ್ಸೆ ಪಡೆದುಕೊಂಡು ವಿವಿಧ ಔಷಧಿಗಳನ್ನು ಸೇವಿಸಿದರೂ ಗುಣವಾಗಿರಲಿಲ್ಲ. ನಂತರ ಒಂದು ದಿನ ಒಂದು ಮೆಡಿಕಲ್ ಸ್ಟೋರ್‌ನಲ್ಲಿ ಹಾಗೇ ಸುಮ್ಮನೆ ಕಾನ್ಸ್ಟಿಪೇಶನ್‌ಗೆ ಔಷಧಿ ಕೇಳಿದಾಗ, ಅವರು ಪೇಟ್ ಸಫಾ ಹರಳುಗಳ ಬಗ್ಗೆ ತಿಳಿಸಿದರು. ಅವತ್ತೇ ಅದನ್ನು ಕೊಂಡು ತಂದೆ ಮತ್ತು ಅದರ ಮೇಲಿನ ಸೂಚನೆ ಪ್ರಕಾರ ಸೇವಿಸಲು ಪ್ರಾರಂಭಿಸಿದೆ. ಮೊದಲ ದಿನವೇ ನನಗೆ ಪರಿಣಾಮಕಾರಿ ಫಲಿತಾಂಶ ಸಿಕ್ಕಿತು. ಈಗ ನನ್ನ ಮಲಬದ್ಧತೆ ಸಮಸ್ಯೆಯು ತುಂಬಾ ಕಡಿಮೆಯಾಗಿದೆ. ಪೇಟ್ ಸಫಾ ಅದ್ಭುತ ಔಷಧಿಯಾಗಿದೆ.
petsaffa.com | 24x7 Helpline: 91197 88888 | Available at all medical & general stores